ಗುರುವಾರ, ಮಾರ್ಚ್ 19, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ



ಈದ್ ಸಂಭ್ರಮ

ಈದ್ ಉಲ್ ಫಿತ್ರ್ ಹಬ್ಬಕ್ಕೂ ಮುನ್ನಾ ದಿನ ಬುಧವಾರ ಹುಬ್ಬಳ್ಳಿಯಲ್ಲಿ ಬಾಲಕನೊಬ್ಬ ಚೆಂದದ ಟೋಪಿಯನ್ನು ಹಾಕಿಕೊಂಡು ಸಂಭ್ರಮಿಸಿದ ಕ್ಷಣ

ಗುರುವಾರ, ಮಾರ್ಚ್ 19, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮರಿ ತೋಳಗಳ ಮಿಣುಕು ನೋಟ...

ಮಂಗಳೂರು ಸಮೀಪದ ಪಿಲಿಕುಳ ಜೈವಿಕ ಉದ್ಯಾನದಲ್ಲಿರುವ ತೋಳ 'ಗೀತಾ' ಜನವರಿ 30ಗಳಿನಲ್ಲಿ ಜನ್ಮ ನೀಡಿರುವ ಮರಿಗಳು



16ರ ಹಂತಕ್ಕೆ ತನ್ವಿ ಶರ್ಮಾ

ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಆರ್ಲಿನ್ಸ್ ಮಾಸ್ಟರ್ಸ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ತನ್ವಿ ಶರ್ಮಾ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ 16ರ ಘಟ್ಟ ಪ್ರವೇಶಿಸಿದರು




ನಾಡಿನ ಸಮಸ್ತ ಜನತೆಗೆ
ಯುಗಾದಿ ಹಬ್ಬದ
ಹಾರ್ದಿಕ ಶುಭಾಶಯಗಳು
Nandini
Bamul
ಯುಗಾದಿ ಹಬ್ಬದ ಪ್ರಯುಕ್ತ
ರಾಜ್ಯದ ಹಾಲು ಉತ್ಪಾದಕರಿಗೆ
60 ಕೋಟಿ ಬೋನಸ್
ಕೊಟ್ಟ ಭಾಗ್ಯಧಾತ
ಶುಭ ಕೋರುವವರು:-
ಬಿ.ವಿ. ಸತೀಶ್‌ಗೌಡರು
ನಿರ್ದೇಶಕರು ಬೆಂಗಳೂರು ಹಾಲು ಒಕ್ಕೂಟ (ಬಮುಲ್)
ಹಾಗೂ ಅಭಿಮಾನಿಗಳ ಬಳಗ

prajavani.net prajavani | ಗುರುವಾರ, ಮಾರ್ಚ್ 19, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 78 | ಪುಟ 24 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರಿಗೆ, ಏಜೆಂಟರಿಗೆ ಮತ್ತು ಜಾಹೀರಾತುದಾರರಿಗೆ **ಯುಗಾದಿ ಹಬ್ಬದ ಶುಭಾಶಯಗಳು**

ಇಂದು ಬಿಡುವು

ಯುಗಾದಿ ಹಬ್ಬದ ಪ್ರಯುಕ್ತ ನಮ್ಮ ಕಚೇರಿಗೆ ಗುರುವಾರ (ಮಾರ್ಚ್ 19) ಬಿಡುವು. ಆದ್ದರಿಂದ ಶುಕ್ರವಾರದ ಸಂಚಿಕೆ ಪ್ರಕಟವಾಗುವುದಿಲ್ಲ

ಸೆನ್ಸೆಕ್ಸ್ 76,704 | ನಿಫ್ಟಿ 23,777 | $/₹ 92.89



ಕೆಪಿಎಸ್‌ಸಿ ಚಿಕಿತ್ಸೆಗೆ ಸಮಿತಿ

2027ರ ಮೇ ವೇಳೆಗೆ ಆಯೋಗದ ಸದಸ್ಯರ ಸಂಖ್ಯೆ 8ಕ್ಕೆ ಇಳಿಕೆ: ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಸುಧಾರಣೆ ತರಲು ಮುಂದಾಗಿರುವ ರಾಜ್ಯ ಸರ್ಕಾರ, ಈ ಉದ್ದೇಶಕ್ಕೆ ಸದನ ಸಮಿತಿ ರಚಿಸಲು ನಿರ್ಧರಿಸಿದೆ.

ಸಮಿತಿ ನೀಡುವ ವರದಿಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸುವ ಜತೆಗೆ ಶಿಫಾರಸುಗಳನ್ನು ಜಾರಿ ಮಾಡುವ ತೀರ್ಮಾನವನ್ನೂ ಕೈಗೊಂಡಿದೆ. ಸುಧಾರಣೆಗೆ ಸಂಬಂಧಿಸಿ ಎಲ್ಲ ಪಕ್ಷಗಳ ಸದಸ್ಯರು ನೀಡುವ ಸಲಹೆಗಳನ್ನು ಪರಿಗಣಿಸಿ, ಅದನ್ನು ಅನುಷ್ಠಾನ ಮಾಡುವುದಾಗಿ ಸರ್ಕಾರ ಪ್ರತಿಪಾದಿಸಿದೆ.

ಕೆಪಿಎಸ್‌ಸಿ ಅಕ್ರಮಗಳ ಕುರಿತು ವಿಧಾನಸಭೆಯಲ್ಲಿ ಬಿಜೆಪಿಯ ವಿ.ಸುನಿಲ್ ಕುಮಾರ್, ಎಸ್.ಸುರೇಶ್‌ಕುಮಾರ್ ಮತ್ತು ಇತರರು ಪ್ರಸ್ತಾಪಿಸಿದ ವಿಷಯದ ಮೇಲೆ ಗಂಭೀರ ಚರ್ಚೆ ನಡೆದಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಬುಧವಾರ ಸದನಕ್ಕೆ ಉತ್ತರ ನೀಡಿದರು.

‘ಕೆಪಿಎಸ್‌ಸಿ ವಿಚಾರವಾಗಿ ನಡೆದ ಚರ್ಚೆಯಲ್ಲಿ ಯಾರೂ ರಾಜಕೀಯ ಬೆರೆಸಿಲ್ಲ. ವಿಷಯಾಧಾರಿತ ಚರ್ಚೆ ನಡೆದಿದೆ. ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಹೇಳಿರುವುದು ಸರಿಯಾಗಿಯೇ ಇದೆ’ ಎಂದರು.

‘ಸಾರ್ವಜನಿಕರಲ್ಲಿ ನಡೆಯುತ್ತಿರುವ ಚರ್ಚೆ ಮತ್ತು ಆಕ್ರೋಶ ಸದನದಲ್ಲಿ ಪ್ರತಿಬಿಂಬಿತವಾಗಿದೆ’ ಎಂದು ಹೇಳಿದರು. ▶10

ನಿಯಂತ್ರಕ ಗಂಗ್ವಾರ್ ಎತ್ತಂಗಡಿ

ಪಿಡಿಒ, ಸಿಟಿಐ, ‘ಬಿ’ ಗ್ರೂಪ್, ಗೆಜೆಟೆಡ್ ಪ್ರೊಬೇಷನರಿ ಸೇರಿದಂತೆ ವಿವಿಧ ಹುದ್ದೆಗಳಿಗೆ ಕೆಪಿಎಸ್‌ಸಿ ಇತ್ತೀಚೆಗೆ ನಡೆಸಿದ ನೇಮಕಾತಿ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ನಡೆದಿದೆ ಎಂದು ಅಭ್ಯರ್ಥಿಗಳು ಮತ್ತು ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಆರೋಪಿಸಿದ ಬೆನ್ನಲ್ಲೆ, ಪರೀಕ್ಷಾ ನಿಯಂತ್ರಕ ಜ್ಞಾನೇಂದ್ರ ಗಂಗ್ವಾರ್ ಅವರನ್ನು ಸರ್ಕಾರ ಎತ್ತಂಗಡಿ ಮಾಡಿದೆ. ▶10

> ಕೆಪಿಎಸ್‌ಸಿಯಲ್ಲಿ ಅಕ್ರಮ ನಡೆಸುವವರನ್ನು ಕಟಕಟೆಗೆ ತಂದು ನಿಲ್ಲಿಸಬೇಕು. ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಲು ಆಗಬಾರದು. ವಾಗ್ದಂಡನೆ ವಿಧಿಸಬೇಕು
>
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

> ಯಾರನ್ನೂ ಹೊಣೆಗಾರರನ್ನಾಗಿ ಮಾಡದೇ ಬಿಟ್ಟಿದ್ದೀರಿ. ಪರೀಕ್ಷಾ ಅಕ್ರಮವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು, ಆಯೋಗಕ್ಕೆ ನೈತಿಕತೆ ಎಂಬುದು ಇರಬೇಕು
>
> **ವಿ. ಸುನಿಲ್ ಕುಮಾರ್,** ಬಿಜೆಪಿ

ಉದ್ದೇಶಿತ ಬದಲಾವಣೆಗಳೇನು?

- ಗೆಜೆಟೆಡ್ ಪ್ರೊಬೇಷನರಿ ಮತ್ತು ‘ಸಿ’ ಗ್ರೂಪ್ ಹುದ್ದೆಗಳಿಗೆ ಪ್ರತಿ ವರ್ಷ ನೇಮಕಾತಿ
- ಯುಪಿಎಸ್‌ಸಿ ಮಾದರಿಯಲ್ಲಿ ಮುಂಬರುವ ಐದು ವರ್ಷಗಳಿಗೆ ವಿವಿಧ ಇಲಾಖೆಗಳಲ್ಲಿ ಭರ್ತಿ ಮಾಡಬೇಕಾದ ಹುದ್ದೆಗಳ ನೇಮಕಾತಿಯ ವೇಳಾಪಟ್ಟಿ
- ಪ್ರತಿ ವರ್ಷದ ನೇಮಕಾತಿಗಾಗಿ ಒಂದು ಅಂತಿಮ ಗಡುವು (ಡೆಡ್‌ಲೈನ್) ನಿಗದಿಪಡಿಸಲಾಗುವುದು. ಇಲಾಖೆಗಳ ಹುದ್ದೆಗಳು ನೇಮಕವಾಗುವ ಮಾಹಿತಿಯನ್ನು ಸರ್ಕಾರದ ಮುಖ್ಯಕಾರ್ಯದರ್ಶಿ ಮೂಲಕ ನಿಗದಿತ ದಿನಾಂಕದಂದೇ ನೀಡಲಾಗುವುದು. ಇದಕ್ಕೆ ಅಡಳಿತ ಮತ್ತು ಸಿಬ್ಬಂದಿ ಇಲಾಖೆ ಹಾಗೂ ಹಣಕಾಸು ಇಲಾಖೆಯಿಂದ ಒಪ್ಪಿಗೆ ಪಡೆದುಕೊಳ್ಳಲಾಗುವುದು
- ಪ್ರತಿವರ್ಷವೂ ನಿರ್ದಿಷ್ಟವಾಗಿ ಇಂತಹ ತಿಂಗಳು, ಇಂತಹ ದಿನವೇ ಕಡ್ಡಾಯವಾಗಿ ಕೆಪಿಎಸ್‌ಸಿ ಪರೀಕ್ಷೆ ನಡೆಸಬೇಕು. ಅದರಲ್ಲಿ ಬದಲಾವಣೆ ಆಗಬಾರದು
- ಕೆಇಎ ನಡೆಸುವ ನೇಮಕಾತಿ ಪರೀಕ್ಷೆಗಳಲ್ಲಿ ಯಾವುದೇ ಸಮಸ್ಯೆ ಆಗುತ್ತಿಲ್ಲ. ಹೀಗಾಗಿ, ಈ ಸಂಸ್ಥೆಯಲ್ಲಿರುವ ‘ಉತ್ತಮ ಅಭ್ಯಾಸ’ಗಳನ್ನು ಅಳವಡಿಸಿಕೊಳ್ಳಬಹುದು
- ಕೆಇಎ ನೇಮಕಾತಿ ಪರೀಕ್ಷೆಗಳಿಗಾಗಿ ಸುಮಾರು 2,000 ಪ್ರಶ್ನೆಗಳನ್ನು ಸಿದ್ಧಪಡಿಸಿದೆ. ಅವುಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಲಾಗಿದೆ. ಪ್ರಶ್ನೆಗಳನ್ನು ತಯಾರಿಸುವಾಗ ಅವರು ಅದರಿಂದ 20–30 ಪ್ರಶ್ನೆಗಳನ್ನು ಆಯ್ಕೆ ಮಾಡುತ್ತಾರೆ. ಮೊದಲೇ ಭಾಷಾಂತರ ಮಾಡಿರುವುದರಿಂದ ಲೋಪದೋಷಗಳು ಕಡಿಮೆ ಇರುತ್ತವೆ. ಇದೇ ಮಾದರಿ ಕೆಪಿಎಸ್‌ಸಿಯಲ್ಲಿ ಅಳವಡಿಸಲು ಸಾಧ್ಯವೇ ಎಂಬುದರ ಪರಿಶೀಲನೆ

39 ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್

ಪ್ರಜಾವಾಣಿ ವಾರ್ತೆ

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಅಶ್ಲೀಲ ವಿಡಿಯೊ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ವಿಶೇಷ ತನಿಖಾ ದಳ (ಎಸ್‌ಐಟಿ) ಇಲ್ಲಿನ ಹಿರಿಯ ಸಿವಿಲ್ ನ್ಯಾಯಾಲಯಕ್ಕೆ 13,712 ಪುಟಗಳ ದೋಷಾರೋಪಪಟ್ಟಿ ಸಲ್ಲಿಸಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಚುನಾವಣೆ ಏಜೆಂಟ್ ಆಗಿದ್ದ ವಕೀಲ ಪೂರ್ಣಚಂದ್ರ ನೀಡಿದ್ದ ದೂರಿನ ಆಧಾರದ ಮೇಲೆ ತನಿಖೆ ಕೈಗೊಳ್ಳಲಾಗಿತ್ತು.

ಪ್ರಕರಣದಲ್ಲಿ ಒಟ್ಟು 52 ಆರೋಪಿಗಳ ಹೆಸರು ದೋಷಾರೋಪ-ಪಟ್ಟಿಯಲ್ಲಿ ಉಲ್ಲೇಖವಾಗಿದ್ದು, ಅವರಲ್ಲಿ 39 ಜನರ ವಿರುದ್ಧ ಆರೋಪಗಳನ್ನು ದೃಢಪಡಿಸಿ ಆರೋಪಪಟ್ಟಿ ಸಲ್ಲಿಸಲಾಗಿದೆ. ▶10

ಇರಾನ್ ಪ್ರತೀಕಾರದ ಪ್ರತಿಜ್ಞೆ

ಭದ್ರತಾ ಮುಖ್ಯಸ್ಥ ಲಾರೀಜಾನಿ ಹತ್ಯೆ ಖಚಿತಪಡಿಸಿದ ಇರಾನ್

ಟೆಹರಾನ್ (ಇರಾನ್) (ಎಎಫ್‌ಪಿ): ಭದ್ರತಾ ಮುಖ್ಯಸ್ಥ ಅಲಿ ಲಾರೀಜಾನಿ ಹತ್ಯೆಯನ್ನು ಒಪ್ಪಿಕೊಂಡಿರುವ ಇರಾನ್, ಇಸ್ರೇಲ್ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಬುಧವಾರ ಪ್ರತಿಜ್ಞೆ ಮಾಡಿದೆ.

‘ಲಾರೀಜಾನಿ ಹಾಗೂ ಅರೆಸೇನಾ ಪಡೆ ಬಸೀಜ್‌ನ ಕಮಾಂಡರ್ ಗುಲಾಮ್ ರೆಜಾ ಸುಲ್ಯೆಮಾನಿ ಕೂಡ ಹತ್ಯೆಯಾಗಿದ್ದಾರೆ’ ಎಂದು ‘ಫಾರ್ಸ್’ ಹಾಗೂ ‘ತಸ್ನೀಂ’ ಸುದ್ದಿಸಂಸ್ಥೆಗಳು ಖಚಿತಪಡಿಸಿವೆ.

‘ಲಾರೀಜಾನಿ ಹತ್ಯೆಗೆ ಪ್ರತೀಕಾರವಾಗಿ ನಿರ್ಣಾಯಕ ಪ್ರತ್ಯುತ್ತರ ನೀಡಲಾಗುವುದು’ ಎಂದು ಇರಾನ್‌ನ ಸೇನಾ ಮುಖ್ಯಸ್ಥ ಅಮೀರ್ ಹಟಾಮಿ ತಿಳಿಸಿದ್ದಾರೆ.

ಅಲಿ ಲಾರೀಜಾನಿ ಹತ್ಯೆಗೆ ಪ್ರತೀಕಾರವಾಗಿ ಇಸ್ರೇಲ್‌ನ ಮಧ್ಯಭಾಗವನ್ನು ಗುರಿಯಾಗಿರಿಸಿಕೊಂಡು ವ್ಯಾಪಕ ದಾಳಿ ನಡೆಸಲಾಗಿದೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ (ಐಆರ್‌ಜಿಸಿ) ತಿಳಿಸಿದೆ. ಇಸ್ರೇಲ್‌ನ ಟೆಲ್ ಅವೀವ್ ಅನ್ನು ಗುರಿಯಾಗಿರಿಸಿ ಇರಾನ್ ಸರಣಿ ಕ್ಷಿಪಣಿ ದಾಳಿ ನಡೆಸಿದ್ದು, ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ.

ಮತ್ತೊಂದೆಡೆ, ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿರಿಸಿಕೊಂಡು, ಕೊಲ್ಲಿ ರಾಷ್ಟ್ರಗಳ ಮೇಲೂ ಇರಾನ್ ರಾಕೆಟ್, ಡ್ರೋನ್ ದಾಳಿ ನಡೆಸಿದೆ. ಕೊಲ್ಲಿ ರಾಷ್ಟ್ರಗಳು ಅವುಗಳನ್ನು ಹೊಡೆದುರುಳಿಸಿವೆ.

ಇದರ ಬೆನ್ನಲ್ಲೇ, ಇರಾನ್ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಅವರನ್ನು ಗುರಿಯಾಗಿಸಿ ದಾಳಿ ಮಾಡಲಾಗುವುದು ಎಂದು ಇಸ್ರೇಲ್ ಘೋಷಿಸಿದೆ.

ಖತೀಬ್ ಹತ್ಯೆ: ಇಸ್ರೇಲ್ ಘೋಷಣೆ

ಟೆಲ್ ಅವೀವ್ (ರಾಯಿಟರ್ಸ್): ಮಂಗಳವಾರ ರಾತ್ರಿಯಿಡೀ ನಡೆಸಿದ ಕಾರ್ಯಾ-ಚರಣೆಯಲ್ಲಿ ಇರಾನ್‌ನ ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಅವರನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಕಾಟ್ಜ್ ಹೇಳಿಕೊಂಡಿದ್ದಾರೆ.

ಖತೀಬ್ ಹತ್ಯೆಯನ್ನು ಇರಾನ್ ಬುಧವಾರ ಖಚಿತಪಡಿಸಿದೆ.

‘ಇರಾನ್‌ನ ಯಾವುದೇ ಹಿರಿಯ ಅಧಿಕಾರಿಯನ್ನು ಹತ್ಯೆ ಮಾಡಲು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೇನೆಗೆ ಅಧಿಕಾರ ನೀಡಿದ್ದಾರೆ. ಇದಕ್ಕೆ ಹೆಚ್ಚುವರಿ ಅನುಮತಿಯನ್ನೂ ಪಡೆಯಬೇಕಿಲ್ಲ ಎಂಬುದಾಗಿ ಸೂಚಿಸಲಾಗಿದೆ’ ಎಂದು ಸಚಿವ ಕಾಟ್ಜ್ ತಿಳಿಸಿದ್ದಾರೆ.



ಯುಗಾದಿ: ಕಚೇರಿಗೆ ಹಾಜರಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಶಾಸಕರು ಕೇಳಿರುವ ಪ್ರಶ್ನೆಗಳ ಪೈಕಿ, ಇನ್ನೂ ಉತ್ತರ ನೀಡಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರ ಸಿದ್ಧಪಡಿಸಲು ಸಂಬಂಧಪಟ್ಟ ವಿಭಾಗಗಳ ಅಧಿಕಾರಿ, ಸಿಬ್ಬಂದಿ ಕಡ್ಡಾಯವಾಗಿ ಗುರುವಾರ ಕಚೇರಿಗೆ ಹಾಜರಾಗಬೇಕು’ ಎಂದು ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಫರ್ಮಾನು ಹೊರಡಿಸಿದ್ದಾರೆ.

ಯುಗಾದಿ ಪ್ರಯುಕ್ತ ಗುರುವಾರ ಸಾರ್ವಜನಿಕ ರಜೆ. ಹಬ್ಬದ ದಿನವೂ ಕಚೇರಿಗೆ ಹಾಜರಾಗುವಂತೆ ಹೊರಡಿಸಿರುವ ಆದೇಶಕ್ಕೆ ಇಲಾಖೆ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ▶12

‘ನಮ್ಮನ್ನು ಪ್ರೀತಿಸಿ, ಮೋದಿ ಜತೆ ಮದುವೆ’

ನವದೆಹಲಿ: ‘ಅವರು ನಮ್ಮನ್ನು ಪ್ರೀತಿಸಿ, ನರೇಂದ್ರ ಮೋದಿ ಅವರನ್ನು ಮದುವೆಯಾದರು...’ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಎಚ್.ಡಿ. ದೇವೇಗೌಡ ಅವರ ಕಾಲೆಳೆದರು. ▶11

ಚಿನಕುರುಳಿ ಪ್ರಕಾಶ್ ಶೆಟ್ಟಿ







1,012 ಆಸ್ತಿಗಳಿಂದ ₹530 ಕೋಟಿ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 503 ಸುಸ್ತಿದಾರ ರಿಂದ ₹135.69 ಕೋಟಿ ಹಾಗೂ 509 ಆಸ್ತಿ ತೆರಿಗೆ ಪರಿಷ್ಕರಣೆ ಪ್ರಕರಣಗಳಿಂದ ₹394.44 ಕೋಟಿ ಸೇರಿ ಒಟ್ಟು ₹530.14 ಕೋಟಿ ಬಾಕಿ ಉಳಿದಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಹೆಚ್ಚು ಬಾಕಿ ಹೊಂದಿರುವ ಸುಸ್ತಿದಾರರು ಹಾಗೂ ಪರಿಷ್ಕರಣೆ ಪ್ರಕರಣಗಳಿಂದ ಬಾಕಿ ತೆರಿಗೆಯನ್ನು ತ್ವರಿತಗತಿಯಲ್ಲಿ ಸಂಗ್ರಹಿಸಲು ಸಂಬಂಧಿತ ನಗರ ಪಾಲಿಕೆಗಳ ವಲಯಗಳ ಜಂಟಿ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಆಯಾ ನಗರ ಪಾಲಿಕೆಗಳಲ್ಲಿ 50 ಪ್ರಮುಖ ಸುಸ್ತಿದಾರರು ಹಾಗೂ 50 ಪರಿಷ್ಕರಣೆ ಪ್ರಕರಣಗಳ ಪಟ್ಟಿಯನ್ನು ಜಿಬಿಎ ಜಾಲತಾಣದಲ್ಲಿ (https://gba.karnataka.gov.in) ಅಪ್ಲೋಡ್ ಮಾಡಲಾಗಿದೆ. ಆಸ್ತಿ ಮಾಲೀಕರು ಕೂಡಲೇ ಬಾಕಿ ತೆರಿಗೆಯನ್ನು ಪಾವತಿಸಿ, ಮುಂದಾಗುವ ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳಬಹುದು ಎಂದು ಹೇಳಿದರು.

‘ಮಳೆಗಾಲಕ್ಕೂ ಮುನ್ನ ರಾಜಕಾಲುವೆ ಅಭಿವೃದ್ಧಿ’

ಕೆರೆಯಿಂದ ಕೆರೆಗೆ ಸಂಪರ್ಕ ಕಲ್ಪಿಸುವ ನೀರುಗಾಲುವೆಗಳ ಕಾಮಗಾರಿ ಚುರುಕುಗೊಳಿಸಲು ಮಹೇಶ್ವರ್ ರಾವ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗಳನ್ನು ಮಳೆಗಾಲ ಪ್ರಾರಂಭವಾಗುವುದಕ್ಕೂ ಮುನ್ನ ಪೂರ್ಣಗೊಳಿಸಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಷ್ಟ್ರೀಯ ವಿಪತ್ತು ಉಪಶಮನ ನಿಧಿಯಡಿ (ಎನ್‌ಡಿಎಂಎಫ್) ₹175 ಕೋಟಿ ಹಾಗೂ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಜಲ ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮ (ಕೆಡಬ್ಲ್ಯುಎಸ್‌ಆರ್‌ಪಿ) ಅಡಿಯಲ್ಲಿ ₹2,000 ಕೋಟಿ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿರುವ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಕೆರೆಯಿಂದ ಕೆರೆಗೆ ಸಂಪರ್ಕ ಕಲ್ಪಿಸುವ ಮಳೆ ನೀರುಗಾಲುವೆಗಳ ಅಭಿವೃದ್ಧಿ ಪ್ರಗತಿಯಲ್ಲಿದ್ದು, ಕಾಮಗಾರಿಗಳ ವೇಗ ಹೆಚ್ಚಿಸಿ, ಮೇನಲ್ಲಿ ಆರಂಭವಾಗುವ ಪೂರ್ವ ಮುಂಗಾರಿಗೆ ಮುನ್ನ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದರು.

ಕೆರೆಗಳಿಗೆ ಕೊಳಚೆ ನೀರು ಸೇರುವುದನ್ನು ತಡೆಯಲು ಪ್ರಕೃತಿ ಆಧಾರಿತ ಪರಿಹಾರಗಳ ಮೂಲಕ ಯೋಜನೆ ರೂಪಿಸಿ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕು. ಜಕ್ಕೂರು ಕೆರೆಯಲ್ಲಿ ಈಗಾಗಲೇ ಪ್ರಕೃತಿ ಆಧಾರಿತ ಮಾದರಿಯಲ್ಲಿ ‘ವೆಟ್‌ಲ್ಯಾಂಡ್’ ಅಭಿವೃದ್ಧಿಪಡಿಸಲಾಗಿದೆ. ಇತರೆ ಕೆರೆಗಳಲ್ಲಿಯೂ ಇದೇ ಮಾದರಿ ಅಳವಡಿಸಿ, ಕೆರೆಗೆ ಕೊಳಚೆ ನೀರು ಸೇರುವುದನ್ನು ತಡೆಯುವಂತೆ ಹಾಗೂ ಶುದ್ಧ ನೀರು ಹರಿಯುವಂತೆ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಹೊಸದಾಗಿ ಕೈಗೆತ್ತಿಕೊಳ್ಳುತ್ತಿರುವ ಮಳೆನೀರು ಕಾಲುವೆಗಳಲ್ಲಿಯೂ ಪ್ರಕೃತಿ ಆಧಾರಿತ ಪರಿಹಾರಗಳಿಗೆ ಆದ್ಯತೆ ನೀಡಬೇಕು. ನೀರನ್ನು ಇಂಗಿಸುವ ಹಾಗೂ ಕೊಳಚೆ ನೀರನ್ನು ಹೀರಿ ಶುದ್ಧೀಕರಿಸುವ ಗುಣ ಹೊಂದಿರುವ ಕೊಲೊಕಾಸಿಯಾ, ಕಾನಾ ಇಂಡಿಕಾ ಸಸಿಗಳನ್ನು ನೆಡಬೇಕು ಎಂದು ಆದೇಶಿಸಿದರು.

ಕೋಗಿಲು ಕೆರೆಗೆ ತೂಬು ಅಳವಡಿಸಬೇಕು. ಶ್ರೀನಿವಾಸಪುರ ಕೆರೆ ಪುನರುಜ್ಜೀವನ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಬೇಕು. ಜಲಾವೃತ ಸಮಸ್ಯೆ ತಡೆಯಲು ಬೆಳ್ಳಳ್ಳಿ ಕೆರೆಯಿಂದ ಕಣ್ಣೂರು ಕೆರೆಯವರೆಗೆ ಭೂಮಾಪನದ ಮೂಲಕ ಸಮೀಕ್ಷೆ ನಡೆಸಿ, ನಿರ್ಮಿಸುತ್ತಿರುವ 660 ಮೀ. ಉದ್ದದ ಹೊಸ ರಾಜಕಾಲುವೆಯನ್ನು ಶೀಘ್ರ ಪೂರ್ಣಗೊಳಿಸಿ. ದಾಸರಹಳ್ಳಿ ಮುಖ್ಯರಸ್ತೆ ರಾಜಕಾಲುವೆ ಬದಿಯ ಹೆಚ್ಚುವರಿ ಬಫರ್ ವಲಯವನ್ನು ಪಾದಚಾರಿಗಳಿಗೆ ಅನುಕೂಲ ಆಗುವಂತೆ ಸೌಂದರ್ಯೀಕರಣಗೊಳಿಸಿ ಎಂದರು.

ಜಿಬಿಎ ಯೋಜನಾ ಅನುಷ್ಠಾನ ವಿಭಾಗದ ಮುಖ್ಯ ಎಂಜಿನಿಯರ್ ರಾಜೇಶ್ ಉಪಸ್ಥಿತರಿದ್ದರು.



ಮಹೇಶ್ವರ್ ರಾವ್ ಅವರು ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದರು

ಹೆಬ್ಬಾಳ, ನಾಗವಾರ ಕೆರೆ ಸಮಗ್ರ ಅಭಿವೃದ್ಧಿ

ಹೆಬ್ಬಾಳ ಹಾಗೂ ನಾಗವಾರ ಕೆರೆಗಳ ಸಮಗ್ರ ಅಭಿವೃದ್ಧಿಯಿಂದ ಆ ಭಾಗದ ಹೊರ ವರ್ತುಲ ರಸ್ತೆಯಲ್ಲಿ ಉಂಟಾಗುತ್ತಿದ್ದ ಜಲಾವೃತ ಸಮಸ್ಯೆ ಬಹುತೇಕ ನಿವಾರಣೆಯಾಗಲಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ನಾಗವಾರ ಮತ್ತು ಹೆಬ್ಬಾಳ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಬುಧವಾರ ಪರಿಶೀಲಿಸಿದ ಅವರು, ಕೆರೆಗಳಲ್ಲಿ ತಲಾ 16 ಎಕರೆ ಪ್ರದೇಶದಲ್ಲಿ ವಿನೂತನ ‘ವೆಟ್‌ಲ್ಯಾಂಡ್’ ನಿರ್ಮಿಸಲಾಗುತ್ತಿದೆ. ಇದರಲ್ಲಿ 1.5 ಮೀಟರ್ ನೀರು ಸಂಗ್ರಹವಾಗುತ್ತದೆ. ಹೂಳು ಮತ್ತು ತ್ಯಾಜ್ಯ ಇಲ್ಲೇ ಸಂಗ್ರಹವಾಗಲಿದ್ದು, ಕೆರೆಯ ನೀರು ಶುದ್ಧವಾಗಿರುತ್ತದೆ’ ಎಂದರು.

ಕೆರೆಗಳಲ್ಲಿ ವೆಟ್‌ಲ್ಯಾಂಡ್ ನಿರ್ಮಾಣದಿಂದ ಭದ್ರಪ್ಪ ಬಡಾವಣೆ, ವೀರಣ್ಣಪಾಳ್ಯ ಜಂಕ್ಷನ್ ಮತ್ತು ಹೊರ ವರ್ತುಲ ರಸ್ತೆ ಭಾಗಗಳಲ್ಲಿ ಉಂಟಾಗುತ್ತಿದ್ದ ಜಲಾವೃತ ಸಮಸ್ಯೆ ಬಹುತೇಕ ಕಡಿಮೆ ಆಗಲಿದೆ ಎಂದರು.

ಹೆಬ್ಬಾಳ ಕೆರೆ: 192 ಎಕರೆ ವ್ಯಾಪ್ತಿಯ ಹೆಬ್ಬಾಳ ಕೆರೆಯಲ್ಲಿ ₹15.90 ಕೋಟಿ ವೆಚ್ಚದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ. ಭದ್ರಪ್ಪ ಬಡಾವಣೆ ಭಾಗದಲ್ಲಿ ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ ಒತ್ತುವರಿ ಮಾಡಿಕೊಂಡಿದ್ದ ಪ್ರದೇಶವನ್ನು ತೆರವುಗೊಳಿಸಿ, ಆ ಜಾಗದಲ್ಲಿ ‘ವೆಟ್‌ಲ್ಯಾಂಡ್’ ನಿರ್ಮಿಸಲಾಗುತ್ತಿದೆ. ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದೆ. ಏರಿ ಬಲಪಡಿಸುವುದು, ಕೆರೆ ಸುತ್ತಲೂ ತಂತಿ ಬೇಲಿ ನಿರ್ಮಾಣ, ಒಳಹರಿವು, ಹೊರ ಹರಿವು, ತೂಬುಗಳನ್ನು ಅಳವಡಿಸಲಾಗುವುದು. ಅರಣ್ಯ ಇಲಾಖೆ 16 ಎಕರೆ ಪ್ರದೇಶದಲ್ಲಿ ನಿರ್ಮಿಸಿರುವ ನರ್ಸರಿಯನ್ನು ತೆರವುಗೊಳಿಸಲು ಸೂಚಿಸಲಾಗಿದೆ ಎಂದರು.

ನಾಗವಾರ ಕೆರೆ: 96 ಎಕರೆ ವ್ಯಾಪ್ತಿಯ ನಾಗವಾರ ಕೆರೆಯಲ್ಲಿ ಸುಮಾರು ₹15.9 ಕೋಟಿ ವೆಚ್ಚದಲ್ಲಿ ಹೂಳೆತ್ತುವಿಕೆ, ಒಳ-ಹೊರ ಹರಿವು ವ್ಯವಸ್ಥೆ, ಏರಿ ಅಭಿವೃದ್ಧಿ, ವಾಯುವಿಹಾರ ಮಾರ್ಗ, ವೆಟ್‌ಲ್ಯಾಂಡ್, ದ್ವೀಪ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸೂಚನೆಗಳು...

- ಕಣ್ಣೂರು ಗ್ರಾಮದಿಂದ ಕೆರೆಯವರೆಗೆ 470 ಮೀ. ಉದ್ದದ ಎರಡೂ ಬದಿಯ ಆರ್.ಸಿ.ಸಿ ತಡೆಗೋಡೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ
- ಚೊಕ್ಕನಹಳ್ಳಿ ಕೆರೆಯಿಂದ ಅಗ್ರಹಾರ ಕೆರೆಯವರೆಗೆ 670 ಮೀ. ಉದ್ದದ ಹೊಸ ಕಾಲುವೆ ನಿರ್ಮಾಣ ಕಾಮಗಾರಿಗಾಗಿ, ನೀರಿನ ದಿಕ್ಕನ್ನು ತಾತ್ಕಾಲಿಕವಾಗಿ ಬದಲಿಸಿ
- ರಾಚೇನಹಳ್ಳಿ ಮುಖ್ಯರಸ್ತೆಯಲ್ಲಿ 600 ಮೀ. ಉದ್ದದ ರಾಜಕಾಲುವೆ ಕಾಮಗಾರಿಗೆ ವೇಗ ನೀಡಿ
- ನಗರದಲ್ಲಿನ ಕುಂಟೆಗಳ ಸಮೀಕ್ಷೆ ನಡೆಸಿ ಮ್ಯಾಪಿಂಗ್ ಮಾಡಿ, ಪುನರುಜ್ಜೀವನಕ್ಕಾಗಿ ಪಟ್ಟಿ ಸಿದ್ಧಪಡಿಸಿ
- ತೂಬು ಅಳವಡಿಸಬೇಕಿರುವ ಕೆರೆಗಳಿಗೆ ವಿನ್ಯಾಸ ರೂಪಿಸಿ, ಗೇಟ್‌ಗಳನ್ನು ಅಳವಡಿಸಬೇಕು
- ನಾಗವಾರ ಜಂಕ್ಷನ್‌ನಲ್ಲಿ ಜಲಾವೃತ ಸಮಸ್ಯೆ ತಡೆಯಲು ರಸ್ತೆ ಸಹಿತ ಕಾಲುವೆ ನಿರ್ಮಿಸಿ



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ರಾಜ್ಯಮಟ್ಟದ ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ ಸ್ಪರ್ಧೆಯ ಕಿಶೋರ ಪ್ರತಿಭೆ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಸ್ಯಾಕ್ಸೊ ಫೋನ್ ವಾದಕ ತ್ರಿಧಾತ್ ಸಾಗರ್ ಅವರಿಗೆ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ ಅವರು ಪ್ರಮಾಣ ಪತ್ರ ವಿತರಿಸಿದರು

‘ಕಟ್ಟಡದ ಎತ್ತರ ಮಿತಿ ಮರುಪರಿಶೀಲಿಸಿ’

ಬೆಂಗಳೂರು ವಿಮಾನ ನಿಲ್ದಾಣ ಸುತ್ತಮುತ್ತ ಸಮಸ್ಯೆ • ಕೇಂದ್ರಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಎಚ್‌ಎಎಲ್, ಜಕ್ಕೂರು ವಾಯುನೆಲೆ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಕಟ್ಟಡ ಎತ್ತರದ ಮಿತಿಯಿಂದ ಅಭಿವೃದ್ಧಿ ಕಾಮಗಾರಿಗೆ ತೊಡಕಾಗಿದ್ದು, ಮಿತಿ ಬಗ್ಗೆ ಪರಿಶೀಲನೆ ನಡೆಸುವಂತೆ ಕೇಂದ್ರ ನಾಗರಿಕ ವಿಮಾನಯಾನ ಸಚಿವರಿಗೆ ಮನವಿ ಮಾಡಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ಡಿ.ಕೆ. ಶಿವಕುಮಾರ್ ಹಾಗೂ ಕೆ.ರಾಮಮೋಹನ್ ನಾಯ್ಡು ಚರ್ಚಿಸಿದರು.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಹೈದರಾಬಾದ್, ಮುಂಬೈ ಸೇರಿದಂತೆ ಬೇರೆ ಕಡೆಗಳಲ್ಲಿ ಮಿತಿ ಕಡಿಮೆ ಇದೆ. ಬೆಂಗಳೂರಿನಲ್ಲೂ ಎತ್ತರದ ಮಿತಿ ಇರಬೇಕು ಎಂದು ಮನವಿ ಮಾಡಿದ್ದೇವೆ. ಕಟ್ಟಡ ಎತ್ತರದ ಮಿತಿಯಿಂದಾಗಿ ಬೆಂಗಳೂರಿನಲ್ಲಿ ನಾಗರಿಕರು ಪ್ರೀಮಿಯಂ ಎಫ್‌ಎಆರ್ ತೆಗೆದುಕೊಳ್ಳಲು ಹಿಂಜರಿಯುತ್ತಿದ್ದಾರೆ. ಸರ್ಕಾರಕ್ಕೂ ಹಣ ಬರುತ್ತಿಲ್ಲ. ಎಫ್‌ಎಆರ್ ಕಡಿಮೆ ಮಾಡಿ ಪ್ರೀಮಿಯಂ ಎಫ್‌ಐಆರ್ ಹೆಚ್ಚಿಸಿ ಎಂದು ಕೇಂದ್ರ ಸರ್ಕಾರವೇ ಸೂಚನೆ ನೀಡಿದೆ. ಹೀಗಾಗಿ ನಾವು ಅನೇಕ ತೀರ್ಮಾನಗಳನ್ನು ಕೈಗೊಳ್ಳಬೇಕಿದೆ.

ಈ ನಿಟ್ಟಿನಲ್ಲಿ ಕೇಂದ್ರ ಸಚಿವರ ಜೊತೆ ಚರ್ಚಿಸಬೇಕಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಚರ್ಚಿಸುವುದಾಗಿ ಸಚಿವರು ಭರವಸೆ ನೀಡಿದ್ದಾರೆ.ನಾನು ಕೂಡ ರಕ್ಷಣಾ ಸಚಿವರನ್ನು ಭೇಟಿ ಮಾಡುವೆ ಎಂದರು.

ಸರ್ಕಾರಕ್ಕೆ ಸಹಕಾರ ನೀಡದ ನೈಸ್ ಸಂಸ್ಥೆಗೆ ತಕ್ಕ ಉತ್ತರ: ‘ಬೆಂಗಳೂರಿನಲ್ಲಿ ಸ್ಕೈಡೆಕ್ ನಿರ್ಮಿಸಲು ಎರಡೂವರೆ ವರ್ಷಗಳಿಂದ ಪ್ರಯತ್ನಪಟ್ಟರೂ ಸೂಕ್ತ ಜಾಗ ಸಿಕ್ಕಿರಲಿಲ್ಲ. ಈಗ ಕೆಂಪೇಗೌಡ ಬಡಾವಣೆಯಲ್ಲಿ ನಿರ್ಮಿಸಲು ಮುಂದಾಗಿದ್ದೇವೆ. ವಿಮಾನ ನಿಲ್ದಾಣ ಸುತ್ತಮುತ್ತ 20 ಕಿ.ಮೀ ದೂರದಲ್ಲಿ ಸ್ಕೈಡೆಕ್ ನಿರ್ಮಿಸಲು ಸಾಧ್ಯವಿಲ್ಲ. ಎನ್‌ಜಿಇಎಫ್ ಬಳಿ ಸ್ಕೈಡೆಕ್ ಮಾಡಲು ಜಾಗ ಉತ್ತಮವಾಗಿತ್ತು. ಮೆಟ್ರೊ ಸೌಲಭ್ಯವಿತ್ತು. ನೈಸ್ ರಸ್ತೆ ಬಳಿ ಸೋಂಪುರ ವೃತ್ತದ ಬಳಿ ನಿರ್ಮಾಣಕ್ಕೆ ಅನೇಕರು ಸಲಹೆ ನೀಡಿದ್ದರು. ಆದರೆ, ನೈಸ್ ಸಂಸ್ಥೆ ಸಹಕಾರ ನೀಡಲಿಲ್ಲ. ಸಹಕಾರ ನೀಡದ ಅವರಿಗೆ ತಕ್ಕ ಉತ್ತರ ನೀಡುತ್ತೇವೆ’ ಎಂದು ಅವರು ಎಚ್ಚರಿಸಿದರು.

ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ವಿಚಾರದಲ್ಲಿ ಕೇಂದ್ರ ಸರ್ಕಾರ ಅಭಿಪ್ರಾಯ ನೀಡಿದೆ. ರಾಜ್ಯ ಸರ್ಕಾರವೇ ಜಾಗ ಅಂತಿಮಗೊಳಿಸಲು ಸಲಹೆ ನೀಡಿದೆ. ನಮ್ಮ ಬಳಿ 2-3 ಆಯ್ಕೆಗಳಿದ್ದು, ಸಾಧಕ ಬಾಧಕಗಳನ್ನು ಚರ್ಚಿಸಿ ತೀರ್ಮಾನ ಮಾಡುತ್ತೇವೆ ಎಂದರು.

ಮತದಾರರ ಪಟ್ಟಿ: ಆಕ್ಷೇಪಣೆ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ನಾಗರಿಕರ ಮನವಿಗೆ ಸ್ಪಂದಿಸಿರುವ ರಾಜ್ಯ ಚುನಾವಣಾ ಆಯೋಗ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಪರಿಷ್ಕೃತ ಕರಡು ಪಟ್ಟಿಗೆ ದೂರು, ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ಮಾರ್ಚ್ 30ರವರೆಗೆ ವಿಸ್ತರಿಸಿದೆ.

ಮಾರ್ಚ್ 9ರಂದು ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಪ್ರಕಟಿಸಿ, 16ರವರೆಗೆ ಆಕ್ಷೇಪಣೆಗೆ ಅವಕಾಶ ಕಲ್ಪಿಸಲಾಗಿತ್ತು. ನಂತರ, ಈ ಅವಧಿಯನ್ನು 20ರವರೆಗೆ ವಿಸ್ತರಿಸಲಾಗಿತ್ತು. ಆದರೆ, ಜಿಬಿಎ ಜಾಲತಾಣದಲ್ಲಿ (https://gba.karnataka.gov.in/electoral2026) ಮತದಾರರ ಪಟ್ಟಿ ಲಭ್ಯವಿರಲಿಲ್ಲ. ಈ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಮಾರ್ಚ್ 17ರಂದು ಸುದ್ದಿ ಪ್ರಕಟವಾಗಿತ್ತು. ಜಾಲತಾಣದಲ್ಲಿ ಮತದಾರರ ಹೆಸರು, ಎಪಿಕ್ ಸಂಖ್ಯೆಯಂತೆ ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ಹುಡುಕುವ ಆಯ್ಕೆಯನ್ನು ಮಾರ್ಚ್ 18ರಂದು ಜಿಬಿಎ ಚಾಲ್ತಿಗೊಳಿಸಿದೆ. ನಾಗರಿಕರ ದೂರು ಹಿನ್ನೆಲೆಯಲ್ಲಿ, ಆಕ್ಷೇಪಣೆ ಅವಧಿಯನ್ನು ಎರಡನೇ ಬಾರಿಗೆ ವಿಸ್ತರಿಸಿ ಬುಧವಾರ ಆದೇಶ ಹೊರಡಿಸಲಾಗಿದೆ. ಮತದಾರರ ಅಂತಿಮ ಪಟ್ಟಿ ಪ್ರಕಟಣೆ ದಿನವನ್ನು ಏ.18ಕ್ಕೆ ಮುಂದೂಡಿದೆ.

ನವೀಕರಿಸಬಹುದಾದ ಇಂಧನ ಮೂಲ: 25,000 ಮೆ.ವಾ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಐದು ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ 25,000 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ರಾಜ್ಯ ಹೊಂದಿದೆ ಎಂದು ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

ಕರ್ನಾಟಕ ನವೀಕರಿಸಬಹುದಾದ ಇಂಧನ ನಿಗಮವು (ಕ್ರೆಡಲ್) ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ‘ನವೀಕರಿಸಬಹುದಾದ ಇಂಧನದ ಭವಿಷ್ಯವನ್ನು ಭಾರತವು ಹೇಗೆ ಜವಾಬ್ದಾರಿಯುತವಾಗಿಸಬಹುದು’ ಪುಸ್ತಕವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಹೂಡಿಕೆದಾರರು ಮತ್ತು ಜನರ ಸಹಯೋಗದೊಂದಿಗೆ ಈ ಗುರಿಯನ್ನು ಸಾಧಿಸುತ್ತೇವೆ. ಸೌರಶಕ್ತಿ ಮತ್ತು ಪವನ ಶಕ್ತಿ ಮೂಲದಿಂದ ವಿದ್ಯುತ್ ಉತ್ಪಾದನೆ ಮಾಡಲು ಸಾಕಷ್ಟು ಭೂಮಿ ಬೇಕಾಗುತ್ತದೆ. ಆದರೆ ಭೂಸ್ವಾಧೀನಕ್ಕೆ ವಿರೋಧ ವ್ಯಕ್ತವಾಗುತ್ತದೆ. ಇಂತಹ ಯೋಜನೆಗಳಿಗೆ ಇದೇ ದೊಡ್ಡ ತೊಡಕು’ ಎಂದರು.

‘ಈ ಯೋಜನೆಗಳಿಂದ ತಮಗೆ ತೊಂದರೆಯಾಗುತ್ತದೆ ಎಂದು ಜನರು ವಿರೋಧ ವ್ಯಕ್ತಪಡಿಸುತ್ತಾರೆ. ಹೂಡಿಕೆದಾರರು ಅದನ್ನೇ ದೊಡ್ಡ ತೊಡಕು ಎಂದು ಪರಿಗಣಿಸುತ್ತಾರೆ. ನವೀಕರಿಸಬಹುದಾದ ಇಂಧನ ಮೂಲಗಳೇ ದೇಶದ ಭವಿಷ್ಯ ಎಂಬುದನ್ನು ಜನರಿಗೆ ಮನದಟ್ಟು ಮಾಡಿಕೊಟ್ಟರೆ, ಇಂತಹ ಯೋಜನೆಗಳ ಅನುಷ್ಠಾನ ಸಾಧ್ಯ. ಈ ನಿಟ್ಟಿನಲ್ಲಿ ಕೆಲಸ ಮಾಡಬೇಕಿದೆ’ ಎಂದರು.

ಕ್ರೆಡಲ್ ಅಧ್ಯಕ್ಷ ಮತ್ತು ಶಾಸಕ ಟಿ.ಡಿ.ರಾಜೇಗೌಡ, ‘ಈ ಕ್ಷೇತ್ರದಲ್ಲಿ ರಾಜ್ಯವು ಉತ್ತಮ ಸಾಧನೆ ಮಾಡಿದ್ದು, ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಈ ಬಜೆಟ್‌ನಲ್ಲಿ ‘ಮುಖ್ಯಮಂತ್ರಿ ಸೌರಶಕ್ತಿ ಯೋಜನೆ’ಯನ್ನು ಘೋಷಿಸಲಾಗಿದ್ದು, ಈ ಸ್ವರೂಪದ ಎಲ್ಲ ಯೋಜನೆಗಳನ್ನೂ ಅದು ಒಳಗೊಳ್ಳಲಿದೆ’ ಎಂದರು.

ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಯ್ಯ, ಸಿಇಡಬ್ಲ್ಯು ನಿರ್ದೇಶಕ ಕಾರ್ತಿಕ್ ಗಣೇಶ್, ಇಂಧನ ಇಲಾಖೆ ಅಧಿಕಾರಿಗಳು, ಉದ್ಯಮಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಅಂಗನವಾಡಿ ಕಾರ್ಯಕರ್ತೆಯರ ಅನಿರ್ದಿಷ್ಟಾವಧಿ ಪ್ರತಿಭಟನೆ 23ರಿಂದ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ನೀಡುವುದೂ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಾರ್ಚ್ 23ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ಅಂಗನವಾಡಿ ನೌಕರರ ಸಂಘ ತಿಳಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ, ‘ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ ಹಾಗೂ ಯು.ಕೆ.ಜಿ ಪ್ರಾರಂಭಿಸಬೇಕು. ಅಂಗನವಾಡಿ ಕೇಂದ್ರಕ್ಕೆ ಸರಬರಾಜು ಮಾಡುವ ಆಹಾರ ಪದಾರ್ಥಗಳ ಗುಣಮಟ್ಟ ಸರಿ ಇಲ್ಲದ ಕಾರಣ ಬಿಐಎಸ್ ಪರವಾನಗಿ ರದ್ದುಪಡಿಸಬೇಕು. ಸ್ಥಳೀಯವಾಗಿ ಸಿಗುವ ಆಹಾರ ಪದಾರ್ಥಗಳನ್ನು ಪೂರೈಕೆ ಮಾಡಬೇಕು’ ಎಂದು ಆಗ್ರಹಿಸಿದರು

‘2011ರಿಂದ 2023ರ ನಡುವೆ ನಿವೃತ್ತರಾದ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಕೂಡಲೇ ಗ್ರಾಚ್ಯುಟಿ ಹಣ ಬಿಡುಗಡೆ ಮಾಡಬೇಕು. ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಮೇಲ್ವಿಚಾರಕಿಯರು ಹಾಗೂ ಸಿಡಿಪಿಒ ಹುದ್ದೆಗಳನ್ನು ಭರ್ತಿ ಮಾಡಬೇಕು. ಚುನಾವಣೆ ಕೆಲಸಗಳಿಂದ ಅಂಗನವಾಡಿ ನೌಕರರನ್ನು ಬಿಡುಗಡೆಗೊಳಿಸಬೇಕು’ ಎಂದು ಒತ್ತಾಯಿಸಿದರು.

ಮೊಟ್ಟೆ, ಎಲ್‌ಪಿಜಿ ಸಿಲಿಂಡರ್, ಬಾಡಿಗೆ, ಕರೆನ್ಸಿಯ ಹಣವನ್ನು ಮುಂಗಡವಾಗಿ ಪಾವತಿಸಬೇಕು. ಸಾಮೂಹಿಕ ಆರೋಗ್ಯ ವಿಮೆ ಸೌಲಭ್ಯ ನೀಡಬೇಕು’ ಎಂದರು.




ನಗರದ ಕೆ.ಜಿ. ರಸ್ತೆಯಲ್ಲಿ ಬುಧವಾರ ರಾತ್ರಿ ಸುರಿದ ಮಳೆಯಲ್ಲಿ ಆಲಿಕಲ್ಲು ಬಿದ್ದಿತು ಪ್ರಜಾವಾಣಿ ಚಿತ್ರ: ಎಂ. ಎಸ್‌. ಮಂಜುನಾಥ್ (ಎಡಚಿತ್ರ). ಯುವತಿಯರು ಮಳೆಯಲ್ಲೇ ಹೆಜ್ಜೆಹಾಕಿದ ದೃಶ್ಯ

ಎರಡನೇ ದಿನ ಆಲಿಕಲ್ಲು ಮಳೆ

ಯಲಹಂಕ, ಜಕ್ಕೂರು, ಬ್ಯಾಟರಾಯನಪುರ ವಿದ್ಯಾರಣ್ಯಪುರ ಸುತ್ತಮುತ್ತ ಹೆಚ್ಚಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬೇಸಿಗೆ ಮಳೆ ಬುಧವಾರವೂ ಮುಂದುವರಿಯಿತು. ಗುಡುಗು– ಬಿರುಗಾಳಿಯೊಂದಿಗೆ ಅಲ್ಲಲ್ಲಿ ಆಲಿಕಲ್ಲು ಸುರಿಯಿತು.

ಎಂ.ಜಿ. ರಸ್ತೆ, ಕಲ್ಯಾಣ ನಗರ, ಬಳ್ಳಾರಿ ರಸ್ತೆ, ಮೆಜೆಸ್ಟಿಕ್, ಶಾಂತಿನಗರ, ಕೋರಮಂಗಲ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಬುಧವಾರ ರಾತ್ರಿ ಮಳೆಯೊಂದಿಗೆ ಆಲಿಕಲ್ಲು ಸುರಿಯಿತು. ನಗರದ 96 ವಾರ್ಡ್‌ಗಳಲ್ಲಿ ಸಾಧಾರಣ ಮಳೆಯಾಯಿತು. ಯಲಹಂಕ, ಜಕ್ಕೂರು, ಬ್ಯಾಟರಾಯನಪುರ ಸುತ್ತಮುತ್ತ ಹೆಚ್ಚಿನ ಮಳೆಯಾಯಿತು.

ಹಳೆ ಮದ್ರಾಸ್ ರಸ್ತೆ, ಪೈ ಲೇಔಟ್, ಮಹದೇವಪುರ, ಅಲ್ಲಾಳಸಂದ್ರ ಮುಖ್ಯರಸ್ತೆ, ಚೊಕ್ಕಸಂದ್ರ ಮೇಲ್ಸೇತುವೆ, ಬಿಳೇಕಹಳ್ಳಿಯಿಂದ ಅರಕೆರೆ ರಸ್ತೆ, ಕೋಗಿಲು ರಸ್ತೆ, ಬಿನ್ನಿಮಿಲ್ ರಸ್ತೆಯಿಂದ ಹುಣಸೇಮರದ ಜಂಕ್ಷನ್, ಸಂಜಯನಗರ ಕ್ರಾಸ್, ದೊಡ್ಡಬಳ್ಳಾಪುರ ಮುಖ್ಯರಸ್ತೆ, ಸಿಲ್ಕ್‌ಬೋರ್ಡ್ ಕಡೆಗಿನ ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ನಗರದಲ್ಲಿ ಗುರುವಾರವೂ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಚೊಕ್ಕನಹಳ್ಳಿ ಮುಖ್ಯರಸ್ತೆಯಲ್ಲಿ ಮರ ಬಿದ್ದು, ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಅರಣ್ಯ ವಿಭಾಗದ ಸಿಬ್ಬಂದಿ ಮಳೆಯಲ್ಲೇ ಬಂದು, ಬಿದ್ದಿದ್ದ ಮರವನ್ನು ತೆರವುಗೊಳಿಸಿದರು.

ಎಲ್ಲೆಲ್ಲಿ ಹೆಚ್ಚು ಮಳೆ? (ಸೆಂ.ಮೀ ಗಳಲ್ಲಿ)

ಯಲಹಂಕ	2.9	ಕೊಡಿಗೇಹಳ್ಳಿ	1.4
ಚೌಡೇಶ್ವರಿ	2.4	ಬಿಳೇಕಹಳ್ಳಿ	1.3
ಜಕ್ಕೂರು	2.5	ಗೊಟ್ಟಿಗೆರೆ	1.25
ಬ್ಯಾಟರಾಯನಪುರ	2.1	ಶೆಟ್ಟಿಹಳ್ಳಿ	1.2
ವಿದ್ಯಾರಣ್ಯಪುರ	1.9	ಬಿಟಿಎಂ ಲೇಔಟ್	1.2
ಅರಕೆರೆ	1.85	ಬಾಗಲಗುಂಟೆ	1.1
ಬೊಮ್ಮನಹಳ್ಳಿ	1.5	ಮನೋರಾಯನಪಾಳ್ಯ	1
ದೊರೆಸಾನಿಪಾಳ್ಯ	1.5		

‘ಬಿಎಸ್‌ಡಬ್ಲ್ಯುಎಂಎಲ್ ಅಮಾನವೀಯ ವರ್ತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ರಸ್ತೆಗಳಲ್ಲಿನ ‘ಬ್ಲ್ಯಾಕ್ ಸ್ಪಾಟ್’ಗಳಲ್ಲಿ ಮನೆಗಳಿಂದ ಕಸ ಸಂಗ್ರಹಿಸುವ ಆಟೊ ಚಾಲಕರು ಹಾಗೂ ಸಹಾಯಕರಿಂದ ತ್ಯಾಜ್ಯ ಆಯಿಸಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯು-ಎಂಎಲ್) ಅಧಿಕಾರಿಗಳು ಅಮಾನವೀಯವಾಗಿ ನಡೆದುಕೊಳ್ಳುತ್ತಿದ್ದಾರೆ’ ಎಂದು ಬಿಜೆಪಿಯ ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಎ.ಆರ್. ಸಪ್ತಗಿರಿ ಗೌಡ ಹೇಳಿದ್ದಾರೆ.



ಎ.ಆರ್. ಸಪ್ತಗಿರಿ ಗೌಡ

‘ಗುತ್ತಿಗೆದಾರರು ಸರಬರಾಜು ಮಾಡುವ ಆಟೊಗಳು ಕ್ಯೂಆರ್ ಕೋಡ್ ಮೂಲಕ ಹಾಜರಾತಿ ನೀಡಬೇಕು. ಆ ನಂತರ ಮನೆಗಳಿಗೆ ಹೋಗಿ ಕಸ ಸಂಗ್ರಹಿಸಬೇಕು. ಇದರಿಂದ ಸಂಗ್ರಹ ತಡವಾಗಿ, ಬ್ಲ್ಯಾಕ್ ಸ್ಪಾಟ್‌ಗಳು ನಿರ್ಮಾಣವಾಗುತ್ತಿವೆ. ಇಂತಹ ಸ್ಥಳಗಳಲ್ಲಿ ಆಟೊ ಚಾಲಕರು ಹಾಗೂ ಸಹಾಯಕರಿಂದ ಬರಿಗೈಯಲ್ಲಿ ತ್ಯಾಜ್ಯವನ್ನು ಪ್ರತ್ಯೇಕಿಸುವ ಕೆಲಸವನ್ನು ಬಿಎಸ್‌ಡಬ್ಲ್ಯು-ಎಂಎಲ್ ಅಧಿಕಾರಿಗಳು ಮಾಡಿಸುತ್ತಿದ್ದಾರೆ. ಇದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಆದೇಶದ ಉಲ್ಲಂಘನೆಯಾಗಿದ್ದು, ಅಮಾನವೀಯವಾಗಿದೆ’ ಎಂದು ಪತ್ರಿಕಾ ಹೇಳಿಕೆಯಲ್ಲಿ ದೂರಿದ್ದಾರೆ.

‘ಸಮಸ್ಯೆಗಳ ನಡುವೆ ಗುತ್ತಿಗೆದಾರರು ಕಾರ್ಯನಿರ್ವಹಿಸುತ್ತಿದ್ದರೂ ಸಮಯಕ್ಕೆ ಸರಿಯಾಗಿ ಬಿಲ್ ಪಾವತಿಸುವಲ್ಲಿ ಬಿಎಸ್‌ಡಬ್ಲ್ಯುಎಂಎಲ್ ವಿಫಲವಾಗಿದೆ. ಬಿಲ್ ಪಾವತಿಸಲು ಕೇಳಿದರೆ, ಕೆಲಸ ಮಾಡಲು ಆಗೊಲ್ಲ ಎಂದು ಪತ್ರ ಬರೆದುಕೊಡಿ ಎಂದು ಸರ್ವಾಧಿಕಾರಿ ಧೋರಣೆ ತೋರುತ್ತಿದ್ದಾರೆ. ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಅವೈಜ್ಞಾನಿಕ ತೀರ್ಮಾನಗಳಿಂದ ನಗರದಲ್ಲಿ ಕಸದ ಸಮಸ್ಯೆ ಹೆಚ್ಚಾಗುತ್ತಿದೆ’ ಎಂದಿದ್ದಾರೆ.

‘ಕಸದ ಸಮಸ್ಯೆಯನ್ನು ಬಗೆಹರಿಸದ ಕಾಂಗ್ರೆಸ್ ಸರ್ಕಾರ ನಾಗರಿಕರಿಗೆ ಕಸದ ತೆರಿಗೆ ವಿಧಿಸಿರುವುದು ಜನವಿರೋಧಿ ನೀತಿಯಾಗಿದೆ. ಕಸದ ಸಮಸ್ಯೆಯನ್ನೇ ಪರಿಹರಿಸಲು ಸಾಧ್ಯವಾಗದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರು ನಗರವನ್ನು ‘ಬ್ರ್ಯಾಂಡ್ ಬೆಂಗಳೂರು’ ಮಾಡುತ್ತೇವೆ ಎಂದು ಹೇಳುತ್ತಿರುವುದು ಹಾಸ್ಯಾಸ್ಪದ’ ಎಂದು ಟೀಕಿಸಿದ್ದಾರೆ.

ಮುಖ್ಯಮಂತ್ರಿಗಳ ಕಪ್ ಫುಟ್‌ಬಾಲ್ 22ರಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಮತ್ತು ವೈಷ್ಣವಿ ಗ್ರೂಪ್ ಜಂಟಿ ಆಶ್ರಯದಲ್ಲಿ ಇದೇ ತಿಂಗಳ 22 ರಿಂದ ಏಪ್ರಿಲ್ 12ರವರೆಗೆ ಎರಡನೇ ವರ್ಷದ ‘ಮುಖ್ಯಮಂತ್ರಿಗಳ ಕಪ್’ ಫುಟ್‌ಬಾಲ್ ಟೂರ್ನಿ ನಡೆಯಲಿದೆ.



ಈ ಟೂರ್ನಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ 16 ವಿಧಾನಸಭಾ ಕ್ಷೇತ್ರಗಳ ತಂಡಗಳು ಆಡಲಿವೆ. 16 ತಂಡಗಳನ್ನು 4 ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನ ಗಳಿಸಿದ ತಂಡಗಳು ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯಲಿವೆ ಎಂದು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಅಧ್ಯಕ್ಷ ಎನ್.ಎ.ಹ್ಯಾರಿಸ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಆಯಾ ತಂಡಗಳಲ್ಲಿ ಆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಆಟಗಾರರಷ್ಟೇ ಆಡಬೇಕು. ಬೇರೊಂದು ಕ್ಷೇತ್ರದ ಆಟಗಾರರನ್ನು ಆಡಿಸುವಂತಿಲ್ಲ. ಇದನ್ನು ಕಡ್ಡಾಯ ಮಾಡಲಾಗಿದೆ’ ಎಂದರು. ಫುಟ್‌ಬಾಲ್ ಆಟವನ್ನು ಬೆಂಗಳೂರಿನಾದ್ಯಂತ ಜನಪ್ರಿಯಗೊಳಿಸುವ ಉದ್ದೇಶ ಈ ಟೂರ್ನಿಯ ಹಿಂದೆಯಿದೆ ಎಂದು ಅವರು ಹೇಳಿದರು.

ವಿಜೇತ ತಂಡ ಟ್ರೋಫಿ ಜೊತೆ ₹2 ಲಕ್ಷ ಬಹುಮಾನ ಪಡೆಯಲಿದೆ. ರನ್ನರ್ ಅಪ್ ಪಡೆದ ತಂಡ ₹1 ಲಕ್ಷ ಗಳಿಸಲಿದೆ. ಸೆಮಿಫೈನಲ್‌ನಲ್ಲಿ ಸೋತ ತಂಡಗಳು ತಲಾ ₹25 ಸಾವಿರ ಪಡೆಯಲಿವೆ.

ಮೊದಲ ವರ್ಷ 17 ತಂಡಗಳು ಕಣದಲ್ಲಿದ್ದು, ಶಾಂತಿನಗರ ತಂಡ ವಿಜೇತವಾಗಿತ್ತು.

ಈ ಬಾರಿಯ ತಂಡಗಳು: ಎ ಗುಂಪು: ಶಿವಾಜಿನಗರ, ಪುಲಕೇಶಿನಗರ, ಬಿಟಿಎಂ ಲೇಔಟ್, ಸಿ.ವಿ. ರಾಮನ್‌ನಗರ. ಬಿ ಗುಂಪು: ಆರ್.ಆರ್.ನಗರ, ಶಾಂತಿನಗರಮ ಗಾಂಧಿನಗರ, ಮಲ್ಲೇಶ್ವರಂ. ಸಿ ಗುಂಪು: ರಾಜಾಜಿನಗರ, ಯಲಹಂಕ, ಜಯನಗರ, ಹೆಬ್ಬಾಳ. ಡಿ ಗುಂಪು: ಸರ್ವಜ್ಞನಗರ, ಕೆ.ಆರ್.ಪುರ, ಬ್ಯಾಟರಾಯನಪುರ, ಯಶವಂತಪುರ.

ಎನ್‌ಎಬಿಎಲ್ ಮಾನ್ಯತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಸೂಕ್ಷ್ಮಜೀವವಿಜ್ಞಾನ ವಿಭಾಗವು ರಾಷ್ಟ್ರೀಯ ಪರೀಕ್ಷಣಾ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ರಾಷ್ಟ್ರೀಯ ಮಾನ್ಯತೆ ಮಂಡಳಿಯಿಂದ (ಎನ್‌ಎಬಿಎಲ್) ಮಾನ್ಯತೆ ಪಡೆಯುವಲ್ಲಿ ಯಶಸ್ವಿಯಾಗಿದೆ.

4 ವರ್ಷಗಳ ಅವಧಿಗೆ ಈ ಮಾನ್ಯತೆ ದೊರೆತಿದೆ. ಸದ್ಯ 66 ಪರೀಕ್ಷೆಗಳನ್ನು ನಡೆಸುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಗಾಂಧಾರಿ ವಿದ್ಯೆಯಿಂದ ಚಾರ್ವಿ ದಾಖಲೆ



ಬೆಂಗಳೂರು: ನಗರದ ಶ್ರೀ ಜ್ಞಾನಾಕ್ಷಿ ವಿದ್ಯಾನಿಕೇತನ ಶಾಲೆಯಲ್ಲಿ 4ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿ ಚಾರ್ವಿ ಪಿ. ತನ್ನ ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡೇ ಆಂಜನೇಯನ ಚಿತ್ರವನ್ನು ಬಿಡಿಸಿ, ಅದಕ್ಕೆ ಬಣ್ಣ ತುಂಬುವ ಮೂಲಕ ‘ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್’ಗೆ ಸೇರ್ಪಡೆಯಾಗಿದ್ದಾಳೆ.

ವಿದ್ಯಾರಂಭ ಗುರುಕುಲದಲ್ಲಿ ಆಕೆ ಗಾಂಧಾರಿ ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದು, ಗುರು ಮಂಜುನಾಥ್ ಪೂಜಾರ್ ಅವರ ಮಾರ್ಗದರ್ಶನದಲ್ಲಿ ವಿಶೇಷ ತರಬೇತಿ ಪಡೆಯುತ್ತಿದ್ದಾಳೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಓದುವ, ಬರೆಯುವ, ಬಣ್ಣಗಳನ್ನು ಗುರುತಿಸುವ, ಚಿತ್ರ ಬಿಡಿಸುವ, ಚೆಸ್ ಆಡುವ ಕೌಶಲ ಕರಗತ ಮಾಡಿಕೊಂಡಿದ್ದಾಳೆ.

‘ಹಿಂಬಾಲಕರ ಹಿತಾಸಕ್ತಿಗಾಗಿ ಪ್ರಸ್ತಾವ’

ಕೆಂಗೇರಿ: ‘ಶಾಸಕ ಎಸ್.ಟಿ. ಸೋಮಶೇಖರ್ ತಮ್ಮ ಹಿಂಬಾಲಕರ ಹಿತಾಸಕ್ತಿಗಾಗಿ ನೈಸ್ ವಿಚಾರ ಪ್ರಸ್ತಾಪಿಸಿದ್ದಾರೆ. ರೈತರ ಲಾಭಕ್ಕಾಗಿ ಅಲ್ಲ’ ಎಂದು ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ.ರುದ್ರೇಶ್ ಆರೋಪಿಸಿದರು.

‘ಟೋಲ್ ಮೂಲಕ ನೈಸ್ ಸಂಸ್ಥೆಯು ಸಾರ್ವಜನಿಕರಿಂದ ಅಕ್ರಮವಾಗಿ ಹಣ ಸಂಗ್ರಹ ಮಾಡುತ್ತಿದೆ. ಸರ್ಕಾರ ಈ ರಸ್ತೆಯನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು’ ಎಂದು ಶಾಸಕ ಎಸ್.ಟಿ. ಸೋಮಶೇಖರ್ ಸದನದಲ್ಲಿ ಆಗ್ರಹಿಸಿದ್ದರು.

ಈ ಬಗ್ಗೆ ಬುಧವಾರ ಸುದ್ದಿಗೋಷ್ಠಿಯಲ್ಲಿ ರುದ್ರೇಶ್ ಪ್ರತಿಕ್ರಿಯಿಸಿ, ‘ಭೂ ಪರಿಹಾರ ಸದನ ಸಮಿತಿ ಸಭೆಗಳಿಗೆ ನಿಯಮಿತವಾಗಿ ಹಾಜರಾಗಿ ಅಗತ್ಯ ಮಾಹಿತಿ ನೀಡಿದ್ದರೆ ವರ್ಷಗಳ ಹಿಂದೆಯೇ ಸಮಸ್ಯೆ ಬಗೆಹರಿಯುತ್ತಿತ್ತು. ಅವರಿಗೆ ಸ್ಥಳೀಯ ರೈತರ ಸಮಸ್ಯೆ ಬಗ್ಗೆ ಅರಿವಿಲ್ಲ’ ಎಂದು ಟೀಕಿಸಿದರು.

‘ರೈತರ ಸಮಸ್ಯೆ ಬಗ್ಗೆ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಲು ಸಿದ್ಧಗಂಗಾ ಶ್ರೀಗಳ ಮೂಲಕ ಸಂಪರ್ಕಿಸಲು ಪ್ರಯತ್ನಿಸಲಾಗುತ್ತಿದೆ. ಎರಡು ತಿಂಗಳು ಕಳೆದರೂ ಫಲಪ್ರದವಾಗಿಲ್ಲ. ಉಪಮುಖ್ಯಮಂತ್ರಿ ಸೇರಿದಂತೆ ಸಂಬಂಧಿಸಿದ ಯಾವುದೇ ಸಚಿವರು ಸ್ಪಂದಿಸುತ್ತಿಲ್ಲ’ ಎಂದು ದೂರಿದರು.

ರೈತರ ಹಿತಾಸಕ್ತಿಗಾಗಿ ಯಡಿಯೂರಪ್ಪ, ದೇವೇಗೌಡರು ಮತ್ತೆ ಪ್ರತಿಭಟನೆಗೆ ಬರಬೇಕು ಎಂದು ಆಗ್ರಹಿಸಿದರು. ಸಮಸ್ಯೆ ಬಗೆ ಹರಿಯದಿದ್ದಲ್ಲಿ ಮುಂದಿನ ತಿಂಗಳು ನೈಸ್ ಟೋಲ್ ರಸ್ತೆಯಲ್ಲಿ ಪ್ರತಿಭಟನೆ ನಡೆಸಲಾಗುವುದು, ಪರಿಹಾರ ದೊರಕದ ರೈತರ ಭೂಮಿಗೆ ಕಾಂಪೌಂಡ್ ಹಾಕಲಾಗುವುದು ಎಂದು ಎಚ್ಚರಿಸಿದರು.

ಯಾರನ್ನು ನಂಬಬೇಕು?

ಟೋಲ್ ಮೂಲಕ ನೈಸ್ ಸಂಸ್ಥೆ ಪ್ರತಿ ದಿನ ₹ 2.5 ಕೋಟಿ ಆದಾಯ ಗಳಿಸುತ್ತಿದೆ ಎಂದು ಮಾಜಿ ಪ್ರಧಾನಿ ದೇವೇಗೌಡರು ತಿಳಿಸಿದ್ದರು. ₹ 10 ಕೋಟಿ ಆದಾಯ ಗಳಿಸುತ್ತಿದೆ ಎಂದು ಶಾಸಕರು ಸುಳಿವು ನೀಡಿದ್ದಾರೆ. ರೈತರು ಶಾಸಕರ ಮಾತನ್ನು ನಂಬಬೇಕೋ, ಮಾಜಿ ಪ್ರಧಾನಿಯನ್ನು ನಂಬಬೇಕೋ ತಿಳಿಯದಾಗಿದೆ ಎಂದು ಎಂ. ರುದ್ರೇಶ್ ಹೇಳಿದರು.

ದಾಸರಹಳ್ಳಿ ವ್ಯಾಪ್ತಿ ಜೋರು ಮಳೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಸಂತೆ ಸರ್ಕಲ್‌ನಲ್ಲಿ ಬುಧವಾರ ಗುಡುಗು ಸಿಡಿಲು ಸಹಿತ ಬಿರುಸಿನ ಮಳೆ ಸುರಿದ ಪರಿಣಾಮ ತಗ್ಗು ಪ್ರದೇಶಗಳು ಜಲಾವೃತಗೊಂಡವು. ಚಿಕ್ಕಬಾಣಾವರ ಕೆರೆ ಮೈದಾನ ತುಂಬಿ, ಚಿಕ್ಕಬಾಣಾವರ ಪುರಸಭೆ ಕಚೇರಿ ಕಡೆಗೆ ಮಳೆ ನೀರು ಹರಿಯಿತು.

ಪುರಸಭೆ ಕಚೇರಿ ಒಳಗೆ ಅರ್ಧ ಅಡಿ ನೀರು ನಿಂತಿತ್ತು. ಚಿಕ್ಕಬಾಣಾವರ ಹೆಸರಘಟ್ಟ ಮುಖ್ಯರಸ್ತೆ ಮಳೆ ನೀರಿನಿಂದ ತುಂಬಿದ್ದ ಕಾರಣ ವಾಹನ ಸವಾರರು ಪರದಾಡುವಂತಾಯಿತು.

ಗ್ರಾಮೀಣ ಭಾಗದಲ್ಲಿ ತುಂತುರು ಮಳೆ ಬಂದಿದೆ. ದಾಸರಹಳ್ಳಿ ಬಾಗಲಗುಂಟೆ, ಮಲ್ಲಸಂದ್ರ, ಶೆಟ್ಟಿಹಳ್ಳಿ ಸೇರಿದಂತೆ ಕೆಲವು ಭಾಗದಲ್ಲಿ ಜೋರು ಮಳೆಯಾಗಿದೆ.

ತಿದ್ದುಪಡಿ ಮಸೂದೆ ವಾಪಸ್‌ಗೆ ಆಗ್ರಹ

ರಾಷ್ಟ್ರೀಯ ಲಿಂಗತ್ವ, ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ ಲಿಂಗತ್ವ ಅಲ್ಪಸಂಖ್ಯಾತರ (ಟ್ರಾನ್ಸ್‌ಜೆಂಡರ್) ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯನ್ನು ವಾಪಸ್ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿ, ರಾಷ್ಟ್ರೀಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದ ಸದಸ್ಯರು, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಒಕ್ಕೂಟದ ಸದಸ್ಯರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರ ಹಾಕಿದರು. ತಿದ್ದುಪಡಿ ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದರು.

‘ಮಸೂದೆ ಪ್ರಕಾರ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯನ್ನು ಕಿನ್ನರ್, ಹಿಜ್ರಾ, ಅರವಾಣಿ, ಜೋಗತಾ ಅಥವಾ ಯುನಕ್ ಎಂಬ ಸಾಂಸ್ಕೃತಿಕ ಗುರುತುಗಳಿಗೆ ಸೀಮಿತಗೊಳಿಸಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತರ ಸ್ವಯಂ ಗುರುತಿನ ಹಕ್ಕು ಸೇರಿದಂತೆ ಎಲ್ಲ ಹಕ್ಕುಗಳನ್ನು ರಕ್ಷಿಸುವ ಬದಲು ಕಸಿದುಕೊಳ್ಳುತ್ತಿದೆ. ಮಸೂದೆ ಅನುಷ್ಠಾನಗೊಂಡರೆ ಟ್ರಾನ್ಸ್‌ಮೆನ್‌ಗಳನ್ನು ಕಾನೂನಿನ ಪ್ರಕಾರ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳೆಂದು ಪರಿಗಣಿಸದೇ ಅವರ ಎಲ್ಲ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತದೆ’ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

‘ಹೋರಾಟದಿಂದ ಪಡೆದುಕೊಂಡ ಹಕ್ಕುಗಳನ್ನು ಈ ಮಸೂದೆಯ ಮೂಲಕ ಹಿಂಪಡೆಯಲಾಗುತ್ತಿದೆ. ಇದು ನಮ್ಮ ಅಸ್ತಿತ್ವವನ್ನು ಗುರುತಿಸುವ ಮೂಲಭೂತ ತತ್ವಕ್ಕೆ ವಿರುದ್ಧ ಆಗಿದೆ. ಈ ಮಸೂದೆಯನ್ನು ತಕ್ಷಣವೇ ವಾಪಸ್ ಪಡೆದುಕೊಳ್ಳಬೇಕು’ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

‘ಬಲವಂತದ ಲಿಂಗ ಬದಲಾವಣೆ, ಶೋಷಣೆ ಮತ್ತು ಹಿಂಸಾಚಾರ ಮೊದಲಾದ ಅಪರಾಧಗಳಿಗೆ ಕಠಿಣ ಶಿಕ್ಷೆಗಳನ್ನು ಪರಿಚಯಿಸುವುದು ಸ್ವಾಗತಾರ್ಹ. ಆದರೆ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಮೂಲಭೂತ ಹಕ್ಕುಗಳ ಹಾಗೂ ಸ್ವಾಯತ್ತತೆಯನ್ನು ಕುಗ್ಗಿಸುವ ಕೆಲಸ ಆಗಬಾರದು’ ಎಂದು ಮನವಿ ಮಾಡಿದರು.

‘ಯಾವುದೇ ಕಾನೂನು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಸಂಬಂಧಿಸಿದ ಹಕ್ಕುಗಳು ಹಾಗೂ ಒಳಗೊಳ್ಳುವಿಕೆಯನ್ನು ಬಲಪಡಿಸಬೇಕೇ ಹೊರತು ಗುರುತನ್ನು ಸೀಮಿತಗೊಳಿಸುವ ಅಥವಾ ಸಂವಿಧಾನಾತ್ಮಕ ರಕ್ಷಣೆಗಳನ್ನು ದುರ್ಬಲಗೊಳಿಸುವಂತೆ ಆಗಬಾರದು’ ಎಂದು ಆಗ್ರಹಿಸಿದರು.

ರಾಷ್ಟ್ರೀಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದ ಸುಚಿತ್ರಾ, ಮಲ್ಲು ಕುಂಬಾರ್, ರಿಯಾನಾ ರಾಜು, ಜಾನ್ವಿರಾಯ್, ದಿಲ್ ಫರಾಜ್, ವೈಶಾಲಿ ವಾಸುದೇವನ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.



ರಾಷ್ಟ್ರೀಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯನ್ನು ವಾಪಸ್ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಯುಗಾದಿ, ಈದ್ ಉಲ್ ಫಿತ್ರ್, ವಾರಾಂತ್ಯದ ರಜೆ

ಬಸ್ ಪ್ರಯಾಣ: ದುಪ್ಪಟ್ಟು ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ, ಈದ್ ಉಲ್ ಫಿತ್ರ್, ವಾರಾಂತ್ಯದ ರಜೆ ದಿನಗಳು ಒಟ್ಟೊಟ್ಟಿಗೆ ಬಂದಿರುವುದರಿಂದ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಈ ಸನ್ನಿವೇಶದ ಲಾಭ ಪಡೆಯಲು ಮುಂದಾಗಿರುವ ಖಾಸಗಿ ಬಸ್‌ಗಳ ಮಾಲೀಕರು ಪ್ರಯಾಣ ದರವನ್ನು ವಿಪರೀತ ಹೆಚ್ಚಿಸಿದ್ದಾರೆ.

ಗುರುವಾರ ಯುಗಾದಿ ರಜೆ. ಶನಿವಾರ ಈದ್ ಉಲ್ ಫಿತ್ರ್, ಭಾನುವಾರ ವಾರದ ರಜೆ. ಶುಕ್ರವಾರ ಒಂದು ರಜೆ ಹಾಕಿಕೊಂಡರೆ ನಾಲ್ಕು ರಜೆಗಳು ಒಟ್ಟಿಗೆ ಸಿಗುವುದಿರಂದ ಬುಧವಾರವೇ ಜನರು ಊರಿಗೆ ಹೊರಟಿದ್ದರು.

ಸಾಮಾನ್ಯ ದಿನಗಳಲ್ಲಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗುವವರಿಗೆ ಖಾಸಗಿ ಬಸ್‌ಗಳಲ್ಲಿ ₹900ರಿಂದ ₹1,000 ವರೆಗೆ ಇದ್ದ ಪ್ರಯಾಣ ದರ ಈಗ ₹1,500ರಿಂದ ₹3,500 ವರೆಗೆ ಏರಿಕೆಯಾಗಿದೆ. ಮಂಗಳೂರಿಗೆ ₹700ರಿಂದ ₹950ರವರೆಗೆ ಇದ್ದಿದ್ದು ₹1,500–₹1,900ಕ್ಕೆ ಏರಿದೆ. ಗದಗಕ್ಕೆ ₹700–₹1,000 ಇದ್ದಿದ್ದು ₹1,700–₹1,900ರವರೆಗೆ ಹೆಚ್ಚಳವಾಗಿದೆ. ಇದೇ ರೀತಿ ರಾಜ್ಯದ ವಿವಿಧ ನಗರಗಳಿಗೆ ತೆರಳುವವರಿಗೆ ಬಸ್ ದರ ಬರೆ ಎಳೆದಿದೆ.

ದಟ್ಟಣೆ ಹೆಚ್ಚಳ: ಬುಧವಾರ ರಾತ್ರಿ ಬೆಂಗಳೂರಿನಿಂದ ಸಾಗುವ ವಾಹನಗಳ ಸಂಖ್ಯೆ ಹೆಚ್ಚಳವಾಗಿದ್ದರಿಂದ ರಸ್ತೆಗಳಲ್ಲಿ ಭಾರಿ ದಟ್ಟಣೆ ಉಂಟಾಯಿತು. ಮೈಸೂರು ರಸ್ತೆ, ತುಮಕೂರು ರಸ್ತೆಗಳಲ್ಲಿ ವಾಹನಗಳು ಆಮೆವೇಗದಲ್ಲಿ ಸಾಗುವಂತಾಯಿತು. ಮಳೆ ಬಂದು ವಾಹನ ಸಂಚಾರವನ್ನು ಇನ್ನಷ್ಟು ನಿಧಾನಗೊಳಿಸಿತು.



ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬುಧವಾರ ಅಧಿಕ ಸಂಖ್ಯೆಯಲ್ಲಿ ಬಸ್‌ಗಳು ನಿಂತಿದ್ದವು ಚಿತ್ರ: ಎಂ. ಎಸ್‌. ಮಂಜುನಾಥ್

‘ಕೆಎಸ್‌ಆರ್‌ಟಿಸಿ ಬಸ್‌ಗೆ ಆದ್ಯತೆ ನೀಡಲಿ’

‘ಖಾಸಗಿ ಬಸ್‌ಗಳಲ್ಲಿ ದರ ಏರಿಕೆ ಮಾಡದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕೆಎಸ್‌ಆರ್‌ಟಿಸಿಯಿಂದ 2000 ಬಸ್ ಹೆಚ್ಚುವರಿಯಾಗಿ ಬಿಡಲಾಗಿದೆ. ಖಾಸಗಿ ಬಸ್‌ಗಳಿಗೆ ದುಪ್ಪಟ್ಟು ದರ ನೀಡುವ ಬದಲು ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಆದ್ಯತೆ ನೀಡಲಿ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ರೈಲ್ವೆ ಬೇಡಿಕೆ: ಕರವೇ ಏ.15ರ ಗಡುವು


ಬೆಂಗಳೂರು: 'ಕನ್ನಡಿಗರ ಬೇಡಿಕೆಗಳಿಗೆ ಭಾರತೀಯ ರೈಲ್ವೆ ಇಲಾಖೆಯು ಏಪ್ರಿಲ್ 15ರೊಳಗೆ ಸ್ಪಂದಿಸದಿದ್ದರೆ ಕರ್ನಾಟಕದಲ್ಲಿ ರೈಲು ವ್ಯವಸ್ಥೆ ಸ್ಥಗಿತಗೊಳಿಸಬೇಕಾಗುತ್ತದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಎಚ್ಚರಿಸಿದೆ.

'ರೈಲ್ವೆ ಇಲಾಖೆಯ ಎಲ್ಲ ಹಂತದ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇ 50ರಷ್ಟು ಮೀಸಲಾತಿ ನೀಡಬೇಕು ಎನ್ನುವುದೂ ಸೇರಿದಂತೆ ಐದು ಬೇಡಿಕೆಗಳಿಗೆ ಕಾಲಮಿತಿ ಒಳಗೆ ಪರಿಹಾರ ನೀಡದೇ ಇದ್ದರೆ ಎಲ್ಲ ರೈಲುಗಳ ಸಂಚಾರ ಸ್ಥಗಿತಗೊಳಿಸಿ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಕರವೇ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ ಎಚ್ಚರಿಸಿದ್ದಾರೆ.

'ರೈಲ್ವೆ ಹುದ್ದೆ ಪರೀಕ್ಷೆ ಕಡ್ಡಾಯವಾಗಿ ಕನ್ನಡದಲ್ಲೂ ನಡೆಯಬೇಕು. ಕರ್ನಾಟಕದಲ್ಲಿ ನನೆಗುದಿಗೆ ಬಿದ್ದಿರುವ ರೈಲು ಯೋಜನೆಗಳು ಶೀಘ್ರದಲ್ಲೇ ಜಾರಿಯಾಗಬೇಕು. ರೈಲು ನಿಲ್ದಾಣ, ರೈಲ್ವೆ ಕಚೇರಿಗಳಲ್ಲಿ ಕನ್ನಡೀಕರಣ ಪ್ರಕ್ರಿಯೆ ನಡೆಯಬೇಕು. ಸೂಚನಾ ಫಲಕಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನವಿರಬೇಕು. ಕನ್ನಡದಲ್ಲೇ ಸಂವಹನ ನಡೆಯಬೇಕು. ರೈಲು ನಿಲ್ದಾಣ ಮೇಲ್ದರ್ಜೆಗೇರಿಸಿ ಮೂಲಸೌಕರ್ಯ ಹೆಚ್ಚಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರೈಲ್ವೆ ಇಲಾಖೆ ಕರ್ನಾಟಕವನ್ನು ತಾರತಮ್ಯದಿಂದ ನೋಡುತ್ತಿದೆ. ಪದೋನ್ನತಿ ಹುದ್ದೆಗಳ ಪರೀಕ್ಷೆ ಸಂದರ್ಭದಲ್ಲಿ ಕನ್ನಡವನ್ನು ಕೈಬಿಟ್ಟು ರೈಲ್ವೆ ಅಧಿಕಾರಿಗಳು ಕರ್ನಾಟಕದಲ್ಲಿ ಏನನ್ನು ಬೇಕಾದರೂ ಮಾಡಿ ದಕ್ಕಿಸಿಕೊಳ್ಳುತ್ತೇವೆ ಎಂಬಂತೆ ವರ್ತಿಸಿದರು. ತೀವ್ರ ಸ್ವರೂಪದ ಹೋರಾಟ ಸಂಘಟಿಸಿ ಪರೀಕ್ಷೆ ಮುಂದೂಡುವಂತೆ ಮಾಡಿದೆ. ರೈಲ್ವೆಯಿಂದ ಕನ್ನಡಿಗರಿಗೆ ಆಗಿರುವ ವಂಚನೆ ಸರಮಾಲೆ ಸಾರ್ವಜನಿಕರ ಮುಂದೆ ಇಡಬೇಕಿದೆ' ಎಂದು ಹೇಳಿದ್ದಾರೆ.







ಶಸ್ತ್ರಾಸ್ತ್ರ ಪೂರೈಕೆ: 'ಮಧ್ಯವರ್ತಿ' ಸೆರೆ

ಅಕ್ರಮವಾಗಿ ಪಿಸ್ತೂಲ್ ಪೂರೈಸುತ್ತಿದ್ದ ಪ್ರಕರಣ
ಸಿಸಿಬಿ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಮುಂದಾಗಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಮಧ್ಯಪ್ರದೇಶದ ಭೋಪಾಲ್‌ನ ಸೈಯದ್ ಇರ್ಫಾನ್ ರಿಜ್ವಿ ಎಂಬ ಮಧ್ಯವರ್ತಿಯನ್ನು ಬುಧವಾರ ಬಂಧಿಸಿದ್ದಾರೆ.


ಸೈಯದ್ ಇರ್ಫಾನ್ ರಿಜ್ವಿ

ಆರೋಪಿಯಿಂದ ಮೂರು ಪಿಸ್ತೂಲ್ ಹಾಗೂ ಎರಡು ಜೀವಂತ ಗುಂಡು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಫೆಬ್ರುವರಿಯಲ್ಲಿ ನಡೆದಿದ್ದ ಕಾರ್ಯಾಚರಣೆಯಲ್ಲಿ ಮಸೂದ್ ಹಾಗೂ ಜಾವೀದ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಭೋಪಾಲ್‌ನಿಂದ ಬಂದಿದ್ದ ಜಾವೀದ್, ಯಶವಂತಪುರ ರೈಲು ನಿಲ್ದಾಣದ ಬಳಿ ಮಸೂದ್‌ನನ್ನು ಭೇಟಿ ಮಾಡಿ ಪಿಸ್ತೂಲ್ ಹಸ್ತಾಂತರ ಮಾಡುತ್ತಿದ್ದರು. ಆಗ ಸಿನಿಮೀಯ ಶೈಲಿಯಲ್ಲಿ ಕಾರ್ಯಾಚರಣೆ ನಡೆಸಿದ್ದ ಸಿಸಿಬಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು. ಬಂಧಿತರಿಂದ ಒಂದು ಪಿಸ್ತೂಲ್, 52 ಜೀವಂತ ಗುಂಡುಗಳನ್ನು ವಶಕ್ಕೆ ಪಡೆದುಕೊಂಡಿದ್ದರು.

ಬಂಧಿತರನ್ನು ವಿಚಾರಣೆ ನಡೆಸಿದಾಗ, ಈ ಜಾಲದ ಹಿಂದಿರುವ ಸೂತ್ರಧಾರ ಸೈಯದ್ ಇರ್ಫಾನ್ ರಿಜ್ವಿ ಎಂಬ ಮಾಹಿತಿ ಲಭ್ಯವಾಗಿತ್ತು. ರಿಜ್ವಿ ಬಂಧನಕ್ಕೆ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು. ಮಧ್ಯಪ್ರದೇಶಕ್ಕೆ ತೆರಳಿದ್ದ ತಂಡವು ಅಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ ಎಂದು ಮೂಲಗಳು ಹೇಳಿವೆ.

ಮಧ್ಯಪ್ರದೇಶದಿಂದ ಬೆಂಗಳೂರಿಗೆ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ತಂದು ಅಪರಾಧ ಹಿನ್ನೆಲೆಯುಳ್ಳವರಿಗೆ ಪೂರೈಸುವುದು ಈ ಜಾಲದ ಉದ್ದೇಶ ಆಗಿತ್ತು. ಈ ಜಾಲದಲ್ಲಿ ಇನ್ನೂ ಯಾರ್‍ಯಾರು ಇದ್ದಾರೆ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಅಂಚೆ ಮೂಲಕ ಡ್ರಗ್ಸ್: ವಿದೇಶದಿಂದ ಅಂಚೆಯ ಮೂಲಕ ಮಾದಕ ವಸ್ತುಗಳನ್ನು ತರಿಸಿಕೊಳ್ಳುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆಡುಗೋಡಿಯ ವಿನಯ್ ಹಾಗೂ ಸುಹೈಲ್ ಬಂಧಿತರು.

ಖಚಿತ ಮಾಹಿತಿ ಆಧರಿಸಿ, ಚಾಮರಾಜಪೇಟೆಯಲ್ಲಿ ಇರುವ ವಿದೇಶಿ ಅಂಚೆ ಕಚೇರಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ವಿದೇಶದಿಂದ ಬಂದಿದ್ದ ಅನುಮಾನಾಸ್ಪದ ಪಾರ್ಸೆಲ್‌ಗಳಲ್ಲಿ ಎರಡು ಕೆ.ಜಿ. ಹೈಡ್ರೊಗಾಂಜಾ, 108 ಗ್ರಾಂ ಎಂಡಿಎಂಎ ಕ್ರಿಸ್ಟಲ್, ಎರಡು ಗ್ರಾಂ ಕೊಕೇನ್ ಪತ್ತೆಯಾಗಿದ್ದು ಅದನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ವಿದೇಶದಿಂದ ಅಂಚೆಯ ಮೂಲಕ ಆರೋಪಿಗಳು ಡ್ರಗ್ಸ್ ತರಿಸಿಕೊಂಡು ನಗರದಲ್ಲಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಅನಧಿಕೃತ ವಾಸ, ಮೂವರ ವಶ: ವೀಸಾದ ಅವಧಿ ಮುಕ್ತಾಯವಾದ ಮೇಲೂ ಅಕ್ರಮವಾಗಿ ನಗರದಲ್ಲಿ ನೆಲಸಿದ್ದ, ಕೀನ್ಯಾ, ಜಿಬೌಟಿ ಹಾಗೂ ತಾಂಜೇನಿಯಾದ ಮೂವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವೀಸಾ ಅವಧಿ ಮುಗಿದ ಮೇಲೆ ಅನಧಿಕೃತವಾಗಿ ನಗರದಲ್ಲಿ ವಾಸವಿದ್ದ ಪ್ರಜೆಗಳ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಾರ್ಯಾಚರಣೆ ವೇಳೆ ಮೂವರನ್ನು ವಶಕ್ಕೆ ಪಡೆದು ಮುಂದಿನ ಕ್ರಮಕ್ಕೆ ಹುಳಿಮಾವು ಪೊಲೀಸ್ ಠಾಣೆಯ ಪೊಲೀಸರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಮಕ್ಕಳ ಚಿನ್ನಾಭರಣ ಕದ್ದ ಕಳ್ಳನ ಬಂಧನ

ಕಲ್ಯಾಣ ಮಂಟಪಗಳಿಗೆ ಬರುತ್ತಿದ್ದ ಮಕ್ಕಳ ಚಿನ್ನಾಭರಣ ಹಾಗೂ ಕಲ್ಯಾಣ ಮಂಟಪದ ಎದುರು ನಿಲುಗಡೆ ಮಾಡುತ್ತಿದ್ದ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಸದಾಶಿವನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪೀಣ್ಯ ಎರಡನೇ ಹಂತದ ಅಂದ್ರಹಳ್ಳಿಯ ನಿವಾಸಿ ಬಾಬು ಅಲಿಯಾಸ್ 'ಪಲ್ಸರ್' ಬಾಬು (45) ಬಂಧಿತ ಆರೋಪಿ.

ಆರೋಪಿಯಿಂದ ₹42.38 ಲಕ್ಷ ಮೌಲ್ಯದ 132 ಗ್ರಾಂ ಚಿನ್ನಾಭರಣ, ₹1.20 ಲಕ್ಷ ನಗದು, ಎರಡು ಲ್ಯಾಪ್‌ಟಾಪ್, ಎರಡು ಕಾರು, ನಾಲ್ಕು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಎಲೆಕ್ಟ್ರಾನಿಕ್ ಸಿಟಿಯ ದೊಡ್ಡನಾಗಮಂಗಲದ ಮೋಹನ್ ರೆಡ್ಡಿ ನೀಡಿದ ದೂರು ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮೋಹನ್ ರೆಡ್ಡಿ ಅವರು ಪತ್ನಿ ಹಾಗೂ ಮಗಳ ಜತೆಗೆ ಅರಮನೆ ಮೈದಾನದಲ್ಲಿ ನಡೆದಿದ್ದ ಸಂಬಂಧಿಕರೊಬ್ಬರ ಮದುವೆ ಸಮಾರಂಭಕ್ಕೆ ಬಂದಿದ್ದರು. ಮದುವೆಗೆ ಸಂಬಂಧಿಕರ ಸೋಗಿನಲ್ಲಿ ಬಂದಿದ್ದ ಆರೋಪಿ, ಮಗುವನ್ನು ಮಾತನಾಡಿಸುವ ನೆಪದಲ್ಲಿ ಸರ ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

ಅರಮನೆ ಮೈದಾನ ಸೇರಿದಂತೆ ನಗರದ ಇತರೆ ಬಡಾವಣೆಯಲ್ಲಿ ಇರುವ ಕಲ್ಯಾಣ ಮಂಟಪಗಳಲ್ಲಿ ನಡೆಯುವ ಮದುವೆ ಸಮಾರಂಭಗಳಿಗೆ ಹೋಗುತ್ತಿದ್ದ ಆರೋಪಿ, ಅಲ್ಲಿಗೆ ಬರುತ್ತಿದ್ದ ಚಿಕ್ಕ ಮಕ್ಕಳನ್ನು ಗುರಿಯಾಗಿಸಿ ಸಲುಗೆಯಿಂದ ಮಾತನಾಡಿಸಿಕೊಂಡು ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ. ಅಲ್ಲದೇ, ಕಲ್ಯಾಣ ಮಂಟಪದ ಆವರಣದಲ್ಲಿ ನಿಲುಗಡೆ ಮಾಡುತ್ತಿದ್ದ ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ ಕಳ್ಳತನ ಮಾಡಿಕೊಂಡು ಹೋಗುತ್ತಿದ್ದ ಎಂದು ಪೊಲೀಸರು ಹೇಳಿದರು.

ಕದ್ದ ಚಿನ್ನ, ನಗದು ಹಾಗೂ ಮೊಬೈಲ್ ಫೋನ್‌ಗಳನ್ನು ಅಂದ್ರಹಳ್ಳಿಯ ಚಕ್ರನಗರದ ಮನೆಯಲ್ಲಿ ಬಚ್ಚಿಟ್ಟಿದ್ದ. ಅಲ್ಲಿಂದ ಎಲ್ಲ ವಸ್ತುಗಳನ್ನೂ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

10ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಸೂರು ಗೇಟ್ ಠಾಣಾ ವ್ಯಾಪ್ತಿಯ ಸಿಟಿ ಸ್ಟ್ರೀಟ್ ಕ್ರಾಸ್‌ನ ಬೆಟ್ಟಪ್ಪ ಲೇಔಟ್‌ನ ಚಿನ್ನಾಭರಣ ಅಂಗಡಿಯಲ್ಲಿ ಬೆಳ್ಳಿ ಸಾಮಗ್ರಿಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ನರೇಂದ್ರ (19) ಹಾಗೂ ಕುಲದೀಪ್ (23) ಬಂಧಿತರು.

ನಗರ್ತಪೇಟೆಯ ಕುಂಬಾರಪೇಟೆ ಮುಖ್ಯರಸ್ತೆಯ ಕಿಶನ್ ಬಿಷ್ಣೋಯಿ ನೀಡಿದ ದೂರಿನ ಮೇಲೆ ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ₹35 ಲಕ್ಷ ಮೌಲ್ಯದ 10 ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಿಶನ್ ಬಿಷ್ಣೋಯಿ ಅವರ ಅಂಗಡಿಗೆ ಒಂದು ತಿಂಗಳ ಹಿಂದೆ ಆರೋಪಿಗಳು ಕೆಲಸಕ್ಕೆ ಸೇರಿಕೊಂಡಿದ್ದರು. ಇಬ್ಬರನ್ನೂ ಪಾಲಿಶಿಂಗ್ ಕೆಲಸಕ್ಕೆಂದು ಮಾಲೀಕರು ನಿಯೋಜಿಸಿದ್ದರು. ಜನವರಿ 29ರಂದು ಕಿಶನ್ ಅವರು ಅಂಗಡಿಯಲ್ಲಿ ಕಾರ್ಮಿಕರನ್ನು ಬಿಟ್ಟು ಹೊರಗೆ ಹೋಗಿದ್ದರು. ಆಗ 12 ಕೆ.ಜಿ ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿಕೊಂಡು ಆರೋಪಿಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.


ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಆಭರಣಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಪರಿಶೀಲಿಸಿದರು

'ಕೃತ್ಯ ಎಸಗಿದ ಬಳಿಕ ಆರೋಪಿಗಳು ರಾಜಸ್ಥಾನಕ್ಕೆ ತೆರಳಿದ್ದರು. ಸೆಡ್ವಾ ಪೊಲೀಸ್ ಠಾಣಾ ವ್ಯಾಪ್ತಿಯ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಅಲ್ಲಿಗೆ ತೆರಳಿದ ಪೊಲೀಸ್ ತಂಡವು ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದು ಮೂಲಗಳು ತಿಳಿಸಿವೆ.

ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಹೀಲಿ: 22 ಮಂದಿ ವಿರುದ್ಧ ಎಫ್‌ಐಆರ್

ವ್ಹೀಲಿ ನಡೆಸುತ್ತಿದ್ದ ಯುವಕರ ವಿರುದ್ಧ ಕೆ.ಆರ್.ಪುರ ಸಂಚಾರ ಠಾಣೆಯ ಪೊಲೀಸರು, 22 ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

ಹಳೆ ಮದ್ರಾಸ್ ರಸ್ತೆ, ಭಟ್ಟರಹಳ್ಳಿ ಜಂಕ್ಷನ್ ಹಾಗೂ ಮೇಡಹಳ್ಳಿ ಸೇತುವೆ ಬಳಿ ಯುವಕರು ವ್ಹೀಲಿ ನಡೆಸುತ್ತಿದ್ದರು.

ಒಟ್ಟು 22 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಂಡು, ಯುವಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಅವರು ತಿಳಿಸಿದ್ದಾರೆ.

55 ಲಕ್ಷ ಕೇಸುಗಳ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 14ರಂದು ರಾಜ್ಯದಾದ್ಯಂತ ನಡೆದ ಬೃಹತ್ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಒಟ್ಟು 55.85 ಲಕ್ಷ ಕೇಸುಗಳು ಇತ್ಯರ್ಥವಾಗಿದ್ದು, ಸಂಬಂಧಿಸಿದವರಿಗೆ ₹3,428 ಕೋಟಿ ಮೊತ್ತವನ್ನು ಪರಿಹಾರದ ರೂಪದಲ್ಲಿ ಕೊಡಿಸಲಾಗಿದೆ.

ಈ ಕುರಿತಾದ ವಿವರಗಳನ್ನು ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯೂ ಆಗಿರುವ 'ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ'ದ ಕಾರ್ಯನಿರ್ವಾಹಕ ಅಧ್ಯಕ್ಷೆ ಅನು ಶಿವರಾಮನ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಒದಗಿಸಿದರು.

'ಅದಾಲತ್‌ನ 951 ಪೀಠಗಳಲ್ಲಿ ನ್ಯಾಯಾಲಯಗಳಲ್ಲಿ ಬಾಕಿ ಇದ್ದ 2,61,160 ಪ್ರಕರಣ, 53,23,976 ವ್ಯಾಜ್ಯಪೂರ್ವ ಪ್ರಕರಣಗಳೂ ಸೇರಿದಂತೆ ಒಟ್ಟು 55,85,136 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ' ಎಂದು ತಿಳಿಸಲಾಗಿದೆ.

ಪ್ರಮುಖಾಂಶಗಳು:

- 2,321 ವೈವಾಹಿಕ ವ್ಯಾಜ್ಯಗಳ ಇತ್ಯರ್ಥ: ₹6 ಕೋಟಿ ಪರಿಹಾರ ಪಾವತಿ
- 3,351 ವಿಭಾಗ ದಾವೆಗಳ (ಪಾರ್ಟಿಷನ್ ಸೂಟ್) ವಿಲೇವಾರಿ: ₹30 ಕೋಟಿ ಪರಿಹಾರ
- 4,496 ಮೋಟಾರು ವಾಹನ ಅಪಘಾತ ಪ್ರಕರಣಗಳಲ್ಲಿ ₹290 ಕೋಟಿ ಪರಿಹಾರ ಪಾವತಿ
- 14,371 ಚೆಕ್ ಬೌನ್ಸ್ ಕೇಸುಗಳ ವಿಲೇವಾರಿ: ₹1,029 ಕೋಟಿ ಪರಿಹಾರ
- 5 ವರ್ಷಕ್ಕೂ ಹೆಚ್ಚಿನ 2,235 ಮತ್ತು 10 ವರ್ಷಕ್ಕೂ ಹಿಂದಿನ 333 ಹಾಗೂ 15 ವರ್ಷ ಕಳೆದಿರುವ 58 ಬಾಕಿ ಪ್ರಕರಣಗಳ ಇತ್ಯರ್ಥ
- ಹಿರಿಯ ನಾಗರಿಕರ 3,330 ಕೇಸುಗಳ ವಿಲೇವಾರಿ
- ರಾಜಿ ಸಂಧಾನದ ಮೂಲಕ ಮತ್ತೆ ಒಂದಾದ 328 ದಂಪತಿ
- ರಾಮನಗರ ಜಿಲ್ಲಾ ನ್ಯಾಯಾಲಯದಲ್ಲಿ 18 ವರ್ಷಗಳಿಂದ ಬಾಕಿ ಇದ್ದ 93 ವರ್ಷದ ವೃದ್ಧೆಯೊಬ್ಬರ ವಿಭಾಗ ದಾವೆ ಇತ್ಯರ್ಥ


ಕಂಪ್ಯೂಟರ್ ಬಿಡಿಭಾಗ ಕದ್ದ ತಂದೆ, ಪುತ್ರ ಬಂಧನ

₹80 ಲಕ್ಷ ಮೌಲ್ಯದ 444 ಡಿಡಿಆರ್ (4) ರ್‍ಯಾಮ್, 279 ಎಸ್‌ಎಸ್‌ಡಿ ಹಾರ್ಡ್ ಡಿಸ್ಕ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಷಾಂತರ ರೂಪಾಯಿ ಮೌಲ್ಯದ ಕಂಪ್ಯೂಟರ್ ಬಿಡಿಭಾಗಗಳನ್ನು ಕಳವು ಮಾಡಿ ಪರಾರಿ ಆಗಿದ್ದ ತಂದೆ ಹಾಗೂ ಮಗನನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಹೇಮಂತ್


ಮಂಜುನಾಥ್

ನಾಗವಾರದ ಎಂ. ಹೇಮಂತ್ (21) ಹಾಗೂ ಆತನ ತಂದೆ ಎಂ.ಮಂಜುನಾಥ್ (45) ಬಂಧಿತರು.

ಬಂಧಿತರಿಂದ ₹80 ಲಕ್ಷ ಮೌಲ್ಯದ 444 ಡಿಡಿಆರ್ (4) ರ್‍ಯಾಮ್ ಹಾಗೂ 279 ಎಸ್‌ಎಸ್‌ಡಿ ಹಾರ್ಡ್ ಡಿಸ್ಕ್ ಹಾಗೂ ₹2.29 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ನಾಗವಾರದ ಟಿ.ಚನ್ನಯ್ಯ ಲೇಔಟ್‌ನ ಜಿ.ರಘು ಅವರು ನೀಡಿದ ದೂರಿನ ಮೇಲೆ ಆರೋಪಿಗಳನ್ನು ಬಂಧಿಸಲಾಗಿದೆ. ರಘು ಅವರು ಎಚ್‌ಬಿಆರ್ ಲೇಔಟ್‌ನ ನಾಲ್ಕನೇ ಬ್ಲಾಕ್‌ನಲ್ಲಿ ಕಂಪ್ಯೂಟರ್ ಅಂಗಡಿ ಇಟ್ಟುಕೊಂಡಿದ್ದರು. ಮಾರ್ಚ್ 13ರಂದು ರಾತ್ರಿ ಅಂಗಡಿ ಬಂದ್ ಮಾಡಿಕೊಂಡು ಮನೆಗೆ ತೆರಳಿದ್ದರು. ಮರುದಿನ ಬಂದು ನೋಡಿದಾಗ ಅಂಗಡಿಯ ಬಾಗಿಲು ಒಡೆದು ಕಂಪ್ಯೂಟರ್ ಬಿಡಿಭಾಗಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವುದು ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.

ನಾಗವಾರದ ಚಾಣಕ್ಯ ಲೇಔಟ್‌ನ ಮುಖ್ಯರಸ್ತೆಯ ಹೋಟೆಲ್ ಎದುರು ಆರೋಪಿ ಎಂ.ಹೇಮಂತ್ ನಿಂತಿದ್ದ. ಅಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಂದೆ ಎಂ. ಮಂಜುನಾಥ್ ಜತೆಗೆ ಸೇರಿಕೊಂಡು ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದ. ಬಳಿಕ ಮಂಜುನಾಥ್‌ನನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮಲ್ಲೇಶ್ವರ: 'ರೀಲ್ಸ್'ಗಾಗಿ ತಂದೆಯನ್ನು ಕೊರಿಯರ್ ಮಾಡಲು ಯತ್ನ

'ರೀಲ್ಸ್' ಮಾಡಲು ಮನೆಯ ಸದಸ್ಯರನ್ನೇ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿಕೊಂಡು ಬಂದು ಕೊರಿಯರ್ ಮಾಡಲು ಯತ್ನಿಸಿದ್ದ ಕುಟುಂಬವೊಂದು ಕೊನೆಗೆ ಸಿಕ್ಕಿ ಬಿದ್ದು ಪೊಲೀಸ್ ಠಾಣೆ ಮೆಟ್ಟಲೇರಿತ್ತು. ಮಲ್ಲೇಶ್ವರದಲ್ಲಿ ಮಂಗಳವಾರ ಈ ಘಟನೆ ನಡೆದಿದೆ.

ಮಲ್ಲೇಶ್ವರದ ಟೆಂಪಲ್ ಸ್ಟ್ರೀಟ್‌ನ ಕೋಕಿಲಾ ಮತ್ತು ಕುಟುಂಬ ಸದಸ್ಯರು, ರೀಲ್ಸ್ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಖ್ಯಾತಿ ಗಳಿಸಲು ಹೋಗಿ ಪೇಚಿಗೆ ಸಿಲುಕಿದ್ದರು.

ಕೋಕಿಲಾ ಅವರು ತಮ್ಮ ಕುಟುಂಬದ ಇತರೆ ಸದಸ್ಯರ ಜತೆ ಸೇರಿಕೊಂಡು ವಯೋವೃದ್ಧ ತಂದೆ ಯೋಗೇಶ್ ಅವರನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿಕೊಂಡು ಮಲ್ಲೇಶ್ವರದ ಕೊರಿಯರ್ ಕಚೇರಿಗೆ ಹೋಗಿ ಹೊರ ರಾಜ್ಯಕ್ಕೆ ಪಾರ್ಸೆಲ್ ಕೊರಿಯರ್ ಮಾಡಬೇಕೆಂದು ಕೇಳಿದ್ದರು.

ದೊಡ್ಡ ಚೀಲ ನೋಡಿದ್ದ ಕೊರಿಯರ್ ಸಿಬ್ಬಂದಿ, ಚೀಲದೊಳಗೆ ಏನಿದೆ ಎಂದು ಪ್ರಶ್ನಿಸಿದ್ದರು. ಅದಕ್ಕೆ ಕೋಕಿಲಾ ಮತ್ತು ಕುಟುಂಬ ಸದಸ್ಯರು ಯಾವುದೇ ಉತ್ತರ ನೀಡಲಿಲ್ಲ. ಅನುಮಾನಗೊಂಡ ಸಿಬ್ಬಂದಿ, ಚೀಲ ತೆರೆದು ನೋಡಿದಾಗ ಅದರೊಳಗೆ ವ್ಯಕ್ತಿಯೊಬ್ಬರು ಇರುವುದು ಗೊತ್ತಾಗಿತ್ತು. ಅವರನ್ನು ಗಮನಿಸಿದ್ದ ಸಿಬ್ಬಂದಿ, ವೈಯಾಲಿಕಾವಲ್ ಠಾಣೆಯ ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಷ್ಟರಲ್ಲಿ ಕೋಕಿಲಾ ಮತ್ತು ಕುಟುಂಬ ಸದಸ್ಯರು ಸ್ಥಳದಿಂದ ತೆರಳಿದ್ದರು ಎಂದು ಪೊಲೀಸರು ಹೇಳಿದರು.

ಸ್ಥಳಕ್ಕೆ ಬಂದಿದ್ದ ಪೊಲೀಸರು, ಕೊರಿಯರ್ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡು, ಕಚೇರಿಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ದೃಶ್ಯಾವಳಿ ಪರಿಶೀಲನೆ ನಡೆಸಿದರು. ಕೋಕಿಲಾ ಮತ್ತು ಕುಟುಂಬ ಸದಸ್ಯರನ್ನು ಪತ್ತೆಹಚ್ಚಿ ಠಾಣೆಗೆ ಕರೆಸಿ ವಿಚಾರಣೆ ನಡೆಸಿದರು.

'ರಂಜಾನ್ ಹಾಗೂ ಯುಗಾದಿ ಹಬ್ಬಕ್ಕೆಂದು ನಗರದಿಂದ ಊರಿಗೆ ತೆರಳುವವರ ಸಂಖ್ಯೆ ಹೆಚ್ಚಿತ್ತು. ಬಸ್‌ಗಳಲ್ಲಿ ಪ್ರಯಾಣ ದರ ಹೆಚ್ಚಾಗಿತ್ತು. ಜತೆಗೆ, ಟಿಕೆಟ್ ಸಹ ಸಿಗುತ್ತಿಲ್ಲ. ಈ ಸಂಬಂಧ ಸಾರ್ವಜನಿಕರಿಗೆ ಸಂದೇಶ ರವಾನಿಸಲು ರೀಲ್ಸ್ ಮಾಡಲು ಯತ್ನಿಸಿದ್ದೆವು' ಎಂದು ಕೋಕಿಲಾ ಕುಟುಂಬದವರು ವಿಚಾರಣೆ ವೇಳೆ ತಪ್ಪೊಪ್ಪಿಕೊಂಡು ಕ್ಷಮೆಯಾಚನೆ ಮಾಡಿದ್ದಾರೆ.

'ಈ ರೀತಿ ಮಾಡುವುದು ತಪ್ಪು ಎಂದು ರೀಲ್ಸ್ ಮಾಡಲು ಯತ್ನಿಸಿದವರಿಗೆ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ಭೇಟಿಯಾದ ನಿಯೋಗ

ದೌರ್ಜನ್ಯ ತಡೆಯಲು ಎಐಎಂಎಸ್‌ಎಸ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಮತ್ತು ಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ತಡೆಗಟ್ಟುವಂತೆ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ರಾಜ್ಯ ಸಮಿತಿ ಆಗ್ರಹಿಸಿದೆ.

ಸಮಿತಿಯ ರಾಜ್ಯ ಕಾರ್ಯದರ್ಶಿ ಎನ್.ಶೋಭಾ ಅವರ ನೇತೃತ್ವದ ನಿಯೋಗವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರನ್ನು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸಿತು.

'ಸಾಮಾಜಿಕ ಮಾಧ್ಯಮಗಳ ಮೂಲಕ ಮಹಿಳೆ ಹಾಗೂ ಮಕ್ಕಳ ಮೇಲೆ ನಡೆಯುತ್ತಿರುವ ಮಾತಿನ ದಾಳಿ, ಅದರ ಪರಿಣಾಮಗಳ ಕುರಿತು ಚರ್ಚಿಸಲು ಸಭೆ ಕರೆದು ಇಲಾಖೆ ವತಿಯಿಂದ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಟಾಕ್ಸಿಕ್ ಹಾಗೂ ಕೆಡಿ ದ ಡೆವಿಲ್ ಸಹಿತ ಹಲವು ಚಿತ್ರಗಳಲ್ಲಿ ಮಹಿಳೆಯರನ್ನು ಅಸಭ್ಯವಾಗಿ ತೋರಿಸುವ ಪ್ರಯತ್ನ ನಡೆದಿದೆ. ಚಿತ್ರಗಳಲ್ಲಿ ಕ್ರೌರ್ಯವನ್ನು ವೈಭವೀಕರಿಸುವುದರಿಂದ ಸಮಾಜದ ಮೇಲೆ ಪರಿಣಾಮ ಬೀರುತ್ತಿದೆ. ಈ ಕುರಿತು ಗಮನ ಹರಿಸಬೇಕು' ಎಂದು ಮನವಿ ಮಾಡಿದರು.

ಎಲ್ಲಾ ಬೇಡಿಕೆಗಳ ಕುರಿತು ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, 'ಸಾಮಾಜಿಕ ಮಾಧ್ಯಮಗಳ ಪ್ರಭಾವದ ಕುರಿತು ಚರ್ಚಿಸಲು ಒಂದು ವಿಸ್ತೃತ ಸಭೆ ಕರೆಯಲಾಗುವುದು' ಎಂದು ಭರವಸೆ ನೀಡಿದರು.


ಮಹಿಳೆಯರು ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿ ಶೋಭಾ ಅವರ ನೇತೃತ್ವದ ನಿಯೋಗ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಮನವಿ ಸಲ್ಲಿಸಿತು

ಕೋಗಿಲು: ಸಂತ್ರಸ್ತರಿಗೆ ಹಕ್ಕುಪತ್ರ

61 ಮಂದಿ ಅರ್ಹರು; 12 ಸಂತ್ರಸ್ತರಿಗೆ ಹಕ್ಕುಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಲೇಔಟ್‌ನಲ್ಲಿ ಶೆಡ್‌ಗಳ ತೆರವು ಕಾರ್ಯಾಚರಣೆಯಿಂದ ಸಂತ್ರಸ್ತರಾದವರು ಎಂದು ಗುರುತಿಸಿದ್ದ 165 ಮಂದಿಯಲ್ಲಿ 61 ಮಂದಿ ಮಾತ್ರ ಅರ್ಹರು ಎಂದು ಸರ್ಕಾರ ಗುರುತಿಸಿದೆ. ಅವರಲ್ಲಿ 12 ಸಂತ್ರಸ್ತರಿಗೆ ಬುಧವಾರ ಹಕ್ಕುಪತ್ರ ವಿತರಿಸಲಾಯಿತು.

ವಿಕಾಸ ಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕೋಗಿಲು ಲೇಔಟ್‌ನ 12 ಸಂತ್ರಸ್ತ ಕುಟುಂಬಗಳು ಸೇರಿದಂತೆ 30 ಫಲಾನುಭವಿಗಳಿಗೆ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಹಕ್ಕುಪತ್ರ ವಿತರಿಸಿದರು.

ಪ್ರಕರಣ: ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಕೋಗಿಲು ಬಂಡೆ ಬಳಿ 5 ಎಕರೆ ಜಾಗದಲ್ಲಿದ್ದ 150ಕ್ಕೂ ಅಧಿಕ ಶೆಡ್‌ಗಳನ್ನು 2025ರ ಡಿಸೆಂಬರ್‌ನಲ್ಲಿ ತೆರವುಗೊಳಿಸಲಾಗಿತ್ತು. ಸರ್ಕಾರಿ ಗೋಮಾಳ ಜಮೀನಿನ ಸರ್ವೆ ಸಂಖ್ಯೆ 99ರಲ್ಲಿ ಘನತ್ಯಾಜ್ಯ ವಿಲೇವಾರಿಗೆ ಬಳಸಲಾಗುವ ಕ್ವಾರಿ ಭೂಮಿ ಇದಾಗಿತ್ತು. ಅಪಾಯಕಾರಿ ಪ್ರದೇಶದಲ್ಲಿ ಅನಧಿಕೃತವಾಗಿ ಶೀಟ್, ಮನೆ ಕಟ್ಟಿಕೊಂಡಿದ್ದರು ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ತಿಳಿಸಿದ್ದರು.

ಈ ತೆರವು ರಾಜಕೀಯ ಕಿತ್ತಾಟಕ್ಕೆ ಕಾರಣವಾಗಿತ್ತು. ಕರ್ನಾಟಕ– ಕೇರಳದ ರಾಜಕಾರಣಿಗಳು ಭೇಟಿ ನೀಡಿ ಪರ ವಿರೋಧದ ಹೇಳಿಕೆಗಳನ್ನು ನೀಡಿದ್ದರು.



ಸಚಿವರಾದ ಜಮೀರ್ ಅಹಮದ್ ಖಾನ್, ಕೃಷ್ಣ ಬೈರೇಗೌಡ ಅವರು ಕೋಗಿಲು ಸಂತ್ರಸ್ತರಿಗೆ ಹಕ್ಕುಪತ್ರವನ್ನು ಬುಧವಾರ ವಿತರಿಸಿದರು

ಎಲ್‌ಪಿಜಿ ಸಿಲಿಂಡರ್ ಕೊರತೆ: ಮೋದಿ ಭೇಟಿಗೆ ಪತ್ರ

ಬೆಂಗಳೂರು: 'ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತಗೊಳಿಸಿರುವುದರಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಚರ್ಚಿಸಲು ನಿಮ್ಮನ್ನು ಭೇಟಿ ಮಾಡಬೇಕಿದ್ದು, ಇದಕ್ಕೆ ಅವಕಾಶ ಮಾಡಿಕೊಡಿ' ಎಂದು ಬೆಂಗಳೂರು ಹೋಟೆಲ್‌ಗಳ ಸಂಘವು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದು ಮನವಿ ಮಾಡಿದೆ. ಎಲ್‌ಪಿಜಿ ಪೂರೈಕೆ ಸ್ಥಗಿತವಾಗಿರುವ ಕಾರಣ ಗ್ರಾಹಕರಿಗೆ ತಿಂಡಿ–ತಿನಿಸುಗಳನ್ನು ನೀಡಲು ಆಗುತ್ತಿಲ್ಲ. ಉದ್ಯಮವು ಸಂಕಷ್ಟಕ್ಕೆ ಸಿಲುಕಿಕೊಂಡಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ಐಟಂ ನಂ. 1 ಮತ್ತು 2 ರಲ್ಲಿ ವಿವರಿಸಿರುವ ಸ್ವತ್ತನ್ನು ಮಾಲೀಕರಾದ ಶ್ರೀ. ವಿ. ಆರ್. ಸಿಂಗಾರಚಾರಿ ರವರ ಮಗ ಶ್ರೀ. ವಿ. ಎಸ್. ಅರವಿಂದನ್ ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತುಗಳು ಸದರಿ ಶ್ರೀ. ವಿ. ಎಸ್. ಅರವಿಂದನ್ ರವರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು ಸದರಿ ಶ್ರೀ. ವಿ. ಎಸ್. ಅರವಿಂದನ್ ರವರ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ದೊಡ್ಡಚೀಮನಹಳ್ಳಿ ಗ್ರಾಮದಲ್ಲಿರುವ ಒಟ್ಟು ವಿಸ್ತೀರ್ಣ 1 ಎಕರೆ ಉಳ್ಳ ಈ ಕೆಳಗೆ ವಿವರಿಸಿರುವ ಸ್ಥಿರ ಸ್ವತ್ತುಗಳು:

ನಂ.	ಸರ್ವೇ ನಂ.	ವಿಸ್ತೀರ್ಣ (ಎ =ಗು)	ಚಕ್ಕುಬಂದಿ			
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
01.	133/1	20 ಗು	ಸರ್ವೇ ನಂ. 153/2 ರ ಜಮೀನು	ಸರ್ವೇ ನಂ. 104 ರ ಜಮೀನು	ಸರ್ವೇ ನಂ. 133/2 ರ ಜಮೀನು	ಈ ಕೆಳಗೆ ವಿವರಿಸಿರುವ ಐಟಂ ನಂ. 2 ರ ಜಮೀನು
02.	133/3	20 ಗು	ಸರ್ವೇ ನಂ. 153/2 ರ ಜಮೀನು	ಸರ್ವೇ ನಂ. 104 ರ ಜಮೀನು	ಈ ಮೇಲೆ ವಿವರಿಸಿರುವ ಐಟಂ ನಂ. 1 ರ ಜಮೀನು	ಸರ್ವೇ ನಂ. 104 ರ ಜಮೀನು

ಸಹಿ./- ಎ. ಸುಪ್ರೀತ್, ವಕೀಲರು, **ಕ್ರೆಸ್ಟ್ ಲಾ ಪಾರ್ಟ್ನರ್ಸ್**
33, ಝುವಿಯರ್ ಲೇಔಟ್, 1ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ,
ಬೆಂಗಳೂರು – 560 047. ದೂ: 080 41473535 / 41473536

ಸ್ಥಳ : ಬೆಂಗಳೂರು
ದಿನಾಂಕ : ಮಾರ್ಚ್ 19th, 2026

ಬಸ್‌ಗಳಲ್ಲಿ ಸುರಕ್ಷತಾ ಕ್ರಮ: ಗಡುವು ವಿಸ್ತರಣೆ

ಬೆಂಗಳೂರು: ಬಸ್‌ಗಳಲ್ಲಿ ಪ್ರಯಾಣಿಕರ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ನೀಡಿದ್ದ ಅಂತಿಮ ಗಡುವನ್ನು ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. ಗಡುವು ಮುಗಿದರೂ ಸುರಕ್ಷತಾ ಕ್ರಮ ಅಳವಡಿಸದೇ ಇರುವುದರಿಂದ ಅಂತಿಮವಾಗಿ ಕಾಲಾವಕಾಶ ವಿಸ್ತರಿಸಲಾಗಿದೆ. ಈ ಗಡುವು ಮುಗಿದ ಬಳಿಕ ಕಾರ್ಯಾಚರಣೆ ನಡೆಸಲಾಗುವುದು, ಕಾನೂನು ಕ್ರಮ ಜರುಗಿಸಲಾಗುವುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು, ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **'ಷೆಡ್ಯೂಲ್ ಪ್ರಾಪರ್ಟಿ'** ಎನ್ನಲಾಗುವ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಬೈರನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳನ್ನು ಸಂಯೋಜಿತ, ಸುಮಾರು 17 ಎಕರೆ 11.87 ಗುಂಟಾ ವಿಸ್ತೀರ್ಣವುಳ್ಳ ಜಮೀನುಗಳನ್ನು, ಅವುಗಳ ಪ್ರಸಕ್ತ ಮಾಲೀಕರಾದ ಇಂಡೋಸ್ಪೇಸ್ ನೆಲಮಂಗಲ ಇಂಡಸ್ಟ್ರಿಯಲ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಪ್ರಾಪರ್ಟಿಯ ವಿವರಗಳನ್ನು ಕೆಳಗಿನ **ಷೆಡ್ಯೂಲ್**‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿದೆ.

ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿಸಿದಂತ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ ಅಥವಾ ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಯ ಮಾಲೀಕರಿಗೆ ಮತ್ತು/ಅಥವಾ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಗೆ ಯಾವುದೇ ಸ್ವರೂಪದ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್ ಅಥವಾ ಡಿಮಾಂಡ್‌ಗಳಿದ್ದಲ್ಲಿ, ಅಂತಹವರು, ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ, ಕೆಳಕಂಡ ಸಹಿದಾರರಿಗೆ, ದಾಖಲಾತಿ ಪುರಾವೆಗಳ ಸಮೇತ, ತಮ್ಮ ಹೇಳಿಕೆಗಳನ್ನು, ಆಕ್ಷೇಪಣೆಗಳನ್ನು ಮತ್ತು/ಅಥವಾ ಕ್ಲೇಮ್‌ಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು. ನಿಗದಿತ ಅವಧಿಯೊಳಗೆ ಯಾವುದೇ ಅಸಲಿ ಮತ್ತು/ಅಥವಾ ಹಕ್ಕುಬದ್ಧ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮ್‌ಗಳು ಸಲ್ಲಿಕೆಯಾಗದಿದ್ದಲ್ಲಿ, ಯಾವುದೇ ಕ್ಲೇಮ್‌ಗಳಾಗಲಿ ಅಥವಾ ಆಕ್ಷೇಪಣೆಗಳಾಗಲಿ ಇರುವುದಿಲ್ಲವೆಂದು ಪರಿಗಣಿಸಿ, ನಮ್ಮ ಕಕ್ಷಿದಾರರು ತಮ್ಮ ಉದ್ದೇಶಿತ ಷೆಡ್ಯೂಲ್ ಪ್ರಾಪರ್ಟಿ ಖರೀದಿ ವ್ಯವಹಾರವನ್ನು ಇತ್ಯರ್ಥಪಡಿಸಿಕೊಳ್ಳಲು ಮುಂದಾಗುತ್ತಾರೆ ಹಾಗೂ ಪ್ರಸಕ್ತ ಮಾಲೀಕರಿಂದ ಸದರಿ ಸ್ವತ್ತನ್ನು ಖರೀದಿಸುತ್ತಾರೆ ಹಾಗೂ ಅಂತಹ ಯಾವುದೇ ಕ್ಲೇಮ್‌ಗಳಾಗಲಿ ಅಥವಾ ಆಕ್ಷೇಪಣೆಗಳಾಗಲಿ ಇದ್ದಲ್ಲಿ, ಅಂತಹವುಗಳನ್ನು ವಿವೇಚನಾಪೂರ್ವಕವಾಗಿ ಕೈಬಿಡಲಾಗುತ್ತದೆ ಮತ್ತು ಅಂತಹ ವ್ಯಕ್ತಿಗಳು ಶಾಶ್ವತವಾಗಿ ಕ್ಲೇಮ್ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಷೆಡ್ಯೂಲ್

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಬೈರನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಸ್ಥಿತಗೊಂಡಿರುವ ಸುಮಾರು 17 ಎಕರೆ 11.87 ಗುಂಟಾ (ಖರಾಬು ಸೇರಿದಂತೆ) ವಿಸ್ತೀರ್ಣವುಳ್ಳ ಎಲ್ಲಾ ಜಮೀನು ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತಾರ (ಖರಾಬ್ ಹೊರತುಪಡಿಸಿ)		ಖರಾಬ್	ಗಡಿಗಳು			
		ಎಕರೆ	ಗುಂಟೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	87/1	2	26	14	86/1 ಮತ್ತು 122	30/5	87/2	ಸರ್ಕಾರಿ ಹಳ್ಳಿ ರಸ್ತೆ
2.	87/1	1	37	15	86/1 ಮತ್ತು 122	30/5	87/2	ಸರ್ಕಾರಿ ಹಳ್ಳಿ ರಸ್ತೆ
3.	87/2	2	16	-	122 ಮತ್ತು 86	30/5	88/1, 88/2 ಮತ್ತು 88/3	87/1
4.	88/1	1	-	3	88/2	30/5	89/1	87/2
5.	88/2	1	3	3	88/3	88/1	89/1	87/1
6.	88/3	1	3	3	122	87/2	89/1	88/2
7.	89/1	3	11	4	122	30/5	89/2 ಮತ್ತು 89/4	88/1, 88/2 ಮತ್ತು 88/3
8.	122/1	2	-	-	86/1 ಮತ್ತು 86/2	87/1, 87/2, 88/3 ಮತ್ತು 89/1	ಸರ್ವೆ ನಂ. 122ರ ಉಳಿಕೆ ಭಾಗ	87/1
9.	122/2 (ಭಾಗ)	-	32.99	0.88	122/3	89 ಮತ್ತು ರಸ್ತೆ	ಸರ್ವೆ ನಂ. 122/2ರ ಉಳಿಕೆ ಭಾಗ	122/2
ಒಟ್ಟು		16	8.99	42.88				

ದಿನಾಂಕ : 19.03.2026
ಸ್ಥಳ : ಬೆಂಗಳೂರು

ಅಭಿಲಾಷ್ ಪಿಳ್ಳೈ
ಪಾಲುದಾರರು
ಸಿರಿಲ್ ಅಮರಚಂದ್ ಮಂಗಲದಾಸ್
ಹಂತ 3, ಪ್ರೆಸ್ಟೀಜ್ ಫಾಲ್ಕನ್ ಟವರ್ಸ್, 19
ಬ್ರಂಟನ್ ರಸ್ತೆ, ಎಂ.ಜಿ. ರಸ್ತೆ ಪಕ್ಕ
ಬೆಂಗಳೂರು – 560 025

ಬೆಂಗಳೂರು ಉತ್ತರ ನಗರ ಪಾಲಿಕೆ

ಆಯುಕ್ತರವರ ಕಚೇರಿ, ಬಿಎನ್‌ಸಿಸಿ ಕಛೇರಿ, ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು–92.

No. BNCC/Comm/PR/361/2025-26 **Date: 18.03.2026**

ನಮೂನೆ – 1
ಸಾರ್ವಜನಿಕ ಪ್ರಕಟಣೆ (ಕಾಯಿದೆ 14ಬಿ (4) (i) ರ ಅಡಿಯಲ್ಲಿ

ಕರ್ನಾಟಕ ಪಟ್ಟಣ ಮತ್ತು ದೇಶ ಯೋಜನೆ ಕಾಯಿದೆ 1961 ರ ಸೆಕ್ಷನ್ 14–ಬಿ ರಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ ಈ ಕೆಳಗಿನ ಷೆಡ್ಯೂಲ್ ನಲ್ಲಿ ನಮೂದಿಸಿರುವ "ಕೋಗಿಲು – ಕಣ್ಣೂರು ಮುಖ್ಯ ರಸ್ತೆ ಯಿಂದ ಬೆಳ್ಳಹಳ್ಳಿ ಮತ್ತು ಮಿಟ್ಟೇಗಾನಹಳ್ಳಿ ಸೈಂಟಿಫಿಕ್ ಲ್ಯಾಂಡ್ ಫಿಲ್ ಸೈಟ್, ಯಲಹಂಕ ವಲಯ ರಸ್ತೆಯನ್ನು 18 ಮೀಟರುಗಳಿಗೆ ಅಗಲೀಕರಿಸಿ ನಿರ್ಮಾಣಮಾಡಲು " ಆಯುಕ್ತರು, ಬೆಂಗಳೂರು ಉತ್ತರ ಮಹಾನಗರ ಪಾಲಿಕೆ ಇವರಿಗೆ ಅವಶ್ಯಕವಿರುತ್ತದೆ.

ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕವಾಗಿ ಬೇಕಾಗಿರುವ ಪ್ರದೇಶಗಳ ಭೂ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ತಮ್ಮ ಸಂಬಂಧಪಟ್ಟ ದಾಖಲೆಗಳ ಪ್ರತಿಯೊಂದಿಗೆ ಅಂದರೆ, (1) ಕ್ರಯ / ಪಾರ್ಟಿಶನ್ / ಇತರೆ ಆಸ್ತಿ ಪತ್ರಗಳು (2) ಇತ್ತೀಚಿನ ಆರ್‌ಟಿಸಿ (3). ಮ್ಯುಟೇಷನ್ ಪ್ರತಿಗಳು (4) ತೆರಿಗೆ ಪಾವತಿ ರಶೀದಿಗಳು (5) ಕೃಷಿಯೇತರ ಬಳಕೆಗಾಗಿ ಭೂ ಪರಿವರ್ತನಾ ಆದೇಶ ಪ್ರತಿಗಳು (6) ಕಂದಾಯ ರೇಖಾಚಿತ್ರ (7) ಆಕಾರ್ ಬಂದ್ ಇತ್ಯಾದಿ ಗಳೊಂದಿಗೆ ಕೆಳಗಿನ ವಿಳಾಸದಲ್ಲಿ ಸೂಚಿಸಿದಂತೆ ಈ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಸ್ಥಳದಲ್ಲಿ ವೈಯಕ್ತಿಕವಾಗಿ ಮತ್ತು ಅಂತಹ ಭೂಮಿಯಲ್ಲಿ ಅವರುಗಳ ಆಸಕ್ತಿಯ ಸ್ವರೂಪವನ್ನು ತಿಳಿಸಲು ಕೋರಲಾಗಿದೆ.

ಭೂಮಾಲೀಕರು/ಆಸಕ್ತಿ ಹೊಂದಿರುವ ವ್ಯಕ್ತಿಗಳು ಹಾಜರಾಗಿ ತಮ್ಮ ಹಕ್ಕುಗಳನ್ನು ಸಲ್ಲಿಸಬೇಕಾದ ಸ್ಥಳ	ವಿಭಾಗೀಯ / ಉಪ ವಿಭಾಗೀಯ/ ಶಾಖಾ ಕಚೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಜಂಟಿ ಆಯುಕ್ತರು, ವಲಯ –1, ಬಿಎನ್‌ಸಿಸಿ, ಅಮೃತಹಳ್ಳಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು 92.	ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, 2ನೆ ಮಹಡಿ, ವಿಭಾಗೀಯ ಕಚೇರಿ, 9ನೆ ಮುಖ್ಯ ರಸ್ತೆ, ಡಿ ಬ್ಲಾಕ್, ಸಹಕಾರ ನಗರ, ಬೆಂಗಳೂರು 92. ಫೋನ್ : 9844508268	ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ

ಅನುಸೂಚಿತ ಸ್ವತ್ತುಗಳಂತೆ ಯಾರ ಸ್ವತ್ತುಗಳು ಸ್ವಾಧೀನಕೊಳ್ಳಪಡುತ್ತವೋ ಅಂತಹ ಸ್ವತ್ತಿನ ಮಾಲೀಕರು/ಆಸಕ್ತ ವ್ಯಕ್ತಿಗಳು ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗಾಗಿ ಆಯುಕ್ತರು, ಬೆಂಗಳೂರು ಉತ್ತರ ಮಹಾನಗರ ಪಾಲಿಕೆ ಇವರಿಗೆ ಒಪ್ಪಿಗೆ ನೀಡತಕ್ಕದ್ದು.

ಭೂಮಾಲೀಕರು ಅಭಿವೃದ್ಧಿ ಹಕ್ಕುಗಳಾಗಿ ಹಣಕಾಸಿನ ಪರಿಹಾರದ ಬದಲಾಗಿ ಒಪ್ಪಿಸಿದ ಭೂಮಿಯ ಎರಡು ಪಟ್ಟು ವಿಸ್ತೀರ್ಣವನ್ನು ಪಡೆಯುತ್ತಾರೆ(ಪರಿಗಣಿಸಲಾದ ಭೂಮಿ) ಮತ್ತು ಕಟ್ಟಡ ಪ್ರದೇಶದ ಅಂದಾಜು ಒಪ್ಪಿಸಿದ ಮೌಲ್ಯವನ್ನು ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿದಾಗ ದೊರೆತ ಮೊತ್ತದ ಎರಡು ಬಾರಿ.ಮೂಲ ಪ್ಲಾಟ್ ಮತ್ತು ಸ್ವೀಕರಿಸುವ ಪ್ಲಾಟ್‌ನ ಮಾರುಕಟ್ಟೆ ಮೌಲ್ಯವನ್ನು ಅಪವರ್ತಿಸುವ ಮೂಲಕ ಪರಿಗಣಿಸಲಾದ ಭೂಮಿಯನ್ನು ಬಳಸಿಕೊಳ್ಳಬಹುದು. ಪರಿಗಣಿಸಲಾದ ಭೂಮಿ ಎಫ್ಎಆರ್‌ಗೆ ಅರ್ಹವಾಗಿದೆ ಮತ್ತು ಅಭಿವೃದ್ಧಿ ಹಕ್ಕು ನಿಯಮಗಳು 2016 ರ ಪ್ರಯೋಜನದಲ್ಲಿ ಸೂಚಿಸಲಾದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಸ್ವೀಕರಿಸುವ ಸ್ಥಳದಲ್ಲಿ ಹೆಚ್ಚುವರಿ ನಿರ್ಮಿತ ಪ್ರದೇಶವಾಗಿ ಬಳಸಲಾಗುತ್ತದೆ.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು, (ಭೂ ಸ್ವಾಧೀನ & ಟಿಡಿಆರ್), ಬಿ ಎನ್ ಸಿ ಸಿ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಷೆಡ್ಯೂಲ್

ಯಲಹಂಕ ವಲಯ ರಸ್ತೆಯಲ್ಲಿರುವ ಕೋಗಿಲು–ಕಣ್ಣೂರು ಮುಖ್ಯ ರಸ್ತೆಯಿಂದ ಬೆಳ್ಳಹಳ್ಳಿ ಮತ್ತು ಮಿಟ್ಟೇಗಾನಹಳ್ಳಿ ವೈಜ್ಞಾನಿಕ ಭೂ ಭರ್ತಿ ಸ್ಥಳದವರೆಗೆ ರಸ್ತೆ ನಿರ್ಮಾಣ ಮತ್ತು ರಚನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು" (ನಗರೋತ್ಥಾನ ಯೋಜನೆಯಡಿಯಲ್ಲಿ ಉಡಿಪಿ ಅನುದಾನದ ಅಡಿಯಲ್ಲಿ ಪ್ರಕಟಿಸಲಾಗಿದೆ. ವೈಡ್ ಸಂಖ್ಯೆ UDD.199.SFC.2016 dt: 21.06.2016) ಡಿಆರ್‌ಸಿ ನೀಡಬೇಕಾದ/ಈಗಾಗಲೇ ನೀಡಲಾಗಿರುವ ಪ್ಲಾಟ್/ಭೂಮಿಯ ಮಾಲೀಕರ ಹೆಸರು ಮತ್ತು ವಿಳಾಸ

ಜಿಲ್ಲೆಯ ಹೆಸರು: ಬೆಂಗಳೂರು ನಗರ । ತಾಲ್ಲೂಕಿನ ಹೆಸರು: ಬೆಂಗಳೂರು ಉತ್ತರ ತಾಲ್ಲೂಕು । ಗ್ರಾಮದ ಹೆಸರು: ಬೆಳ್ಳಹಳ್ಳಿ

Sl No	Sy No/ Khatha No	Type of land: Vacant	Type of land: Builit Up	Nature of Land: Agriculture	Nature of Land: Converted Undeveloped	Nature of Land: Approved Layout/Developed land Building Site	Dimension of the land/plot and extent in sq.m: Dimension	Dimension of the land/plot and extent in sq.m: Extent	Boundaries of the Land/ plot: North	Boundaries of the Land/ plot: East	Boundaries of the Land/ plot: West	Boundaries of the Land/ plot: South	Building details: Extent in Sq.mt	Building details: Type of construction nad No.of floors	Building details: Floor area ratio	Present activity Land /Building (Specify Specific activity such as shop, office, factory, aparat -ment, individual house etc,	Market (guidelines) value of the land per sqm: Agriculture/B-Khatha	Market (guidelines) value of the land per sqm: Converted Undeveloped	Market (guidelines) value of the land per sqm: A Katha, Developed site	Name and address of the owner of the plot/ land for which DRC is to be issued/ already issued.
1	2	3	4	5	6	7	8	9	10	11	12	13	14	15	16	17	18	19	20	21
1	59/1	Vacant							Sy No59/11	Remaing SY No 59/1	59/2, Remaing SY No 59/1	59/2 and Kogilu to Kannuru road	2332.70				3904.21	17250.00		Sandeep Rakra S/o Late K Lal
2	59/2								SY No 59/1	SY No 59/1	SY No 59/1	Kogilu to Kannuru road	892.70				3904.21	17250.00		Har Prith singh rana S/o Late Surindar sing Rana
3	57								Sy No.58	Remanig 57	59/1 road	59/1 road	4.16				3904.21	17250.00		D K Kalpna
4	59/11								SY No 66	SY No 58	SY No 59/11	SY No 59/1	1317.46				3904.21	17250.00		B R Amaranath S/o Late B.V Rameshawara
5	58								SY No 66	Remanig 58	SY No 59/11 and 59/1	SY No 57	2288.54				3904.21	17250.00		Shakil Shafi S/o Late S M Shafi
6	66								Remaing SY No. 66	Sy No 67	SY No 59/11	SY No 58	1406.65				3904.21	17250.00		R Gopala Krishna Murthy S/o Late Ramanna
7	67								Remaing SY No 67	Sy No 68	SY No 66 and Sy No 58	Remaing SY No 67	2290.00				3904.21	17250.00		Somashekar S/o Lte R. Gopalakishna murthy, R ashok S/o Late Rikab chand jain, Kamlesh kumar S/o Late Manik chand, Geethanjali W/o Gyan chand Usha Promad kumar Jain S/o Late Pramod kumar jain, Muskan Pramod jain
8	68								Mitaganahalli Boundray	Sy No 68	Remaing SY No 68	Sy No 67	6431.44				3904.21	17250.00		LAKE
9	8								Mitaganahalli Boundray	Sy No.09	Sy No.68	Remaing SY No 08	1362.02				3904.21	17250.00		Nazma Begum W/o Late Sayed Guljar ali
10	9								Mitaganahalli Boundray and Remanng Sy No.09 and sy No.10	Remaing SY No 09 and Sy No 13	Remaing SY No 09	Remaing SY No 09 and Sy No.10	5310.70				3904.21	17250.00		Nazma Begum W/o Late Sayed Guljar ali
11	13								Remaning Sy No.13	Sy No. 13	Sy No.09	Sy No.09	285.36				3904.21	17250.00		Government Property
12	10								Sy No. 13	Sy No.11	Sy No.09	Sy No.10	2133.12				3904.21	17250.00		Syed Farroq Pasha S/o Late Syed Maohamood
13	11								Remaning Sy No.11	Sy No. 13	Sy No.10	Remaning Sy No.11	2972.71				3904.21	17250.00		Nazma Begum W/O Late syed Gulzar ali, Syed Akbar ali S/o Syed Murthja Syed Hyder ali S/o Syed Murthja Syed Hasin ali S/o Syed Murthja Syed Hussain ali S/o Late Syed Murthuja
Total Area in Sq.mt													25844.86							

Note: (1) The Market value of Land shall be subject to Land conversion and development status to be decided at Form-III stage based on production of documents from the land owners. **(2)** The Building extent shall be verified at the time of Form - III Public Notice stage based on the Building Valuation and Benefits of Development Rights Rules, 2016.

ಸಹಿ/–
ಆಯುಕ್ತರು, ಬೆಂಗಳೂರು ಉತ್ತರ ನಗರ ಪಾಲಿಕೆ

ಡಿಜಿಟಲ್ ವ್ಯಸನ ನಿರ್ವಹಣೆ: 7 ಸಾವಿರ ನೋಂದಣಿ

ಮಕ್ಕಳನ್ನು ವ್ಯಸನಮುಕ್ತರನ್ನಾಗಿಸಲು ಹೆತ್ತವರಿಗೆ ನಿಮ್ಹಾನ್ಸ್‌ನ ಶಟ್ ಕ್ಲಿನಿಕ್‌ನಿಂದ ಮಾರ್ಗದರ್ಶನ

• ವರುಣ ಹೆಗಡೆ

ಬೆಂಗಳೂರು: ಮಕ್ಕಳನ್ನು ಡಿಜಿಟಲ್ ವ್ಯಸನದಿಂದ ಹೊರತರಲು ನಿಮ್ಹಾನ್ಸ್‌ನ 'ಸರ್ವಿಸ್ ಫಾರ್ ಹೆಲ್ದಿ ಯೂಸ್ ಆಫ್ ಟೆಕ್ನಾಲಜಿ ಕ್ಲಿನಿಕ್' (ಶಟ್) ಪಾಲಕರ ಸಮುದಾಯಕ್ಕೆ 'ತಂತ್ರಜ್ಞಾನ ವ್ಯಸನ ನಿರ್ವಹಣೆ' ಕಾರ್ಯಕ್ರಮ ರೂಪಿಸಿದ್ದು, ಈ ಕಾರ್ಯಕ್ರಮದಡಿ ಏಳು ಸಾವಿರಕ್ಕೂ ಅಧಿಕ ಪಾಲಕರು ನೋಂದಣಿಯಾಗಿದ್ದಾರೆ.

ಕೋವಿಡ್ ಕಾಣಿಸಿಕೊಂಡ ಬಳಿಕ ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಅತಿಯಾದ ಬಳಕೆ ಮಕ್ಕಳಲ್ಲಿ ವ್ಯಸನವಾಗಿ ಮಾರ್ಪಟ್ಟಿದೆ. ಮೊಬೈಲ್ ಗೇಮ್‌ಗಳು, ಸಾಮಾಜಿಕ ಜಾಲತಾಣಗಳು ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಇದರಿಂದ ವಿವಿಧ ರೀತಿಯ ಮಾನಸಿಕ ಸಮಸ್ಯೆಗೆ ಒಳಪಡುತ್ತಿರುವ ಮಕ್ಕಳು, ಜೀವಕ್ಕೆ ಅಪಾಯ ತಂದುಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಶಟ್ ಕ್ಲಿನಿಕ್ ಪಾಲಕರಿಗಾಗಿ ಕಳೆದ ವರ್ಷ ಆನ್‌ಲೈನ್ ವೇದಿಕೆಯ ನೆರವಿನಿಂದ ತಂತ್ರಜ್ಞಾನ ವ್ಯಸನ ನಿರ್ವಹಣೆ ಕಾರ್ಯಕ್ರಮ ಪ್ರಾರಂಭಿಸಿದೆ. ಇದಕ್ಕೆ ಪಾಲಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ದೇಶದ ವಿವಿಧೆಡೆಯಿಂದ ನೋಂದಣಿಯಾಗಿ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ಈ ಕಾರ್ಯಕ್ರಮದಡಿ ವ್ಯಸನಕ್ಕೆ ಒಳಗಾಗಿರುವ ಮಕ್ಕಳ ಲಕ್ಷಣಗಳನ್ನು ಗುರುತಿಸುವ ಬಗೆ, ಅವರ ಜತೆಗಿನ ಸಂವಹನ ಹಾಗೂ ಅವರನ್ನು ಡಿಜಿಟಲ್ ವ್ಯಸನದಿಂದ ಹೊರ ತರುವ ಬಗೆಯ ಬಗ್ಗೆ ತಿಳಿಸಿಕೊಡಲಾಗುತ್ತದೆ. ಎಲ್ಲ ವಯೋಮಾನದ ಪಾಲಕರು ಪಾಲ್ಗೊಳ್ಳಬಹುದಾಗಿದ್ದು, ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಅಗತ್ಯ ವಿವರ ದಾಖಲಿಸಿ ನೋಂದಾಯಿಸಿ ಕೊಳ್ಳಬೇಕಿದೆ. ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡುತ್ತಿರುವ ಕಾರಣ, 50 ಜನರ ಗುಂಪುಗಳಾಗಿ ವಿಂಗಡಿಸಿ ಕಾರ್ಯಾಗಾರ ನಡೆಸಲಾಗುತ್ತಿದೆ. ಪಾಲಕರು ಶಟ್ ಕ್ಲಿನಿಕ್‌ನ ತಜ್ಞರ ಜತೆಗೆ ಸಮಾಲೋಚನೆ ನಡೆಸುವ ಜತೆಗೆ, ಪ್ರಶ್ನೆಗಳನ್ನು ಕೇಳಲೂ ಅವಕಾಶ ನೀಡಲಾಗುತ್ತಿದೆ.

ಎರಡು ಗೋಷ್ಠಿ: ಈ ಕಾರ್ಯಾಗಾರದಲ್ಲಿ ಪ್ರಮುಖವಾಗಿ ಎರಡು ಗೋಷ್ಠಿಗಳು ಇರಲಿವೆ. ತಂತ್ರಜ್ಞಾನದ ಅತಿಯಾದ ಬಳಕೆಯಿಂದ ಕಾಣಿಸಿಕೊಳ್ಳುವ ಮಾನಸಿಕ ಸಮಸ್ಯೆಗಳು ಹಾಗೂ ಅವುಗಳ ನಿವಾರಣೆ, ಸೈಬರ್ ಸಾಕ್ಷರತೆ, ಅಪಾಯಕಾರಿ ತಂತ್ರಜ್ಞಾನ ಬಳಕೆಯಿಂದ ಆಗುವ ಸಮಸ್ಯೆಗಳು, ಕೌಶಲ ಕೊರತೆ, ಆರೋಗ್ಯಕರ ಸಂವಹನ ಶೈಲಿ ವೃದ್ಧಿ ಸೇರಿ ಹಲವು ವಿಷಯಗಳನ್ನು ಈ ಗೋಷ್ಠಿಗಳು ಒಳಗೊಂಡಿರಲಿವೆ.

'ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಅತಿಯಾದ ಬಳಕೆ ವ್ಯಸನವಾಗಿ ಮಾರ್ಪಡುತ್ತಿದೆ. ಮೊಬೈಲ್ ಗೇಮ್‌ಗಳು ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ದೈಹಿಕ ಚಟುವಟಿಕೆಗಳು ಇಲ್ಲದಿರುವುದು, ಸಂವಹನ ಕೊರತೆಯೂ ಈ ವ್ಯಸನಕ್ಕೆ ಹಾದಿ ಮಾಡಿಕೊಡುತ್ತಿದೆ. ಮೊಬೈಲ್ ಫೋನ್ ಮತ್ತು ಗೇಮ್‌ಗಳಲ್ಲಿ ಅತಿಯಾದ ಆಸಕ್ತಿ, ಅನಿಯಂತ್ರಿತ ಬಳಕೆ, ಸಾಧನಗಳನ್ನು ಕಸಿದಾಗ ಕೋಪ ಹಾಗೂ ಚಡಪಡಿಕೆ, ನಿದ್ರಾಹೀನತೆ, ಮನಸ್ಥಿತಿಯಲ್ಲಿ ಹಠಾತ್ ಬದಲಾವಣೆಯಂತಹ ಲಕ್ಷಣಗಳು ವ್ಯಸನಕ್ಕೆ ಒಳಗಾದವರಲ್ಲಿ ಕಾಣಿಸಿಕೊಳ್ಳುತ್ತವೆ' ಎಂದು ಶಟ್ ಕ್ಲಿನಿಕ್ ಮುಖ್ಯಸ್ಥ ಡಾ. ಮನೋಜ್ ಕುಮಾರ್ ಶರ್ಮಾ ತಿಳಿಸಿದರು.



ಪಾಲಕರು ಮಕ್ಕಳ ಜತೆಗೆ ಸಮಾಲೋಚನೆ ನಡೆಸುವ ಮೂಲಕ ಅವರಲ್ಲಿ ಆಗುತ್ತಿರುವ ವ್ಯತ್ಯಾಸವನ್ನು ಗಮನಿಸುತ್ತಾ ಇರಬೇಕು. ಡಿಜಿಟಲ್ ಸಾಧನಗಳ ಅತಿಯಾದ ಬಳಕೆಗೆ ಕಡಿವಾಣ ಹಾಕಬೇಕು

ಡಾ.ಮನೋಜ್ ಕುಮಾರ್ ಶರ್ಮಾ
ನಿಮ್ಹಾನ್ಸ್‌ನ ಶಟ್ ಕ್ಲಿನಿಕ್ ಮುಖ್ಯಸ್ಥ


25 ಮಂದಿ ಭೇಟಿ

ಮೊಬೈಲ್ ಗೇಮ್ ವ್ಯಸನಕ್ಕೆ ಸಂಬಂಧಿಸಿದಂತೆ ಪ್ರತಿ ವಾರ ಸರಾಸರಿ 25 ಮಕ್ಕಳು ನಿಮ್ಹಾನ್ಸ್‌ನ ಶಟ್ ಕ್ಲಿನಿಕ್‌ಗೆ ಭೇಟಿ ನೀಡುತ್ತಿದ್ದಾರೆ. ಕ್ಲಿನಿಕ್‌ನ ನೋಂದಣಿ ಆಧರಿಸಿ ಮನೋವೈದ್ಯರು ನಡೆಸಿದ ವಿಶ್ಲೇಷಣೆ ಪ್ರಕಾರ, 16ರಿಂದ 20 ವರ್ಷದೊಳಗಿನವರು ಮೊಬೈಲ್ ಗೇಮ್, ಸಾಮಾಜಿಕ ಜಾಲತಾಣ ಬಳಕೆಯ ವ್ಯಸನಕ್ಕೆ ಹೆಚ್ಚಾಗಿ ಒಳಪಡುತ್ತಿದ್ದಾರೆ. 20 ವರ್ಷ ಮೇಲ್ಪಟ್ಟವರು ಅಶ್ಲೀಲ ವಿಡಿಯೊ ವೀಕ್ಷಣೆಯಂತಹ ವ್ಯಸನಕ್ಕೆ ಸಿಲುಕುತ್ತಿದ್ದಾರೆ.

ಮೊದಲ ಕ್ಲಿನಿಕ್

ಶಟ್ ಕ್ಲಿನಿಕ್ ತಂತ್ರಜ್ಞಾನ ವ್ಯಸನದ ನಿರ್ವಹಣೆಗೆ ಸ್ಥಾಪಿತವಾದ ದೇಶದ ಮೊದಲ ಕ್ಲಿನಿಕ್ ಆಗಿದೆ. 2014ರ ಏ.1ರಂದು ಕಾರ್ಯಾರಂಭ ಮಾಡಿದ ಈ ಕ್ಲಿನಿಕ್, ಬಿಐಎಂ ಲೇಬಿಟ್‌ನಲ್ಲಿರುವ 'ನಿಮ್ಹಾನ್ಸ್ ಸೆಂಟರ್ ಫಾರ್ ವೆಲ್ ಬೀಯಿಂಗ್' (ಎನ್‌ಸಿಡಬ್ಲ್ಯುಬಿ) ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಡಿಜಿಟಲ್ ವ್ಯಸನಕ್ಕೆ ಸಂಬಂಧಿಸಿದಂತೆ ಎಲ್ಲ ವಯೋಮಾನದವರಿಗೂ ಸೇವೆ ಒದಗಿಸುತ್ತಿದೆ. ಕ್ಲಿನಿಕ್‌ಗೆ ನೇರವಾಗಿ ಭೇಟಿ ನೀಡಿ ಅಥವಾ ಟೆಲಿ ಸಮಾಲೋಚನೆ ಮೂಲಕ ಸೇವೆ ಪಡೆಯಬಹುದಾಗಿದೆ. ಅಶ್ಲೀಲ ವಿಡಿಯೊ ವೀಕ್ಷಣೆ ವ್ಯಸನ, ಮೊಬೈಲ್ ಗೇಮ್‌ಗಳ ವ್ಯಸನ, ಜೂಜಾಟ, ಡೇಟಿಂಗ್ ಸೇರಿ ವಿವಿಧ ಡಿಜಿಟಲ್ ವ್ಯಸನಗಳಿಗೆ ಕ್ಲಿನಿಕ್ ಮನೋವೈದ್ಯರು ಸಮಾಲೋಚನೆ ಹಾಗೂ ಚಿಕಿತ್ಸಾ ಯೋಜನೆಗಳನ್ನು ಒದಗಿಸಲಿದ್ದಾರೆ. ಕ್ಲಿನಿಕ್ ಸಹಾಯವಾಣಿ ಸಂಖ್ಯೆ: 9480829675 (ಪ್ರತಿ ಶುಕ್ರವಾರ ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕಾರ್ಯನಿರ್ವಹಿಸಲಿದೆ)



ಮೊಬೈಲ್ ಗೇಮ್‌ನಲ್ಲಿ ನಿರತರಾಗಿರುವ ಮಕ್ಕಳು ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಬೆಳಗಾವಿ ಪಾಲಿಕೆ: ಕನ್ನಡಿಗರ ಹಿಡಿತ

ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆಗೆ 24ನೇ ಅವಧಿಯ ಮೇಯರ್ ಆಗಿ ಪ್ರೀತಿ ವಿನಾಯಕ ಕಾಮಕರ ಹಾಗೂ ಉಪಮೇಯರ್ ಆಗಿ ಹಣಮಂತ ಕೊಂಗಾಲಿ ಬುಧವಾರ ಆಯ್ಕೆಯಾದರು.

ಎರಡೂ ಸ್ಥಾನಗಳು ಕನ್ನಡಿಗರ ಪಾಲಾಗಿದ್ದು ವಿಶೇಷ.ಬಿಜೆಪಿ ಆಡಳಿತಕ್ಕೆ ಬಂದ ಮೇಲೆ ಇದು ನಾಲ್ಕನೇ ಅವಧಿ. ಕಳೆದ ಮೂರು ಅವಧಿಯಲ್ಲಿ ಒಂದು ಸ್ಥಾನ ಮರಾಠರಿಗೆ, ಇನ್ನೊಂದು ಸ್ಥಾನ ಕನ್ನಡಿಗರಿಗೆ ಸಿಕ್ಕಿತ್ತು.

'ಮೇಯರ್ ಸ್ಥಾನ ಸಾಮಾನ್ಯ ಮಹಿಳೆ ಹಾಗೂ ಉಪಮೇಯರ್ ಸ್ಥಾನ ಸಾಮಾನ್ಯಕ್ಕೆ ಮೀಸಲಾಗಿತ್ತು. ಪಾಲಿಕೆ ಪರಿಷತ್ ಸಭಾಂಗಣದಲ್ಲಿ ನಡೆದ ಚುನಾವಣೆ ವೇಳೆ ಬಿಜೆಪಿ ಸದಸ್ಯೆ ಪ್ರೀತಿಗೆ 39 ಹಾಗೂ ಕಾಂಗ್ರೆಸ್ ಬೆಂಬಲಿತ ಸ್ವತಂತ್ರ ಸದಸ್ಯೆ ಖುರ್ಷಿದಾ ದಾದಾಪೀರ್ ಮುಲ್ಲಾಗೆ 18 ಮತಗಳು ಬಂದವು. 21 ಮತಗಳ ಅಂತರದಿಂದ ಪ್ರೀತಿ ಚುನಾಯಿತರಾದರು' ಎಂದು ಚುನಾವಣಾಧಿಕಾರಿ ಜಾನಕಿ ಕೆ.ಎಂ. ಘೋಷಿಸಿದರು.



ಉಪಮೇಯರ್ ಚುನಾವಣೆಯಲ್ಲಿ ಬಿಜೆಪಿ ಸದಸ್ಯ ಹಣಮಂತ ಕೊಂಗಾಲಿಗೆ 39 ಹಾಗೂ ಕಾಂಗ್ರೆಸ್‌ನ ಮೋದಿನಸಾಬ್ ಮುತವಾಲೆಗೆ 20 ಮತಗಳ ಬಂದವು. ಹಣಮಂತ 19 ಮತಗಳ ಅಂತರದಿಂದ ಗೆದ್ದರು.

ಒಟ್ಟು 65 ಮತದಾರರ ಪೈಕಿ 59 ಮತದಾರರು ಹಾಜರಿದ್ದರು. 6 ಮಂದಿ ಗೈರಾದರು. ಮೇಯರ್ ಮತದಾನ ವೇಳೆ ಇಬ್ಬರು ತಟಸ್ಥವಾಗಿ ಉಳಿದರೆ; ಉಪಮೇಯರ್‌ಗೆ ಎಲ್ಲರೂ ಮತ ಚಲಾಯಿಸಿದರು.

ತಾಂತ್ರಿಕ ಕಾರಣ: 'ಕಣಜ' ಸ್ಥಗಿತ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ವಹಿಸುತ್ತಿರುವ 'ಕಣಜ' ವೆಬ್‌ಸೈಟ್ ತಾಂತ್ರಿಕ ಕಾರಣದಿಂದ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದಾಗಿ ಈ ಅಂತರ್ಜಾಲ ಕನ್ನಡ ಜ್ಞಾನಕೋಶದಲ್ಲಿ ಲಭ್ಯವಿರುವ ಮಾಹಿತಿ ದೊರೆಯದಂತಾಗಿದೆ.

ಕನ್ನಡ ಭವನದ ಮೊದಲ ಮಹಡಿಯಲ್ಲಿ ಕಣಜ ವಿಭಾಗ ಕಾರ್ಯನಿರ್ವಹಿಸುತ್ತಿದೆ. ಕನ್ನಡ ಮತ್ತು ಕರ್ನಾಟಕದ ಬಗ್ಗೆ ಸಮಗ್ರ ಮಾಹಿತಿ ನೀಡಲು ಕರ್ನಾಟಕ ಜ್ಞಾನ ಆಯೋಗವು 'ಕಣಜ'ವನ್ನು ಅಭಿವೃದ್ಧಿಪಡಿಸಿತ್ತು. ಇದನ್ನು 2015 ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಸ್ತಾಂತರಿಸಲಾಗಿತ್ತು. ಇತ್ತೀಚೆಗೆ ತಾಂತ್ರಿಕ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಂದ ಆಗಾಗ ಈ ಜಾಲತಾಣ ಸ್ಥಗಿತಗೊಳ್ಳುತ್ತಿರುವುದು ಸಾಂಸ್ಕೃತಿಕ ವಲಯದ ಅಸಮಾಧಾನಕ್ಕೆ ಕಾರಣವಾಗಿದೆ.

ಈಗಾಗಲೇ ಸುಮಾರು 1,800ಕ್ಕೂ ಅಧಿಕ ಪುಸ್ತಕಗಳನ್ನು ಇಲ್ಲಿ ಅಳವಡಿಸಲಾಗಿದ್ದು, ಲೇಖನಗಳು, ವಚನಗಳು, ಇ–ಆಡಿಯೊ ಸೇರಿ ವಿವಿಧ ಮಾಹಿತಿಗಳನ್ನು ಈ ಡಿಜಿಟಲ್ ವೇದಿಕೆ ಒಳಗೊಂಡಿದೆ. ಇನ್ನೊಂದೆಡೆ ಡಿಜಿಟಲೀಕರಣ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಈಗ ಸುರಕ್ಷತಾ ದೃಷ್ಟಿಯಿಂದ ವಿಂಡೋಸ್‌ನಿಂದ ಲೈನೆಕ್ಸ್ ಕಾರ್ಯಾಚರಣೆ ವ್ಯವಸ್ಥೆಗೆ ಬದಲಾಯಿಸಲಾಗುತ್ತಿದೆ. ಇದಕ್ಕೆ ಇಲಾಖೆಯ ಅನುಮೋದನೆ ಸಿಗದ ಕಾರಣ ವೆಬ್‌ಸೈಟ್ ಕೆಲ ದಿನಗಳಿಂದ ಸ್ಥಗಿತಗೊಂಡಿದೆ.

'ಕಣಜ ವೆಬ್‌ಸೈಟ್ ತಾಂತ್ರಿಕ ಕಾರಣದಿಂದ ಸ್ಥಗಿತಗೊಂಡಿದೆ. ಇದನ್ನು ಮುಂದಿನ ಒಂದು ವಾರದಲ್ಲಿ ಸರಿಪಡಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ ತಿಳಿಸಿದರು.

ಪುಸ್ತಕ ಖರೀದಿ ತಜ್ಞರ ಸಮಿತಿ ರಚಿಸಿ- ಮಾನಸ

ಬೆಂಗಳೂರು: 'ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಸರ್ಕಾರಿ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ತಜ್ಞರ ಆಯ್ಕೆ ಸಮಿತಿ ರಚಿಸಿ, ಪುಸ್ತಕಗಳ ಖರೀದಿಗೆ ಕ್ರಮವಹಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಾನಸ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. '2025–26ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸಲು ಬಿಡುಗಡೆ ಮಾಡಿದ್ದ ಪಟ್ಟಿಯಲ್ಲಿ ಪ್ರಾಧಿಕಾರದ 27 ಪುಸ್ತಕಗಳಿದ್ದವು. ಆದರೆ, ಈ ಆಯ್ಕೆಗೆ ಸಂಬಂಧಿಸಿದಂತೆ ಪ್ರಾಧಿಕಾರ ಅರ್ಜಿ ಸಲ್ಲಿಸಿರಲಿಲ್ಲ. ಆಯ್ಕೆಯಾದ ಪುಸ್ತಕಗಳು ಸದ್ಯ ದಾಸ್ತಾನಿಲ್ಲ. ಪ್ರಾಧಿಕಾರದ ಕೃತಿ ಆಯ್ಕೆ ಮಾಡುವಾಗ ಪ್ರತಿಗಳ ಲಭ್ಯತೆ ಬಗ್ಗೆ ಪರಿಶೀಲಿಸದೆ ಆಯ್ಕೆ ಮಾಡಲಾಗಿದೆ' ಎಂದಿದ್ದಾರೆ.

'ಈ ರೀತಿಯ ಕ್ರಮದಿಂದ ಆಯ್ಕೆಯಾದ ಪುಸ್ತಕ ಸರಬರಾಜು ಮಾಡುವುದಿಲ್ಲವೆಂಬ ಕೆಟ್ಟ ಹೆಸರು ಪ್ರಾಧಿಕಾರಕ್ಕೆ ಬರಲಿದೆ. ಪುಸ್ತಕಗಳ ಪಟ್ಟಿಯಲ್ಲಿ ಕೆಲವು ದೋಷಗಳು ಕಂಡುಬಂದಿವೆ. ಈಗಾಗಲೇ ಆ ಪಟ್ಟಿಯನ್ನು ಹಿಂಪಡೆದಿರುವುದು ಒಳ್ಳೆಯ ಬೆಳವಣಿಗೆ. ಪುಸ್ತಕ ಆಯ್ಕೆಗಾಗಿ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಲೇಖಕರು, ಶಿಕ್ಷಣ ತಜ್ಞರು ಮತ್ತು ಮಕ್ಕಳ ಮನೋವಿಕಾಸ ಪರಿಣಿತರನ್ನು ತಜ್ಞರ ಸಮಿತಿ ರಚಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ: ಸಭೆ ನಡೆಸಿದ ಮುಖ್ಯಮಂತ್ರಿ

'ಕೈ' ಟಿಕೆಟ್‌ಗೆ ಮೇಟಿ ಕುಟುಂಬದಲ್ಲಿ ಸಂಘರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್.ವೈ. ಮೇಟಿ ನಿಧನದಿಂದ ತೆರವಾಗಿರುವ ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ನಡೆಯಲಿರುವ ಉಪ ಚುನಾವಣೆಯಲ್ಲಿ ಟಿಕೆಟ್‌ಗಾಗಿ ಮೇಟಿ ಕುಟುಂಬದಲ್ಲಿ ಮುಸುಕಿನ ಕಾದಾಟ ನಡೆಯುತ್ತಿರುವುದು ಕಾಂಗ್ರೆಸ್‌ಗೆ ತಲೆನೋವಾಗಿ ಪರಿಣಮಿಸಿದೆ.

ಕಾಂಗ್ರೆಸ್ ಪಕ್ಷದಿಂದ ಮೇಟಿ ಕುಟುಂಬದವರಿಗೇ ಟಿಕೆಟ್ ನೀಡುವುದು ಬಹುತೇಕ ಖಚಿತವಾಗಿದೆ. ಆದರೆ, ಕುಟುಂಬದೊಳಗಿನ ಸಂಘರ್ಷ, ವಾರಸುದಾರಿಕೆಯ ಜಗಳ ಈಗ ಬೀದಿಗೆ ಬಂದಿದೆ.



ಎಚ್.ವೈ. ಮೇಟಿಯವರ ಮಕ್ಕಳಾದ ಬಾಯಕ್ಕ, ಮಲ್ಲಿಕಾರ್ಜುನ, ಉಮೇಶ ಮತ್ತು ಮಹಾದೇವಿ ಜೊತೆ ಸಿದ್ದರಾಮಯ್ಯ ಅವರು ಮಾತುಕತೆ ನಡೆಸಿದರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಟಿ ಪುತ್ರರಾದ ಮಲ್ಲಿಕಾರ್ಜುನ, ಉಮೇಶ, ಪುತ್ರಿಯರಾದ ಬಾಯಕ್ಕ ಮತ್ತು ಮಹಾದೇವಿ ಜೊತೆ ಬುಧವಾರ ಮಾತುಕತೆ ನಡೆಸಿದರು. ಈ ವೇಳೆ, 'ಕುಟುಂಬದವರೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ನಿಮ್ಮ ಮನೆಯಲ್ಲಿಯೇ ಒಬ್ಬರಿಗೆ ಟಿಕೆಟ್ ನೀಡಲಾಗುವುದು' ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಗೊತ್ತಾಗಿದೆ.

'ನೀವು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿದ್ದೇವೆ' ಎಂದು ಮಲ್ಲಿಕಾರ್ಜುನ ಮೇಟಿ, ಉಮೇಶ ಮೇಟಿ ಮತ್ತು ಬಾಯಕ್ಕ ಮೇಟಿ ಮುಖ್ಯಮಂತ್ರಿಗೆ ತಿಳಿಸಿದ್ದಾರೆ. ಆದರೆ, ಮಹಾದೇವಿ ಮೇಟಿ ಮಾತ್ರ 'ನನಗೇ ಟಿಕೆಟ್ ನೀಡಬೇಕು. ನನಗೆ ನೀಡದಿದ್ದರೆ, ಸಹೋದರ ಉಮೇಶ ಮೇಟಿಗೆ ನೀಡಬೇಕು. ನಮ್ಮಿಬ್ಬರಲ್ಲಿ ಒಬ್ಬರಿಗೆ ನೀಡದೇ ಇದ್ದರೆ ನಾನು ಸ್ಪರ್ಧೆ ಮಾಡುತ್ತೇನೆ' ಎಂದು ಹೇಳಿದ್ದಾರೆಂದು ಗೊತ್ತಾಗಿದೆ.

ನಾಲ್ವರ ಅಭಿಪ್ರಾಯ ಪಡೆದ ಮುಖ್ಯಮಂತ್ರಿ, 'ಎಲ್ಲರೂ ಒಗ್ಗಟ್ಟಿನಿಂದ ಹೋದರೆ ಒಳ್ಳೆಯದಾಗುತ್ತದೆ' ಎಂದು ಸಲಹೆ ನೀಡಿದರು ಎಂದು ತಿಳಿದುಬಂದಿದೆ.

ಮಲ್ಲಿಕಾರ್ಜುನ ಮೇಟಿಗೆ ಟಿಕೆಟ್ ನೀಡಲು ಕಾಂಗ್ರೆಸ್ ಹೈಕಮಾಂಡ್ ಸಿದ್ಧತೆ ನಡೆಸಿರುವ ನಡುವೆ, ಉಮೇಶ ಆಕಾಂಕ್ಷಿ ಆಗಿರುವುದು ಮತ್ತು ಟಿಕೆಟ್ ಸಿಗದೇ ಇದ್ದರೆ ಬಂಡಾಯದ ಬಾವುಟ ಹಾರಿಸುವುದಾಗಿ ಕಿರಿಯ ಪುತ್ರಿ ಮಹಾದೇವಿ ಎಚ್ಚರಿಕೆ ನೀಡಿರುವುದು ಕಾಂಗ್ರೆಸ್ ವಲಯದಲ್ಲಿ ಚರ್ಚೆಯಾಗುತ್ತಿದೆ.

ಬೆಂಗಳೂರು ವಿ.ವಿ ವಿಜ್ಞಾನ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದ ಅಗತ್ಯಗಳಿಗೆ ತಕ್ಕಂತೆ ಜ್ಞಾನವನ್ನು ಒದಗಿಸುವ ಅಂತರಶಾಖಾ ಶಿಕ್ಷಣ, ತಂತ್ರಜ್ಞಾನ ಆಧಾರಿತ ಬೆಳವಣಿಗೆಯಿಂದ ವಿಕಸಿತ ಭಾರತದ ಗುರಿ ಸಾಧಿಸಬಹುದು' ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಎಸ್.ಆರ್. ನಿರಂಜನ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಸೈನ್ಸ್ ಫೋರಮ್ (ಬಿಯುಎಸ್‌ಎಫ್) ಹಾಗೂ ಪಿಎಂ ಉಷಾ ಸಹಯೋಗದೊಂದಿಗೆ ಆಯೋಜಿಸಿದ್ದ ವಿಜ್ಞಾನ ಉತ್ಸವ - 2026 ಉದ್ಘಾಟಿಸಿ ಮಾತನಾಡಿದರು.

'ಮೂಲ ವಿಷಯಗಳೊಂದಿಗೆ ಕೌಶಲ ಶಿಕ್ಷಣ ಒದಗಿಸುವುದು ಇಂದಿನ ಅಗತ್ಯವಾಗಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಹಸಿರು ಕ್ರಾಂತಿ, ಅಂತರಿಕ್ಷ ಕ್ಷೇತ್ರ, ಕೋವಿಡ್ ಲಸಿಕೆ ಸೇರಿದಂತೆ ವಿಜ್ಞಾನ ತಂತ್ರಜ್ಞಾನದಲ್ಲಿ ಆಗಿರುವ ಸಾಧನೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು' ಎಂದು ತಿಳಿಸಿದರು.



ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಆಯೋಜಿಸಿರುವ ವಿಜ್ಞಾನ ಉತ್ಸವದಲ್ಲಿ ಮಾದರಿಗಳನ್ನು ಕುಲಪತಿ ಡಾ.ಎಸ್‌ಎಂ.ಜಯಕರ ವೀಕ್ಷಿಸಿದರು

ಧಾರವಾಡದ ಐಐಟಿ ಪ್ರಾಧ್ಯಾಪಕ ಎಸ್.ಎಂ.ಶಿವಪ್ರಸಾದ್ ಮಾತನಾಡಿ, 'ಪ್ರಸ್ತುತ ವಿಜ್ಞಾನ ವ್ಯಾಪಕವಾಗಿ ಪರಿವರ್ತನೆಯಾಗುತ್ತಿದ್ದು ಶಿಕ್ಷಣ ವ್ಯವಸ್ಥೆ ಕೂಡ ಭವಿಷ್ಯಕ್ಕೆ ತಕ್ಕಂತೆ ಬದಲಾಗಬೇಕು. ಪ್ರಾಯೋಗಿಕ ಹಾಗೂ ಚಿಂತನೆ ಆಧಾರಿತ ಕಲಿಕೆ ಅಗತ್ಯವಾಗಿದೆ' ಎಂದರು.

ಕುಲಪತಿ ಎಸ್.ಎಂ.ಜಯಕರ ಮಾತನಾಡಿದರು. ಕುಲಸಚಿವರಾದ ಕೆ.ಟಿ. ಶಾಂತಲಾ, ಸಿ.ಎಸ್.ಕರಿಗಾರ್, ವಿಜ್ಞಾನ ನಿಕಾಯದ ಡೀನ್ ನಾಗಯ್ಯ ಇದ್ದರು.

ಬೆಂವಿವಿ ವಿಜ್ಞಾನ ಉತ್ಸವದಲ್ಲಿ ಒಟ್ಟು 1250 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೊಂದಾಯಿತರಾಗಿದ್ದು ವಿಜ್ಞಾನ ಮಾದರಿ ಸ್ಪರ್ಧೆ, ವಿಜ್ಞಾನ ಪೋಸ್ಟರ್ ಪ್ರಸ್ತುತಿ, ಕ್ವಿಜ್ ಸ್ಪರ್ಧೆ, ಪ್ರಬಂಧ ಬರವಣಿಗೆ, ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿದರು.

ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಮುಕ್ತ ಅವಕಾಶವಿದ್ದು, ವಿಜ್ಞಾನಾಸಕ್ತರು ಪ್ರಾಯೋಗಿಕ ಅನುಭವ ಪಡೆದುಕೊಂಡರು.

ಆರ್‌ಟಿಐ ವ್ಯಾಪ್ತಿಗೆ ಅಪೆಕ್ಸ್ ಬ್ಯಾಂಕ್ : ಮಾಹಿತಿ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೆಕ್ಸ್ ಬ್ಯಾಂಕ್ ಅನ್ನು ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಸಾರ್ವಜನಿಕ ಪ್ರಾಧಿಕಾರ ಎಂದು ಘೋಷಿಸಿರುವ ರಾಜ್ಯ ಮಾಹಿತಿ ಆಯೋಗವು, ಎಲ್ಲಾ ಕಚೇರಿಗಳಲ್ಲಿ ತಕ್ಷಣವೇ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಿಸಬೇಕು ಎಂದೂ ಆದೇಶಿಸಿದೆ.

ರಾಜ್ಯ ಮಾಹಿತಿ ಆಯುಕ್ತ ಎಸ್. ರಾಜಶೇಖರ ಈ ಆದೇಶ ಹೊರಡಿಸಿದ್ದಾರೆ.

ಹನುಮಂತ ವಸಂತ ಶಿಂಧೆ ಸಲ್ಲಿಸಿದ್ದ ದ್ವಿತೀಯ ಮೇಲ್ಮನವಿಯಲ್ಲಿ ನಿರಾಣಿ ಶುಗರ್ಸ್ ಲಿಮಿಟೆಡ್ ಸಂಸ್ಥೆಯು ಮಾರ್ಚ್ 2022ರಿಂದ ಜೂನ್ 2024ರವರೆಗೆ ಅಪೆಕ್ಸ್ ಬ್ಯಾಂಕಿನಿಂದ ಪಡೆದ ಸಾಲಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ದಾಖಲೆಗಳ ಪ್ರತಿಗಳನ್ನು ನೀಡುವಂತೆ ಅರ್ಜಿ ಸಲ್ಲಿಸಿದ್ದರು. ಆದರೆ ಬ್ಯಾಂಕ್ ತಾವು ಸಹಕಾರ ಸಂಘವಾಗಿರುವುದರಿಂದ ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿ ಮಾಹಿತಿ ನೀಡಲು ನಿರಾಕರಿಸಿತ್ತು.

ಈ ಬಗ್ಗೆ ವಿಚಾರಣೆ ನಡೆಸಿದ ಮಾಹಿತಿ ಆಯುಕ್ತರು, 'ಬ್ಯಾಂಕ್ ಕಾರ್ಯಾಚರಣೆಯ ಮೇಲೆ ಸರ್ಕಾರದ ಆಳವಾದ ಮತ್ತು ವ್ಯಾಪಕ ನಿಯಂತ್ರಣ ಇದೆ' ಎಂದು ತಮ್ಮ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಅಡಿಯಲ್ಲಿ ಪ್ರಮುಖ ಮಾಹಿತಿಯನ್ನು ಅಪೆಕ್ಸ್ ಬ್ಯಾಂಕ್ ಸಾರ್ವಜನಿಕವಾಗಿ ಪ್ರಕಟಿಸಬೇಕು. ಇದನ್ನು ತಕ್ಷಣ ಜಾರಿಗೆ ತರಲು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಹಕಾರ ಸಂಘಗಳ ನೋಂದಣಾಧಿಕಾರಿಗಳು ಕ್ರಮವಹಿಸಬೇಕು ಎಂದು ಸೂಚನೆ ನೀಡಿದ್ದಾರೆ.

'ವಿಮಾನ: ಹೆಚ್ಚುವರಿ ಶುಲ್ಕ ಬೇಡ'

ನವದೆಹಲಿ: ವಿಮಾನಗಳು ತಮ್ಮ ಒಟ್ಟಾರೆ ಸೀಟುಗಳಲ್ಲಿ ಶೇ 60ರಷ್ಟನ್ನು ಯಾವುದೇ ಹೆಚ್ಚುವರಿ ಶುಲ್ಕ ವಿಧಿಸದೆ ಪ್ರಯಾಣಿಕರಿಗೆ ಲಭ್ಯ ಇರುವಂತೆ ಮಾಡಬೇಕು ಎಂದು ನಾಗರಿಕ ವಿಮಾನಯಾನ ಸಚಿವಾಲಯವು ವಿಮಾನಯಾನ ಸಂಸ್ಥೆಗಳಿಗೆ ಸೂಚನೆ ನೀಡಿದೆ.

ಪ್ರಯಾಣಿಕಸ್ನೇಹಿ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಒಂದೇ ಪಿಎನ್‌ಆರ್ ಸಂಖ್ಯೆಯಲ್ಲಿ ಸಂಚರಿಸುವವರು ಅಕ್ಕ–ಪಕ್ಕ ಕುಳಿತುಕೊಳ್ಳಲು ಕೂಡ ಅವಕಾಶ ಕಲ್ಪಿಸಬೇಕು. ಈ ಸಂಗತಿಯನ್ನು ಡಿಜಿಸಿಎ ಮೂಲಕ ವಿಮಾನಯಾನ ಸಂಸ್ಥೆಗಳಿಗೆ ತಿಳಿಸಲಾಗಿದೆ ಎಂದು ಬುಧವಾರ ಹೇಳಿದೆ.

ಈಗ ವಿಮಾನಗಳಲ್ಲಿ ನಿರ್ದಿಷ್ಟ ಸೀಟುಗಳು ಹಾಗೂ ಕೆಲವು ಸೌಕರ್ಯ ಬೇಕೆನ್ನುವವರು ಹೆಚ್ಚುವರಿ ಶುಲ್ಕ ಪಾವತಿಸಬೇಕಿದೆ. ಶೇ 60ರಷ್ಟು ಸೀಟುಗಳನ್ನು ಇಂತಹ ಶುಲ್ಕ ಪಡೆಯದೆ ಪ್ರಯಾಣಿಕರಿಗೆ ಮುಕ್ತವಾಗಿ ಒದಗಿಸಬೇಕು ಎಂದು ಸೂಚಿಸಿದೆ.

ಸಾಂಸ್ಕೃತಿಕ ಮುನ್ನೋಟ

'ಸಾಕೇತ ಸಾಮ್ರಾಜ್ಞೆ' ಕಥಾ ಪ್ರಸಂಗ

ಬೆಂಗಳೂರು: ಹನುಮಗಿರಿಯ ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ ವತಿಯಿಂದ ಇದೇ 24ರಂದು ಸಂಜೆ 6 ಗಂಟೆಗೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ 'ಸಾಕೇತ ಸಾಮ್ರಾಜ್ಞೆ' ಕಥಾ ಪ್ರಸಂಗ ಹಮ್ಮಿಕೊಂಡಿದೆ. ಇದು 100ನೇ ಪ್ರದರ್ಶನವಾಗಿದ್ದು, ಪ್ರವೇಶ ಉಚಿತ ಇರಲಿದೆ.

'ಮಾಯಾ ಬೇಟೆ' ನಾಟಕ ಪ್ರದರ್ಶನ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ತಿಂಗಳ ನಾಟಕ ಸಂಭ್ರಮ ಸರಣಿಯಡಿ ಇದೇ 21ರಂದು ಸಂಜೆ 6.30ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಮುಚ್ಚಯ ಭವನದಲ್ಲಿ 'ಮಾಯಾ ಬೇಟೆ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಕೆ.ವೈ. ನಾರಾಯಣಸ್ವಾಮಿ ಅವರು ರಚಿಸಿರುವ ಈ ನಾಟಕವನ್ನು, ನಂಜುಂಡೇಗೌಡ ಸಿ. ಅವರ ನಿರ್ದೇಶನದಲ್ಲಿ ದೃಶ್ಯಕಾವ್ಯ ತಂಡ ಪ್ರಸ್ತುತಪಡಿಸಲಿದೆ.

'ಗದಾಯುದ್ಧ' ಯಕ್ಷಗಾನ ತಾಳಮದ್ದಳೆ

ಬೆಂಗಳೂರು: ಕೇಂದ್ರೀಯ ಅಬಕಾರಿ ಮತ್ತು ಸೀಮಾ ಶುಲ್ಕ ಇಲಾಖೆಯ ನಿವೃತ್ತರ ಸಂಘವು ಇದೇ 21ರಂದು ಬೆಳಿಗ್ಗೆ 10ರಿಂದ 'ಗದಾಯುದ್ಧ' ಯಕ್ಷಗಾನ ತಾಳಮದ್ದಳೆ ಪ್ರದರ್ಶನ ಹಮ್ಮಿಕೊಂಡಿದೆ.

ಹಿಮ್ಮೇಳದಲ್ಲಿ ವಿಷ್ಣುಪ್ರಸಾದ ಕಲ್ಲೂರಾಯ, ಅಮೋಘ ಕುಂಟಿನಿ, ಪವನ್‌ರಾಜ್ ಕಲ್ಲೂರಾಯ, ಗೋಪಾಲಕೃಷ್ಣ ಕುಂಜತ್ತಾಯ, ಮುಮ್ಮೇಳದಲ್ಲಿ ಸರ್ಪಂಗಳ ಈಶ್ವರ ಭಟ್, ಕೆ.ಈ. ರಾಧಾಕೃಷ್ಣ, ಸುಜಾತಾ ರಮೇಶ್, ವೀಣಾ ರಾಮಚಂದ್ರನ್, ಸುಧನ್ವ ದೇರಾಜೆ, ಮಟ್ಟಿ ರಾಮಚಂದ್ರರಾವ್, ಸುಜಾತಾ ರಮೇಶ್ ಭಾಗವಹಿಸಲಿದ್ದಾರೆ.

'ಈ ಕೆಳಗಿನವರು' ನಾಟಕ ಪ್ರದರ್ಶನ

ಬೆಂಗಳೂರು: ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ರಾಷ್ಟ್ರೀಯ ನಾಟಕ ಶಾಲೆ ಪ್ರಾದೇಶಿಕ ಕೇಂದ್ರವು ಇದೇ 26ರಿಂದ 29ರವರೆಗೆ ಪ್ರತಿನಿತ್ಯ ಸಂಜೆ 7 ಗಂಟೆಗೆ ತನ್ನ ಕೇಂದ್ರದಲ್ಲಿ 'ಈ ಕೆಳಗಿನವರು' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಮ್ಯಾಕ್ಸಿಂ ಗಾರ್ಕಿ ಅವರು ರಚಿಸಿದ ಈ ನಾಟಕವನ್ನು ಬಿ.ಟಿ. ದೇಸಾಯಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ವೀಣಾ ಶರ್ಮಾ ಭೂಸನೂರಮಠ ಅವರು ನಿರ್ದೇಶಿಸಿದ್ದಾರೆ. ಪ್ರವೇಶ ಉಚಿತ ಇರಲಿದೆ.

'ರಾಜಾಧಿರಾಜ್ ಯಾತ್ರಾ' ಭಕ್ತಿ ಪ್ರಧಾನ ನಾಟಕ

ಬೆಂಗಳೂರು: ಕಲಾನೇಷನ್ ತಂಡದ ಸದಸ್ಯರು ಇದೇ 21 ಮತ್ತು 22ರಂದು ಮಧ್ಯಾಹ್ನ 2 ಹಾಗೂ ಸಂಜೆ 7 ಗಂಟೆಗೆ ಕೋಣನಕುಂಟೆಯ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ 'ರಾಜಾಧಿರಾಜ್ ಯಾತ್ರಾ' ಭಕ್ತಿ ಪ್ರಧಾನ ನಾಟಕ ಪ್ರದರ್ಶನ ಹಮ್ಮಿಕೊಂಡಿದ್ದಾರೆ.

ಈ ನಾಟಕ 75ಕ್ಕೂ ಅಧಿಕ ಪ್ರದರ್ಶನ ಕಂಡಿದ್ದು, ವೃಂದಾವನದಿಂದ ದ್ವಾರಕೆವರೆಗಿನ ಕೃಷ್ಣನ ಪಯಣವನ್ನು ಪ್ರಸ್ತುತಪಡಿಸುತ್ತದೆ.



'ರಾಜಾಧಿರಾಜ್ ಯಾತ್ರಾ' ನಾಟಕದ ದೃಶ್ಯ

'ಸಂಪೂರ್ಣ ಶ್ರೀ ದೇವಿ ಮಹಾತ್ಮೆ' ಯಕ್ಷಗಾನ

ಬೆಂಗಳೂರು: ಯಕ್ಷೇಶ್ವರಿ ಯಕ್ಷಗಾನವು ಇದೇ 21ರಂದು ಸಂಜೆ 5 ಗಂಟೆಗೆ ಜೆ.ಪಿ.ನಗರದ ಕ್ಲಾಸಿಕ್ ಆರ್ಚರ್ಡ್ ಲೇಔಟ್‌ನಲ್ಲಿ 'ಸಂಪೂರ್ಣ ಶ್ರೀ ದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದೆ.

ಹಿಮ್ಮೇಳದಲ್ಲಿ ಸುಬ್ರಾಯ ಹೆಬ್ಬಾರ್ ಬಿ., ಅಕ್ಷಯ್ ಪ್ರಭು, ಮನೋಜ್ ಆಚಾರ್, ಗಜಾನನ ಹೆಗಡೆ ಕಲ್ಲಬ್ಬೆ, ಮುಮ್ಮೇಳದಲ್ಲಿ ಪ್ರಶಾಂತ ಹೆಗಡೆ ಮೂರೂರು, ಲಕ್ಷ್ಮೀಪ್ರಸಾದ್ ಆಚಾರ್, ಸುದರ್ಶನ್ ಶೆಟ್ಟಿಗಾರ್, ಆತ್ರೇಯ ಗಾಂವ್ಕರ್, ಆತ್ರೇಯ ಪೂಜಾರಿ, ಭರತ್ ರಾಜ್ ಪರ್ಕಳ, ಕೌಸ್ತುಭ ಉಡುಪ, ಸುಖದ ಭಟ್, ಭಾಸ್ವತಿ ಗೋಪಾಲ ಕಜೆ, ಮನ್ವಿತ್ ಗಾಂವ್ಕರ್, ಶಿಥಿಲ್ ಶೆಟ್ಟಿ, ಸ್ವಸ್ತಿಕ್ ನಾಯಕ್, ಶ್ರೀವತ್ಸ, ನಿತ್ಯ ಗೌಡ, ಹಿಮಾನಿ, ಭುವನ್ ಬಿ., ಜನ್ಯ ಅಭಿಷೇಕ್ ಪಾಲ್ಗೊಳ್ಳಲಿದ್ದಾರೆ.


ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ನಗರದಲ್ಲಿ ಇಂದು

ಪುರಾಣ ಇತಿಹಾಸಗಳ ಸಂಗಮ ಹೊಸ–ಅಗ್ರಹಾರ 'ಕುಲಕಸುಬುಗಳ ಪುನರ್ನೆಲೆ–ಗೌರವ ಸಮರ್ಪಣೆ': ಸಾನ್ನಿಧ್ಯ: ಸುಜ್ಞಾನ ತೀರ್ಥ ಸ್ವಾಮೀಜಿ, ಪೂರ್ಣಾನಂದಪುರಿ ಸ್ವಾಮೀಜಿ, ಅತಿಥಿಗಳು: ಎಚ್.ಪಿ. ಸಂದೇಶ್, ಅಡಗೂರು ಎಚ್. ವಿಶ್ವನಾಥ್, ಶ್ರೇಯಸ್ ಪಟೇಲ್, ಅಧ್ಯಕ್ಷತೆ: ಮಲ್ಲಿಕಾರ್ಜುನ್, ಸ್ಥಳ: ಹೊಸ ಅಗ್ರಹಾರ, ಬಸವನಗುಡಿ, ಮಧ್ಯಾಹ್ನ 12ರಿಂದ

'ನಿಚ್ಚಂ ಪೊಸತು' ಉಪನ್ಯಾಸ: ಹಂಪ ನಾಗರಾಜಯ್ಯ, ಉಪಸ್ಥಿತಿ: ಆಶಾದೇವಿ, ಮನು ಎನ್. ಚಕ್ರವರ್ತಿ, ಎಚ್.ಎನ್. ಆರತಿ, ಆಯೋಜನೆ: ಕಥನ ಸ್ಟುಡಿಯೊ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಯುಗಾದಿ ಗಾನ–ಕಾವ್ಯಾನುಸಂಧಾನ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಯೋಗೇಶ್ ಮಾಸ್ಟರ್, 'ಯುಗಾದಿ ಮತ್ತು ಆರೋಗ್ಯ' ಉಪನ್ಯಾಸ: ಅಬ್ದುಲ್ ಖಾದರ್, ಅತಿಥಿಗಳು: ಆರ್. ನರೇಂದ್ರಬಾಬು, ಚಂದ್ರಶೇಖರ್, ಕೃಷ್ಣರಾಮು, ಪ್ರಭು ಜಯರಾಮ್, ಸಾ.ನ. ರಮೇಶ್, ಗಾಯನ: ಮೃತ್ಯುಂಜಯ ದೊಡ್ಡವಾಡ, ರಾಜ ಎಮ್ಮಿಗನೂರು, ದಿವಾಕರ್, ನಟರಾಜ ಬ್ಯಾಲಕೆರೆ, ಇಂಚರ ಪ್ರವೀಣ್, ರಾಧಾಕೃಷ್ಣ, ವೇಣುಗೋಪಾಲ್, ಪದ ದೇವರಾಜು, ಆಯೋಜನೆ: ಪದ, ಸ್ಥಳ: ಬಯಲು ರಂಗಮಂದಿರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30



ಸಿದ್ಧರಾಮಯ್ಯ

120ನೇ ವರ್ಷದ ಶ್ರೀರಾಮೋತ್ಸವ: ಉದ್ಘಾಟನೆ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅತಿಥಿ: ಶಿವರಾಮಶಾಸ್ತ್ರಿ, ಪಂಚಾಂಗ ಶ್ರವಣ: ರಾಮವಿಠಲಚಾರ್ಯ, ದಾಸಪದಾಮೃತ: ಸಮೀರಾಚಾರ್ಯ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5

26ನೇ ಶ್ರೀರಾಮ ನವಮಿ ಸಂಗೀತೋತ್ಸವ: ಉದ್ಘಾಟನೆ, ಸಂಗೀತ ಕಛೇರಿ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಆಯೋಜನೆ: ರಾಘವೇಂದ್ರ ಸ್ವಾಮಿ ದೇವಸ್ಥಾನ, ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಫೌಂಡೇಷನ್, ಸ್ಥಳ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣ, ಎಂಟನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

'ಈ ಕೆಳಗಿನವರು' ನಾಟಕ ಪ್ರದರ್ಶನ: ನಿರ್ದೇಶನ: ವೀಣಾ ಶರ್ಮಾ ಭೂಸನೂರಮಠ, ಆಯೋಜನೆ ಹಾಗೂ ಸ್ಥಳ: ರಾಷ್ಟ್ರೀಯ ನಾಟಕ ಶಾಲೆ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

'ರಾಜಾಧಿರಾಜ್ ಯಾತ್ರಾ' ಭಕ್ತಿ ನಾಟಕ ಪ್ರದರ್ಶನ: ಪ್ರಸ್ತುತಿ: ಕಲಾ ನೇಷನ್ ತಂಡ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಸಂಜೆ 7

ಯುಗಾದಿ–ರಂಜಾನ್ ಹಬ್ಬದ ಅಂಗವಾಗಿ 'ಸಾಮರಸ್ಯ ಬಹುಭಾಷಾ' ಕವಿಗೋಷ್ಠಿ: ಅತಿಥಿ: ಎಸ್.ಜಿ. ಸಿದ್ಧರಾಮಯ್ಯ, ನಿರ್ವಹಣೆ: ಕುಮಾರಸ್ವಾಮಿ ಬೆಜ್ಜಿಹಳ್ಳಿ, ಭಾಗವಹಿಸುವವರು: ಶಾಖಿರಾ ಖಾನಂ, ಚಂದ್ರಶೇಖರ ತಾಳ್ಯ, ಬಿಸ್ವಮಿತ್ ದ್ವಿವೇದಿ, ಹಾಜಿರಾ ಖಾನಂ, ಪದ್ಮಿನಿ ನಾಗರಾಜ್, ಸಂಧ್ಯಾರಾಣಿ, ಆದ್ರ್ರಾ, ಸಿದ್ಧಾರ್ಥ ಎಂ.ಎಸ್., ದಾದಾಪೀರ್ ಜೈಮನ್, ವೇಪಾ, ಪ್ರತಿಭಾ ನಂದುಕುಮಾರ್, ಮಮತಾ ಜಿ. ಸಾಗರ್, ಅರುಂಧತಿ ಘೋಷ್, ಶಶಾಂಕ ಜೋಹ್ರಿ, ಚಾಂದ್ ಪಾಷಾ, ರೇಷ್ಮಾ ರಮೇಶ್, ಸುರೇಶ್ ಹಾಸನ, ಜಗ್ಗಿ ಮೂಡೇನಹಳ್ಳಿ, ಅಮರಲತಾ ಕುಮಾರ್ ಇಂದ್ರಬೆಟ್ಟು, ಯಡಿಯೂರು ಪಲ್ಲವಿ, ಮಂಜುಳಾ ಬಿ.ವಿ., ರಂಜಿತಾ ನಾಗರಾಜ್, ಹೇಮಂತ ಲಿಂಗಪ್ಪ, ಶಶಿರಾಜ್, ಸ್ಮಿತಾ, ರಾಘವೇಂದ್ರ ಗೌಡರ್, ನಾಗೊಂಡನಹಳ್ಳಿ ಸುನೀಲ್, ಮಂಜಪ್ಪ ಮಾಗೋಡಿ, ಆಯೋಜನೆ: ಜನ ಶಿಕ್ಷಣ ಟ್ರಸ್ಟ್, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ನಗರದಲ್ಲಿ ನಾಳೆ

ಕಲಾರ್ಪಣ ಉತ್ಸವ, ತ್ಯಾಗರಾಜರ ಆರಾಧನೆ: ಭರತನಾಟ್ಯ ಪ್ರದರ್ಶನ: ಪದ್ಮಿನಿ ರವಿ, ಪಿ. ಪ್ರವೀಣ್ ಕುಮಾರ್, ಪ್ರತಿಭಾ ಪ್ರಹ್ಲಾದ್, ಲಕ್ಷ್ಮೀ ಗೋಪಾಲಸ್ವಾಮಿ, ಸೌಂದರ್ಯ ಶ್ರೀವತ್ಸ, ಸತ್ಯನಾರಾಯಣ ರಾಜು, ಶೀಲಾ ಚಂದ್ರಶೇಖರ್, ಸಂಗೀತ ವಾದ್ಯವೃಂದ: ಭರತ್ ನಾರಾಯಣ್, ಚೈತ್ರಾ ಜಗದೀಶ್, ಕೆ.ಆರ್.ವಿ. ಪುಲಿಕೇಶಿ, ಗಾಯನ: ಅನಿಂದಿತಾ ಕೂಳೂರು, ಅನಿರುದ್ಧ ಎಸ್. ದೇಬೂರ್, ಬಾಲಸುಬ್ರಮಣ್ಯಂ ಶರ್ಮ, ಭಾರತಿ ವೇಣುಗೋಪಾಲ್, ದೀಪ್ತಿ ಶ್ರೀನಾಥ್, ಹರಿಣಿ ಶ್ರೀಧರ್, ಪಿ. ರಮಾ, ಶ್ರೀವತ್ಸ ಡಿ.ಎಸ್., ವಸುಧಾ ಬಾಲಕೃಷ್ಣ, ಆಯೋಜನೆ: ಕಲಾರ್ಪಣ ಟ್ರಸ್ಟ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಏಳನೇ ಬ್ಲಾಕ್, ಜಯನಗರ, ಬೆಳಿಗ್ಗೆ 9.30ರಿಂದ



ಲಕ್ಷ್ಮೀ ಗೋಪಾಲಸ್ವಾಮಿ

ಗಿರಿಧರ್ ಖಾಸನೀಸ್ ಅವರ 'ಎಲ್ಲಿಂದಲೋ ಹಾರಿ ಬಂದು', 'ಇಡೀ ರಾತ್ರಿ ಸುರಿದ ಮಳೆ', 'ಆರು ತೆರೆಯ ನೋಡಂಬಿಗ' ಪುಸ್ತಕಗಳ ಆಯ್ದ ಪತ್ಯಗಳ ವಾಚಿಕಾಭಿನಯ: ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಸಂಜೆ 6ರಿಂದ

120ನೇ ವರ್ಷದ ಶ್ರೀರಾಮೋತ್ಸವ: ದಾಸವಾಣಿ: ಮೈಸೂರು ರಾಮಚಂದ್ರಾಚಾರ್ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.30

26ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಶ್ರೀಕಾಂತಂ ನಾಗದೀಪ್ತಿ, ಶ್ರೀಕಾಂತಂ ನಾಗಪ್ರಣತಿ ಮತ್ತು ತಂಡ, ಆಯೋಜನೆ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನ, ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಫೌಂಡೇಷನ್, ಸ್ಥಳ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನ, ಎಂಟನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

'ರಾಜಾಧಿರಾಜ್ ಯಾತ್ರಾ' ಭಕ್ತಿ ನಾಟಕ ಪ್ರದರ್ಶನ: ಪ್ರಸ್ತುತಿ: ಕಲಾ ನೇಷನ್ ತಂಡ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಖಾಸಗಿ ಜಾಗದಲ್ಲಿನ ಜಾಹೀರಾತಿಗೂ ಶುಲ್ಕ

ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿಗೆ ವಿಧಾನ ಪರಿಷತ್ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ, ಖಾಸಗಿ ಜಾಗಗಳಲ್ಲಿ ಜಾಹೀರಾತು ಪ್ರದರ್ಶಿಸುವ ಕಂಪನಿಗಳಿಂದ ಶುಲ್ಕ ವಸೂಲಿಗೆ ಹಾಗೂ ಅನಧಿಕೃತವಾಗಿ ಜಾಹೀರಾತು ಫಲಕ ಹಾಕಿದವರಿಗೆ ದಂಡ ವಿಧಿಸಲು ಅವಕಾಶ ಕಲ್ಪಿಸುವ ಮಸೂದೆಗೆ ವಿಧಾನ ಪರಿಷತ್ ಬುಧವಾರ ಒಪ್ಪಿಗೆ ನೀಡಿತು.

ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ ಮಂಡಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, 'ಬೆಂಗಳೂರು ಬಿಟ್ಟು, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಾಹೀರಾತು ಕಂಪನಿಗಳಿಂದ ಶುಲ್ಕ ವಸೂಲಿ ಮಾಡಲು ಮಸೂದೆ ಅವಕಾಶ ಕಲ್ಪಿಸುತ್ತದೆ. ಖಾಸಗಿ ಜಾಗದ ಮಾಲೀಕರಿಂದ ಶುಲ್ಕ ವಸೂಲಿ ಮಾಡುವುದಿಲ್ಲ' ಎಂದರು.

ವಿಧಾನಮಂಡಲ ಅಧಿವೇಶನ

ಅನಧಿಕೃತವಾಗಿ ಜಾಹೀರಾತು ಫಲಕಗಳನ್ನು ಹಾಕಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಇವುಗಳನ್ನು ಪತ್ತೆಹಚ್ಚಲು ಡ್ರೋನ್ ಮೂಲಕ ಸರ್ವೆ ಮಾಡಲಾಗುವುದು ಎಂದು ತಿಳಿಸಿದರು.

'ಸ್ಥಳೀಯ ಸಂಸ್ಥೆಗಳು ಗುರುತಿಸಿರುವ ಜಾಗದಲ್ಲಿ ಮಾತ್ರ ಜಾಹೀರಾತು ಪ್ರದರ್ಶಿಸಲು ಅವಕಾಶ ಇದೆ. ಶುಲ್ಕ ಕಟ್ಟದೆ ಇದ್ದರೆ ಜಾಹೀರಾತು ಫಲಕಗಳನ್ನು ನೆಲಸಮಗೊಳಿಸಲಾಗುವುದು. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಎಷ್ಟು ಜಾಹೀರಾತು ಫಲಕಗಳು ಇವೆ, ಇವುಗಳಲ್ಲಿ ಅಧಿಕೃತ ಯಾವುದು? ಅನಧಿಕೃತ ಯಾವುದು ಎಂದು ತಿಳಿಯಲು ಆಡಿಟ್ ಮಾಡಿಸುತ್ತೇವೆ' ಎಂದರು.

ಮಸೂದೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಬಿಜೆಪಿಯ ಸಿ.ಟಿ. ರವಿ, ಡಿ.ಎಸ್.ಅರುಣ್, ಭಾರತಿ ಶೆಟ್ಟಿ, ಜೆಡಿಎಸ್‌ನ ಎಸ್.ಎಲ್.ಭೋಜೆಗೌಡ ಅವರು ಖಾಸಗಿ ಜಾಗದಲ್ಲಿ ಜಾಹೀರಾತು ಪ್ರದರ್ಶಿಸಲು ಶುಲ್ಕ ಹಾಕುವುದನ್ನು ವಿರೋಧಿಸಿದರು.

ಕಾಂಗ್ರೆಸ್‌ನ ರಮೇಶ್‌ಬಾಬು, ನಾಗರಾಜ್ ಯಾದವ್, ಕೆ.ಶಿವಕುಮಾರ್, ಐವನ್ ಡಿಸೋಜಾ, ವಸಂತಕುಮಾರ್ ಅವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಪೊಲೀಸ್ ಮಂಡಳಿ ಮೂಲಕವೇ ವರ್ಗಾವಣೆ

ದುರ್ನಡತೆ, ನಿರ್ಲಕ್ಷ್ಯ, ಕರ್ತವ್ಯಲೋಪ ಪ್ರಕರಣಗಳಲ್ಲಿ ಭಾಗಿಯಾದ ಅಧಿಕಾರಿಗಳನ್ನು ಸರ್ಕಾರದ ಬದಲು ಪೊಲೀಸ್ ಸಿಬ್ಬಂದಿ ಮಂಡಳಿ ಮೂಲಕವೇ ವರ್ಗಾವಣೆ ಮಾಡಲು ಅವಕಾಶ ನೀಡುವ ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆಗೆ ವಿಧಾನ ಪರಿಷತ್ ಬುಧವಾರ ಅನುಮೋದನೆ ನೀಡಿತು.

ತಿದ್ದುಪಡಿ ಮಸೂದೆ ಮಂಡಿಸಿದ ಗೃಹ ಸಚಿವ ಜಿ.ಪರಮೇಶ್ವರ, 'ಸರ್ಕಲ್ ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್, ಡಿವೈಎಸ್‌ಪಿ ಹಂತದವರೆಗಿನ ಅಧಿಕಾರಿಗಳಿಗೆ ಮಾತ್ರ ಇದು ಅನ್ವಯವಾಗಲಿದೆ. ಸರ್ಕಾರದ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುವುದು ವಿಳಂಬವಾಗುತ್ತಿತ್ತು. ಮಂಡಳಿಗೆ ಅಧಿಕಾರ ನೀಡುವುದರಿಂದ ತ್ವರಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿದೆ' ಎಂದು ತಿಳಿಸಿದರು. ಕಾರ್ಯನಿರ್ವಾಹಕೇತರ ಹುದ್ದೆಗೆ ವರ್ಗಾವಣೆ ಮಾಡುವ ಕೆಲಸವನ್ನಷ್ಟೇ ಮಂಡಳಿಯು ಮಾಡಲಿದೆ. ಆರೋಪಗಳ ಬಗ್ಗೆ ತನಿಖೆ ನಡೆಸಿ ಶಿಸ್ತುಕ್ರಮಕೈಗೊಳ್ಳುವ ಅಧಿಕಾರ ಸರ್ಕಾರದ ಬಳಿಯೇ ಇರಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

'ಸಾವಿರಕ್ಕಿಂತ ಹೆಚ್ಚು ಸಿಲಿಂಡರ್ ನೀಡಲಾಗದು'

ಬೆಂಗಳೂರು: ಈಗಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಹೋಟೆಲ್, ರೆಸ್ಟೋರೆಂಟ್‌ಗಳಿಗೆ ನಿತ್ಯ ಒಂದು ಸಾವಿರಕ್ಕಿಂತ ಹೆಚ್ಚು ಸಿಲಿಂಡರ್‌ಗಳನ್ನು ಪೂರೈಸಲು ಸಾಧ್ಯವಿಲ್ಲ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಐವನ್ ಡಿಸೋಜ ಅವರು ಬುಧವಾರ ಈ ಬಗ್ಗೆ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಮುನಿಯಪ್ಪ, 'ಪ್ರತಿದಿನ ವಾಣಿಜ್ಯ ಬಳಕೆಯ 44 ಸಾವಿರ ಸಿಲಿಂಡರ್‌ಗಳಿಗೆ ಬೇಡಿಕೆ ಇದೆ. ಆದರೆ, 9 ಸಾವಿರ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತಿದೆ. ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್, ಆಸ್ಪತ್ರೆ ಇತ್ಯಾದಿಗಳಿಗೆ ಮೊದಲ ಆದ್ಯತೆ ನೀಡುತ್ತೇವೆ. ರೈಲು ನಿಲ್ದಾಣ, ಬಸ್ ನಿಲ್ದಾಣ, ಇಂದಿರಾ ಕ್ಯಾಂಟಿನ್‌ಗೆ ಎರಡನೇ ಆದ್ಯತೆ ನೀಡುತ್ತೇವೆ' ಎಂದರು.

ಹೋಟೆಲ್ ಅಸೋಸಿಯೇಷನ್‌ಗಳ ಸಭೆಯನ್ನು ಇದೇ 23ರಂದು ಕರೆದು, ಪರಿಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು. ಕೇಂದ್ರ ಸರ್ಕಾರ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದು, ಒಂದು ವಾರದಲ್ಲಿ ಪರಿಸ್ಥಿತಿ ಸುಧಾರಿಸುವ ವಿಶ್ವಾಸವಿದೆ ಎಂದು ತಿಳಿಸಿದರು.

ಬೆಂಗಳೂರಿನ ಶಾಸಕರ ಭವನದಲ್ಲಿ ಇರುವ ಕ್ಯಾಂಟಿನ್‌ಗೆ ಒಟ್ಟು ಬೇಡಿಕೆಯ ಶೇ 50ರಷ್ಟು ಸಿಲಿಂಡರ್‌ಗಳನ್ನು ವಿಧಾನ ಮಂಡಲದ ಅಧಿವೇಶನ ಮುಗಿಯುವವರೆಗೂ ಪೂರೈಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

'ಶಾಸಕರ ಭವನದಲ್ಲಿ ಇಡ್ಲಿ, ವಡೆ ಸಿಗುತ್ತಿಲ್ಲ'

ಬುಧವಾರ ಕಲಾಪ ಆರಂಭವಾಗುತ್ತಿದಂತೆಯೇ ಕಾಂಗ್ರೆಸ್‌ನ ಐವನ್ ಡಿಸೋಜ ಅವರು, ಶಾಸಕರ ಭವನದ ಕ್ಯಾಂಟಿನ್‌ನಲ್ಲಿ ಇಡ್ಲಿ, ವಡೆ, ದೋಸೆ ಸಿಗುತ್ತಿಲ್ಲ. ಶೇ 50ರಷ್ಟು ಹೋಟೆಲ್‌ಗಳು ಬಂದ್ ಆಗಿವೆ. ಇರುವ ಹೋಟೆಲ್‌ಗಳಲ್ಲಿ ದರ ಜಾಸ್ತಿಯಾಗಿದೆ. ಪರಿಸ್ಥಿತಿ ಯಾವಾಗ ಸುಧಾರಣೆಯಾಗುತ್ತದೆ ಎಂದು ಪ್ರಶ್ನಿಸಿದರು.

'ಡಿಸೋಜ ಅವರು ಹಸಿದು ಬಂದಿದ್ದಾರೆ. ಅವರಿಗೆ ಇಡ್ಲಿ, ವಡೆ ತರಿಸಿಕೊಡಿ. ಒಂದು ವೇಳೆ ಅವರೇ ಮಾಡಿಕೊಳ್ಳುವುದಾದರೆ ಸಿಲಿಂಡರ್ ಕೊಡಿಸಿ' ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸಲಹೆ ಮಾಡಿದರು. ಸಿ.ಟಿ. ರವಿ ಕೂಡ ಇದಕ್ಕೆ ಧ್ವನಿಗೂಡಿಸಿದರು.

ಡಿಸೋಜಗೆ 'ಗ್ಯಾಸ್‌ಟ್ರಬಲ್' ಇದೆ. ಜೀರಿಗೆ, ಮೆಂತ್ಯನೀರು ಕುಡಿದರೆ ಸರಿ ಹೋಗುತ್ತದೆ ಎಂದು ಜೆಡಿಎಸ್‌ನ ಎಸ್.ಎಲ್.ಬೋಜೆಗೌಡ ತಮಾಷೆ ಮಾಡಿದರು. 'ನಾನು ಅನುಮತಿ ಕೊಡುತ್ತೇನೆ, ಹೊರಗೆ ಹೋಗಿ ತಿಂದು ಬಾ' ಎಂದು ಡಿಸೋಜ ಅವರಿಗೆ ಹೇಳುವ ಮೂಲಕ ಸಭಾಪತಿ ಬಸವರಾಜ ಹೊರಟ್ಟಿ ಅವರು ಚರ್ಚೆಗೆ ತೆರೆ ಎಳೆದರು.

ಮರ್ಯಾದೆಗೇಡು ಹತ್ಯೆ ನಿಷೇಧ ಮಸೂದೆ ಮಂಡನೆ

ಬೆಂಗಳೂರು: ಜಾತಿ ಮೀರಿ ಪ್ರೀತಿಸುವ, ಮದುವೆಯಾದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವ ಹಾಗೂ ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶದ 'ಇವ ನಮ್ಮವ, ಇವ ನಮ್ಮವ' ಮಸೂದೆಯನ್ನು ಬುಧವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 'ಮರ್ಯಾದೆಗೇಡು ಹತ್ಯೆ' ಹೆಸರಿನಲ್ಲಿ ನಡೆದ ಕೊಲೆ, ದೌರ್ಜನ್ಯಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಇಂತಹ ಕೃತ್ಯಗಳ ತಡೆಗೆ ಕಠಿಣ ಕಾನೂನು ತರಬೇಕೆಂದು ನಾಗರಿಕರು, ವಿವಿಧ ಸಂಸ್ಥೆಗಳು ಸರ್ಕಾರದ ಮೇಲೆ ಒತ್ತಡ ಹೇರಿದ್ದವು.

ಕಾಯ್ದೆ ರೂಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದ ಭರವಸೆಯಂತೆ 'ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ–2026' ಸಿದ್ಧಪಡಿಸಲಾಗಿದ್ದು, ಈಚೆಗೆ ಸಂಪುಟ ಸಭೆಯಲ್ಲೂ ಅನುಮೋದನೆ ಪಡೆಯಲಾಗಿತ್ತು.

ಮಸೂದೆಯು ಅಂತರ್ಜಾತಿ ವಿವಾಹಗಳನ್ನು ಮಾನ್ಯಮಾಡುವುದು, ಅಂತಹ ಮದುವೆಯಾದವರಿಗೆ ತಾರತಮ್ಯ ಮಾಡುವುದರ ವಿರುದ್ಧ ರಕ್ಷಣೆ ಒದಗಿಸುವುದು, ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿ ದೌರ್ಜನ್ಯ ಎಸಗುವ, ಹತ್ಯೆ ಮಾಡುವ ಕೃತ್ಯಗಳನ್ನು ತಡೆಯುವುದು, ಮೇಲ್ವಿಚಾರಣಾ ಸಮಿತಿಗಳನ್ನು ರಚಿಸುವುದು, ಪ್ರತಿ ಜಿಲ್ಲೆಯಲ್ಲೂ 'ಇವ ನಮ್ಮವ' ವೇದಿಕೆಗಳನ್ನು ರಚಿಸುವುದು, ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸುವುದು, ಅಪರಾಧಿಗಳಿಗೆ ಐದು ವರ್ಷಗಳಿಗೆ ಕಡಿಮೆ ಇಲ್ಲದಂತಹ ಕಠಿಣ ಶಿಕ್ಷೆ ವಿಧಿಸಲು ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಪ್ರಾದೇಶಿಕ ಅಸಮತೋಲನಾ ನಿವಾರಣಾ ಆಯೋಗ ಸಲ್ಲಿಸಿದ ವರದಿ ಹಾಗೂ ಕರ್ನಾಟಕ ವೃತ್ತಿಗಳ, ಕಸುಬುಗಳ, ಅಜೀವಿಕೆಗಳ ಮತ್ತು ಉದ್ಯೋಗ ಮೇಲಣ ತೆರಿಗೆ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು.

ಗಾತ್ರ ಹೆಚ್ಚಾದರೂ ಉತ್ತರಕ್ಕಿಲ್ಲ ಅಭಿವೃದ್ಧಿ: ಅರವಿಂದ ಬೆಲ್ಲದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2026–27ನೇ ಸಾಲಿನ ಬಜೆಟ್‌ನ ಗಾತ್ರ ಹೆಚ್ಚಾದರೂ ಉತ್ತರ ಕರ್ನಾಟಕದ ಅಭಿವೃದ್ಧಿಯ ಯೋಜನೆಗಳೇ ಕಾಣುತ್ತಿಲ್ಲ. ಭರವಸೆ ಮಾತುಗಳಿಂದ ಜನರನ್ನು ಮೋಸಗೊಳಿಸುವ ಬದಲು, ನೈಜ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಒತ್ತಾಯಿಸಿದರು.



ಅರವಿಂದ ಬೆಲ್ಲದ

ವಿಧಾನಸಭಾ ಕಲಾಪದಲ್ಲಿ ನಡೆದ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಪ್ರಾದೇಶಿಕ ಅಸಮತೋಲನಾ ನಿವಾರಣಾ ಆಯೋಗ ಸಲ್ಲಿಸಿದ ವರದಿಯಲ್ಲಿ ಅತಿ ಹಿಂದುಳಿದ ಎಲ್ಲ ತಾಲ್ಲೂಕುಗಳೂ ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದಲ್ಲೇ ಇವೆ. ಬಜೆಟ್ ಮೂಲಕ ಅಸಮತೋಲನ ನಿವಾರಣೆಗೆ ಕ್ರಮ ಕೈಗೊಂಡಿಲ್ಲ. ಘೋಷಿಸಿದ ಎಲ್ಲ ಹೊಸ ಯೋಜನೆಗಳು ದಕ್ಷಿಣ ಭಾಗದ ಪಾಲಾಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

'₹4.48 ಲಕ್ಷ ಕೋಟಿ ಬಜೆಟ್‌ನಲ್ಲಿ ಬದ್ಧವೆಚ್ಚ, ಸಾಲದ ಅಸಲು, ಬಡ್ಡಿ ಕಳೆದರೆ ಅಭಿವೃದ್ಧಿಗೆ ಕೇವಲ ₹73 ಸಾವಿರ ಕೋಟಿ ಸಿಗುತ್ತದೆ. ವಸತಿ, ಶಿಕ್ಷಣ, ಕೃಷಿ, ನೀರಾವರಿ, ಕೈಗಾರಿಕೆ, ಆರೋಗ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಅಂಕಿಅಂಶ ಬಿಟ್ಟರೆ ಅಭಿವೃದ್ಧಿಯ ದಾರಿಯೇ ಕಾಣುವುದಿಲ್ಲ.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ 7.03 ಲಕ್ಷ ಮನೆಗಳ ಗುರಿ ಇದ್ದರೂ, 3.13 ಲಕ್ಷ ಮನೆಗಳಷ್ಟೇ ಮಂಜೂರಾಗಿವೆ. ಕೇವಲ 9,757 ಮನೆಗಳು ನಿರ್ಮಾಣವಾಗಿವೆ. 4.19 ಲಕ್ಷ ಮನೆಗಳಿಗೆ ₹13,500 ಕೋಟಿ ಅಗತ್ಯವಿದ್ದರೂ, ಬಜೆಟ್‌ನಲ್ಲಿ ಅಗತ್ಯ ಅನುದಾನ ಮೀಸಲಿಟ್ಟಿಲ್ಲ' ಎಂದರು. ಕಳೆದ ಬಜೆಟ್‌ನಲ್ಲಿ 500 ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಘೋಷಣೆ ಮಾಡಿದ್ದರೂ ಒಂದು ಶಾಲೆಯೂ ಆರಂಭವಾಗಿಲ್ಲ. ಮತ್ತೆ ಈ ಬಜೆಟ್‌ನಲ್ಲೂ ಅದೇ ಘೋಷಣೆ ಇದೆ. ಅಡಿಕೆ ಬೆಳೆ ರೋಗಕ್ಕೆ ₹500 ಕೋಟಿ ವಿಶೇಷ ಪ್ಯಾಕೇಜ್ ಅಗತ್ಯವಿದ್ದರೂ ₹10 ಕೋಟಿ ಮೀಸಲಿಡಲಾಗಿದೆ. ಕೃಷ್ಣಾ ಮೇಲ್ದಂಡೆ, ಮಹದಾಯಿ ಹಾಗೂ ಮೇಕೆದಾಟು ಯೋಜನೆಗಳಿಗೆ ಅನುದಾನ ನೀಡಿಲ್ಲ ಎಂದು ದೂರಿದರು.

ರಾಘವೇಂದ್ರ ಬೀಜಾಡಿಗೆ ಪ್ರಶಸ್ತಿ'



ಬೆಂಗಳೂರು: ಗಾಯನ ಗಂಗಾ ಟ್ರಸ್ಟ್ ನೀಡುವ 'ಗಾಯನಗಂಗಾ ವಾರ್ಷಿಕ ಪ್ರಶಸ್ತಿ'ಗೆ ಸ್ವರ ಸಂಯೋಜಕ ರಾಘವೇಂದ್ರ ಬೀಜಾಡಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹10 ಸಾವಿರ ನಗದು ಒಳಗೊಂಡಿದೆ. ಸುಗಮ ಸಂಗೀತ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತಿದೆ.

ಇದೇ 22ರ ಸಂಜೆ 5.30ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಹಮ್ಮಿಕೊಂಡಿರುವ 'ಹಾಡು ಕೋಗಿಲೆ ಗೀತೋತ್ಸವ' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್‌ನ ಅಧ್ಯಕ್ಷ ಆನಂದ ಮಾದಲಗೆರೆ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಚಂದ್ರಬೋಸ್, ಗುರುಕಿರಣ್‌ಗೆ ಪ್ರಶಸ್ತಿ

ಬೆಂಗಳೂರು: ತೆಲುಗು ವಿಜ್ಞಾನ ಸಮಿತಿ ನೀಡುವ 'ಶ್ರೀಕೃಷ್ಣ ದೇವರಾಯ ಪ್ರಶಸ್ತಿ'ಗೆ ಚಲನಚಿತ್ರ ಗೀತೆಗಳ ರಚನೆಕಾರ ಚಂದ್ರ ಬೋಸ್, ಸಂಗೀತ ನಿರ್ದೇಶಕ ಗುರುಕಿರಣ್ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ₹25 ಸಾವಿರ ನಗದು, ನೆನಪಿನ ಕಾಣಿಕೆ ಒಳಗೊಂಡಿದೆ.

ಮಾರ್ಚ್ 21ರಂದು ತೆಲುಗು ವಿಜ್ಞಾನ ಸಮಿತಿಯಲ್ಲಿ ನಡೆಯುವ ಯುಗಾದಿ ಉತ್ಸವ ಸಮಾರಂಭದಲ್ಲಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹಾಗೂ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ಮಾಜಿ ಸಭಾಪತಿ ರಮೇಶ್ ಕುಮಾರ್, ಸಮಿತಿಯ ಅಧ್ಯಕ್ಷ ಎ.ರಾಧಾಕೃಷ್ಣರಾಜು ಭಾಗವಹಿಸಲಿದ್ದಾರೆ ಎಂದು ತೆಲುಗು ವಿಜ್ಞಾನ ಸಮಿತಿಯ ಪ್ರಧಾನ ಕಾರ್ಯದರ್ಶಿ ಇಡಮಕಂಟಿ ಲಕ್ಷ್ಮಿರೆಡ್ಡಿ ತಿಳಿಸಿದ್ದಾರೆ.

ಜಲಮಂಡಳಿ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವಿವಿಧ ಉಪ ವಿಭಾಗಗಳಲ್ಲಿ ನೀರಿನ ಅದಾಲತ್ ಅನ್ನು ಮಾರ್ಚ್ 20ರಂದು ಬೆಳಿಗ್ಗೆ 9.30ರಿಂದ 11ರ ವರೆಗೆ ಹಮ್ಮಿಕೊಳ್ಳಲಾಗಿದೆ.

ವಾಯವ್ಯ-2 ಉಪವಿಭಾಗದ ಅದಾಲತ್ ಪೀಣ್ಯ 2ನೇ ಹಂತ, ವಾಯುವ್ಯ-4 ಅದಾಲತ್ ಸುಂಕದಕಟ್ಟೆ, ಕೇಂದ್ರ 1-2ರ ಅದಾಲತ್ ಫ್ರೇಜರ್‌ಟೌನ್, ಈಶಾನ್ಯ 2ರ ಅದಾಲತ್ ಸದಾಶಿವನಗರ, ಉತ್ತರ 1-2ರ ಅದಾಲತ್ ಆರ್‌ಟಿ ನಗರ, ಉತ್ತರ 2-2 ವಿದ್ಯಾರಣ್ಯಪುರ, ದಕ್ಷಿಣ 1-2 ಕೋಡಿಚಿಕ್ಕನಹಳ್ಳಿ, ದಕ್ಷಿಣ 2-2 ಬೇಗೂರು, ನೈರುತ್ಯ-2 ವಿ.ವಿ ಪುರ, ನೈರುತ್ಯ-5 ಬನಶಂಕರಿ ಮೂರನೇ ಹಂತ, ಪೂರ್ವ 1-3 ಕಾಡುಗೋಡಿ, ಪೂರ್ವ 2-3ರ ಉಪವಿಭಾಗದ ಅದಾಲತ್ ಕಲ್ಕೆರೆಯಲ್ಲಿ ನಡೆಯಲಿದೆ.

ಟಿಕೆಟ್ ರಹಿತ ಪ್ರಯಾಣ: 2,317 ಮಂದಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಡಿಸೆಂಬರ್ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 2,317 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಡಿಸೆಂಬರ್‌ನಲ್ಲಿ 16,397 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದವರನ್ನು ಪತ್ತೆ ಹಚ್ಚಿ ಅವರಿಂದ ₹ 5,08,910 ದಂಡ ವಸೂಲಿ ಮಾಡಲಾಯಿತು. ಕರ್ತವ್ಯ ಲೋಪವೆಸಗಿದ ಕಾರಣಕ್ಕಾಗಿ ಸಂಸ್ಥೆಯ 1,445 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 229 ಪುರುಷ ಪ್ರಯಾಣಿಕರಿಗೆ ₹ 22,900 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.



ಬೆಂಗಳೂರು ನಗರ ವಿಶ್ವವಿದ್ಯಾಲಯ ಆಯೋಜಿಸಿದ್ದ ಮಹಿಳಾ ದಿನಾಚರಣೆಯಲ್ಲಿ ಮಮತಾ ಸಾಗರ, ಉಮಾಶ್ರೀ, ಶುಭ ಅಯ್ಯಂಗಾರ್ ಅವರನ್ನು ಸನ್ಮಾನಿಸಲಾಯಿತು.

'ಸ್ತ್ರೀ ಸಮಾನತೆಯಿಂದ ಅಭಿವೃದ್ಧಿ'

ಬೆಂಗಳೂರು: 'ಸ್ತ್ರೀ ಸಮಾನತೆಯ ಗುರಿ ಸಾಧನೆ ಮೂಲಕ ಸಮಾಜದ ಸರ್ವತೋಮುಖ ಅಭಿವೃದ್ಧಿ ಸಾಧ್ಯ' ಎಂದು ವಿಜ್ಞಾನಿ ಶುಭ ವಿ.ಅಯ್ಯಂಗಾರ್ ಹೇಳಿದರು.

ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

'ಬಾಹ್ಯಾಕಾಶ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ದೇಶೀಯ ತಂತ್ರಜ್ಞಾನ ಅಳವಡಿಕೆಯ ಪ್ರಯತ್ನದ ಭಾಗವಾಗಿ ವಿಮಾನಗಳ ಆರೋಹಣ ಮತ್ತು ಅವರೋಹಣದ ನಿಯಂತ್ರಣಕ್ಕಾಗಿ 'ದೃಷ್ಟಿ' ಯೋಜನೆಯನ್ನು ನಾನು ರೂಪಿಸಿದೆ. ಸೆಂಟ್ರಲ್ ಕಾಲೇಜಿನಲ್ಲಿ ಎಂಎಸ್ಸಿ ವ್ಯಾಸಂಗ ಮಾಡುವಾಗ ಆಗಿನ ಕುಲಪತಿ ಎಚ್. ನರಸಿಂಹಯ್ಯ ಅವರು ಉತ್ತೇಜನ ಮತ್ತು ನೈತಿಕ ಬೆಂಬಲ ನೀಡಿದ್ದರಿಂದ ಸಾಧನೆ ಸಾಧ್ಯವಾಯಿತು' ಎಂದರು.

ಲೇಖಕಿ ಮಮತಾ ಸಾಗರ್ ಮಾತನಾಡಿ, 'ಲಿಂಗ ತಾರತಮ್ಯ ನಿವಾರಣೆಗೆ ಗಮನ ಹರಿಸಬೇಕು, ಇದರಿಂದ ಮಾತ್ರ ಸಾಮಾಜಿಕ ಸಮಾನತೆಯ ಗುರಿ ತಲುಪಲು ಸಾಧ್ಯ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಮಾತನಾಡಿ, 'ಮಹಿಳೆಯರನ್ನು ಗೌರವಿಸುವ, ರಕ್ಷಿಸುವ ಮಾನವೀಯ ಅಂತಃಕರಣವನ್ನು ಯುವ ಸಮೂಹ ರೂಢಿಸಿಕೊಳ್ಳಬೇಕು ' ಎಂದು ಸಲಹೆ ನೀಡಿದರು. ಕುಲಪತಿ ಬಿ.ರಮೇಶ್ ಅಧ್ಯಕ್ಷತೆ ವಹಿಸಿದ್ದರು.

ಕುಲಸಚಿವರಾದ ಎ.ನವೀನ್ ಜೋಸೆಫ್, ರಮೇಶ ಬಿ. ಕುಡೇನಟ್ಟಿ, ಹಣಕಾಸು ಅಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕಿ ಮೇಧಾ ಇಟಗಿ ಹುಯಿಲಗೋಳ, ಕನ್ನಡ ಉಪನ್ಯಾಸಕಿ ಹಾಜಿರಾ ಬಾನು ಉಪಸ್ಥಿತರಿದ್ದರು.

'ಅಂಬೇಡ್ಕರ್ ಸ್ಮೃತಿಸಂಚಯ' ವಿಚಾರ ಸಂಕಿರಣದಲ್ಲಿ ಎಚ್.ಟಿ. ಪೋತೆ

'ಅಂಬೇಡ್ಕರ್‌ರನ್ನು ಕೆಟ್ಟದಾಗಿ ನಡೆಸಿಕೊಂಡಿದ್ದ ದೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಸ್ಪೃಶ್ಯ, ದೇಶದ್ರೋಹಿ, ಇಂಗ್ಲಿಷರ ಕೈಗೊಂಬೆ ಎಂದೆಲ್ಲ ಅಪಮಾನಿಸಿ, ಅಂಬೇಡ್ಕರ್ ಅವರನ್ನು ಈ ದೇಶವು ಕೆಟ್ಟದಾಗಿ ನಡೆಸಿಕೊಂಡಿತ್ತು. ಅಂಬೇಡ್ಕರ್ ದೇಶಕ್ಕೆ ಒಳ್ಳೆಯದನ್ನೇ ಮಾಡಿದ್ದರು' ಎಂದು ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಎಚ್.ಟಿ.ಪೋತೆ ತಿಳಿಸಿದರು.

ಸಂಸ್ಕೃತ ವಿಶ್ವವಿದ್ಯಾಲಯ, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ, ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಬುಧವಾರ ಆಯೋಜಿಸಿದ್ದ 'ಅಂಬೇಡ್ಕರ್ ಸ್ಮೃತಿ ಸಂಚಯ' ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಓದಲು ಎಲ್ಲರೊಂದಿಗೆ ಕುಳಿತುಕೊಳ್ಳಲು ಬಿಡದೆ, ಎಲ್ಲರಂತೆ ನೀರು ಕುಡಿಯಲು ಬಿಡದೇ ಈ ಸಮಾಜ ಅವಮಾನಿಸಿತ್ತು. ಮೌಂಟ್ ಬ್ಯಾಟನ್ ಮತ್ತು ಅಂಬೇಡ್ಕರ್ ದೇವಸ್ಥಾನಕ್ಕೆ ಹೋದರೆ ಮೌಂಟ್ ಬ್ಯಾಟನ್‌ಗೆ ಪ್ರವೇಶ ನೀಡಿದರೂ ಅಂಬೇಡ್ಕರ್ ಅವರನ್ನು ಒಳಗೆ ಬಿಟ್ಟಿರಲಿಲ್ಲ. ಸೈಮನ್ ಕಮಿಷನ್ ಮುಂದೆ ಅಂಬೇಡ್ಕರ್ ಭಾಗವಹಿಸಿದಕ್ಕಾಗಿ ದೇಶದ್ರೋಹಿ ಎಂದು ನಿಂದನೆ ಮಾಡಲಾಗಿತ್ತು. ಅಂಬೇಡ್ಕರ್ ಸಂವಿಧಾನ ಬರೆದಿಲ್ಲ ಎಂದು ಈಗಲೂ ಅವಮಾನ ಮಾಡುವುದನ್ನು ಒಂದು ವರ್ಗ, ಒಂದು ವಲಯ ಮುಂದುವರಿಸಿದೆ' ಎಂದು ಬೇಸರ ವ್ಯಕ್ತಪಡಿಸಿದರು.



'ಅಂಬೇಡ್ಕರ್ ಸ್ಮೃತಿ ಸಂಚಯ' ವಿಚಾರ ಸಂಕಿರಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ವಿ. ಗಿರೀಶ್‌ಚಂದ್ರ, ಸಬೀರ್ ಅಹ್ಮದ್ ಮುಲ್ಲಾ, ಎಸ್ ಅಹಲ್ಯಾ, ಎಚ್.ಟಿ. ಪೋತೆ, ಮಲ್ಲೇಪುರಂ ಜಿ. ವೆಂಕಟೇಶ್, ಗೋವಿಂದ ಬಿ. ಪುಷ್ಪ ನಮನ ಸಲ್ಲಿಸಿದರು

ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್ ಆಶಯ ನುಡಿಗಳನ್ನಾಡಿ, 'ಅಂಬೇಡ್ಕರ್‌ರ ಜೀವಿತ ಕಾಲದಲ್ಲಿ ಬರೀ ಹೆಸರಾಗಿತ್ತು. ಅವರ ಚಿಂತನೆಗಳಿಗೆ ಮಾನ್ಯತೆ ಸಿಕ್ಕಿರಲಿಲ್ಲ. ಆ ನಂತರ 60ರ ದಶಕದ ಹೊತ್ತಿಗೆ ಕತ್ತಲಿನ ಗರ್ಭದಿಂದ ಅವರ ಚಿಂತನೆಗಳು ಹೊರಬಂದವು. ಈಗ ಅವರು ಆದರ್ಶಪ್ರಾಯ ಪ್ರತಿಮೆಯಾಗಿದ್ದಾರೆ' ಎಂದು ಹೇಳಿದರು.

ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ ಎಸ್. ಅಧ್ಯಕ್ಷತೆ ವಹಿಸಿದ್ದರು. ಡಾ. ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಸಬೀರ ಅಹ್ಮದ ಮುಲ್ಲಾ, ಕುಲಸಚಿವ ವಿ. ಗಿರೀಶ್‌ಚಂದ್ರ, ಸಂಯೋಜನಾಧಿಕಾರಿ ಗೋವಿಂದ ಜಿ. ಉಪಸ್ಥಿತರಿದ್ದರು.

ಸಿಲಿಂಡರ್ ಅಭಾವ: ಎಎಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಹಾಗೂ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಅಭಾವ ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಆಮ್ ಆದ್ಮಿ ಪಕ್ಷ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ಪಕ್ಷದ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿ ಅವರ ಅಮೆರಿಕ ಗುಲಾಮಗಿರಿ ವಿದೇಶಾಂಗ ನೀತಿಯಿಂದಾಗಿ ದೇಶದ ಕೋಟ್ಯಂತರ ಜನರು ನಿರುದ್ಯೋಗಿಗಳಾಗುತ್ತಿದ್ದಾರೆ ಎಂದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಸತೀಶ್ ಕುಮಾರ್ , ರಾಜ್ಯ ಪ್ರಚಾರ ಸಮಿತಿಯ ಉಪಾಧ್ಯಕ್ಷ ಲಕ್ಷ್ಮೀಕಾಂತ ರಾವ್, ಉಪಾಧ್ಯಕ್ಷ ರುದ್ರಯ್ಯ ನವಲಿ ಮಠ, ಜಗದೀಶ್ ವಿ. ಸದಂ, ಲೋಹಿತ್ ಕುಮಾರ್ , ಉಷಾ ಮೋಹನ್, ಪುಷ್ಪ ಕೇಶವ್, ರವಿಕುಮಾರ್ ಇದ್ದರು.



ಎಲ್‌ಪಿಜಿ ಸಿಲಿಂಡರ್ ಅಭಾವ ವಿರೋಧಿಸಿ ಎಎಪಿ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಧರ್ಮಸ್ಥಳ: ವರದಿ ಸಲ್ಲಿಕೆಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದಲ್ಲಿ 1990ರಿಂದ 2021ರ ನಡುವೆ ಸಂಭವಿಸಿವೆ ಎನ್ನಲಾದ 74 ಅಸಹಜ ಸಾವಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಏನು ಕ್ರಮ ಜರುಗಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಧರ್ಮಸ್ಥಳದಲ್ಲಿ 2012ರಲ್ಲಿ ಸಾವಿಗೀಡಾದ ಸೌಜನ್ಯ ತಾಯಿ ಕುಸುಮಾವತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಬಾಲಕಿ ಸೌಜನ್ಯ ಶವ 2002ರ ಮೇ 5ರಂದು ಸಿಕ್ಕಿತ್ತು. ಇದಕ್ಕೆ ಸಂಬಂಧಿಸಿದಂತೆ ಯುಡಿಆರ್ (ಅಸ್ವಾಭಾವಿಕ ಸಾವಿನ ವರದಿ) ದಾಖಲಿಸಿ, ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಶವ ಸಂಸ್ಕಾರ ನಡೆಸಿರುವುದು, ಲುಕ್ ಔಟ್ ನೋಟಿಸ್ ಜಾರಿ ಮಾಡಿರುವುದು, ಅಂತಿಮ ವರದಿ, ವೈದ್ಯರ ಅಭಿಪ್ರಾಯದ ಎಲ್ಲ ದಾಖಲೆಗಳಿವೆ' ಎಂದರು.



'ಅರ್ಜಿದಾರರು ಪ್ರಸ್ತಾಪಿಸಿರುವ ಪ್ರಕರಣಗಳು 2002ರಲ್ಲಿ ನಡೆದಿವೆ. 74 ಪ್ರಕರಣಗಳ ತನಿಖೆ ನಡೆಸಲಾಗಿದ್ದು, ಯುಡಿಆರ್ ದಾಖಲಿಸಲಾಗಿದೆ. ಸದ್ಯ ರಚಿಸಲಾಗಿರುವ ವಿಶೇಷ ತನಿಖಾ ದಳಕ್ಕೆ ಪ್ರಕರಣಗಳನ್ನು ವರ್ಗಾಯಿಸುವಂತಹದ್ದು ಏನೂ ಇಲ್ಲ' ಎಂದರು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಬಾಲನ್, 'ಅಸಹಜ ಸಾವನ್ನಪ್ಪಿದವರ ಪಟ್ಟಿಯನ್ನು ನ್ಯಾಯಾಲಯಕ್ಕೆ ಒದಗಿಸಲಾಗಿದೆ. ಪ್ರಕ್ರಿಯೆ ಪಾಲಿಸದೇ ಶವಗಳ ಸಂಸ್ಕಾರ ಮಾಡಲಾಗಿದೆ. ಅಸಹಜವಾಗಿ ಸಾವನ್ನಪ್ಪಿದವರ 74 ಪ್ರಕರಣಗಳಲ್ಲಿ ಪಂಚನಾಮೆ ಪ್ರಕ್ರಿಯೆ ನಡೆಸಿಲ್ಲ. ಮರಣೋತ್ತರ ಪರೀಕ್ಷೆ ಆಗಿಲ್ಲ. ಪೊಲೀಸರು ಶವಗಳ ಸಂಸ್ಕಾರಕ್ಕೆ ಪಂಚಾಯಿತಿಗೆ ಶಿಫಾರಸು ಮಾಡಿದ್ದಾರೆ' ಎಂದರು.

'ಶವ ಸಂಸ್ಕಾರ ಮಾಡಿದ್ದಾರೆಯೇ, ಸುಟ್ಟಿದ್ದಾರೆಯೇ ಎಂಬುದರ ಮಾಹಿತಿ ಇಲ್ಲ. ಈ ಸಂಬಂಧ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಲಾಗಿದೆ. ಹಲವು ಪ್ರಕರಣಗಳಲ್ಲಿ ಮಹಿಳೆಯರು ಲಾಡ್ಜ್‌ನಲ್ಲಿ ಉಳಿದುಕೊಂಡು ನಾಪತ್ತೆ ಯಾಗಿದ್ದಾರೆ. ಈ ಶವಗಳ ಸಂಸ್ಕಾರ ನಡೆಸಲಾಗಿದೆ. ಆದರೆ, ಯಾವುದೇ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಿಲ್ಲ. 74 ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಬೇಕು ಎಂಬುದೇ ಅರ್ಜಿದಾರರ ಕೋರಿಕೆ' ಎಂದರು. ಕೆಲಕಾಲ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಈ ಹಂತದಲ್ಲಿ ಯಾವುದೇ ದಾಖಲೆ ಇಲ್ಲದೇ ಸರ್ಕಾರ ಹೇಗೆ ತನಿಖೆ ಮಾಡುತ್ತದೆ? ಕೆಲವು ದಾಖಲೆಗಳನ್ನು ನಾಶಪಡಿಸಲಾಗಿದೆ ಎಂದು ಸರ್ಕಾರ ಹೇಳುತ್ತಿದೆ' ಎಂಬ ಅಭಿಪ್ರಾಯವನ್ನು ಮುಂದು ಮಾಡಿತಲ್ಲದೆ, 74 ಪ್ರಕರಣಗಳಿಗೆ ಸಂಬಂಧಿಸಿದಂತೆ ನಡೆಸಿರುವ ತನಿಖಾ ವರದಿಯನ್ನು ಸಲ್ಲಿಸಬೇಕು ಎಂದು ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಜುಲೈ 7ಕ್ಕೆ ಮುಂದೂಡಿತು.

ಸಂಕ್ಷಿಪ್ತ ಸುದ್ದಿ

ಪ್ರಾಣಿತ್ಯಾಜ್ಯ ನಿರ್ವಹಣೆಗೆ ಎನ್‌ಜಿಒ

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆ, 'ವೇದನ್' ಎಂಬ ಸ್ವಯಂಸೇವಾ ಸಂಸ್ಥೆಯ ಸಹಯೋಗದೊಂದಿಗೆ ಪ್ರಾಣಿತ್ಯಾಜ್ಯ ನಿರ್ವಹಣೆಯನ್ನು ವ್ಯವಸ್ಥಿತಗೊಳಿಸಲು ವೈಜ್ಞಾನಿಕ ಮಾರ್ಗಸೂಚಿಯನ್ನು ಸಿದ್ಧಪಡಿಸಲಿದೆ ಎಂದು ಆಯುಕ್ತ ಕೆ. ಎನ್.ರಮೇಶ್ ಹೇಳಿದರು.

'ಮಾಂಸ ಮಾರಾಟಗಾರರಿಂದ ಆಗುತ್ತಿರುವ ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಹೋಗಲಾಡಿಸಿ, ಸುಸಜ್ಜಿತ ಮತ್ತು ಆರೋಗ್ಯಕರ ಸಂಗ್ರಹಣಾ ವ್ಯವಸ್ಥೆಯನ್ನು ರೂಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ' ಎಂದು ತಿಳಿಸಿದರು. ವೇದನ್ ಸಂಸ್ಥೆಯು ವಲಯದಾದ್ಯಂತ ಮಾಂಸ ಮತ್ತು ಪ್ರಾಣಿಜನ್ಯ ಉತ್ಪನ್ನಗಳ ಮಳಿಗೆಗಳಲ್ಲಿ ಸಮೀಕ್ಷೆ ನಡೆಸಿ, ತ್ಯಾಜ್ಯ ಉತ್ಪತ್ತಿಯಾಗುವ ಸ್ಥಳಗಳನ್ನು ನಕ್ಷೆ ಮಾಡಿದೆ. ಸಮೀಕ್ಷೆಯ ದತ್ತಾಂಶದ ಆಧಾರದ ಮೇಲೆ ಪ್ರತ್ಯೇಕ ಆಟೊ ಸಂಗ್ರಹಣಾ ಮಾರ್ಗಗಳನ್ನು ವಿನ್ಯಾಸಗೊಳಿಸಲಾಗಿದೆ. ಇದರಲ್ಲಿ ಪ್ರತಿ ಸ್ಥಳಕ್ಕೆ ತಲುಪುವ ನಿಖರ ಸಮಯ ಮತ್ತು ವಾಹನ ನಿಲ್ಲಿಸುವ ಅವಧಿಯನ್ನು ನಿಗದಿಪಡಿಸಲಾಗಿದೆ ಎಂದರು

ಒಂದೇ ದಿನ 80 ಬಸ್ ತಂಗುದಾಣ ಸ್ವಚ್ಛ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಮ್ಮಿಕೊಂಡಿರುವ, 'ವಿಶೇಷ ಸ್ವಚ್ಛತಾ ಅಭಿಯಾನ'ದಲ್ಲಿ ಒಂದೇ ದಿನ 80 ಬಸ್ ತಂಗುದಾಣಗಳನ್ನು ಸ್ವಚ್ಛಗೊಳಿಸಲಾಗಿದೆ ಎಂದು ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಶಾಂತಿನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ 11 ಬಸ್ ತಂಗುದಾಣ, ಸಿ.ವಿ. ರಾಮನ್ ನಗರ ಕ್ಷೇತ್ರದ ವ್ಯಾಪ್ತಿಯಲ್ಲಿ 24, ಗಾಂಧಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ 19, ಚಾಮರಾಜಪೇಟೆ ಕ್ಷೇತ್ರದ ವ್ಯಾಪ್ತಿಯಲ್ಲಿ 12, ಚಿಕ್ಕಪೇಟೆ ಕ್ಷೇತ್ರದ ವ್ಯಾಪ್ತಿಯಲ್ಲಿ ಎಂಟು, ಶಿವಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಏಳು ಬಸ್ ತಂಗುದಾಣಗಳನ್ನು ಶುಚಿಗೊಳಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದಿರುವ 'ಬೆಂಗಳೂರು ವಕೀಲರ ಸಂಘ'

ಕೋರ್ಟ್‌ಗಿಂತ ದೊಡ್ಡವರು ಕೋರ್ಟ್ ಆಫೀಸರ್‌ಗಳು..!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಹೈಕೋರ್ಟ್‌ನ ಕೋರ್ಟ್ ಆಫೀಸರ್‌ಗಳು ತಾವು ಕೋರ್ಟ್‌ಗಿಂತಲೂ ದೊಡ್ಡವರು ಎಂಬ ರೀತಿಯಲ್ಲಿ ವರ್ತಿಸುತ್ತಿದ್ದು ಮೆಮೊಗಳನ್ನು (ಜ್ಞಾಪನಾ ಪತ್ರ) ಪೋಸ್ಟ್ ಮಾಡುವ ವಿಚಾರದಲ್ಲಿ ಆಯಾ ನ್ಯಾಯಪೀಠಗಳಲ್ಲಿನ ನ್ಯಾಯಮೂರ್ತಿಗಳು ಕಾಲಕಾಲಕ್ಕೆ ನೀಡುವ ನಿರ್ದೇಶನಗಳನ್ನು ಪಾಲನೆ ಮಾಡುತ್ತಿಲ್ಲ. ಆದ್ದರಿಂದ, ಕೂಡಲೇ ಇಂತಹವರನ್ನು ಬದಲಾಯಿಸಬೇಕು' ಎಂದು 'ಬೆಂಗಳೂರು ವಕೀಲರ ಸಂಘ' (ಎಎಬಿ) ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರಿಗೆ ಮನವಿ ಮಾಡಿದೆ.

ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಉಪಾಧ್ಯಕ್ಷ ಸಿ.ಎಸ್. ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್ ಮುಖ್ಯ ನ್ಯಾಯಮೂರ್ತಿಯವರಿಗೆ ಮಂಗಳವಾರ ಎರಡು ಪುಟಗಳ ಪತ್ರ ಬರೆದು ಈ ಕುರಿತಂತೆ ಆಗ್ರಹಿಸಿದ್ದಾರೆ.

'ಪ್ರಕರಣಗಳನ್ನು ಪೋಸ್ಟ್ ಮಾಡಲು ಅಡ್ಡಿಯಾಗುತ್ತಿರುವ ಕೋರ್ಟ್ ಆಫೀಸರ್‌ಗಳು ವಕೀಲರನ್ನು ಸೌಜನ್ಯದಿಂದ ನಡೆಸಿಕೊಳ್ಳುವುದಿಲ್ಲ. ವಕೀಲರ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುವುದಿಲ್ಲ. ಒರಟುತನ ಪ್ರದರ್ಶಿಸುತ್ತಾ ವಕೀಲರ ಬಗ್ಗೆ ಅತ್ಯಂತ ನಿಕೃಷ್ಟವಾಗಿ ವರ್ತಿಸುತ್ತಾರೆ. ಇವರನ್ನು ಮಾತನಾಡಿಸುವುದೇ ಅಸಾಧ್ಯ ಎನ್ನುವಂತಾಗಿದೆ. ವಕೀಲರ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗದಿದ್ದರೆ ಅವರಿಗೆ ಕೋರ್ಟ್ ಆಫೀಸರ್ ಜವಾಬ್ದಾರಿಯನ್ನೇ ನೀಡಬಾರದು ಮತ್ತು ಅಂಥವರನ್ನು ತೆಗೆದುಹಾಕಬೇಕು' ಎಂದು ಪತ್ರದಲ್ಲಿ ಪ್ರತಿಪಾದಿಸಲಾಗಿದೆ.

'ಪ್ರಕರಣಗಳನ್ನು ಪೋಸ್ಟ್ ಮಾಡುವಲ್ಲಿ ಹೈಕೋರ್ಟ್ ನ್ಯಾಯಾಂಗ ಆಡಳಿತ ಸಂಪೂರ್ಣ ಕುಸಿದಿದೆ' ಎಂದು ಆರೋಪಿಸಿರುವ ಸಂಘವು, 'ಈ ವಿಷಯದಲ್ಲಿ ವಕೀಲರು ದಿನನಿತ್ಯ ಇನ್ನಿಲ್ಲದ ಸಮಸ್ಯೆ ಎದುರಿಸುತ್ತಿದ್ದಾರೆ. ಮೆಮೊಗಳನ್ನು ಪೋಸ್ಟ್ ಮಾಡಲು ಕಳುಹಿಸಲಾದ ಅನೇಕ ವಿಷಯಗಳನ್ನು ಪೋಸ್ಟ್ ಮಾಡದೇ ಇರುವುದು ವಕೀಲ ವೃಂದ ಮತ್ತು ದಾವೆದಾರರಲ್ಲಿ ತೀವ್ರ ಬೇಸರಕ್ಕೆ ಎಡೆ ಮಾಡಿಕೊಟ್ಟಿದೆ' ಎಂದು ಕಳವಳ ವ್ಯಕ್ತಪಡಿಸಿದೆ.

ಬಗೆಹರಿಯದ ಸಮಸ್ಯೆ: 'ಈ ಹಿಂದಿನ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಅವರ ಅವಧಿಯಲ್ಲೂ ಈ ಗಂಭೀರ ಸಮಸ್ಯೆಯನ್ನು ಮುನ್ನೆಲೆಗೆ ತರಲಾಗಿತ್ತು. ಇದೇ ಕಾರಣಕ್ಕಾಗಿ ನ್ಯಾಯಾಲಯದ ಕುಂದುಕೊರತೆಗಳನ್ನು ಪರಿಹರಿಸಲು ಅಂದು ಹಿರಿಯ ನ್ಯಾಯಮೂರ್ತಿಗಳು ಸಭೆ ಸೇರಿದ್ದರು. ಆದರೆ, ಸಮಸ್ಯೆಗಳು ಇಂದಿಗೂ ಬಗೆಹರಿದಿಲ್ಲ. ಹಾಗಾಗಿ, ಈಗಲಾದರೂ ಈ ವಿಷಯದ ಬಗ್ಗೆ ತಕ್ಕ ಕ್ರಮಕ್ಕೆ ಮುಂದಾಗಬೇಕು' ಎಂದು ಸಂಘವು ಮನವಿ ಮಾಡಿದೆ.

'ಮೆಮೊಗಳು ಸ್ಥಳಾಂತರಗೊಂಡ ತಕ್ಷಣವೇ ಅವುಗಳನ್ನು ಪೋಸ್ಟ್ ಮಾಡುವ ವಿಧಾನವನ್ನು ಖಚಿತಪಡಿಸಿಕೊಳ್ಳಲು ತಂತ್ರಜ್ಞಾನದ ಸಹಾಯ ಪಡೆಯಬೇಕು. ಈ ಮೂಲಕ ಈ ವಿಷಯದಲ್ಲಿ ಸುಧಾರಣೆಗಳನ್ನು ಪ್ರಾರಂಭಿಸಲು ಮುಂದಾಗಬೇಕು' ಎಂದು ಒತ್ತಾಯಿಸಿದೆ.

ನಿದ್ರಿಸುತ್ತಿರುವ ವಿಚಕ್ಷಣಾ ದಳ

'ಹೈಕೋರ್ಟ್‌ನ ವಿಚಕ್ಷಣಾ ದಳ ಗಂಭೀರವಾಗಿರಬೇಕು ಮತ್ತು ರಿಜಿಸ್ಟ್ರಿ ಇಂತಹ ನಿರ್ಲಕ್ಷ್ಯತನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ದುರದೃಷ್ಟವಶಾತ್ ಹೈಕೋರ್ಟ್‌ನ ವಿಚಕ್ಷಣಾ ದಳ ಈ ಸಂದರ್ಭಕ್ಕೆ ತಕ್ಕಂತೆ ವರ್ತಿಸುತ್ತಿಲ್ಲ. ಇಂದಿನ ಅವ್ಯವಸ್ಥೆಗೆ ರಿಜಿಸ್ಟ್ರಿ ಕೂಡಾ ಜವಾಬ್ದಾರಿಯಾಗಿದೆ. ಇದರ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ರಿಜಿಸ್ಟ್ರಿ ಶಾಖೆಗಳನ್ನು ನಿರಂತರವಾಗಿ ಪರಿಶೀಲಿಸಬೇಕಿದೆ. ಅಂತೆಯೇ, ರಿಜಿಸ್ಟ್ರಿಯಲ್ಲಿ ಯಾವುದೇ ಭ್ರಷ್ಟಾಚಾರ ಇಲ್ಲ ಎಂಬುದನ್ನೂ ಖಾತ್ರಿಪಡಿಸಬೇಕಿದೆ' ಎಂದು ಸಂಘವು ಮುಖ್ಯ ನ್ಯಾಯಮೂರ್ತಿಗಳಿಗೆ ಮನವಿ ಮಾಡಿದೆ.

ಜ್ಞಾನವನ್ನು ಕ್ಷಣ, ಕ್ಷಣಕ್ಕೂ ಸಂಪಾದಿಸಬೇಕು. ಸಂಪತ್ತನ್ನು ಹನಿ ಹನಿಯಾಗಿ ಸಂಪಾದಿಸಬೇಕು. ಸಮಯವನ್ನು ವ್ಯರ್ಥ ಮಾಡುವುದರಿಂದ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಹಾಗೆಯೇ, ಸಂಪತ್ತು ಸಂಗ್ರಹಿಸಲು ಬಯಸುವವರು ಸಣ್ಣ ಮೊತ್ತವನ್ನು ಕೂಡ ವ್ಯರ್ಥ ಮಾಡುವಂತಿಲ್ಲ- ಸುಭಾಷಿತ

ದುಡ್ಡಿನಂಥಾ ಮಾತು

ಮಾರುಕಟ್ಟೆ ಕುಸಿತಗಳ ಹೊತ್ತಿನಲ್ಲಿ ಇನ್ನಷ್ಟು ಹೂಡಿಕೆ ಮಾಡಿದವರಿಗೆ ಅಥವಾ ಇರುವ ಹೂಡಿಕೆಯನ್ನು ಮುಂದುವರಿಸಿದವರಿಗೆ ದೀರ್ಘಾವಧಿಯಲ್ಲಿ ಒಳ್ಳೆಯದಾಗುತ್ತದೆ ಎಂಬುದನ್ನು ಇತಿಹಾಸವು ಸಾಬೀತು ಮಾಡಿಕೊಟ್ಟಿದೆ


ತಾಳಿದವ ಹಿತಾನುಭವ ಪಡೆಯುವನು

• ಅಭಿಷೇಕ್ ತಿವಾರಿ

ಚಿನ್ನ ಮತ್ತು ಬೆಳ್ಳಿಯ ಬಗ್ಗೆ ಜನ ಈಗ ಬಹಳ ಮಾತನಾಡುತ್ತಿದ್ದಾರೆ. ಈ ವರ್ಷದ ಮಾರ್ಚ್ 4ರವರೆಗಿನ ಬೆಲೆಯ ಆಧಾರದಲ್ಲಿ ಹೇಳುವುದಾದರೆ ಒಂದು ವರ್ಷದಲ್ಲಿ ಬೆಳ್ಳಿಯ ಬೆಲೆಯು ಶೇ 165ರಷ್ಟು ಹೆಚ್ಚಳ ಕಂಡಿದೆ. ಇದೇ ಅವಧಿಯಲ್ಲಿ ಚಿನ್ನದ ಬೆಲೆಯು ಶೇ 76ರಷ್ಟು ಹೆಚ್ಚಾಗಿದೆ. ಹೀಗಾಗಿ ಈ ವರ್ಷದ ಜನವರಿಯಲ್ಲಿ ಭಾರತದ ಚಿನ್ನದ ಇಟಿಎಫ್‌ಗಳಿಗೆ, ಇತರ ಎಲ್ಲ ಬಗೆಯ ಈಕ್ವಿಟಿ ಹಾಗೂ ಹೈಬ್ರಿಡ್ ವರ್ಗಗಳಿಗೆ ಬಂದಿದ್ದಕ್ಕಿಂತ ಹೆಚ್ಚಿನ ಮೊತ್ತದ ಹೂಡಿಕೆ (ಅಂದರೆ ₹24,039 ಕೋಟಿ) ಬಂದಿದ್ದುದರಲ್ಲಿ ಆಶ್ಚರ್ಯ ಆಗುವಂಥದ್ದು ಏನೂ ಇಲ್ಲ.

ರಿಸ್ಕ್ ಕಡಿಮೆ ಮಾಡಿಕೊಳ್ಳುವ ದೃಷ್ಟಿಯಿಂದ ನೋಡಿದಾಗ, ಈ ಬಗೆಯ ಹೂಡಿಕೆಗಳಲ್ಲಿ ಹಣ ತೊಡಗಿಸುವುದರಲ್ಲಿ, ಆ ಮೂಲಕ ಹೂಡಿಕೆಯಲ್ಲಿ ವೈವಿಧ್ಯ ತಂದುಕೊಳ್ಳುವುದಲ್ಲಿ ಮೂಲಭೂತವಾಗಿ ಯಾವುದೇ ತಪ್ಪು ಇಲ್ಲ. ಆದರೆ ಉತ್ಸಾಹ ಅತಿಯಾದಾಗ ಕೆಲವೊಮ್ಮೆ ಹೂಡಿಕೆದಾರರಿಗೆ ಒಳ್ಳೆಯ ಅನುಭವ ದಕ್ಕಲಿಕ್ಕಿಲ್ಲ. ಯಾವುದೇ ಹೂಡಿಕೆಯ ಮೌಲ್ಯ ತೇಜಿಯಾಗಿ ಇದೆ ಎಂದಾದರೆ ಅದರ ವಿಚಾರವಾಗಿ ಬಹಳ ಭಿನ್ನವಾದ ವರ್ತನೆಗಳು ಕಾಣಸಿಗುತ್ತವೆ. ಆ ಹೂಡಿಕೆ ಆಸ್ತಿಯ ಮೌಲ್ಯ ಹೆಚ್ಚಿದಂತೆಲ್ಲ, ಹೂಡಿಕೆದಾರರು ಇನ್ನಷ್ಟು ಹೆಚ್ಚು ಆಸೆ ಹೊಂದಬಹುದು, ತಮ್ಮ ಹೂಡಿಕೆ ತೀರ್ಮಾನದ ವಿಚಾರವಾಗಿ ಅವರ ಆತ್ಮವಿಶ್ವಾಸ ಹೆಚ್ಚಬಹುದು. ಆದರೆ ಅತಿಯಾದ ಆತ್ಮವಿಶ್ವಾಸವು ಕೆಲವು ಸಂದರ್ಭಗಳಲ್ಲಿ ಅತಿಯಾದ ರಿಸ್ಕ್ ತೆಗೆದುಕೊಳ್ಳುವಂತೆ ಮಾಡುತ್ತದೆ.

ಈಚಿನ ದಿನಗಳಲ್ಲಿ ಹೆಚ್ಚು ಮೌಲ್ಯ ವರ್ಧಿಸಿಕೊಂಡ ಹೂಡಿಕೆಗಳಲ್ಲಿಯೇ ಹೆಚ್ಚು ಹಣ ತೊಡಗಿಸುವಂತೆ ಅದು ಮಾಡುತ್ತದೆ, ಆ ಮೂಲಕ ಆ ಹೂಡಿಕೆ ಆಸ್ತಿಯ ಮೌಲ್ಯವು ಕಡಿಮೆ ಆಗುವ ಸಾಧ್ಯತೆಯನ್ನು ಗೌಣವಾಗಿ ಕಾಣುವಂತೆ ಮಾಡಿಬಿಡುತ್ತದೆ.


ಕಲೆ: ಸಂತೋಷ್ ಸಸಿಹಿತ್ಲು

ಹೂಡಿಕೆದಾರರು ತಮ್ಮ ನಂಬಿಕೆಗಳಿಗೆ ಪೂರಕವಾದವುಗಳನ್ನು ಮಾತ್ರವೇ ಅರಸುವ ಪ್ರವೃತ್ತಿಯು ಇಲ್ಲಿಯೂ ಕಾಣುತ್ತದೆ. ಹೂಡಿಕೆಯೊಂದು ಬಹಳ ತೇಜಿ ಬೆಳವಣಿಗೆ ಕಾಣಬಹುದು ಎಂಬ ನಂಬಿಕೆಗೆ ಪೂರಕವಾದ ಸುದ್ದಿಗಳನ್ನು ಹೂಡಿಕೆದಾರರು ಅರಸುತ್ತ ಇರಬಹುದು. ಸಾಮಾಜಿಕ ಒತ್ತಡದ ಪರಿಣಾಮವೂ ಇಲ್ಲಿ ಕಾಣುತ್ತದೆ. ಇತರ ಹೂಡಿಕೆದಾರರು ಕೆಲವು ಹೂಡಿಕೆಗಳಲ್ಲಿ ತಕ್ಷಣಕ್ಕೆ ಲಾಭ ಗಳಿಸಿದ್ದು ಕಂಡಾಗ, ತಾವೂ ಆ ಕಡೆ ಹೂಡಿಕೆಗೆ ಮುಂದಾಗುತ್ತಾರೆ. ರಿಸ್ಕ್‌ಗಳನ್ನು, ತೊಂದರೆ ಆಗುವ ಸಾಧ್ಯತೆಗಳನ್ನು ಅಲಕ್ಷಿಸುವ ಪ್ರವೃತ್ತಿಯ ಕಾರಣದಿಂದಾಗಿ 'ಒಳ್ಳೆಯ ಸಮಯ ಮುಂದುವರಿಯುತ್ತಲೇ ಇರುತ್ತದೆ' ಎಂದು ಹೂಡಿಕೆದಾರರು ಭಾವಿಸಬಹುದು. ಇವೆಲ್ಲವುಗಳ ಪರಿಣಾಮವಾಗಿ ಹೂಡಿಕೆದಾರರಲ್ಲಿ ಹಲವರು ಮೌಲ್ಯ ಹೆಚ್ಚಿದ್ದಾಗಲೇ ಹೂಡಿಕೆಗೆ ಮುಂದಾಗಬಹುದು.

ಇದಕ್ಕೆ ಉದಾಹರಣೆಯಾಗಿ ಬೆಳ್ಳಿಯ ಬೆಲೆಯನ್ನು ಗಮನಿಸಬಹುದು. ಜನವರಿ 29ರಂದು ಬೆಳ್ಳಿಯ ಬೆಲೆಯು ಗರಿಷ್ಠ ಮಟ್ಟದಲ್ಲಿ ಇದ್ದಾಗ ಹೂಡಿಕೆ ಮಾಡಿದವರನ್ನು ನೋಡಬಹುದು. ಇದಾದ ಒಂದು ದಿನದ ನಂತರದಲ್ಲಿ, ಜನವರಿ 30ರಂದು ಬೆಳ್ಳಿಯ ಬೆಲೆಯು ಶೇ 37ರಷ್ಟು ಕುಸಿಯಿತು. ಲೋಹಗಳ ಬೆಲೆಯ ಮೇಲೆ ಪ್ರಭಾವ ಬೀರುವ ಅಂತರರಾಷ್ಟ್ರೀಯ ಮಾರುಕಟ್ಟೆಗಳು, ಡಾಲರ್ ಮೌಲ್ಯದಲ್ಲಿನ ಏರಿಳಿತ, ಅಮೆರಿಕದ ಫೆಡರಲ್ ರಿಸರ್ವ್ ನೀಡುವ ಮುನ್ನೋಟ ಹಾಗೂ ಇತರ ಜಾಗತಿಕ ವಿದ್ಯಮಾನಗಳನ್ನು ಗಮನಿಸುತ್ತ ಇರಲು ಸಾಧ್ಯವಿಲ್ಲದವರು ಮಲ್ಟಿ ಅಸೆಟ್ ಫಂಡ್‌ಗಳ ಮೂಲಕ ಹೂಡಿಕೆ ಮಾಡುವುದು ಒಳಿತು. ಷೇರುಗಳು, ಸಾಲಪತ್ರಗಳು, ಚಿನ್ನ, ಬೆಳ್ಳಿಯ ಮೇಲೆ ಈ ಫಂಡ್‌ಗಳು ಹಣ ತೊಡಗಿಸುತ್ತವೆ.

ಮಾರುಕಟ್ಟೆ, ನಿಮ್ಮ ಹೂಡಿಕೆ: ಪ್ರಧಾನವಾಗಿ ಮಾರುಕಟ್ಟೆಯ ಏರಿಳಿತಗಳಿಗೆ ಅನುಗುಣವಾಗಿ, ಯಾವ ಆಸ್ತಿವರ್ಗಗಳಲ್ಲಿ ಹೂಡಿಕೆ ಮಾಡಲಾಗಿದೆ ಎಂಬುದನ್ನು ಆಧರಿಸಿ, ಆರ್ಥಿಕತೆಯ ಗತಿಯನ್ನು ಆಧರಿಸಿ ಹೂಡಿಕೆಯ ಲಾಭ–ನಷ್ಟ ಕೂಡ ತೀರ್ಮಾನ ಆಗುತ್ತದೆ ಎಂದು ಹೂಡಿಕೆದಾರರು ಭಾವಿಸಬಹುದು. ಆದರೆ ದೀರ್ಘಾವಧಿಯಲ್ಲಿ ಅತಿಹೆಚ್ಚಿನ ಪರಿಣಾಮ ಬೀರುವುದು ಮಾರುಕಟ್ಟೆ ಅಲ್ಲ; ಬದಲಿಗೆ ಹೂಡಿಕೆದಾರರ ವರ್ತನೆ ಎಂಬುದನ್ನು ಅಧ್ಯಯನಗಳು ಮತ್ತೆ ಮತ್ತೆ ಹೇಳಿವೆ.

ಭಾವುಕ ನೆಲೆಯಲ್ಲಿ ತೀರ್ಮಾನಗಳನ್ನು ಕೈಗೊಳ್ಳುವುದು, ಕೆಲವು ಸರಳವಾದ ನಿಯಮಗಳನ್ನು ನೆಚ್ಚಿಕೊಳ್ಳುವುದು, ಸಾಮಾಜಿಕ ಪ್ರಭಾವಗಳು ಹೂಡಿಕೆದಾರರು ತಪ್ಪು ಸಂದರ್ಭದಲ್ಲಿ ಹೂಡಿಕೆ ಮಾಡುವುದಕ್ಕೆ, ತಪ್ಪು ಸಂದರ್ಭಗಳಲ್ಲಿ ಮಾರಾಟ ಮಾಡುವುದಕ್ಕೆ ದಾರಿ ಮಾಡಿಕೊಡಬಹುದು. ಹೀಗೆ ಆದಾಗ ಮಾರುಕಟ್ಟೆಯು ತಂದುಕೊಡುವ ಲಾಭಕ್ಕೂ, ಹೂಡಿಕೆದಾರರ ಪೋರ್ಟ್‌ಫೋಲಿಯೊ ಪಡೆಯುವ ಲಾಭಕ್ಕೂ ನಿರಂತರವಾಗಿ ವ್ಯತ್ಯಾಸ ಕಂಡುಬರುತ್ತದೆ. ಜಗತ್ತಿನಾದ್ಯಂತ ಹೂಡಿಕೆದಾರರು ತಾವು ಹಣ ತೊಡಗಿಸುವ ಫಂಡ್‌ನ ಗಳಿಕೆಗಿಂತ ಕಡಿಮೆ ಪ್ರಮಾಣದ ಗಳಿಕೆಯನ್ನು ಪಡೆದಿರುತ್ತಾರೆ ಎಂಬುದನ್ನು ಹಲವು ಅಧ್ಯಯನಗಳು ಹೇಳಿವೆ. ಫಂಡ್‌ನಲ್ಲಿ ಹೂಡಿಕೆ ಮಾಡಲು ಹಾಗೂ ಅಲ್ಲಿಂದ ಹಣವನ್ನು ಹಿಂದಕ್ಕೆ ಪಡೆಯಲು ಸರಿಯಾದ ಸಮಯಕ್ಕೆ ಕಾಯುವ ಹೂಡಿಕೆದಾರರ ಪ್ರವೃತ್ತಿಯು ಇದಕ್ಕೆ ಕಾರಣವಾಗುತ್ತದೆ.

ಹೂಡಿಕೆಯನ್ನು ಮುಂದುವರಿಸುವುದರ ಪ್ರಯೋಜನ: ಹೂಡಿಕೆದಾರರ ಭಾವನೆಗಳು ಹಾಗೂ ಅವರು ಕೆಲವು ಸಂದರ್ಭಗಳಲ್ಲಿ ನೆಚ್ಚಿಕೊಳ್ಳುವ ಸರಳೀಕೃತ ಸೂತ್ರಗಳು ದೀರ್ಘಾವಧಿಯಲ್ಲಿ ಹೂಡಿಕೆಯಿಂದ ಸಿಗುವ ಲಾಭವನ್ನು ಕಡಿಮೆ ಮಾಡುವ ವರ್ತನೆಗಳನ್ನು ಬೆಳೆಸುತ್ತವೆ.

ಬಫೆಟ್ ಜೀವನದ ಪಾಠ

ಖ್ಯಾತ ಹೂಡಿಕೆದಾರ ವಾರನ್ ಬಫೆಟ್ ಅವರು 10 ಲಕ್ಷ ಡಾಲರ್‌ಗಿಂತ ಹೆಚ್ಚಿನ ಆಸ್ತಿ ಒಗ್ಗೂಡಿಸಿದ್ದು ತಮ್ಮ 30ನೆಯ ವಯಸ್ಸಿನಲ್ಲಿ. ಅವರು ನೂರು ಕೋಟಿ ಡಾಲರ್ ಸಂಪತ್ತಿನ ಒಡೆಯ ಆಗಿದ್ದು 56ನೆಯ ವಯಸ್ಸಿನಲ್ಲಿ. ಅವರು ಈಗ ಹೊಂದಿರುವ ಸಂಪತ್ತಿನಲ್ಲಿ ಅಂದಾಜು ಶೇ 90ರಿಂದ ಶೇ 95ರಷ್ಟು ಭಾಗವನ್ನು ಒಗ್ಗೂಡಿಸಿದ್ದು 65ನೆಯ ವಯಸ್ಸನ್ನು ದಾಟಿದ ನಂತರದಲ್ಲಿ. ವೃತ್ತಿಬದುಕಿನ ಕೊನೆಯ ಅವಧಿಯಲ್ಲಿ ತೋರಿದ ಬುದ್ಧಿವಂತಿಕೆಗಿಂತಲೂ ಮಾರುಕಟ್ಟೆಯಲ್ಲಿ ಹೆಚ್ಚಿನ ಅವಧಿಗೆ ಹೂಡಿಕೆ ಮಾಡಿದ್ದುದು ಇದಕ್ಕೆ ಕಾರಣ ಎಂದು ಬಫೆಟ್ ಅವರು ಹೇಳಿದ್ದಾರೆ. ಮಂಜಿನ ಉಂಡೆಯೊಂದು ದೀರ್ಘ ಅವಧಿಗೆ ಉರುಳುತ್ತ ಸಾಗಿದಂತೆ ಇನ್ನಷ್ಟು, ಮತ್ತಷ್ಟು ದೊಡ್ಡದಾಗುತ್ತ ಹೋಗುವುದರ ಜೊತೆ ಅವರು ತಮ್ಮ ಸಂಪತ್ತು ಸೃಷ್ಟಿಯನ್ನು ಹೋಲಿಸಿದ್ದಾರೆ.

ದೀರ್ಘಾವಧಿಯಲ್ಲಿ ಬಂಡವಾಳ ಮಾರುಕಟ್ಟೆಗಳು ಬಹಳ ಉತ್ತಮ ಲಾಭವನ್ನು ತಂದುಕೊಟ್ಟರೂ, ಹೂಡಿಕೆದಾರರು ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಲಾಭ ಪಡೆದುಕೊಂಡಿರುತ್ತಾರೆ. ಏಕೆಂದರೆ ಅವರು ಹೆಚ್ಚಿನ ಮೌಲ್ಯಕ್ಕೆ ಖರೀದಿಸಿ, ಕಡಿಮೆ ಮೌಲ್ಯಕ್ಕೆ ಮಾರಾಟ ಮಾಡಿರುತ್ತಾರೆ. ಅಥವಾ ಹೂಡಿಕೆಯಲ್ಲಿ ಶಿಸ್ತಿನ ಹಾದಿಯಲ್ಲಿ ಸಾಗುವ ಬದಲು ಆಯಾ ಸಂದರ್ಭಗಳಲ್ಲಿ ಗೆಲ್ಲುವ ಕುದುರೆಯಂತೆ ಕಾಣುವುದರ ಮೇಲೆ ಹಣ ತೊಡಗಿಸಿರುತ್ತಾರೆ.

ನಾವು ನಡೆಸಿದ ಆಂತರಿಕ ಅಧ್ಯಯನವೊಂದರ ಪ್ರಕಾರ, 2001ರ ಸೆಪ್ಟೆಂಬರ್ 4ರಿಂದ 2025ರ ಡಿಸೆಂಬರ್ 31ರವರೆಗಿನ ಅವಧಿಯಲ್ಲಿ ಹೂಡಿಕೆ ಮಾಡಿ, ಹಣ ಹಿಂಪಡೆಯದೇ ಇದ್ದವರು ವಾರ್ಷಿಕ ಶೇ 17.33ರಷ್ಟು ಲಾಭ ಗಳಿಸಿದ್ದಾರೆ (ಹೂಡಿಕೆ ಅಂದರೆ ನಿಫ್ಟಿ 500 ಟಿಆರ್‌ಐ ಸೂಚ್ಯಂಕದ ಮೇಲಿನ ಹೂಡಿಕೆ). ಇದೇ ಅವಧಿಯ 20 ಅತ್ಯುತ್ತಮ ದಿನಗಳಲ್ಲಿ ಹೂಡಿಕೆ ತಪ್ಪಿಸಿಕೊಂಡವರು ಕೇವಲ ಶೇ 11.06ರಷ್ಟು ಲಾಭ ಪಡೆದಿದ್ದಾರೆ. ಅಂದರೆ ₹1 ಲಕ್ಷ ಹೂಡಿಕೆ ಮಾಡಿ, ಈ ಅವಧಿಯಲ್ಲಿ ಅದನ್ನು ಹಾಗೆಯೇ ಉಳಿಸಿಕೊಂಡ ವ್ಯಕ್ತಿಯು ಕೊನೆಯಲ್ಲಿ ₹48.77 ಲಕ್ಷ ಪಡೆದಿದ್ದಾನೆ. ಅತ್ಯುತ್ತಮವಾದ 20 ದಿನಗಳನ್ನು ತಪ್ಪಿಸಿಕೊಂಡ ವ್ಯಕ್ತಿಯು ₹12.82 ಲಕ್ಷ ಮಾತ್ರ ಪಡೆದಿದ್ದಾನೆ.

ವಿಶೇಷವಾಗಿ ಸಣ್ಣ ಹೂಡಿಕೆದಾರರು ಮಾರುಕಟ್ಟೆಯಲ್ಲಿ ಅಲ್ಪಾವಧಿಯ ಏರಿಳಿತಗಳಿಗೆ ಬಹಳ ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಹೂಡಿಕೆದಾರರ ವರ್ತನೆ ಹಾಗೂ ಹಣಕಾಸಿಗೆ ಸಂಬಂಧಿಸಿದಂತೆ ಪ್ರಪಂಚದ ಹಲವೆಡೆ ನಡೆದ ಅಧ್ಯಯನಗಳು ಹೇಳಿವೆ. ಮಾರುಕಟ್ಟೆಯು ಒತ್ತಡಕ್ಕೆ ಸಿಲುಕಿದ್ದಾಗ ಹಾಗೂ ಮಾರುಕಟ್ಟೆಯಲ್ಲಿ ಆಶಾವಾದ ಬಹಳ ಇದ್ದಾಗ ಅವರು ತೋರುವ ವರ್ತನೆಗಳನ್ನು ಬಹಳ ನಿಖರವಾಗಿ ಹೇಳಬಹುದು. ಅವರು ಹಾಗೆ ಏಕೆ ವರ್ತಿಸುತ್ತಾರೆ ಎಂಬುದು ಅರ್ಥವಾಗುವಂಥದ್ದೇ ಆದರೂ, ಅವು ದೀರ್ಘಾವಧಿಯಲ್ಲಿ ಸಂಪತ್ತನ್ನು ಗಣನೀಯ ಮಟ್ಟದಲ್ಲಿ ನಾಶಮಾಡಬಲ್ಲವು. ದಶಕಗಳ ಅವಧಿಗೆ ಹಣ ತೊಡಗಿಸಿ ಬಡ್ಡಿಗೆ ಚಕ್ರಬಡ್ಡಿ ದೊರೆತು, ಆ ಮೊತ್ತವೆಲ್ಲ ಅಸಲಿಗೆ ಸೇರಿ, ಅಷ್ಟೂ ಮೊತ್ತಕ್ಕೆ ಬಡ್ಡಿಯ ಲಾಭ ಸಿಗುವುದನ್ನು ಗಮನಿಸಿದರೆ ಹೂಡಿಕೆಯನ್ನು ಮುಂದುವರಿಸುವುದರ ಮಹತ್ವವು ಅರ್ಥವಾಗುತ್ತದೆ.

ಈಗಿನ ಸಂದರ್ಭದಲ್ಲಿ, ಅಂದರೆ ಜಾಗತಿಕ ಮಟ್ಟದ ವಿದ್ಯಮಾನಗಳ ಕಾರಣದಿಂದಾಗಿ ದೇಶದ ಬಂಡವಾಳ ಮಾರುಕಟ್ಟೆಗಳು ಪೆಟ್ಟು ತಿಂದಿರುವ ಹೊತ್ತಿನಲ್ಲಿ, ಹೂಡಿಕೆದಾರರಲ್ಲಿ ಭೀತಿ ಹೆಚ್ಚಿದೆ. ಇಂತಹ ಹೊತ್ತಿನಲ್ಲಿ ಅಸ್ಥಿರತೆಯನ್ನು ಕಂಡು, ಇನ್ನಷ್ಟು ನಷ್ಟದಿಂದ ತಪ್ಪಿಸಿಕೊಳ್ಳಲು ಮ್ಯೂಚುವಲ್ ಫಂಡ್ ಅಥವಾ ಷೇರುಗಳನ್ನು ಮಾರಾಟ ಮಾಡುವ ಬಯಕೆ ಮನಸ್ಸಿಗೆ ಬರಬಹುದು. ಆದರೆ ಇಂತಹ ಕುಸಿತಗಳ ಹೊತ್ತಿನಲ್ಲಿ ಇನ್ನಷ್ಟು ಹೂಡಿಕೆ ಮಾಡಿದವರು ಅಥವಾ ಇರುವ ಹೂಡಿಕೆಯನ್ನು ಮುಂದುವರಿಸಿದವರು ದೀರ್ಘಾವಧಿಯಲ್ಲಿ ಹಿತಾನುಭವ ಪಡೆಯುತ್ತಾರೆ ಎಂಬುದನ್ನು ಇತಿಹಾಸವು ಸಾಬೀತು ಮಾಡಿಕೊಟ್ಟಿದೆ.


ಭಾವನಾತ್ಮಕ ಉದ್ವೇಗದಿಂದ ಹೊರಬರುವುದು ಹೇಗೆ?: ಒಟ್ಟಾರೆಯಾಗಿ ಹೇಳಬೇಕು ಎಂದಾದರೆ, ಭಾವನಾತ್ಮಕವಾಗಿ ವರ್ತನೆಯ ಕ್ರಮಗಳನ್ನು ಅರ್ಥ ಮಾಡಿಕೊಳ್ಳುವುದೇ ಅವುಗಳ ಪರಿಣಾಮವನ್ನು ತಗ್ಗಿಸುವ ಮೊದಲ ಹೆಜ್ಜೆ. ಹೂಡಿಕೆಯ ಪಯಣವು ಯಶಸ್ಸು ಕಾಣಬೇಕು ಎಂದಾದರೆ ಒಳ್ಳೆಯ ಹೂಡಿಕೆ ಕಾರ್ಯತಂತ್ರ ಇದ್ದರಷ್ಟೇ ಸಾಲದು. ಅದರ ಜೊತೆಗೆ, ಮಾರುಕಟ್ಟೆಯ ಗತಿಗೆ ಮನಸ್ಸು ಹೇಗೆ ಪ್ರತಿಕ್ರಿಯೆ ನೀಡುತ್ತಿರುತ್ತದೆ ಎಂಬುದನ್ನೂ ಅರ್ಥ ಮಾಡಿಕೊಳ್ಳಬೇಕು. ಶಿಸ್ತನ್ನು ರೂಢಿಸಿಕೊಂಡು, ದೀರ್ಘಾವಧಿಯ ಗುರಿಗಳ ಮೇಲೆ ಗಮನ ಇರಿಸಿ, ಭಾವನಾತ್ಮಕ ಉದ್ವೇಗವನ್ನು ಅದುಮಿಟ್ಟು ಮಾರುಕಟ್ಟೆಗಳಿಂದ ಹೆಚ್ಚಿನ ಲಾಭವನ್ನು ಪಡೆಯಲು ಸಾಧ್ಯ. ಮುಖ್ಯವಾಗಿ, ಮಾರುಕಟ್ಟೆಯಲ್ಲಿ ವಿಪರೀತದ ಏರಿಳಿತಗಳು ಇದ್ದಾಗ ಈ ಮಾತು ಹೆಚ್ಚು ಮಹತ್ವ ಪಡೆಯುತ್ತದೆ.

ಲೇಖಕ ಪಿಜಿಐಎಂ ಇಂಡಿಯಾ ಆಸ್ತಿ ನಿರ್ವಹಣಾ ಕಂಪನಿಯ ಸಿಇಒ

ಮಾಸಿಕ ಆದಾಯದಲ್ಲಿ ಶೇ 9ರಷ್ಟು ಹೂಡಿಕೆಗೆ

• ಗಂಜಿ ಆದಿಶೇಷ

ದೇಶದ ಕುಟುಂಬಗಳು ತಮ್ಮ ಮಾಸಿಕ ಆದಾಯದಲ್ಲಿ ಶೇ 15ರಷ್ಟನ್ನು ಉಳಿತಾಯಕ್ಕೆ ಹಂಚಿಕೆ ಮಾಡಿದರೆ, ಶೇ 9ರಷ್ಟು ಮೊತ್ತವನ್ನು ಹೂಡಿಕೆಗೆ ಹಂಚಿಕೆ ಮಾಡುತ್ತಿವೆ.



ಹೂಡಿಕೆಯಲ್ಲಿ ಯಾವುದಕ್ಕೆ ಎಷ್ಟು ಹಂಚಿಕೆ?

ನಿಶ್ಚಿತ ಠೇವಣಿ/ಆರ್.ಡಿ/ಬ್ಯಾಂಕ್ ಉಳಿತಾಯ ಖಾತೆ	54%
ಜೀವ ವಿಮೆ/ಯುಲಿಪ್ಸ್	17%
ಅಂಚೆ ಕಚೇರಿ ಉಳಿತಾಯ/ಕಿಸಾನ್ ವಿಕಾಸ್ ಪತ್ರ/ಎನ್‌ಎಸ್‌ಸಿ	10%
ಚಿನ್ನ	7%
ಇತರೆ ಸಾಂಪ್ರದಾಯಿಕ ಹೂಡಿಕೆಗಳು	5%
ಮ್ಯೂಚುವಲ್ ಫಂಡ್‌ಗಳು/ಇಟಿಫ್‌ಗಳು/ಚಿನ್ನದ ಇಟಿಎಫ್‌ಗಳು	5%
ಷೇರುಗಳು	3%

ಹೂಡಿಕೆಯ ಪ್ರಮುಖ ಗುರಿ (ಶೇಕಡವಾರು)

ಮಕ್ಕಳ ಶಿಕ್ಷಣ	20%
ಕುಟುಂಬ ಸದಸ್ಯರಿಗೆ ಬೆಂಬಲ	16%
ಸಂಪತ್ತು ಸೃಷ್ಟಿ	11%
ಮನೆ ಖರೀದಿ	11%
ತುರ್ತು ನಿಧಿ	9%
ಮಕ್ಕಳ ಮದುವೆ	8%
ದೊಡ್ಡ ವೆಚ್ಚಕ್ಕಾಗಿ ಉಳಿತಾಯ	6%
ಆರ್ಥಿಕ ಸ್ವಾತಂತ್ರ್ಯ	5%
ದಿನನಿತ್ಯ ಹಣ ಗಳಿಕೆ	5%
ನಿವೃತ್ತಿ	4%
ಪ್ಯಾಸಿವ್ ಆದಾಯ ಸೃಷ್ಟಿ	3%
ತೆರಿಗೆ ಉಳಿತಾಯ/ ಪ್ರಯೋಜನ	3%

ಹಣಕಾಸು ಸಂಸ್ಥೆಗಳ ಬಗ್ಗೆ ಜನರಿಗೆ ಅರಿವು

ಸಂಸ್ಥೆಗಳು/ಘಟಕಗಳು	%
ಭಾರತೀಯ ರಿಸರ್ವ್ ಬ್ಯಾಂಕ್	73
ಮುಂಬೈ ಷೇರು ವಿನಿಮಯ ಕೇಂದ್ರ	24
ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ	22
ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ	21
ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ	13
ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್	11
ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ ಲಿಮಿಟೆಡ್	10

ಆಧಾರ: ಸೆಬಿ ಹೂಡಿಕೆದಾರರ ಸಮೀಕ್ಷೆ–2025

ಐಪಿಸಿಎ ಲ್ಯಾಬೊರೇಟರೀಸ್ ಲಿಮಿಟೆಡ್

ಬ್ರೋಕರೇಜ್ ಮಾತು

ಬಹುರಾಷ್ಟ್ರೀಯ ಔಷಧ ತಯಾರಿಕಾ ಕಂಪನಿ ಐಪಿಸಿಎ ಲ್ಯಾಬೊರೇಟರೀಸ್ ಲಿಮಿಟೆಡ್‌ನ ಷೇರಿನ ಬೆಲೆ ₹1,820 ಆಗಬಹುದು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಐಪಿಸಿಎ ಲ್ಯಾಬೊರೇಟರೀಸ್ ಕಂಪನಿಯು ದೇಶದಲ್ಲಿ ಔಷಧಗಳ ತಯಾರಿಕೆ ಮತ್ತು ಮಾರಾಟ ಹೆಚ್ಚಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಕಂಪನಿಯು ತನ್ನ ಜೆರೋಡಾಲ್ ಫ್ರ್ಯಾಂಚೈಸ್ ಬಲವರ್ಧನೆಗೆ ಉದ್ದೇಶಿಸಿದೆ.

ಔಷಧಗಳ ರಫ್ತು ಚಟುವಟಿಕೆಯು ಪ್ರಮುಖ ಮಾರುಕಟ್ಟೆಗಳಲ್ಲಿ ಕಂಪನಿಯ ಸ್ಥಾನ ಬಲಪಡಿಸಲು ನೆರವಾಗಲಿದೆ. ಐರೋಪ್ಯ ಒಕ್ಕೂಟದ ಟೆಂಡರ್‌ಗಳು ಮತ್ತು ಜೆನರಿಕ್ ಔಷಧಗಳ ರಫ್ತು ಹೆಚ್ಚಳದ ಕಾರಣದಿಂದಾಗಿ ರಫ್ತು ಮುನ್ನೋಟವು ಉತ್ತಮವಾಗಿದೆ.

2025–26ರಿಂದ 2027–28ರ ಆರ್ಥಿಕ ವರ್ಷದಲ್ಲಿ ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 13ರಷ್ಟಾಗಲಿದೆ. ಇದೇ ಅವಧಿಯಲ್ಲಿ ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 17ರಷ್ಟು ಮತ್ತು ತೆರಿಗೆ ನಂತರದ ಲಾಭ ಶೇ 16ರಷ್ಟಾಗಲಿದೆ ಎಂದು ತಿಳಿಸಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹1,551.90 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಸಮಾಜ ಅಧ್ಯಯನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

SECOND LANGUAGE- ENGLISH
ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

40. Read the following passage and answer the questions that follow: (…..Contd)

B. How has man altered the earth?

Ans:- Man has altered many of the physical features of the earth with the tools of science. He has transformed woodlands and prairies' into farmland. He has constructed lakes and dams to irrigate and harness hydroelectric power. By cutting through mountains, he has almost modified or altered the very face of the earth.

Answer the following question in about 8-10 sentences:

41. Write in your own words the summary of the poem 'The song of India'.

Ans: He/She asked their mother that they can sing for her. They questioned their mother that what type of song they want to sing? They explained that they want to sing about the Himalayas, their snow - bound peaks or the three great oceans such as Bay of Bengal, Arabian sea and the Indian ocean which wash her feet or the beautiful dawn with its golden touch of the nature. For this the mother said in a calm voice. She wants the song of beggar, leper or any untrodden people. Or the crowd of the streets, impure or dirty places or any secluded places. The son/ daughter (poet) ignores their mother's request and again asked about the topic of the Song. They continues their talk asking about the song of rock - cut temples, Epics in stone or sacrifice of her children and her own children or the inspired persons, famous prophets or the great persons who made great tasks or any worthy pilgrims. Hearing the sons/ daughter's words, mother get upset and angrily she asked to sing about millions of people who toiled and kept their life to great cause, the experienced old people or ignorant people or helpless children who were very meek and dwelt in dark places. These words make the author that his heart beat increased and the words heard a sound of bell and make him to emotional. This situation is like a great white birds flew in a pitiful manner. He/she become very nervous and asked about the topic of the poem. Even though he was afraid to question her but believed in his work, again he requested her what type of songs she liked whether he can sing about the dams and lakes or any steel mills (factories and Industries) or ship building yard like Vishakapattanam or any great technologies or any great recognised events or any atomic incidents etc., For this mother rejected and said you may sing on these topics but you can sing about the early and the important strikes, brave men and their goal, their achievements or any class wars' and their consequences. The poet complained and in a humble condition he/she questioned that they couldn't sing for her whole heartedly and in a pure love? He/she sang for her. That song was bathed in the stainless blue that means it is very touching and appear into nothingness.

OR

``In the poem *I am the, land* the speaker is patient, yet assertive.'' Substantiate in your own words.

Ans:- In the first stanza she explains the man says he owned the earth she simply waits. Is it possible to own the earth because it is a planet and who gave the rights to own her? But the earth will not dispute with the man, She would wait. The person should with rage then also the earth lie patiently. He says that he bought her still she waits. The man would exploit her making muddy holes and the lights of the parking vehicles but she would stares these things.
The farmer ploughs the land and grow the plants, trees crops, etc., The children would come and dance on the earth. Someone comes and sings, The soldiers come with guns and put the fence it makes the earth to suffocate. The earth felt it very bad though she is suffocated but she patiently waits. Though the mother earth suffers a lot, she can patiently tolerate and challenged the man that he cannot put a fence around the planet earth. Earth as a whole planet is very big and the man cannot put a fence and it is impossible for him. She can wait because she is the land (mother).

42) How does the poet describe the Jazz player's appearance and his music?

Ans:- He stood at the crest ofthe tallest hill. He was old and had wrinkled face. He had no interest in life. His head was turned downward, he closed his eyes. He wore an old faded blue shirt. That shirt was dark with sweat, the tie was tom. The jacket was old and it could not hold his sagging (hanging) stomach, He wore the old shoes which had papers inside. His face was not shaved. One could see the pain in each wrinkle of his face. He alone stood with his head down and eyes closed. He wore an old alto saxophone and chanting some religious music in low voice. That old saxophone was hanging from his neck by a wire coat hanger; He wanted to tell that he was a Black Man. He had been sent here to preach the Black Gospel of Jazz. He was preaching it with words by loud musical sound. When he started to preach, .he was transformed into a Bird. That Bird gathers its wings and flies high, high and higher until it flies away. Otherwise he come back to find himself as a Black man again.

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

MULTIPLE CHOICE QUESTIONS

16) Marachantia is considered as a heterothallic plant because it is
(a) Heterogametic (b) Bisexual
(c) Monoeciuos (d) Dioecious

Ans:(d) Marchantia thallus is a genus in the family-Marchantiaceae of the order-Marchantiales, a group of liverworts. It is considered as a heterothallic plant because it is dioecious in nature whose male plant bearing Anteriodiophore and female plant bearing Archegoniophore are present on different plant.

17) Identify the set of characteristics related to plants belonging to family-Fabaceae from the following
(a) actinomorphic flower, syncarpous ovary and marginal placentation
(b) Persistent calyx, epipetalous stamens and leguminous fruit
(c) papilionaceous corolla, axile placentation and leguminous fruit
(d) vexullary aestivation of corolla, diadelphous stamens and monocarpellary, unilocular ovary

Ans:(d) Family-Fabaceae belongs to the division Embryophyta, class-Dicotyledinae, sub-class-Polypetalae and order-Rosales.

The members of this family are distributed all over the world. They are mostly herbs (however shrubs, trees and climbers are also common)

Flowers of the plants belonging to this family shows descending imbricate aestivation of corolla, stamens 10 (9+1 condition) are usually diadelphous. Gynoecium is monocarpellary, ovary is superior unilocular with marginal placentation.

18) The residue left after methane production from cattle dung is -
a) burnt b) buried in land fills
c) used as manure
d) used in civil construction

Ans:- c

19) An example for hormone releasing IUD is
(A) Lippes loop (B) LNG – 20
(C) Implant (D) Multiload 375

Ans. B

20) The residue left after methane production from cattle dung is:
a) Burnt b) burried in land fills
c) used as manure
d) used in civil construction.

Ans:- C

21) Activated sludge should have the ability to settle quickly so that it can:
a) be rapidly pumped back from sedimentation tank to aeration tank
b) absorb pathogenic bacteria present in waste water while sinking to the bottom of the settling tank
c) be discarded and anaerobically digested
d) absorb colloidal organic matter.

Ans:-a

22) Which of the following is not a parasitic adaptation?
a) Loss of unnecessary sense organs
b) Absence of adhesive organs or suckers
c) Loss of digestive system
d) High reproductive capacity

Ans. B

23) Which of the given statement is correct in the context of observing DNA separated by agarose gel electrophoresis?
a) DNA can be seen in visible light
b) DNA can be seen without staining in visible light
c) Ethidium bromide stained DNA can be seen in visible light
d) Ethidium bromide stained DNA can be seen under exposure to UV light

Ans:- d

24) The hybridisation between naturally incompatible plants like potato and tomato can be achieved through
a) mutation breeding
b) artificial pollination
c) somatic hybridisation
d) conventional breeding

Ans: (c)

Expln:- Mutation breeding refers to the process by which the seed is exposed to radiation or chemicals in order to develop an improved mutant variant. It can help to improve individual plants' yield and resistance properties.

Conventional breeding is the development of new varieties (cultivars) of plants by using natural processes and traditional methods such as selection and breeding of high yielding varieties. Since potato and tomato belong to two different species and thus cannot be hybridized by conventional breeding methods.

A pollination technique in which the desired pollen grains are used for pollination by artificial means is known as artificial pollination. Since potato and tomato are incompatible, even artificial pollination cannot be used as the pollen grains will not germinate to form the pollen tube on incompatible species.

The fusion of the protoplasm of two different plant cells in order to produce a hybrid variety is called somatic hybridization. The protoplasts of two plants can be made to fuse with a chemical called Polyethylene glycol (PEG). Thus, somatic hybridization would be the best suitable method in developing the hybridized variety between potato and tomato.

ಉತ್ಸವ: ಡಿ.ಜೆ ನಿಷೇಧಕ್ಕೆ ಒಲವು

ಸಚಿವ ಸಂತೋಷ್ ಲಾಡ್ ಸಲಹೆಗೆ ಬಿಜೆಪಿ ಸದಸ್ಯರಿಂದಲೂ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಉತ್ಸವ ಸೇರಿದಂತೆ ಯಾವುದೇ ಸಮಾರಂಭಗಳಲ್ಲಿ ಅಬ್ಬರದ ಡಿ.ಜೆ ನಿಷೇಧಿಸುವ ಕುರಿತು ವಿಧಾನಸಭಾ ಕಲಾಪದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ಹಲವು ಸದಸ್ಯರು ಒಲವು ತೋರಿದರು.

'ಶಿವಮೊಗ್ಗದಲ್ಲಿ ಕಳೆದ ಆರು ವರ್ಷಗಳಿಂದ ಸ್ಥಗಿತವಾಗಿರುವ ಸಹ್ಯಾದ್ರಿ ಉತ್ಸವ ನಡೆಸಲು ಅನುದಾನ ನೀಡಬೇಕು' ಎಂಬ ಬಿಜೆಪಿಯ ಎಸ್.ಎನ್.ಚನ್ನಬಸಪ್ಪ ಅವರ ಆಗ್ರಹ ಚರ್ಚೆಗೆ ದಾರಿ ಮಾಡಿಕೊಟ್ಟಿತು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಾತನಾಡಿ, 'ಬಹುತೇಕ ದೇವರ ಉತ್ಸವಗಳಲ್ಲೂ ಡಿ.ಜೆ, ಕರ್ಕಶ ಹಾಡುಗಳು ಇಲ್ಲದೆ ದೇವರ ಮೂರ್ತಿಯೂ ಮುಂದೆ ಸಾಗುವುದಿಲ್ಲ. ಇದು ನಮ್ಮ ಸಂಸ್ಕೃತಿಯಲ್ಲ. ಉತ್ಸವಗಳಲ್ಲಿ ಡಿ.ಜೆ, ಹೊರ ರಾಜ್ಯದ ಕಲಾವಿದರು, ದುಬಾರಿ ಸಂಭಾವನೆಯ ಸೆಲೆಬ್ರಿಟಿಗಳಿಗೆ ಮಣೆ ಹಾಕುವ ಬದಲು ಸ್ಥಳೀಯ ಕಲಾವಿದರನ್ನು ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಚನ್ನಬಸಪ್ಪ ಮಾತನಾಡಿ, 'ಸುಪ್ರೀಂ ಕೋರ್ಟ್ ತೀರ್ಪು ಇದ್ದರೂ ಮಸೀದಿಗಳ ಮೇಲೆ ಧ್ವನಿವರ್ಧಕ ತೆಗೆಸಲು ಆಗಿಲ್ಲ. ಮೊದಲು ಆಜಾನ್ ನಿಷೇಧ ಮಾಡಿ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, 'ಸುಪ್ರೀಂಕೋರ್ಟ್ ತೀರ್ಪು ಇರುವುದು ಧ್ವನಿವರ್ಧಕದ ಶಬ್ದ ಮಿತಿಯ ಕುರಿತು, ಆಜಾನ್ ವಿರುದ್ಧವಲ್ಲ. ಸುಮ್ಮನೆ ಮನಸ್ಸಿಗೆ ಬಂದಂತೆ ಮಾತನಾಡಬೇಡಿ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಉತ್ಸವ, ಸಮಾರಂಭಗಳಲ್ಲಿ ಡಿ.ಜೆ ನಿಷೇಧ ಮಾಡುವ ಪ್ರಸ್ತಾವಕ್ಕೆ ಬಿಜೆಪಿಯ ಎಸ್.ಸುರೇಶ್‌ಕುಮಾರ್ ಸೇರಿದಂತೆ ಹಲವು ಸದಸ್ಯರು ಬೆಂಬಲ ವ್ಯಕ್ತಪಡಿಸಿದರು.

ಪ್ರತಿ ಜಿಲ್ಲೆಯಲ್ಲೂ 'ಜಿಲ್ಲಾ ಉತ್ಸವ'

ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಉತ್ಸವ ಹಮ್ಮಿಕೊಳ್ಳಲು ಪ್ರತ್ಯೇಕ ನೀತಿ ರೂಪಿಸುವ ಕುರಿತು ಚರ್ಚೆ ನಡೆಯಿತು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಮಾತನಾಡಿ, 'ಕದಂಬೋತ್ಸವ, ಆನೆಗೊಂದಿ, ಶ್ರೀರಂಗಪಟ್ಟಣ, ಹಂಪಿ, ಕರಾವಳಿ ಸೇರಿದಂತೆ ಹಲವು ಉತ್ಸವಗಳನ್ನು ಆಚರಿಸಲಾಗುತ್ತಿದೆ. ಈಗಾಗಲೇ ಶಿವಮೊಗ್ಗ ದಸರಾ ಉತ್ಸವಕ್ಕೆ ₹50 ಲಕ್ಷ ನೀಡಿದ್ದೇವೆ. ಹೀಗೆ ಅವಕಾಶ ಕೊಡುತ್ತಾ ಹೋದರೆ ಪ್ರತಿ ಜಿಲ್ಲೆಯಲ್ಲೂ ಕೇಳುತ್ತಾರೆ' ಎಂದರು.

'ನಮ್ಮದು ಭಿನ್ನ ಸಂಸ್ಕೃತಿ, ಸಂಪ್ರದಾಯ, ಪರಂಪರೆ ಆಚರಣೆ ಒಳಗೊಂಡ ಜಿಲ್ಲೆಗಳನ್ನು ಒಳಗೊಂಡ ರಾಜ್ಯ. ಹಾಗಾಗಿ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಉತ್ಸವ ನಡೆಸಬೇಕು. ಇದರಿಂದ ಯುವ ಪೀಳಿಗೆಗೆ, ಮಕ್ಕಳಿಗೆ ಆಯಾ ನೆಲದ ವಿಶೇಷತೆಯನ್ನು ಪರಿಚಯಿಸಲು, ಬೆಳೆಸಿ ಉಳಿಸಿಕೊಂಡು ಹೋಗಲು ನೆರವಾಗುತ್ತದೆ' ಎಂದು ಯು.ಟಿ.ಖಾದರ್ ಸಲಹೆ ನೀಡಿದರು.

ಬಿಜೆಪಿಯ ವಿ.ಸುನಿಲ್‌ಕುಮಾರ್ ಮಾತನಾಡಿ, ಪ್ರತಿ ಜಿಲ್ಲೆಗೂ ತನ್ನದೇ ಆದ ಶ್ರೀಮಂತಿಕೆ ಇದೆ. ಉತ್ಸವಕ್ಕೆ ಅವಕಾಶ ನೀಡಬೇಕು. ಸ್ಥಳೀಯ ಸಂಪನ್ಮೂಲ ಬಳಸಿಕೊಳ್ಳಬೇಕು ಎಂದರು.

ಎಲ್ಲರ ಅಭಿಪ್ರಾಯ ಪಡೆದು ಕಾರ್ಯಕ್ರಮ ಆಯೋಜನೆ, ಕಲಾವಿದರ ಬಳಕೆ, ಸಹಾಯಧನ ನಿಗದಿ ಸೇರಿದಂತೆ ನೀತಿ ರೂಪಿಸಬೇಕು ಎಂದು ಹಲವು ಸದಸ್ಯರು ಸಲಹೆ ನೀಡಿದರು.

ವಿಧಾನಪರಿಷತ್ — ಪ್ರಶ್ನೋತ್ತರ

ಡಿಸೆಂಬರ್‌ಗೆ ಪೋಡಿ ಇತ್ಯರ್ಥ

ಸರ್ಕಾರದಿಂದ ಭೂಮಿ ಮಂಜೂರಾದ ಬಗ್ಗೆ ದಾಖಲೆಗಳು ಇರುವ ಆಸ್ತಿಗಳ ದರಖಾಸ್ತು ಪೋಡಿಯನ್ನು ಈ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು. ಇದಕ್ಕೆ ಸಂಬಂಧಿಸಿದ 5,70,116 ಅರ್ಜಿಗಳು ಬಾಕಿ ಇವೆ. ನಮ್ಮ ಸರ್ಕಾರ ಬಂದ ನಂತರ 2 ಲಕ್ಷಕ್ಕೂ ಅಧಿಕ ಪ್ರಕರಣಗಳಲ್ಲಿ ಪೋಡಿಗೆ ಆದೇಶವಾಗಿದೆ.
ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಎಲ್ಲ ಕಡೆ ಬಾಕಿ ಇರುವ ಪ್ರಕರಣಗಳನ್ನು ಬೇಗ ಇತ್ಯರ್ಥ ಮಾಡಲು ಕ್ರಮಕೈಗೊಂಡಿದ್ದೇವೆ. ಮಂಜೂರಾದ ದಾಖಲೆಗಳು ಇಲ್ಲದೆ ಇದ್ದರೆ, ಅಂತಹ ಪ್ರಕರಣಗಳನ್ನು ಯಾವ ರೀತಿ ಇತ್ಯರ್ಥ ಮಾಡಬೇಕು ಎಂದು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು

ಕೃಷ್ಣ ಬೈರೇಗೌಡ, ಕಂದಾಯ ಸಚಿವ
ಪ್ರಶ್ನೆ: ಪ್ರತಾಪ್ ಸಿಂಹ ನಾಯಕ್ ಕೆ, ಬಿಜೆಪಿ

400 ಬಸ್ ಖರೀದಿಗೆ ಟೆಂಡರ್

ಕಲ್ಯಾಣ ಕರ್ನಾಟಕ ಭಾಗಕ್ಕೆ 400 ಬಸ್‌ಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿದೆ. ಇದರಲ್ಲಿ ಬಳ್ಳಾರಿ, ಹೊಸಪೇಟೆ ಭಾಗಕ್ಕೂ ಆದ್ಯತೆ ನೀಡಲಾಗುವುದು. ಇದಲ್ಲದೆ 56 ಪ್ರೀಮಿಯಂ ಬಸ್‌ಗಳನ್ನು ಖರೀದಿಸಲಾಗುವುದು. ಇದಾದ ಬಳಿಕ ಬಸ್‌ಗಳ ಕೊರತೆ ನೀಗಲಿದೆ.
ಇದಲ್ಲದೆ ಈ ಬಾರಿಯ ಬಜೆಟ್‌ನಲ್ಲಿ ಒಂದು ಸಾವಿರ ಬಸ್‌ಗಳ ಖರೀದಿಗೆ ಒಪ್ಪಿಗೆ ನೀಡಲಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಒಟ್ಟು 6,80 ಬಸ್‌ಗಳನ್ನು ಖರೀದಿಸಲಾಗಿದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೊಸ ಬಸ್‌ಗಳನ್ನು ಖರೀದಿಸಿರಲಿಲ್ಲ. ಈಗ ಉಂಟಾಗಿರುವ ಸಮಸ್ಯೆಗೆ ಹಿಂದಿನ ಸರ್ಕಾರ ಕಾರಣ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ. **ಪ್ರಶ್ನೆ: ವೈ.ಎಂ.ಸತೀಶ್,** ಬಿಜೆಪಿ

'₹ 500 ಕೋಟಿ ಅನುದಾನ ಕೇಳಿದ್ದೇನೆ'

ರಾಜ್ಯದಲ್ಲಿರುವ 2,866 ಕೊಳೆಗೇರಿಗಳ ಅಭಿವೃದ್ಧಿಗೆ ₹50 ಕೋಟಿ ಅನುದಾನ ಸಾಲದು. ಯಾವುದೇ ಸರ್ಕಾರ ಇದ್ದಾಗಲೂ ಕೊಳೆಗೇರಿಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿಲ್ಲ. ಪೂರಕ ಬಜೆಟ್‌ನಲ್ಲಿ ₹500 ಕೋಟಿ ಕೊಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ. ಇದಲ್ಲದೆ ಸಿಎಸ್‌ಆರ್ ಯೋಜನೆಯಡಿ ವಿಪ್ರೊ, ಇನ್ಫೊಸಿಸ್ ಸಂಸ್ಥೆಗಳ ನೆರವು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಜಮೀರ್ ಅಹಮದ್ ಖಾನ್, ವಸತಿ ಸಚಿವ
ಪ್ರಶ್ನೆ: ಕೆ.ಗೋವಿಂದರಾಜ್, ಜೆಡಿಎಸ್

ಖಾತೆ ಬದಲಾವಣೆ ಸ್ವಯಂಚಾಲಿತ

ಶೇ 98ರಷ್ಟು ಪ್ರಕರಣಗಳಲ್ಲಿ ಖಾತೆ ಬದಲಾವಣೆ ಸ್ವಯಂಚಾಲಿತವಾಗಿ ಆಗುತ್ತಿದೆ. ಖಾಸಗಿ ವ್ಯಕ್ತಿಗಳ ತಕರಾರುಗಳಿಗೆ ಕಡಿವಾಣ ಹಾಕಲಾಗಿದೆ. ಉಪ ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ಹಂತದಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ಎಂಟು ಮಂದಿ ವಿಶೇಷ ಜಿಲ್ಲಾಧಿಕಾರಿಗಳು, 72 ಮಂದಿ ವಿಶೇಷ ಉಪ ವಿಭಾಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ

ಕೃಷ್ಣ ಬೈರೇಗೌಡ, ಕಂದಾಯ ಸಚಿವ
ಪ್ರಶ್ನೆ: ರಾಮೋಜಿಗೌಡ, ಕಾಂಗ್ರೆಸ್

1.41 ಲಕ್ಷ ಮಕ್ಕಳಿಗಿಲ್ಲ ಹಾಸ್ಟೆಲ್

ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ ಮೂರು ವರ್ಷಗಳಲ್ಲಿ 250 ಹೊಸ ಹಾಸ್ಟೆಲ್‌ಗಳನ್ನು ಆರಂಭಿಸಲಾಗಿದೆ. ಆದರೂ 2024–25ನೇ ಸಾಲಿನಲ್ಲಿ 1.41 ಲಕ್ಷ ಮಕ್ಕಳಿಗೆ ಸೌಲಭ್ಯ ಸಿಕ್ಕಿಲ್ಲ. ಬೇಡಿಕೆ ಸಾಕಷ್ಟು ಇದೆ. ಶಾಸಕರ ಒತ್ತಡಕ್ಕೆ ಅಗತ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಹಾಸ್ಟೆಲ್‌ಗಳಿಗೆ ದಾಖಲು ಮಾಡಲಾಗುತ್ತಿದೆ. ಎಲ್ಲ ಸಮಸ್ಯೆಗಳಿಗೂ ಪರಿಹಾರ ಹುಡುಕಲಾಗುವುದು. ಮತ್ತೆ 50 ಹೊಸ ಹಾಸ್ಟೆಲ್ ತೆರೆಯಲಾಗುವುದು.

ಶಿವರಾಜ ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ
ಪ್ರಶ್ನೆ: ದೊಡ್ಡನಗೌಡ ಪಾಟೀಲ, ಬಿಜೆಪಿ

994 ಪಿಡಿಒ ಹುದ್ದೆ ಖಾಲಿ

ರಾಜ್ಯದಲ್ಲಿ 994 ಪಿಡಿಒ ಹುದ್ದೆಗಳು ಖಾಲಿ ಇದ್ದು 247 ಹುದ್ದೆಗಳ ಭರ್ತಿ ಪ್ರಕ್ರಿಯೆ ನಡೆಯುತ್ತಿದೆ. ಕರ್ನಾಟಕ ಲೋಕಸೇವಾ ಆಯೋಗ ಈಗಾಗಲೇ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದೆ. ಕೆಲ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲಾಗುವುದು. ಕೆಲವೆಡೆ ಪ್ರಭಾರ ವ್ಯವಸ್ಥೆ ಮೂಲಕ ಆಡಳಿತ ನಿರ್ವಹಣೆ ಮಾಡಲಾಗುತ್ತಿದೆ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ. **ಪ್ರಶ್ನೆ:ಇ.ಅನ್ನಪೂರ್ಣ,** ಕಾಂಗ್ರೆಸ್

ಮುಖ್ಯಮಂತ್ರಿ ಸೂಚನೆಯ ಬೆನ್ನಲ್ಲೆ ಮುಖ್ಯ ಕಾರ್ಯದರ್ಶಿ ಕ್ರಮ

ಬಾರದ ಉತ್ತರ: ಕಾರ್ಯದರ್ಶಿಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ವಿಧಾನ ಮಂಡಲಕ್ಕೆ ಸಕಾಲದಲ್ಲಿ ಕಳುಹಿಸದೇ ಇರುವ ಇಲಾಖೆಗಳ ಕಾರ್ಯದರ್ಶಿಗಳಿಂದ ತಕ್ಷಣ ವಿವರಣೆ ಪಡೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ ಬೆನ್ನಲ್ಲೆ, ಆರು ಕಾರ್ಯದರ್ಶಿಗಳಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.

ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಕುರಿತು ಲಿಖಿತ ಸಮಜಾಯಿಷಿ ನೀಡಬೇಕು ಎಂದು ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಮ್ಲಾನ್ ಆದಿತ್ಯ ಬಿಸ್ವಾಸ್, ವಸತಿ ಇಲಾಖೆ ಕಾರ್ಯದರ್ಶಿ ಕೆ.ಪಿ. ಮೋಹನ್ ರಾಜ್, ಪಶುಸಂಗೋಪನಾ ಇಲಾಖೆಯ ಕಾರ್ಯದರ್ಶಿ ಆರ್. ವಿನೋತ್ ಪ್ರಿಯ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿ ಆರ್.ಗಿರೀಶ್, ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್.ವಿ. ಪ್ರಸಾದ್ ಅವರಿಗೆ ನೋಟಿಸ್ ನೀಡಲಾಗಿದೆ.

ಎಲ್ಲ ಸಚಿವರಿಗೆ ಮುಖ್ಯಮಂತ್ರಿ ಬರೆದಿದ್ದ ಪತ್ರದಲ್ಲಿದ್ದ ಅಂಶಗಳನ್ನು ಮುಖ್ಯ ಕಾರ್ಯದರ್ಶಿ ತಮ್ಮ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

'ಮಾರ್ಚ್ 16ರಂದು ವಿಧಾನಸಭೆಯಲ್ಲಿ 245 ಪ್ರಶ್ನೆಗಳ ಪೈಕಿ 90ಕ್ಕೆ ಮಾತ್ರ ಉತ್ತರ ಒದಗಿಸಲಾಗಿದೆ. ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸದೇ ಇರುವುದರಿಂದ ವಿಧಾನಸಭಾ ಸದಸ್ಯರು ಸದನದಲ್ಲಿ ಚರ್ಚಿಸಲು ಅಡಚಣೆಯಾಗಿದೆ. ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟು ಮಾಡುವುದರ ಜೊತೆಗೆ, ಶಾಸಕರು ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿ ಉಂಟು ಮಾಡಿದೆ. ಮುಖ್ಯಮಂತ್ರಿಯ ಜೊತೆ ನಡೆದ ಸಭೆಯಲ್ಲಿ ಸಭಾಧ್ಯಕ್ಷರು ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಉಳಿಕೆ ಉತ್ತರಗಳನ್ನು ವಿಧಾನಸಭೆಯ ಕಾರ್ಯದರ್ಶಿಗೆ ತಕ್ಷಣ ನೀಡಬೇಕು. ಉತ್ತರ ಕಳುಹಿಸಲು ಸಾಧ್ಯವಾಗದ ಸಂದರ್ಭದಲ್ಲಿ, ಸಂಬಂಧಪಟ್ಟ ಶಾಸಕರಿಗೆ ತಮ್ಮ ಇಲಾಖೆಯ ಸಚಿವರಿಂದ ವಿಳಂಬಕ್ಕೆ ಸಕಾರಣಗಳನ್ನು ನೀಡಿ ಪ್ರತ್ಯೇಕ ಪತ್ರ ನೀಡಬೇಕು. ಜೊತೆಗೆ ಮಾಹಿತಿ ಒದಗಿಸುವ ನಿರ್ದಿಷ್ಟ ಸಮಯದ ಬಗ್ಗೆಯೂ ತಿಳಿಸಬೇಕು' ಎಂದು ಸೂಚಿಸಿದ್ದಾರೆ.

ಅಶೋಕ ಭೇಟಿ ಮಾಡಿದ ಅಧಿಕಾರಿಗಳು: ಸುಮಾರು 10 ರಿಂದ 12 ಐಎಎಸ್ ಅಧಿಕಾರಿಗಳು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರನ್ನು ಭೇಟಿ ಚರ್ಚೆ ನಡೆಸಿದರು. ತಮ್ಮಲ್ಲಿ ಯಾರೂ ಕಚೇರಿ ಕೆಲಸ ಬಿಟ್ಟು ಗಾಲ್ಫ್ ಆಡಲು ಹೊರಗೆ ಹೋಗುತ್ತಿಲ್ಲ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿ ಸಾಧ್ಯವಷ್ಟು ಹೆಚ್ಚು ಪ್ರಶ್ನೆಗಳಿಗೆ ಉತ್ತರ ನೀಡುತ್ತೇವೆ ಎಂಬ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

'ನಾನು ಕೆಲವು ಅಧಿಕಾರಿಗಳು ಹೋಗುತ್ತಾರೆ ಎಂದಿದ್ದೇನೆ. ಎಲ್ಲರನ್ನೂ ಉದ್ದೇಶಿಸಿ ಹೇಳಿಲ್ಲ. ಉತ್ತಮವಾಗಿ ಕೆಲಸ ಮಾಡುವವರೂ ಇದ್ದಾರೆ. ಎಲ್ಲರೂ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಬೇಕು ಎಂದು ಸಲಹೆ ನೀಡಿದ್ದಾರೆಂದು' ಮೂಲಗಳು ಹೇಳಿವೆ.

ಅಧಿಕಾರಿಗಳ ಅಮಾನತಿಗೆ ಸಿ.ಎಂ ಸೂಚನೆ: ಪರಮೇಶ್ವರ

'ಸದಸ್ಯರು ಕೇಳಿರುವ ಎಲ್ಲ ಪ್ರಶ್ನೆಗಳಿಗೆ ಅಧಿವೇಶನ ಮುಗಿಯುವುದರ ಒಳಗೆ ಉತ್ತರ ನೀಡಲಾಗುವುದು. ಉತ್ತರ ಕೊಡುವಲ್ಲಿ ಲೋಪ ಎಸಗಿದ ಕಾರ್ಯದರ್ಶಿಗಳನ್ನು ಅಮಾನತು ಮಾಡಲು ಮುಖ್ಯಮಂತ್ರಿಯವರು ಈಗಾಗಲೇ ಸೂಚನೆ ನೀಡಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

'ಸದಸ್ಯರು ಒಟ್ಟು 688 ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ, ಇದುವರೆಗೆ 400 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ. ಇವುಗಳಿಗೆ ಎಳ್ಳು–ನೀರು ಬಿಡುತ್ತೀರಾ?' ಎಂದು ಜೆಡಿಎಸ್‌ನ ಎಸ್.ಎಲ್.ಭೋಜೆಗೌಡ ಅವರು ಬುಧವಾರ ಸದನದಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪರಮೇಶ್ವರ, ವಿಧಾನ ಸಭೆಯಲ್ಲೂ ಈ ಬಗ್ಗೆ ಪ್ರಸ್ತಾಪ ಆಗಿದೆ. ಸಿದ್ದರಾಮಯ್ಯ ಅವರು ಸಭೆ ನಡೆಸಿ ಉತ್ತರ ಕೊಡಿಸಲು ಕ್ರಮಕ್ಕೆ ಸೂಚಿಸಿದ್ದಾರೆ. ಮುಂದಿನ ವಾರದ ವೇಳೆಗೆ ಪರಿಸ್ಥಿತಿ ಸುಧಾರಿಸಲಿದೆ ಎಂದು ಭರವಸೆ ನೀಡಿದರು.

ಆಗ ಮಧ್ಯಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, 'ಭರವಸೆ ನೀಡಿದರೆ ಸಾಲದು. ಕಾರ್ಯರೂಪಕ್ಕೆ ಬರಬೇಕು. ಇದೇ 25ರ ಒಳಗೆ ಸದಸ್ಯರ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಇಲ್ಲದಿದ್ದರೆ, 26ಕ್ಕೆ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಿ' ಎಂದು ನಿರ್ದೇಶನ ನೀಡಿದರು.

'ಪರಿಶಿಷ್ಟ ಪಂಗಡಕ್ಕೂ ಒಳಮೀಸಲಾತಿ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡಗಳಿಗೂ ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕು ಎಂದು ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಶಾಂತಾರಾಮ್ ಬುಡ್ನ ಸಿದ್ದಿ ಒತ್ತಾಯಿಸಿದರು.

ಪರಿಷತ್ತಿನ ಬುಧವಾರದ ಕಲಾಪದ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಶಾಂತಾರಾಮ್ ಅವರು, 'ಪ್ರಜಾವಾಣಿ' ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಉಲ್ಲೇಖಿಸಿದರು.

'ಪರಿಶಿಷ್ಟ ಪಂಗಡಗಳಿಗೂ ಒಳಮೀಸಲಾತಿ ಅಗತ್ಯವಿದೆ ಎಂಬುದರ ಕುರಿತಾಗಿ ಹಲವು ಬುಡಕಟ್ಟು ಸಮುದಾಯಗಳ ಮುಖಂಡರು ಈಚೆಗೆ ಸಭೆ ನಡೆಸಿದ್ದರು. ಸುಪ್ರೀಂ ಕೋರ್ಟ್ ಆದೇಶವನ್ನು ಆಧಾರವಾಗಿ ಇರಿಸಿಕೊಂಡು ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರವು ಆಯೋಗವನ್ನು ರಚಿಸಿತು. ಆದರೆ, ಪರಿಶಿಷ್ಟ ಪಂಗಡಗಳಿಗೆ ಒಳಮೀಸಲಾತಿ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಿಲ್ಲ ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರವನ್ನು ಒತ್ತಾಯಿಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದರು.



ಕೆಜಿಎಫ್‌ನ ಸಂತ ಜೋಸೆಫ್ ಶಾಲೆಯಲ್ಲಿ ವಿದ್ಯಾರ್ಥಿನಿ ಕುಸುಮಗೆ ಸ್ಟ್ರೆಚರ್ ಮೇಲೆ ಮಲಗಿ ಪರೀಕ್ಷೆ ಬರೆಯಲು ಅಧಿಕಾರಿಗಳು ಬುಧವಾರ ವ್ಯವಸ್ಥೆ ಕಲ್ಪಿಸಿದ್ದರು

ಸ್ಟ್ರೆಚರ್ ಮೇಲೆ ಪರೀಕ್ಷೆ ಬರೆದ ವಿದ್ಯಾರ್ಥಿನಿ

ಪ್ರಜಾವಾಣಿ ವಾರ್ತೆ

ಕೆಜಿಎಫ್ (ಕೋಲಾರ): ರಸ್ತೆ ಅಪಘಾತದಲ್ಲಿ ಗಾಯಗೊಂಡು ಏಳು ತಿಂಗಳಿಂದ ಹಾಸಿಗೆಯಲ್ಲಿದ್ದ ಆಂಡರಸನ್‌ಪೇಟೆಯ ಸೇಂಟ್ ಮೇರೀಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಎಸ್. ಕುಸುಮ ಸ್ಟ್ರೆಚರ್‌ನಲ್ಲಿ ಮಲಗಿಕೊಂಡೇ ಬುಧವಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದಾಳೆ.

2025ರ ಆಗಸ್ಟ್14ರಂದು ನಡೆದ ರಸ್ತೆ ಅಪಘಾತದಲ್ಲಿ ಕುಸುಮ ಬಲಗಾಲಿಗೆ ಗಂಭೀರ ಗಾಯವಾಗಿತ್ತು. ಅಂದಿನಿಂದ ಆಸ್ಪತ್ರೆ ಹಾಗೂ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕುಸುಮ ಆಂಬುಲೆನ್ಸ್‌ನಲ್ಲಿ ಸಂತ ಜೋಸೆಫ್ ಶಾಲೆಯ ಪರೀಕ್ಷಾ ಕೇಂದ್ರಕ್ಕೆ ಬಂದಳು.

'ಪೋಷಕರು ಹಾಗೂ ವಿದ್ಯಾರ್ಥಿನಿ ಕೋರಿಕೆ ಮೇರೆಗೆ ಪ್ರತ್ಯೇಕ ಕೊಠಡಿಯಲ್ಲಿ ಸ್ಟ್ರೆಚರ್‌ನಲ್ಲಿಯೇ ಪರೀಕ್ಷೆ ಬರೆಯಲು ಅನುಮತಿ ನೀಡಲಾಗಿದೆ. ಪರೀಕ್ಷೆ ಬರೆಯಲು ಸಹಾಯಕಿಯೊಬ್ಬರ ನಿಯೋಜಿಸಲಾಗಿದೆ' ಎಂದು ಬಿಇಒ ಬಿ.ಜಿ.ನಾರಾಯಣಸ್ವಾಮಿ ವಿವರಿಸಿದರು.

'ದಿನ ಪರೀಕ್ಷಾ ಕೇಂದ್ರಕ್ಕೆ ಬಂದು ಹೋಗಲು ಉಚಿತ ಆಂಬುಲೆನ್ಸ್ ವ್ಯವಸ್ಥೆ ಮಾಡುವಂತೆ ಜಿಲ್ಲಾ ಶಸ್ತ್ರ ಚಿಕಿತ್ಸಕರಿಗೆ ಮನವಿ ಮಾಡಲಾಗಿದೆ. ಆಕೆಯ ಆರೋಗ್ಯದ ಬಗ್ಗೆ ನಿಗಾ ಇಡಲು ಆರೋಗ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಿದೆ' ಎಂದರು.

ಕುಸುಮ ಕಾಲಿಗೆ ಶಸ್ತ್ರಚಿಕಿತ್ಸೆಯಾಗಿದೆ. ಕಾಲಿನ ಗಾಯ ಗುಣವಾಗಿಲ್ಲ. ಇನ್ನೂ ಎರಡು ಶಸ್ತ್ರಚಿಕಿತ್ಸೆ ಬಾಕಿ ಇವೆ. ಪರೀಕ್ಷೆ ನಂತರ ಮಾಡಿಸುವುದಾಗಿ ಕುಸುಮ ತಾಯಿ ಸುಧಾ ತಿಳಿಸಿದರು.

ಒಡೆದ ಕಾಲುವೆ ತಡೆಗೋಡೆ

ಅಪಾರ ಪ್ರಮಾಣದ ನೀರುವ್ಯರ್ಥ; ಕೊಚ್ಚಿಹೋದ ಮಣ್ಣಿನ ರಸ್ತೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಬಸಾಪುರ ಹಾಗೂ ಬಂಡಿಹರ್ಲಾಪುರ ಗ್ರಾಮಗಳ ನಡುವಿನ 13ನೇ ಮೈಲಿಯಲ್ಲಿ ಮಂಗಳವಾರ ರಾತ್ರಿ ತುಂಗಭದ್ರಾ ಎಡದಂಡೆಯ ಮುಖ್ಯ ಕಾಲುವೆಯ ತಡೆಗೋಡೆ ಒಡೆದಿದೆ. ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳ ಜನರಿಗೆ ಕುಡಿಯಲು ಬಳಕೆಯಾಗಬೇಕಿದ್ದ ಅಪಾರ ಪ್ರಮಾಣದ ನೀರು ವ್ಯರ್ಥವಾಗಿ ಹರಿದಿದೆ.

ಮೂರ್ನಾಲ್ಕು ತಿಂಗಳ ಹಿಂದೆಯೇ ಕಾಲುವೆಯಲ್ಲಿ ಬಿರುಕು ಕಾಣಿಸಿಕೊಂಡಿದ್ದರೂ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸದ ಕಾರಣ ಈ ದುರಂತ ಸಂಭವಿಸಿದೆ ಎಂದು ರೈತರು, ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಆರೋಪಿಸಿದ್ದಾರೆ.

ಬೇಸಿಗೆ ಸಮಯವಾಗಿದ್ದರಿಂದ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಜನರಿಗೆ ಕಾಲುವೆ ಮೂಲಕ ಜಲಾಶಯದಿಂದ ನೀರು ಹರಿಸಲಾಗಿತ್ತು. 200 ರಿಂದ 2000 ಕ್ಯುಸೆಕ್ ತನಕ ಹಂತಹಂತವಾಗಿ ನೀರಿನ ಪ್ರಮಾಣ ಏರಿಕೆ ಮಾಡಿದ್ದರಿಂದ ರಭಸ ತಾಳದೆ ಕಾಲುವೆ ತಡೆಗೋಡೆ ಒಡೆದಿದೆ.

ಕಾಲುವೆಯಿಂದ ರಭಸವಾಗಿ ನುಗ್ಗಿ ಬಂದ ನೀರು ಬಸಾಪುರ ಗ್ರಾಮ ವ್ಯಾಪ್ತಿಯ ನೂರಾರು ಎಕರೆಯ ಭತ್ತದ ಗದ್ದೆ ಹಾಗೂ ಅಕ್ಕಪಕ್ಕದ ರೆಸಾರ್ಟ್‌ಗಳಿಗೆ ನುಗ್ಗಿದೆ. ರೆಸಾರ್ಟ್‌ನಲ್ಲಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಇರದ ಕಾರಣ ತೊಂದರೆಯಾಗಿಲ್ಲ.

ಮಂಗಳವಾರ ರಾತ್ರಿಯೇ ಜಲಾಶಯದಿಂದ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಗಿದ್ದು, ಮೂರ್ನಾಲ್ಕು ದಿನಗಳಲ್ಲಿ ದುರಸ್ತಿ ಮಾಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಕಾಲುವೆ ಸಮೀಪದಲ್ಲಿದ್ದ ಮಣ್ಣಿನ ರಸ್ತೆ ಸಂಪೂರ್ಣವಾಗಿ ಕೊಚ್ಚಿ ಹೋಗಿದೆ.



ಕೊಪ್ಪಳ ತಾಲ್ಲೂಕಿನ ಬಸಾಪುರ ಸಮೀಪದಲ್ಲಿ ತುಂಗಭದ್ರಾ ಜಲಾಶಯದ ಎಡದಂಡೆ ಮುಖ್ಯಕಾಲುವೆ ತಡೆಗೋಡೆ ಒಡೆದಿದೆ
ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಸಂಕ್ಷಿಪ್ತ ಸುದ್ದಿ

'3 ದಿನದಲ್ಲಿ ಅಭ್ಯರ್ಥಿಗಳು ಅಂತಿಮ'


ನವದೆಹಲಿ: ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ 2–3 ದಿನಗಳಲ್ಲಿ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

'ದಾವಣಗೆರೆ ಟಿಕೆಟ್ ಗೊಂದಲದ ಬಗ್ಗೆ ನನಗೆ ಮಾಹಿತಿ ಇಲ್ಲ. ಅಭ್ಯರ್ಥಿಗಳ ಆಯ್ಕೆ ಬಗ್ಗೆ ನಾನು ಹಾಗೂ ಮುಖ್ಯಮಂತ್ರಿ ಚರ್ಚೆ ಮಾಡಿದ್ದೇವೆ. ಕ್ಷೇತ್ರದ ವೀಕ್ಷಕರ ವರದಿ ಇನ್ನೂ ಬಂದಿಲ್ಲ. ಬಂದ ಬಳಿಕ ಹೈಕಮಾಂಡ್‌ಗೆ ವರದಿ ಸಲ್ಲಿಸುತ್ತೇವೆ. ಹೈಕಮಾಂಡ್ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಿದೆ' ಎಂದರು.

'ದಾವಣಗೆರೆ ಚುನಾವಣಾ ಆಕಾಂಕ್ಷಿಗಳು ನನ್ನನ್ನು ಭೇಟಿ ಮಾಡಿದ್ದಾರೆ. ನಾನು ಅಲ್ಲಿನ ಸಂಸದರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜತೆ ಚರ್ಚೆ ಮಾಡಿದ್ದೇನೆ' ಎಂದರು. ಸಚಿವ ಸ್ಥಾನಕ್ಕಾಗಿ ಶಾಸಕರು ಪ್ರತ್ಯೇಕ ಸಭೆಗಳನ್ನು ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಶಾಸಕರನ್ನು ನಿಯಂತ್ರಣ ಮಾಡುವ ಜವಾಬ್ದಾರಿ ಮುಖ್ಯಮಂತ್ರಿಗಳದ್ದು. ಈ ವಿಷಯದಲ್ಲಿ ಶಾಸಕಾಂಗದ ಪಕ್ಷದ ನಾಯಕರಾದ ಮುಖ್ಯಮಂತ್ರಿಗಳಿಗೆ ಹೊಣೆ ಜಾಸ್ತಿ ಇದೆ' ಎಂದರು.

ಭಾಲಚಂದ್ರ ಕೃತಿಗೆ ಪ್ರಶಸ್ತಿ

ಮೈಸೂರು: ಇಲ್ಲಿನ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ನೀಡಲಾಗುವ 2024ನೇ ಸಾಲಿನ 'ಶಿವರಾತ್ರೀಶ್ವರ ಪ್ರಶಸ್ತಿ'ಗೆ ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರ ಗ್ರಾಮದ ಅನುವಾದಕ, ದಿವಂಗತ ಪ್ರೊ.ಭಾಲಚಂದ್ರ ಜಯಶೆಟ್ಟಿ ಅವರ 'ಅಧ್ಯಾತ್ಮ ಕ್ರಾಂತಿವೀರ ಮಹಾತ್ಮ ಶ್ರೀ ಬಸವೇಶ್ವರ್ ಕೇ ವಚನ್' ಹಿಂದಿ ಕೃತಿಯನ್ನು ಆಯ್ಕೆ ಮಾಡಲಾಗಿದೆ.



ಪ್ರೊ.ಭಾಲಚಂದ್ರ ಜಯಶೆಟ್ಟಿ

ಪ್ರಶಸ್ತಿಯು ಫಲಕ, ಸ್ವಸ್ತಿವಾಚನ ಹಾಗೂ ₹ 25ಸಾವಿರ ಒಳಗೊಂಡಿದೆ. ಪುರಸ್ಕೃತರ ಕುಟುಂಬದವರಿಗೆ ಪ್ರದಾನ ಮಾಡಲಾಗುವುದು ಎಂದು ಪ್ರಕಟಣ ವಿಭಾಗದ ನಿರ್ದೇಶಕ ಮೊರಬದ ಮಲ್ಲಿಕಾರ್ಜುನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನಂಜನಗೂಡು–ನಿಲಂಬೂರು ಮಾರ್ಗಕ್ಕೆ ಅಂತಿಮ ಸ್ಥಳ ಸಮೀಕ್ಷೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ನಂಜನಗೂಡು– ನಿಲಂಬೂರು ರೈಲು ಮಾರ್ಗ ನಿರ್ಮಾಣಕ್ಕೆ ಹೊಸದಾಗಿ ಅಂತಿಮ ಸ್ಥಳ ಸಮೀಕ್ಷೆ ನಡೆಸಲಾಗುವುದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, 'ರೈಲ್ವೆ ಯೋಜನೆಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಕ್ಷೇತ್ರ ಸಮೀಕ್ಷೆ ಪೂರ್ಣಗೊಂಡಿದೆ' ಎಂದರು.

'ಈ ಮಾರ್ಗ ನಿರ್ಮಾಣಕ್ಕೆ 2007–08ರಲ್ಲಿ ಸಮೀಕ್ಷೆ ಕೈಗೆತ್ತಿಕೊಳ್ಳಲಾಗಿತ್ತು. ಪ್ರಯಾಣಿಕರ ದಟ್ಟಣೆ ಕಡಿಮೆ ಇರಲಿದ್ದು, ಯೋಜನೆ ಅನುಷ್ಠಾನ ಕಾರ್ಯಸಾಧುವಲ್ಲ ಎಂದು ಸಮೀಕ್ಷೆ ವರದಿ ತಿಳಿಸಿತ್ತು. ಹೀಗಾಗಿ, ಯೋಜನೆ ಕೈಗೆತ್ತಿಕೊಂಡಿರಲಿಲ್ಲ' ಎಂದರು.

ಬ್ರಾಡ್‌ಗೇಜ್ ಮಾರ್ಗಕ್ಕೆ ಡಿಪಿಆರ್: ಬಳ್ಳಾರಿ ಸಂಸದ ಇ.ತುಕಾರಾಂ ಪ್ರಶ್ನೆಗೆ ಉತ್ತರ ನೀಡಿರುವ ಅಶ್ವಿನಿ ವೈಷ್ಣವ್, 'ಬಳ್ಳಾರಿಯ ಸ್ವಾಮಿಹಳ್ಳಿ ಹಾಗೂ ಆಂಧ್ರಪ್ರದೇಶದ ರಾಯದುರ್ಗ ನಡುವೆ ಬ್ರಾಡ್‌ಗೇಜ್ ರೈಲು ಮಾರ್ಗ ನಿರ್ಮಾಣಕ್ಕೆ ಅಂತಿಮ ಸ್ಥಳ ಸಮೀಕ್ಷೆ ನಡೆಸಲಾಗಿದ್ದು, ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುವುದು' ಎಂದರು.

ಗಣತಿ: 50 ವರ್ಷ ದಾಟಿದ ಶಿಕ್ಷಕಿಯರಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐವತ್ತು ವರ್ಷ ದಾಟಿದ ಶಾಲಾ ಶಿಕ್ಷಕಿಯರು ಹಾಗೂ ವರ್ಗಾವಣೆಯಾಗಿರುವ ಶಿಕ್ಷಕರಿಗೆ ಜನಗಣತಿ ಕಾರ್ಯದಿಂದ ವಿನಾಯಿತಿ ನೀಡುವಂತೆ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ(ಎಸ್‌ಐಆರ್) ಈಗಾಗಲೇ ಹಲವರನ್ನು ಮತಗಟ್ಟೆ ಅಧಿಕಾರಿಗಳಾಗಿ ನೇಮಕ ಮಾಡಿಕೊಳ್ಳಬೇಕಿದೆ. ಮತಗಟ್ಟೆ ಕೆಲಸಗಳಿಗೆ ನೇಮಕವಾದವರನ್ನು ಜನಗಣತಿ ಕೆಲಸದಿಂದ ಬಿಡಬೇಕು. 2025–26ನೇ ಸಾಲಿನಲ್ಲಿ ವರ್ಗಾವಣೆ ಆಗಿರುವವರನ್ನು ಪರೀಕ್ಷೆಯ ಕಾರಣಕ್ಕಾಗಿ, ಇನ್ನೂ ಕರ್ತವ್ಯದಿಂದ ಬಿಡುಗಡೆ ಮಾಡಿರಲಿಲ್ಲ. ಹಾಗಾಗಿ, ಅವರನ್ನೂ ಗಣತಿ ಕಾರ್ಯದಿಂದ ಹೊರಗಿಡುವಂತೆಯೂ ಸೂಚನೆ ನೀಡಲಾಗಿದೆ.

ಆಯಾ ಜಿಲ್ಲಾಧಿಕಾರಿಗಳು ಸ್ಥಳೀಯವಾಗಿ ಲಭ್ಯವಿರುವ ವಿವಿಧ ಇಲಾಖೆಗಳ ಸಿಬ್ಬಂದಿಯನ್ನು ಬಳಸಿಕೊಂಡು ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಹಾಗೂ ಜನ ಗಣತಿ ಪ್ರಕ್ರಿಯೆಯನ್ನು ನಿಭಾಯಿಸಬೇಕು ಎಂದೂ ನಿರ್ದೇಶನ ನೀಡಲಾಗಿದೆ.


'ಮೊದಲ ಬಾರಿಗೆ ಶಾಸಕರಾದವರು ಸಚಿವರಾಗಲಿ: ಸತೀಶ ಜಾರಕಿಹೊಳಿ

ನವದೆಹಲಿ: ಮೊದಲ ಬಾರಿ ಶಾಸಕರಾದವರು ಸಚಿವರಾಗಲಿ. ಅದರಲ್ಲಿ ತಪ್ಪೇನಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಶ್ನಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮೊದಲ ಬಾರಿಗೆ ಶಾಸಕರಾದವರನ್ನು ಬಿಜೆಪಿ ಮುಖ್ಯಮಂತ್ರಿ ಮಾಡಿದೆ. ದೇವರಾಜ ಅರಸು ಸೇರಿದಂತೆ ಬೇರೆ ಬೇರೆ ಕಾಲಘಟ್ಟದಲ್ಲಿ ಮೊದಲ ಬಾರಿಗೆ ಶಾಸಕರಾದವರು ಸಚಿವರಾಗಿದ್ದಾರೆ. ಸಾಮರ್ಥ್ಯ ಹಾಗೂ ಅರ್ಹತೆ ಇದ್ದವರಿಗೆ ಕೊಡುವುದರಲ್ಲಿ ತಪ್ಪೇನಿದೆ' ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ನನಗೆ ನನ್ನ ಹೃದಯವೇ ದೇವಾಲಯ; ಕರುಣೆಯೇ ತತ್ತ್ವ. ಇದೇ ನನ್ನ ಧರ್ಮ.

–ದಲೈ ಲಾಮಾ

ಸಂಪಾದಕೀಯ

ಬಿಡುಗಡೆ: ಪ್ರಕರಣ ಮುಗಿಯದು ಪ್ರಶ್ನೆಗಳಿಗೆ ಸಿಗಬೇಕಾಗಿದೆ ಉತ್ತರ

ಆರು ತಿಂಗಳ ಬಂಧನದ ನಂತರ ಪರಿಸರ ಹೋರಾಟಗಾರ ಸೊನಂ ವಾಂಗ್ಚುಕ್ ಅವರನ್ನು ಬೇಷರತ್ತಾಗಿ ಬಿಡುಗಡೆ ಮಾಡಿರುವ ಘಟನೆ, ಅವರ ಬಂಧನದ ಸಿಂಧುತ್ವದ ಬಗ್ಗೆ ಅನುಮಾನ ಉಂಟುಮಾಡುವುದರ ಜೊತೆಗೆ, ಸಂಬಂಧಿಸಿದ ಪ್ರಕರಣದಲ್ಲಿ ನಾಗರಿಕರ ಹಕ್ಕುಗಳ ಸೀಮಿತ ಅನ್ವಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವುದು, ಸ್ಥಳೀಯ ಜನರ ಹಕ್ಕುಗಳ ರಕ್ಷಣೆ ಹಾಗೂ ಆ ಪ್ರದೇಶದ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ಸಾಂವಿಧಾನಿಕ ರಕ್ಷಣೆ ಒದಗಿಸುವಂತೆ ಆಗ್ರಹಿಸಿ ನಡೆಯುತ್ತಿದ್ದ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು 2025ರ ಸೆಪ್ಟೆಂಬರ್ 26ರಂದು ಬಂಧಿಸಲಾಗಿತ್ತು. ಲೇಹ್‌ನಲ್ಲಿ ಭುಗಿಲೆದ್ದ ಚಳವಳಿಯಲ್ಲಿ ನಾಲ್ವರು ಮೃತಪಟ್ಟ ಘಟನೆಯನ್ನು ನೆಪ ಮಾಡಿಕೊಂಡು ವಾಂಗ್ಚುಕ್ ಅವರನ್ನು ಬಂಧಿಸಿ, ಜೋಧಪುರ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಲಡಾಖ್‌ನಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ ಅವರನ್ನು ಈಗ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿಯಲ್ಲಿ ವಾಂಗ್ಚುಕ್ ಅವರನ್ನು ಬಂಧಿಸಲಾಗಿತ್ತು; ಅವರ ವಿರುದ್ಧ ದೇಶವಿರೋಧಿ ಪ್ರತಿಭಟನೆಯ ಆರೋಪ ಹೊರಿಸಲಾಗಿತ್ತು ಹಾಗೂ ಪಾಕಿಸ್ತಾನದೊಂದಿಗೆ ಸಂಪರ್ಕ ಹೊಂದಿರುವುದಾಗಿ ಆಪಾದಿಸಿ, ಅವರ ವಿದೇಶಿ ಪ್ರವಾಸಗಳ ಉದ್ದೇಶದ ಬಗ್ಗೆ ಶಂಕೆ ವ್ಯಕ್ತಪಡಿಸಲಾಗಿತ್ತು. ಹಣಕಾಸು ಅಕ್ರಮವನ್ನೂ ಅವರ ಮೇಲೆ ಹೊರಿಸಲಾಗಿತ್ತು. ಈಗ ಅವರ ಬಿಡುಗಡೆ ಸಂದರ್ಭದಲ್ಲಿ ಈ ಎಲ್ಲ ಆಪಾದನೆಗಳು ಯಾವುದೇ ವಿವರಣೆಯಿಲ್ಲದೆ ಇದ್ದಕ್ಕಿದ್ದಂತೆ ಕಣ್ಮರೆಯಾಗಿವೆ. ಆಂದೋಲನವನ್ನು ಶಾಂತಿಯುತವಾಗಿ ನಡೆಸುತ್ತಿದ್ದ ಪ್ರಖ್ಯಾತ ಪರಿಸರ ಕಾರ್ಯಕರ್ತನ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸುವುದಾದರೆ, ಇತರರ ವಿರುದ್ಧವೂ ಇದೇ ರೀತಿಯ ಆರೋಪಗಳನ್ನು ಹೊರಿಸುವ, ಹೊರಿಸಿರುವ ಸಾಧ್ಯತೆ ಇದ್ದೇ ಇದೆ.



ಸೊನಂ ವಾಂಗ್ಚುಕ್ ಅವರ ಬಿಡುಗಡೆ, ಯಾರನ್ನು ಯಾವಾಗ ಬೇಕಾದರೂ ಬಂಧಿಸುವ ಹಾಗೂ ಬಿಡುಗಡೆ ಮಾಡುವ ವ್ಯವಸ್ಥೆ ಅಸ್ತಿತ್ವದಲ್ಲಿ ಇರುವುದರ ಸಂಕೇತದಂತಿದೆ.

ವಾಂಗ್ಚುಕ್ ಅವರ ಬಂಧನವನ್ನು ಪ್ರಶ್ನಿಸಿ ಅವರ ಪತ್ನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್ ಮುಂದೆ ಬರುವುದಕ್ಕೆ ಮೂರು ದಿನಗಳ ಮೊದಲಷ್ಟೇ ಈ ಬಿಡುಗಡೆ ಆಗಿದೆ. ಕೋರ್ಟ್ ಆದೇಶದ ನಂತರ ಬಿಡುಗಡೆ ಮಾಡಬೇಕಾದ ಮುಜುಗರವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸರ್ಕಾರ ಇದ್ದಕ್ಕಿದ್ದಂತೆ ವಾಂಗ್ಚುಕ್ ಅವರನ್ನು ಬಿಡುಗಡೆ ಮಾಡಿದೆಯೇ ಎನ್ನುವ ಪ್ರಶ್ನೆ ಉಂಟಾಗುತ್ತದೆ. ಬಂಧನಕ್ಕೆ ಸಂಬಂಧಿಸಿದ ಕಾರ್ಯವಿಧಾನದ ಪಾರದರ್ಶಕತೆಯನ್ನು ಹಾಗೂ ವಾಂಗ್ಚುಕ್ ಅವರ ಭಾಷಣಗಳ ಪ್ರಚೋದನಕಾರಿ ಸ್ವರೂಪವನ್ನು ಅವುಗಳ ಅನುವಾದದ ಮೂಲಕ ಕೋರ್ಟ್ ಪರಿಶೀಲಿಸಿತ್ತು. ಬಂಧಿತರ ಭಾಷಣಗಳನ್ನು ಸರ್ಕಾರ 'ಅತಿ'ಯಾಗಿ ಅರ್ಥೈಸಿಕೊಂಡಿರಬಹುದು ಎಂದೂ ಹೇಳಿತ್ತು. ನ್ಯಾಯಾಲಯದ ಅವಲೋಕನಗಳು ಹಾಗೂ ಬಂಧನ ಮತ್ತು ಬಿಡುಗಡೆಯ ಸ್ವೇಚ್ಛೆಯ ಸ್ವರೂಪವನ್ನು ಗಮನಿಸಿದರೆ, ಇಡೀ ಪ್ರಕರಣವನ್ನು ಅತ್ಯಂತ ದುರ್ಬಲ ತಳಹದಿಯಲ್ಲಿ ಕಟ್ಟಿರುವಂತಿದೆ. ವ್ಯಕ್ತಿಯೊಬ್ಬರನ್ನು ಆರು ತಿಂಗಳ ಕಾಲ ಬಂಧನದಲ್ಲಿಡುವುದಕ್ಕೆ ಹಾಗೂ ಯಾವುದೇ ವಿಶ್ವಾಸಾರ್ಹ ವಿವರಣೆಯಿಲ್ಲದೆ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಅವಕಾಶ ಕಲ್ಪಿಸುತ್ತದೆ ಎನ್ನುವುದು ನಾಗರಿಕರಿಗೆ ಆತಂಕಕಾರಿ ಸಂದೇಶವನ್ನು ರವಾನಿಸುವಂತಿದೆ. ಆರೋಪಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಲು ನ್ಯಾಯಾಲಯ ಅಥವಾ ಆರೋಪಿಗೆ ಅವಕಾಶವನ್ನೇ ಕೊಡದೆ ಬಹಳ ಸುಲಭವಾಗಿ ಬಂಧಿಸಬಹುದು ಮತ್ತು ಬಿಡುಗಡೆ ಮಾಡಬಹುದು ಎನ್ನುವುದನ್ನು ಈ ಪ್ರಕರಣ ಬಹಿರಂಗಪಡಿಸುವಂತಿದೆ. ನಾಗರಿಕನೊಬ್ಬನ ಜೀವನ ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳನ್ನು ಒಳಗೊಂಡಿದ್ದ ಈ ಪ್ರಕರಣದಲ್ಲಿನ ಸುದೀರ್ಘ ವಿಚಾರಣೆಗಳು ನ್ಯಾಯವನ್ನು ಮುಂದೂಡಿದವು ಎನ್ನುವುದು ಗಮನಿಸಬೇಕಾದ ಸಂಗತಿ.

ವಾಂಗ್ಚುಕ್ ಅವರ ಬಿಡುಗಡೆಯು ಪ್ರಕರಣವನ್ನು ಕೊನೆಗೊಳಿಸುವುದಿಲ್ಲ ಹಾಗೂ ಈ ಪ್ರಕರಣಕ್ಕೆ ಮೂಲವಾಗಿರುವ ಸಮಸ್ಯೆಗಳನ್ನು ಅಪ್ರಸ್ತುತಗೊಳಿಸುವುದಿಲ್ಲ. ಕೋರ್ಟ್ ಮುಂದಿರುವ ಅರ್ಜಿ ತಾಂತ್ರಿಕವಾಗಿ ನಿಷ್ಪ್ರಯೋಜಕವಾಗಿದ್ದರೂ, ಪ್ರಕರಣ ಇನ್ನೂ ಇತ್ಯರ್ಥವಾಗಿಲ್ಲ. ಬಂಧಿತರನ್ನು ಬಿಡುಗಡೆ ಮಾಡುವುದರಿಂದ ಅಕ್ರಮ ಬಂಧನದ ಪ್ರಕರಣ ತನ್ನಷ್ಟಕ್ಕೆ ಕೊನೆಗೊಳ್ಳುವುದಿಲ್ಲ ಎಂದು ಕೋರ್ಟ್ ಈ ಹಿಂದಿನ ತೀರ್ಪುಗಳಲ್ಲಿ ಹೇಳಿದೆ ಹಾಗೂ ಸಂತ್ರಸ್ತರಿಗೆ ಪರಿಹಾರವನ್ನು ನೀಡುವಂತೆ ಆದೇಶಿಸಿದೆ. ಪ್ರಸಕ್ತ ಪ್ರಕರಣದಲ್ಲಿ ವಾಂಗ್ಚುಕ್ ಅವರ ಬಂಧನವನ್ನು ನ್ಯಾಯಾಂಗದ ಸ್ಪಷ್ಟ ಪರಿಭಾಷೆಯಲ್ಲಿ ವ್ಯಾಖ್ಯಾನಿಸಬೇಕಾಗಿದೆ. ಈ ಪ್ರಕರಣದ ಆಧಾರದಲ್ಲಿ, ಕಾನೂನುಬಾಹಿರ ಬಂಧನಗಳ ವಿರುದ್ಧ ರಕ್ಷಣೆಯನ್ನು ಖಚಿತಪಡಿಸುವುದು ಹಾಗೂ ಕಾನೂನು ಪರಿಶೀಲನೆಗಳಿಂದ ನುಣುಚಿಕೊಳ್ಳಲು ಪ್ರಯತ್ನಿಸುವ ಪ್ರಕ್ರಿಯೆಗಳನ್ನು ಪ್ರಾರಂಭಿಸುವುದರಿಂದ ಸರ್ಕಾರವನ್ನು ತಡೆಯುವುದರ ಬಗ್ಗೆ ಸುಪ್ರೀಂ ಕೋರ್ಟ್ ಗಮನಹರಿಸಬಹುದಾಗಿದೆ.

ಚಾಟಿಏಟು

ಸರ್ಕಾರಿ ಸೆನ್ಸಾರ್ ಅಪಾಯಕರ



ಯಾವುದು ಒಪ್ಪಿಕೊಳ್ಳಬಹುದು ಮತ್ತು ಯಾವುದು ಅತಿ ಎನ್ನುವುದರ ನಡುವೆ ಸಣ್ಣ ಗಡಿ ಇದೆ. ಸರ್ಕಾರದ ಸೆನ್ಸಾರ್ ಅಪಾಯಕರ. ಅಶ್ಲೀಲ ವಿಷಯಗಳನ್ನು ನಿಯಂತ್ರಿಸಲು ಸಾರ್ವಜನಿಕರ ಹಾಗೂ ಮಾಧ್ಯಮಗಳ ಆಕ್ರೋಶ ಅಗತ್ಯ.

ಚೇತನ್ 'ಅಹಿಂಸಾ', ನಟ, 'ಎಕ್ಸ್'ನಿಂದ

ಕಿಡಿನುಡಿ



ಹೆಣ್ಣು ಕೂಸುಗಳು ಹುಟ್ಟುವ ಮುನ್ನವೇ ಅವುಗಳ ಜೀವ ತೆಗೆಯುವ ಅಮಾನುಷ ಜಾಲದ ಬಗ್ಗೆ ಎಚ್ಚರಿಸಿದರೂ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಸರ್ಕಾರದ ನಿರ್ಲಕ್ಷ್ಯದಿಂದ ರಾಜ್ಯದಲ್ಲಿ ಹೆಣ್ಣು ಕಂದಮ್ಮಗಳ ಜೀವಕ್ಕೆ ಗ್ಯಾರಂಟಿ ಇಲ್ಲದಂತಾಗಿದೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 19-3-2001

• **ಉಡುಪಿ: ಕುಖ್ಯಾತ ರೌಡಿ ಬಂಧನ**

ಉಡುಪಿ, ಮಾರ್ಚ್ 18– ಭೂಗತ ಜಗತ್ತಿನ ಕುಖ್ಯಾತ ರೌಡಿ ಶಿವರಾಮ ಆನಂದ ಶೆಟ್ಟಿ ಅಲಿಯಾಸ್ ಅಪ್ಪು ಶೆಟ್ಟಿ ಅಲಿಯಾಸ್ ಸುನೀಲ್ ಶೆಟ್ಟಿ ಎಂಬಾತನನ್ನು ಉಡುಪಿ ಜಿಲ್ಲಾ ಅಪರಾಧ ಪತ್ತೆ ದಳ ಗುಡ್ಡೆಯಂಗಡಿ ಕರ್ಜೆ ಎಂಬಲ್ಲಿ ಬಂಧಿಸಿದೆ.

ಸುನೀಲ್ ಶೆಟ್ಟಿ ಕೊಲೆ, ದರೋಡೆ, ಸುಲಿಗೆ ಮುಂತಾದ 12 ಪ್ರಕರಣಗಳಲ್ಲಿ ಆರೋಪಿಯಾಗಿದ್ದು, 1992ರಲ್ಲಿ ಟಾಡಾ ಕಾಯ್ದೆಯಡಿ ಬಂದಿಯಾಗಿದ್ದ. ಇತ್ತೀಚೆಗೆ ಮುಂಬೈನ ಎಂಆರ್‌ಎ ಮಾರ್ಗ ಪೊಲೀಸ್ ಠಾಣೆ ವ್ಯಾಪ್ತಿಯ ಕೊಲೆ ಪ್ರಕರಣವೊಂದರಲ್ಲಿ ತಲೆಮರೆಸಿಕೊಂಡು ಗುಡ್ಡೆಯಂಗಡಿಯಲ್ಲಿ ಸಭ್ಯನಂತೆ ವಾಸಿಸುತ್ತಿದ್ದ. ಮುಂಬೈ ಪೊಲೀಸರ ಎನ್‌ಕೌಂಟರ್ ಲಿಸ್ಟಿನಲ್ಲಿ ಇದ್ದ ಎಂದು ಪೊಲೀಸರು ತಿಳಿಸಿದ್ದಾರೆ.

• **ಪ್ರಾದೇಶಿಕತೆಗೆ ಕಡಿವಾಣ: ಸೋನಿಯಾ ಸಲಹೆ**

ಬೆಂಗಳೂರು, ಮಾರ್ಚ್ 18– ರಾಜಕೀಯದಲ್ಲಿ ಹೆಚ್ಚುತ್ತಿರುವ ಪ್ರಾದೇಶಿಕತೆಗೆ ಕಡಿವಾಣ ಹಾಕದಿದ್ದರೆ ಪ್ರಾಂತೀಯತೆ ಬೆಳೆದು ರಾಷ್ಟ್ರೀಯ ಭಾವನೆಯೇ ದುರ್ಬಲವಾಗುವ ಅಪಾಯವಿದೆ ಎಂದು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇಂದು ಇಲ್ಲಿ ಎಚ್ಚರಿಸಿದರು.

ಅರಮನೆ ಆವರಣದಲ್ಲಿ ನಡೆದಿರುವ 81ನೇ ಎಐಸಿಸಿ ಅಧಿವೇಶನದಲ್ಲಿ ಅವರು ಮಾತನಾಡಿದರು.

75 ವರ್ಷಗಳ ಹಿಂದೆ

ಸೋಮವಾರ, 19-3-1951

• **'ಪರ್ಷಿಯಾ ಪ್ರಧಾನಿಯ ಕೊಲೆ ಅಮೆರಿಕಾ ಪ್ರೇರಿತ'**

ಲಂಡನ್, ಮಾರ್ಚ್ 18– ಹನ್ನೊಂದು ದಿನಗಳ ಹಿಂದೆ ಪರ್ಷಿಯಾ ಪ್ರಧಾನಿ ಅಲಿ ರಜ್‌ಮರಾರವರ ಕೊಲೆಯು 'ಸ್ಪಷ್ಟವಾಗಿ ವಿದೇಶಿ ಪ್ರಭಾವದ ಫಲ'ವೆಂದೂ, ಇದರಿಂದ ಅನುಕೂಲ ಪಡೆಯಬಲ್ಲ ಒಂದೇ ವಿದೇಶಿ ರಾಷ್ಟ್ರವೆಂದರೆ ಅಮೆರಿಕಾವೆಂದು ಸೋವಿಯತ್ ಕಮ್ಯುನಿಸ್ಟ್ ಪತ್ರಿಕೆ 'ಪ್ರಾವ್ದಾ' ಇಂದು ಘೋಷಿಸಿತು.

ಈ ಪ್ರಸಂಗವನ್ನು ಮುಚ್ಚಲು ವಿದೇಶಿ ಶಕ್ತಿಯ ನಿರ್ದೇಶಕ ಹಸ್ತವು ಯತ್ನಿಸುತ್ತಿದೆಯೆಂಬುದು ಅತ್ಯಂತ ಸ್ಪಷ್ಟವಾಗಿದೆ ಎಂದು ಲೇಖನದಲ್ಲಿ ತಿಳಿಸಲಾಗಿದೆ.

ಜನರಲ್ ರಜ್‌ಮರಾರವರು ಅಮೆರಿಕನ್ನರಿಗೆ ಅನುಕೂಲರಾಗಿರಲಿಲ್ಲ ಎಂದೂ, ರಷ್ಯಾ–ಪರ್ಷಿಯನ್‌ಗಳ ಬಾಂಧವ್ಯವನ್ನು ಉತ್ತಮ ಗೊಳಿಸುವುದರಲ್ಲೇ ನಿರತವಾಗಿದ್ದ ಅವರ ನೀತಿ ಬ್ರಿಟನ್ ಹಾಗೂ ಅಮೆರಿಕಾಗಳ ಕೋಪಕ್ಕೆ ಪಾತ್ರವಾಗಿತ್ತೆಂದೂ 'ಪ್ರಾವ್ದಾ' ಹೇಳಿದೆ.

ಪಂಪನ ಪಾಪವಾದರೂ ಏನು?



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಜಾತಿಪದ್ಧತಿಗೆ ಪ್ರತಿರೋಧ ಒಡ್ಡಿದ ಕನ್ನಡದ ಮೊದಲ ಕವಿ ಪಂಪ. ಆದರೆ, ಜಾತಿ ಕಾರಣದಿಂದಲೇ ಪಂಪ ಸರ್ಕಾರದಿಂದ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವಂತಿದೆ. ಕನ್ನಡದ ಆದಿಕವಿಯ ಹೆಸರಿನಲ್ಲಿ ಒಂದು ಪ್ರತಿಷ್ಠಾನ ಅಥವಾ ಪ್ರಾಧಿಕಾರ ಇಲ್ಲದಿರುವುದಕ್ಕೂ, ಪಂಪನಿಗೆ ಜಾತಿ–ಧರ್ಮದ ಬೆಂಬಲ ಇಲ್ಲದಿರುವುದಕ್ಕೂ ಸಂಬಂಧ ಇಲ್ಲದಿಲ್ಲ.

ಕೆಲವು ಕಾಲದಿಂದ ಒಂದು ಪ್ರಶ್ನೆ ನನ್ನನ್ನು ತೀವ್ರವಾಗಿ ಕಾಡುತ್ತಿದೆ. ಮಹಾಕವಿ ಪಂಪ ಮಾಡಿದ ಪಾಪವಾದರೂ ಏನು? ಈ ಪ್ರಶ್ನೆಯು ನನ್ನನ್ನು ಕಾಡುತ್ತಲೇ ಸರಣಿ ಪ್ರಶ್ನೆಗಳಿಗೆ ಪ್ರೇರಣೆಯಾಗುತ್ತಿದೆ. ಪಂಪ ಕವಿಯ ಕಾವ್ಯದ ಒಂದು ಸಂದರ್ಭದಲ್ಲಿ ಬರುವ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತು ಜಾತಿ ವಿರೋಧಿ ಸಮಾನತೆಯ ಪೋಷವಾಕ್ಯವಾದದ್ದು ಪಾಪವೆ? ಪ್ರಭುತ್ವದ ಜೊತೆಗಿದ್ದು ಎದುರಿಸಿದ ದ್ವಂದ್ವದ ತಳಮಳಗಳಲ್ಲೇ ಸೃಜನಶೀಲ ಸ್ವಾತಂತ್ರ್ಯದ ಅಸ್ತಿತ್ವಕ್ಕೆ ಆಕರ ಒದಗಿಸಿದ್ದು ಪಾಪವೆ? ವ್ಯಾಸ ಮಹಾಕವಿಯ ಮೂಲ ಮಹಾಭಾರತದ ವಸ್ತುವನ್ನು ಆರಿಸಿಕೊಂಡು ಮತ್ತು ಅರಗಿಸಿಕೊಂಡು ತನ್ನದೇ ರೀತಿಯಲ್ಲಿ 'ವಿಕ್ರಮಾರ್ಜುನ ವಿಜಯ'ವೆಂಬ ಮರು ಸಂಕಥನವಾಗಿಸಿದ್ದು ಪಾಪವೆ? ಇದೇ ಕಾವ್ಯದಲ್ಲಿ ಕರ್ಣ ಕೇಂದ್ರಿತ ಸನ್ನಿವೇಶಗಳ ಮೂಲಕ ಜಾತಿಪದ್ಧತಿಯನ್ನು ಪ್ರಶ್ನಿಸಿ ಪರ್ಯಾಯಗಳನ್ನು ನಿರೂಪಿಸಿದ್ದು ಪಾಪವೆ? 'ಆದಿಪುರಾಣ'ದ ಭರತ–ಬಾಹುಬಲಿ ಪ್ರಸಂಗದ ಮೂಲಕ ಅಧಿಕಾರದ ಅಹಂಕಾರಕ್ಕೆ ವಿರುದ್ಧವಾದ ಆಯಾಮವನ್ನು ಅನಾವರಣಗೊಳಿಸಿದ್ದು ಪಾಪವೆ? ಇದೇ ಕಾವ್ಯದಲ್ಲಿ ಭೋಗ ಭ್ರಮೆಯ ಕವಚವನ್ನು ಕಳಚಿದ್ದು ಪಾಪವೆ? ಕನ್ನಡ ಸಾಹಿತ್ಯದಲ್ಲಿ ತನ್ನ ಪಾತ್ರಗಳ ಮೂಲಕ, ಜಾತಿಪದ್ಧತಿಗೆ ಪ್ರತಿರೋಧ ಒಡ್ಡಿದ ಮೊದಲ ವ್ಯಕ್ತಿಯಾದದ್ದು ಪಾಪವೆ?

ಹೀಗೆ ಸರಣಿ ಪ್ರಶ್ನೆಗಳು ನನ್ನ ನೋವಿನ ನದಿಯ ಅಲೆಗಳಾಗಿ ಮನಸ್ಸನ್ನು ತಳಮಳಗಳ ತವರಾಗಿಸಲು ಕಾರಣವಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಸರ್ಕಾರಗಳು ಪಂಪನಂಥ ಮಹಾಕವಿ ಕುರಿತು ವಿಶೇಷ ಕಾಳಜಿ ತೋರಿಸದೆ ಇದ್ದದ್ದು, ಸ್ಮಾರಕ, ಪ್ರಾಧಿಕಾರ, ಪ್ರತಿಷ್ಠಾನ – ಹೀಗೆ ಯಾವುದೊಂದನ್ನೂ ಮಾಡದೆ ಹೋದದ್ದು ಒಂದು ಕಾರಣವಾದರೆ, ನಮ್ಮ ಸಾಹಿತ್ಯ ವಲಯದಿಂದಲೂ 'ಆದ್ಯ ಮನ್ನಣೆ ಮತ್ತು ಒತ್ತಾಯ' ಬಾರದೆ ಹೋದದ್ದು ಇನ್ನೊಂದು ಕಾರಣ.

ಹಾಗಾದರೆ ಮಹಾಕವಿಯ ಹೆಸರನ್ನು ಉಳಿಸಲು ಸ್ಮಾರಕ, ಪ್ರಾಧಿಕಾರ ಅಥವಾ ಪ್ರತಿಷ್ಠಾನಗಳೇ ಬೇಕೆ? ಬರೆದಿರುವ ಕಾವ್ಯಗಳೇ ಜೀವಂತ ಸಾಕ್ಷಿಯಾಗಿ ಇರುತ್ತವೆಯಲ್ಲವೆ? ಅವುಗಳ ಅಧ್ಯಯನದಿಂದ ಕವಿಯನ್ನು ಉಳಿಸಿಕೊಳ್ಳಬೇಕಲ್ಲವೆ? ಇದು ಕವಿಗೆ ಸಲ್ಲಿಸುವ ನಿಜವಾದ ಗೌರವವಲ್ಲವೆ? ಈ ರೀತಿಯ ಆದರ್ಶಮಯ ಪ್ರಶ್ನೆಗಳಿಗೂ ಅವಕಾಶವಿದೆ. ಆದರೆ ಅಧ್ಯಯನ ಮಾಡಿಸಲು, ಕವಿಯ ವಿಚಾರಗಳನ್ನು ಬೆಳೆಸಲು, ಸಾಂಸ್ಥಿಕ ಪ್ರಯತ್ನವೂ ಬೇಕು. ಇಲ್ಲದಿದ್ದರೆ, ಪ್ರಾಚೀನ ಕನ್ನಡ ಸಾಹಿತ್ಯದ ಓದಿಗೆ ಉತ್ಸಾಹ ತೋರದಿರುವ ಇಂದಿನ ಸನ್ನಿವೇಶದಲ್ಲಿ, ಒಂದು ಪರಂಪರೆಯೇ ಮರೆಯಾಗುವ ಸಾಧ್ಯತೆಯಿದೆ. ಇಷ್ಟಕ್ಕೂ ಇತರೆ ಸಾಧಕರಿಗೆ ಪ್ರಾಧಿಕಾರ, ಪ್ರತಿಷ್ಠಾನಗಳಂತಹ ಸಾಂಸ್ಥಿಕ ಗೌರವ ಲಭ್ಯವಾಗಿರುವಾಗ ಪಂಪನಂತಹ ಕವಿಗಳಿಗೆ ಯಾಕೆ ಬೇಡ ಎಂದೂ ಪ್ರಶ್ನಿಸಬೇಕಾಗುತ್ತದೆ. ಇದು ಬೇರೆ ಸಾಧಕರಿಗೆ ಸಂದ ಗೌರವವನ್ನು ಪ್ರಶ್ನಿಸುವ ಅತೃಪ್ತಿ ಖಂಡಿತ ಅಲ್ಲ. ಸರ್ಕಾರವು ಅನೇಕ ಸಾಧಕರಿಗೆ ತೋರಿದ ಸಾಂಸ್ಥಿಕ ಗೌರವಕ್ಕಾಗಿ ಸಂತೋಷಪಡುತ್ತೇನೆ, ಅಭಿನಂದಿಸುತ್ತೇನೆ. ಅದೇ ಮಾದರಿಯ ಸಾಂಸ್ಥಿಕ ಗೌರವ, ಪಂಪ ಮಹಾಕವಿಯನ್ನೂ ಒಳಗೊಂಡಂತೆ ಇತರೆ ಸಾಹಿತ್ಯಿಕ, ಸಾಂಸ್ಕೃತಿಕ ಸಾಧಕರಿಗೂ ಸಿಗಬೇಕು ಎಂಬುದಷ್ಟೇ ನನ್ನ ಪ್ರಶ್ನೆಯ ಆಶಯ.

'ನಿಮಗೆ ಈ ಪ್ರಶ್ನೆಯು ಈಗ ಯಾಕೆ ಇಷ್ಟೊಂದು ಕಾಡಿಸುತ್ತಿದೆ ಮತ್ತು ಮುಖ್ಯವಾಗಿದೆ?' ಎಂಬ ಮರು ಪ್ರಶ್ನೆಯನ್ನು ಕೇಳಬಹುದು. ಇದು ಸರಿಯಾದ ಪ್ರಶ್ನೆಯೂ ಹೌದು. ಅದಕ್ಕೆ ಉತ್ತರ ರೂಪದ ವಿವರಣೆ ನೀಡುವುದು ನನ್ನ ಜವಾಬ್ದಾರಿಯೂ ಹೌದು.

ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ನನಗೆ ಪಂಪ ಮಹಾಕವಿಯ ಬಗ್ಗೆ ವಿಶೇಷ ಗೌರವ ಮೂಡಿರುವುದಕ್ಕೆ ಸಾಹಿತ್ಯಿಕ ಕಾರಣವಿರುವಂತೆಯೇ ಸಾಮಾಜಿಕ ಕಾರಣಗಳೂ ಇವೆ. ಸಾಹಿತ್ಯಿಕವಾಗಿ ಪಂಪಕವಿಯನ್ನು ಕನ್ನಡದ 'ಆದಿಕವಿ'ಯೆಂದೇ ಕರೆಯಲಾಗುತ್ತಿದ್ದರೂ, ಪಂಪನಿಗಿಂತ ಮುಂಚೆಯೂ ಕನ್ನಡ ಕವಿಗಳಿದ್ದಿರಬಹುದೆಂಬ ಪ್ರತಿಪಾದನೆಯೂ ಇದೆ. ಆದರೆ, 'ಮಹಾಕವಿ'ಯೆಂದು ಕರೆಯುವ ಬಗ್ಗೆ ಯಾವುದೇ ಪ್ರತಿವಾದಗಳಿಲ್ಲ. 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' (ಪಂಪ ಭಾರತ) ಎಂಬ ಎರಡು ಮಹತ್ವದ ಕಾವ್ಯಗಳನ್ನು ಕೊಟ್ಟಿರುವ ಪಂಪ, ತನ್ನ ಕಾವ್ಯಗಳಲ್ಲಿ ಕೆಲವು ಕಡೆ ಸಾಮಾಜಿಕ ಜಡತೆಗೆ ಮುಖಾಮುಖಿಯಾಗಿರುವುದು ಇಂದಿಗೂ ಪ್ರಸ್ತುತ. ಅದರಲ್ಲಿ ಅತ್ಯಂತ ಮುಖ್ಯವಾದುದು ಜಾತಿ (ಕುಲ) ತಾರತಮ್ಯದೊಂದಿಗೆ ನಡೆಸಿದ ಮುಖಾಮುಖಿ. ಸೃಜನಶೀಲ ಸಾಹಿತಿಯು ತನ್ನ ಕೃತಿಯ ವಸ್ತು ವಿಷಯದ ಮೂಲಕವೇ ಇಂತಹ ಮುಖಾಮುಖಿಯಾಗಬೇಕಾದ್ದರಿಂದ, ಜಾತಿ ತಾರತಮ್ಯವನ್ನು ಪ್ರಶ್ನಿಸಲು ಪಂಪ ಬಳಸಿಕೊಂಡದ್ದು ಕರ್ಣನ ಪ್ರಸಂಗ. ನನ್ನ ದೃಷ್ಟಿಯಲ್ಲಿ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಜಾತಿ ತಾರತಮ್ಯವನ್ನು ವಿರೋಧಿಸಿದ ಮೊದಲ ವ್ಯಕ್ತಿ ಪಂಪ. ಆದರೆ, ಸಾರ್ವಜನಿಕವಾಗಿ ಇದು ಮುನ್ನೆಲೆಗೆ ಬಂದಿಲ್ಲ! ಇನ್ನೊಂದು ಮಹತ್ವದ ಮುಖಾಮುಖಿಯೆಂದರೆ, ಪ್ರಭುತ್ವದ ಜೊತೆಗಿದ್ದೂ ತನ್ನ ಸೃಜನಶೀಲ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ವೈರುಧ್ಯಕ್ಕೆ ಮುಖಾಮುಖಿಯಾಗುತ್ತ, ಮೀರುತ್ತ, ಅಭಿವ್ಯಕ್ತಿಸಿದ 'ಅಂತರ್ಗತ ಪ್ರಭುತ್ವ ಪ್ರತಿರೋಧ.' ಇವುಗಳನ್ನು ವಿವರವಾಗಿ ಚರ್ಚಿಸಲು ಬೇರೊಂದು ಲೇಖನದ ಅವಶ್ಯಕತೆಯಿರುವುದರಿಂದ ಈ ಲೇಖನದ ಆಶಯಕ್ಕನುಗುಣವಾಗಿ ಸೂಚ್ಯಾಂಶವನ್ನಷ್ಟೇ ಹೇಳಿದ್ದೇನೆ.

ಈಗಾಗಲೇ ಕರ್ನಾಟಕದ ಹಿಂದಿನ ಮತ್ತು ಇಂದಿನ ಸರ್ಕಾರಗಳು ಸಾಂಸ್ಕೃತಿಕ ಸಾಧಕರ ಬಗ್ಗೆ ಪ್ರತಿಷ್ಠಾನ ಅಥವಾ ಪ್ರಾಧಿಕಾರಗಳನ್ನು ಸ್ಥಾಪಿಸಿರುವ ಮಾದರಿಯಲ್ಲೇ ಪಂಪ ಮಹಾಕವಿಯ ಬಗ್ಗೆಯೂ ನಡೆದುಕೊಳ್ಳಬೇಕೆಂದು ನಾನು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರಾದ ಶಿವರಾಜ ತಂಗಡಗಿಯವರಿಗೆ ಮನವಿ ಪತ್ರ ನೀಡಿ ಒತ್ತಾಯಿಸಿದೆ. ಅವರು ನನ್ನ ವಿವರಣೆಯನ್ನು ಕೇಳಿದ ಕೂಡಲೇ ಒಪ್ಪಿಕೊಂಡರು. ಅವರ ಕಚೇರಿಯವರು ಕೊಟ್ಟ ಮಾಹಿತಿಯ ಪ್ರಕಾರ, ಬಜೆಟ್‌ನಲ್ಲಿ ಸೇರಿಸಲು ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ಪಟ್ಟಿಯಲ್ಲಿ 'ಪಂಪ ಪ್ರತಿಷ್ಠಾನ'ದ ವಿಷಯವೂ ಇತ್ತು. ಆದರೆ ಬಜೆಟ್‌ನಲ್ಲಿ ಪಂಪ ಕಾಣಿಸಲೇ ಇಲ್ಲ! ಸಚಿವರೇ ಆಶ್ವಾಸನೆ ಕೊಟ್ಟಿದ್ದರಿಂದ ಅವರ ಮಾತನ್ನು ಮೀರಿ ಮುಖ್ಯಮಂತ್ರಿಯವರ ಬಳಿಗೆ ಹೋಗುವುದು ಉಚಿತವಲ್ಲವೆಂದು ನಾನು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಖುದ್ದು ಕಂಡು ಮನವಿ ಮಾಡಿರಲಿಲ್ಲ. ಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಿದ್ದರೆ ಪಂಪಕವಿಗೆ ಬಜೆಟ್‌ನಲ್ಲಿ ಸ್ಥಾನ ಸಿಗಬಹುದಿತ್ತೆಂದು ಭಾವಿಸುವೆ. ಆದರೂ ಇದು ವಿನಾಯಿತಿಯಲ್ಲ. ಯಾಕೆಂದರೆ, ಪಂಪ ಕವಿ ಹೆಸರಲ್ಲಿ ಪ್ರಾಧಿಕಾರ ಅಥವಾ ಪ್ರತಿಷ್ಠಾನ ಸ್ಥಾಪನೆ ಮಾಡಬೇಕೆಂದು ನಾನು ಮಾಡಿದ ಮನವಿಯ ವಿಷಯ ಪತ್ರಿಕೆಗಳಲ್ಲಿ ಪ್ರಮುಖವಾಗಿ ಪ್ರಕಟವಾಗಿತ್ತು. ಕಾರ್ಯ ಒತ್ತಡದಲ್ಲಿ ಮುಖ್ಯಮಂತ್ರಿಯವರು ಗಮನಿಸದೇ ಇದ್ದರೂ ಪ್ರತಿ ವಿಷಯಕ್ಕೂ ಪ್ರತ್ಯೇಕ ಅಧಿಕಾರಿಗಳಿರುವ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಸಂಬಂಧಪಟ್ಟವರು ಮುಖ್ಯಮಂತ್ರಿಯವರ ಗಮನಕ್ಕೆ ತರಬಹುದಿತ್ತು.

ಆದರೆ ಅವರಿಗೆ ಪಂಪ ನೆನಪಾಗಲಿಲ್ಲ. ಯಾಕೆಂದರೆ, ಪಂಪಕವಿಗೆ ಬಲಾಢ್ಯ ಅಥವಾ ಬಹುಸಂಖ್ಯಾತ ಜಾತಿ–ಧರ್ಮಗಳ ಬೆಂಬಲವಿಲ್ಲ ಮತ್ತು ಲಾಬಿಯಿಲ್ಲ. ಈ ಮಾತನ್ನು ಸಾಧಾರವಾಗಿಯೇ ನಾನು ಹೇಳುತ್ತಿದ್ದೇನೆ. ಸರ್ಕಾರವು ಸ್ಥಾಪಿಸಿರುವ ವ್ಯಕ್ತಿ ಕೇಂದ್ರಿತ ಪ್ರಾಧಿಕಾರ, ಪ್ರತಿಷ್ಠಾನಗಳೆಲ್ಲ ಸೂಕ್ತವೆಂದೇ ಭಾವಿಸಿದರೂ ಯಾವ ಯಾವುದಕ್ಕೆ ಹೆಚ್ಚು ಹಣ ಒದಗಿಸಲಾಗಿದೆ ಎಂಬುದನ್ನು ಗಮನಿಸಿದರೆ ಬಲಾಢ್ಯ, ಬಹುಸಂಖ್ಯಾತ ಜಾತಿ ವಲಯಗಳ ಪ್ರಭಾವದ ಅರಿವಾಗುತ್ತದೆ. ಈ ಮಾತು ವಿಶ್ವವಿದ್ಯಾಲಯಗಳಲ್ಲಿರುವ ಪೀಠಗಳಿಗೂ ಅನ್ವಯಿಸುತ್ತದೆ. ಬಲಾಢ್ಯ, ಬಹುಸಂಖ್ಯಾತ ಜಾತಿಗಳಿಗೆ ಸಂಬಂಧಿಸಿದ ಸಾಧಕರ ಪ್ರಾಧಿಕಾರ, ಪ್ರತಿಷ್ಠಾನ ಹಾಗೂ ಪೀಠಗಳಿಗೆ ಕೋಟಿಗಟ್ಟಲೆ ಅನುದಾನ, ಸಾಮಾಜಿಕವಾಗಿ ಪ್ರಬಲರಲ್ಲದ ಸಾಧಕರ ಇದೇ ಮಾದರಿಯ ಸಂಸ್ಥೆಗಳಿಗೆ ಐದು, ಹತ್ತು, ಹೆಚ್ಚೆಂದರೆ ಇಪ್ಪತ್ತು ಲಕ್ಷಗಳ ಆಸುಪಾಸಿನ ಅನುದಾನ ಸಿಗುತ್ತಿದೆ. ನಾನು ಹೀಗೆ ಹೇಳುವಾಗ ಹೆಚ್ಚು ಅನುದಾನಕ್ಕೆ ಪಾತ್ರವಾದ ಸಂಸ್ಥೆ ಹಾಗೂ ಸಾಧಕರ ಬಗ್ಗೆ ಅಗೌರವ ತೋರಿಸುತ್ತಿಲ್ಲ. ಅಂತಹ ಸೌಲಭ್ಯ ಇತರರಿಗೂ ಸಿಗಲಿ ಎಂದಷ್ಟೇ ನನ್ನ ಅಪೇಕ್ಷೆ.

ತಾರತಮ್ಯ ಇರಬಾರದು ಮತ್ತು ಅರ್ಹರನ್ನು ಮರೆಯಬಾರದು ಎಂಬುದಷ್ಟೇ ನನ್ನ ಪ್ರತಿಪಾದನೆ. ಒಳ್ಳೆಯ ಕೆಲಸಗಳನ್ನು ಮೆಚ್ಚೋಣ. ಕೊರತೆಗಳನ್ನು ಕಂಡರೆ ಕನ್ನಡಿ ಹಿಡಿಯೋಣ. ಈಗ ನೋಡಿ. ಈ ವರ್ಷದ ಬಜೆಟ್‌ನಲ್ಲಿ ಕೆಲವರ ಹೆಸರಿನಲ್ಲಿ ಪ್ರತಿಷ್ಠಾನಗಳನ್ನು ಸ್ಥಾಪಿಸುವ ಪ್ರಸ್ತಾಪ ಮಾಡಲಾಗಿದೆ. ಸಂತೋಷ. ಆದರೆ, ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಾಮುಖ್ಯತೆಯನ್ನು ಪರಿಗಣಿಸಲಾಗಿದೆಯೆ? ದಕ್ಷಿಣ ಕರ್ನಾಟಕದ ಆಧುನಿಕ ಸಾಹಿತಿಗಳನ್ನು ನೆನಪಿಸಿಕೊಂಡಂತೆ ಕಲ್ಯಾಣ ಕರ್ನಾಟಕದ ಬಂಡಾಯ ಕವಿ ಚೆನ್ನಣ್ಣ ವಾಲೀಕಾರ, ಪ್ರಗತಿಪರ ಸಾಹಿತಿ ಶಾಂತರಸ ಯಾಕೆ ನೆನಪಾಗುವುದಿಲ್ಲ? ಉತ್ತರ ಕರ್ನಾಟಕದ 'ಚಂಪಾ' ಮುಖ್ಯವಲ್ಲವೆ! ಮಲೆನಾಡಿನ ಲಂಕೇಶ್ ಬಗ್ಗೆಯೂ ಏನಾದರೂ ಮಾಡಬೇಕಲ್ಲವೆ? ಉತ್ತರ ಸ್ಪಷ್ಟ: ಕೆಲವರಿಗೆ ಬಲಾಢ್ಯ, ಬಹುಸಂಖ್ಯಾತ ಜಾತಿ ಇಲ್ಲ. ಇನ್ನು ಕೆಲವರಿಗೆ ಜಾತಿಯಿದ್ದರೂ ಲಾಬಿ ಇಲ್ಲ.

ಕೊನೆಗೊಂದು ನೆನಪು: ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದೆ. 'ರಾಷ್ಟ್ರಕವಿ ಕುವೆಂಪು ಟ್ರಸ್ಟ್' ಸ್ಥಾಪಿಸುವ ನಿರ್ಧಾರ ಕೈಗೊಂಡ ಸಭೆಯಲ್ಲಿ ಭಾಗವಹಿಸಿದ್ದೆ. ಆನಂತರ ಬಂಗಾರಪ್ಪನವರಿಗೆ 'ಸಾರ್, ಕುವೆಂಪು ಟ್ರಸ್ಟ್ ಸ್ಥಾಪನೆಯ ನಿರ್ಧಾರ ತುಂಬಾ ಉತ್ತಮ ಹೆಜ್ಜೆ. ಅದರಂತೆಯೇ ಸಾಮಾಜಿಕ ಮತ್ತು ಪ್ರಾದೇಶಿಕ ಸಮತೋಲನ ದೃಷ್ಟಿಯಿಂದ ಬೇಂದ್ರೆ ಟ್ರಸ್ಟ್ ಕೂಡ ಸ್ಥಾಪನೆಯಾಗಬೇಕು?' ಎಂದು ಸಲಹೆ ನೀಡಿದಾಗ ಅವರು ಒಪ್ಪಿದರು. ಕೆಲವು ದಿನಗಳಲ್ಲಿ ಬೇಂದ್ರೆ ಟ್ರಸ್ಟ್ ಸ್ಥಾಪನೆಯಾಯಿತು. ಅದು ಸಮದೃಷ್ಟಿಯ ನಿರ್ಧಾರವಾಗಿತ್ತು.



ವಾಚಕರ ವಾಣಿ

ಸೀರೆಯ ಸೆರಗು ಸಭ್ಯತೆ–ವಾತ್ಸಲ್ಯದ ಸಂಕೇತ

ನಿರ್ದೇಶಕ ಪ್ರೇಮ್ ತಮ್ಮ 'ಕೆ.ಡಿ' ಸಿನಿಮಾಕ್ಕೆ ಬರೆದಿರುವ 'ಸರಿಸೆ ನಿನ್ನ ಸೆರಗ' ಎಂಬ ಹಾಡು ಮತ್ತು ನೃತ್ಯವು ಅಸಭ್ಯತೆ, ಅಶ್ಲೀಲತೆಯ ಎಲ್ಲೆಯನ್ನು ದಾಟಿದೆ. ಈ ಹಾಡಿನ ಪದಗಳು ತಮ್ಮ ಮಾನ ಮುಚ್ಚಿಕೊಳ್ಳಲು ಸೆರಗನ್ನು ಬಳಸುವ ಹೆಣ್ಣುಮಕ್ಕಳನ್ನು ಗೇಲಿ ಮಾಡುತ್ತಿವೆ. ತಲೆಯ ಮೇಲೆ ಹೊದೆಯಲು, ಮಕ್ಕಳಿಗೆ ಹಾಲುಣಿಸುವಾಗ ಶರೀರ ಮರೆಮಾಚಲು, ಮಕ್ಕಳಿಗೆ ನೆರಳಿನಂತೆ ಬಳಸಲು ಉಪಯೋಗಿಸುವ ಸೀರೆಯ 'ಸೆರಗು' ಹೆಣ್ಣುಮಕ್ಕಳ ಸಭ್ಯತೆಯ ದ್ಯೋತಕ. ಅಮ್ಮನ ಸೆರಗು ಹಿಡಿದುಕೊಂಡು ಹಾಡು ಕಲಿತವರು ನಮ್ಮೊಡನೆ ಇಲ್ಲವೆ? ಸೆರಗನ್ನು ಅಶ್ಲೀಲವಾಗಿ ಚಿತ್ರಿಸುವುದು ಅಕ್ಷಮ್ಯ. ಹೆಣ್ಣುಮಕ್ಕಳನ್ನು ಚುಡಾಯಿಸಲು, ಅವರಿಗೆ ಅಪಮಾನ ಮಾಡಲು ಬಳಸಲೆಂದೇ ಹಾಡನ್ನು ರಚಿಸಲಾಗಿದೆ. ಕನ್ನಡ ಚಿತ್ರರಂಗ ತಲಪಿರುವ ಅಧೋಗತಿಗೆ ಈ ಹಾಡು ನಿದರ್ಶನವಾಗಿದೆ.

ಸುಧಾ ಕೆ., ಬೆಂಗಳೂರು

ಮಠಾಧೀಶರು ಮತ್ತು ಜಾತಿಯ ಸಂಕೋಲೆ

ಚುಂಚಶ್ರೀ ಬಗ್ಗೆ ರಮೇಶ ಬಂಡಿಸಿದ್ದೇಗೌಡ ಅವರ ಹೇಳಿಕೆ ಕುರಿತಂತೆ ಪರ ಮತ್ತು ವಿರೋಧದ ಚರ್ಚೆ ನಡೆಯುತ್ತಿದೆ. ಶಾಸಕರು ಯಾವ ಅರ್ಥದಲ್ಲಿ ಈ ಹೇಳಿಕೆ ಹೇಳಿದ್ದಾರೋ ಗೊತ್ತಿಲ್ಲ. ಪ್ರಸ್ತುತ ರಾಜ್ಯದ ಬಹುತೇಕ ಸ್ವಾಮೀಜಿಗಳು ತಾವು ಪ್ರತಿನಿಧಿಸುವ ಸಮುದಾಯದ ಮಠಾಧೀಶರಾಗಿ ಉಳಿದಿದ್ದಾರೆಯೇ ಹೊರತು ಸಮಾಜದ ಮಾರ್ಗದರ್ಶಕರಾಗಿ ಅಲ್ಲ. ಅಧಿಕಾರಸ್ಥರ ಮೇಲೆ ಪ್ರಭಾವ ಬೀರುತ್ತಾ ಪರೋಕ್ಷವಾಗಿ ರಾಜಕಾರಣದಲ್ಲಿ ಭಾಗವಹಿಸುತ್ತಿದ್ದಾರೆ. ಸಮಾಜದಲ್ಲಿ ಅಸ್ಪೃಶ್ಯತೆ, ಮೂಢನಂಬಿಕೆ ತಾಂಡವವಾಡುತ್ತಿವೆ. ಇವುಗಳ ನಿಯಂತ್ರಣವು ಸಾಧ್ಯವಾಗದಿದ್ದರೂ ಆತ್ಮನಿರೀಕ್ಷಣೆಯ ಕಾರ್ಯವನ್ನು ಮಠಾಧೀಶರು ಮರೆತಂತಿದೆ. ಎಲ್ಲ ಸಮುದಾಯಗಳ ಬಡಜನರಿಗೆ ಉಚಿತವಾಗಿ ಶಿಕ್ಷಣ, ಆರೋಗ್ಯ ಸೇವೆ ನೀಡಲು ಮಠಗಳಿಗೆ ವಿಪುಲ ಅವಕಾಶಗಳಿವೆ. ಹಾಗಾಗಿ, ಮಠಾಧೀಶರು ಜಾತಿಯ ಸಂಕೋಲೆಯಿಂದ ಬಿಡಿಸಿಕೊಂಡು ಮಾನವ ಕಲ್ಯಾಣಕ್ಕೆ ಸಮರ್ಪಿಸಿಕೊಳ್ಳಲಿ.

ಭೀಮಾನಂದ ಮೌರ್ಯ, ಮೈಸೂರು

ಪುಸ್ತಕ ಓದುವ ಸಂಸ್ಕೃತಿ ಬೆಳೆಯಲಿ

ಕಳೆದ ದಶಕಕ್ಕೆ ಹೋಲಿಸಿದರೆ ಪ್ರಸ್ತುತ ಪುಸ್ತಕಗಳ ಮಾರಾಟ ಹೆಚ್ಚಾಗಿದೆ. ಪ್ರಸಿದ್ಧ ಪ್ರಕಾಶನಗಳ ಆನ್‌ಲೈನ್ ಮಳಿಗೆಗಳಷ್ಟೇ ಅಲ್ಲದೆ ನೂರಾರು ಪ್ರಕಾಶಕರು, ಮಾರಾಟಗಾರರು ಆನ್‌ಲೈನ್ ಮೂಲಕ ಮನೆಗಳಿಗೆ ಪುಸ್ತಕ ತಲುಪಿಸುವ ಕೆಲಸ ಮಾಡುತ್ತಿದ್ದಾರೆ. ಜನರ ಪುಸ್ತಕ ಖರೀದಿ ಹೆಚ್ಚಿಸುವಂತೆ ಮಾಡಲು ಪುಸ್ತಕ ಮೇಳಗಳೂ ನಡೆಯುತ್ತಿವೆ. ಇಷ್ಟಾದರೂ ಪುಸ್ತಕ ಓದುವ ಸಂಸ್ಕೃತಿ ಹೆಚ್ಚಾಗಿದೆಯೇ ಎಂದು ಪ್ರಶ್ನಿಸಿಕೊಂಡರೆ ನಿರಾಸೆಯೇ ಉತ್ತರವಾಗುತ್ತದೆ. ಹವ್ಯಾಸಕ್ಕಾಗಿ ಪುಸ್ತಕ ಖರೀದಿ ಮಾಡುವವರ ಸಂಖ್ಯೆ ಹೆಚ್ಚಾಗಿದೆಯೇ ವಿನಾ ಖರೀದಿಸಿದ ಪುಸ್ತಕಗಳನ್ನು ಬಹುತೇಕರು ಓದುವುದೇ ಇಲ್ಲ. ಪುಸ್ತಕ ಮೇಳ, ಸಾಹಿತ್ಯ ಮೇಳ ನಡೆಸಿ ದಾಖಲೆ ಮಾರಾಟಕ್ಕೆ ಸಂತೋಷಪಡಬಾರದು. ಜನರಲ್ಲಿ ಓದುವ ಸಂಸ್ಕೃತಿ ಬೆಳೆಯುವ ಬಗ್ಗೆಯೂ ಪ್ರಯತ್ನಗಳನ್ನು ನಡೆಸಬೇಕಾಗಿದೆ.

ನಟರಾಜ ಕುಂಬಾರ, ನಿಡಗುಂದಿ

ಸಂತ್ರಸ್ತ ಕುಟುಂಬಗಳಿಗೆ ಗೌರವ ಸಿಗಲಿ

ಬೆಂಗಳೂರಿನ ಚಿನ್ನಸ್ವಾಮಿ ಅಂಗಳದಲ್ಲಿ ಐಪಿಎಲ್ ಪಂದ್ಯಗಳಿಗೆ ಅನುಮತಿ ದೊರೆತಿರುವುದು ಕನ್ನಡಿಗರು ನಿರಾಳವಾಗುವಂತೆ ಮಾಡಿದೆ. ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆಯ ಸಂದರ್ಭದಲ್ಲಿ ಹನ್ನೊಂದು ಅಭಿಮಾನಿಗಳು ಮೃತಪಟ್ಟಿದ್ದರು. ಇದರಿಂದ ಕರ್ನಾಟಕವು ಮುಜುಗರಕ್ಕೆ ಒಳಗಾಗಿತ್ತು. ದುರಂತವು ನಾಡಿನ ಜನಮಾನಸದಿಂದ ಇನ್ನೂ ಮರೆಯಾಗಿಲ್ಲ. ಪಂದ್ಯದ ಸಡಗರದ ಸಂದರ್ಭದಲ್ಲಿ ಮೃತಪಟ್ಟ ಅಭಿಮಾನಿಗಳ ತಂದೆ–ತಾಯಿ ಅಥವಾ ಹತ್ತಿರದ ಬಂಧುಗಳನ್ನು ಅಂಗಳಕ್ಕೆ ಕರೆದು ಪ್ರೇಕ್ಷಕರ ಎದುರು ಅವರನ್ನು ಗೌರವಿಸಬೇಕಿದೆ. ಇದರಿಂದ ಹತ್ತಿರದ ಬಂಧುಗಳ ದುಃಖ ದೂರವಾದರೆ ಸಡಗರ ಮತ್ತಷ್ಟು ಹೆಚ್ಚಲಿದೆ. ಈ ನಿಟ್ಟಿನಲ್ಲಿ ಆರ್‌ಸಿಬಿ ಫ್ರಾಂಚೈಸಿ, ಕೆಎಸ್‌ಸಿಎ ಅಥವಾ ರಾಜ್ಯ ಸರ್ಕಾರ ಮುಂದಾಗ ಬೇಕಿದೆ.

ಕಾಂತೇಶ ಕದರಮಂಡಲಗಿ, ಶಿವಮೊಗ್ಗ

ಮಹಿಳೆಯರ ನಾಪತ್ತೆ: ತನಿಖೆಗೆ ನಿರ್ಲಕ್ಷ್ಯ

ರಾಜ್ಯದಲ್ಲಿ ಮಹಿಳೆಯರು ಮತ್ತು ಬಾಲಕಿಯರ ನಾಪತ್ತೆ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವುದು ಆತಂಕಕಾರಿ. ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಲವಾರು ಪ್ರಕರಣಗಳು ಇನ್ನೂ ಪತ್ತೆಯಾಗದೆ ಉಳಿದಿವೆ. ಅಪಹರಣ, ಮಾನವ ಕಳ್ಳಸಾಗಣೆ ಮತ್ತು ಕೌಟುಂಬಿಕ ಸಮಸ್ಯೆಗಳೇ ನಾಪತ್ತೆ ಪ್ರಕರಣ ಹೆಚ್ಚಳಕ್ಕೆ ಕಾರಣ. ಪೊಲೀಸರ ತನಿಖೆ ವಿಳಂಬ ಮತ್ತು ಭದ್ರತಾ ಕ್ರಮಗಳ ಕೊರತೆಯು ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸುತ್ತಿದೆ. ಇದರಿಂದ ಜನರಲ್ಲಿ ಭಯ ಮತ್ತು ಅಸುರಕ್ಷತೆಯ ಭಾವನೆ ಹೆಚ್ಚುತ್ತಿದೆ. ಈ ಸಮಸ್ಯೆಯ ಪರಿಹಾರಕ್ಕೆ ಪೊಲೀಸ್ ಇಲಾಖೆಯು ತ್ವರಿತ ಕ್ರಮಕೈಗೊಳ್ಳಬೇಕಿದೆ. ಸಮಾಜದಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಸಾರ್ವಜನಿಕರ ಸಹಕಾರದಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ನಿತ್ಯಾನಂದ, ಲಿಂಗಸೂಗೂರು

ಡಿಜೆ ಸಾಂಗ್ ನಿಷೇಧ ಇಂದಿನ ತುರ್ತು

ಡಿಜೆ ಸಾಂಗ್ ನಿಷೇಧಕ್ಕೆ ಸಂಬಂಧಿಸಿದಂತೆ ಅಧಿವೇಶನದಲ್ಲಿ ಚರ್ಚೆಯಾಗಿರುವುದು ಒಳ್ಳೆಯ ಬೆಳವಣಿಗೆ. ಸರ್ಕಾರದಿಂದ ನಡೆಯುವ ಮಹನೀಯರ ಜಯಂತಿಗಳಲ್ಲಿ ಧ್ವನಿವರ್ಧಕ ಬಳಕೆಗೂ ನಿಷೇಧ ಹೇರಬೇಕಿದೆ. ಜಯಂತಿಗಳಲ್ಲಿ ಉಪನ್ಯಾಸಕ್ಕೆ ಒತ್ತು ನೀಡುವ ಬದಲು ತಾಳತಪ್ಪಿದ ಕುಣಿತಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಇದರಿಂದ ಶಬ್ದಮಾಲಿನ್ಯ, ಸಮಯದ ವ್ಯಯ, ಸರ್ಕಾರದ ಅನುದಾನ ವ್ಯರ್ಥವಾಗುತ್ತದೆ. ಗಣ್ಯಾತೀತರು, ರಾಜಕೀಯ ಮುಖಂಡರು, ಅಧಿಕಾರಿಗಳ ಮುಂದೆಯೇ ಯಾರನ್ನೋ ಮೆಚ್ಚಿಸಲೋ ಅಥವಾ ಜನರನ್ನು ಒಗ್ಗೂಡಿಸಲು ಮಾಲಿನ್ಯಕಾರಕ ಉಪಕರಣಗಳನ್ನು ಬಳಸಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ.

ಶಿವರಾಜ ಯತಗಲ್, ರಾಯಚೂರು

ಚುರುಮುರಿ



ಫ್ಯಾಮಿಲಿಗೆ ಟಿಕೆಟ್

• ಗುರು ಪಿ.ಎಸ್.

ಬಿಳಿ ಶರ್ಟು, ಬಿಳಿ ಪಂಚೆ, ಹೆಗಲ ಮೇಲೆ ವೈಟ್ ಟವೆಲ್ ಹಾಕ್ಕೊಂಡು ಬಂದ 'ಕೈ' ಪಕ್ಷದ ಕಾರ್ಯಕರ್ತ ಮುದ್ದಣ್ಣ.

'ಏನ್ ಮುದ್ದಣ್ಣ, ಬಿಳಿ ಬಟ್ಟೆಯಲ್ಲಿ ಮಿಂಚ್ತಿದ್ದೀಯ, ಎತ್ತ ಸವಾರಿ?' ಕೇಳಿದ 'ಕಮಲ' ಪಕ್ಷದ ಕಾರ್ಯಕರ್ತ ವಿಜಿ.

'ದಾವಣಗೆರೆಯತ್ತ ಹೋಗ್ತಿದ್ದೆ. ಬೈ ಎಲೆಕ್ಷನ್ ನಡೀತಿದೆಯಲ್ವ'.

'ಓಹ್, ಪ್ರಚಾರ ಮಾಡೋದಕ್ಕಾ?'

'ಪ್ರಚಾರಕ್ಕಲ್ಲ ಸಾಹೇಬ್ರೆ, ಕಂಟೆಸ್ಟ್ ಮಾಡೋದಕ್ಕೆ' ಟವೆಲ್ ಹೆಗಲ ಮೇಲೇರಿಸಿಕೊಳ್ಳುತ್ತಾ ಹೇಳಿದ ಮುದ್ದಣ್ಣ.

ಜೋರಾಗಿ ನಕ್ಕ ವಿಜಿ, 'ಬೈ ಎಲೆಕ್ಷನ್‌ನಲ್ಲಿ ಪಕ್ಷದ ಕಾರ್ಯಕರ್ತರಿಗೆಲ್ಲ ಟಿಕೆಟ್ ಕೊಟ್ ಬಿಡ್ತಾರಾ?' ಎಂದ.

'ಯಾಕೆ, ಯಾಕ್ ಕೊಡಲ್ಲ ಅಂತ'.

'ನಿಧನದ ಕಾರಣ ಸ್ಥಾನ ತೆರವಾಗಿರೋದ್ರಿಂದ, ಆ ಎಮ್ಮೆಲ್ಲೆ ಕುಟುಂಬದವರಿಗೇ ಟಿಕೆಟ್ ಕೊಡೋದು, ಅದು ಅಲಿಖಿತ ನಿಯಮ'.

'ಇದೇನ್ ಪ್ರೈವೇಟ್ ಕಂಪನಿನಾ ಅಥವಾ ರಾಜರ ಆಡಳಿತನಾ? ಒಂದೇ ಕುಟುಂಬದವರಿಗೇ ಟಿಕೆಟ್ ಕೊಡ್ತಾ ಬಂದರೆ, ನಮ್ಮಂಥ ಕಾರ್ಯಕರ್ತರಿಗೆ ಅವಕಾಶ ಸಿಗೋದು ಯಾವಾಗ?' ಕೆರಳಿದ ಮುದ್ದಣ್ಣ.

'ಗ್ಯಾಸ್ ಸಿಲಿಂಡರ್ ಸಿಗದೇ ಇರೋದಕ್ಕೆ ನಿಮ್ ಪಕ್ಷದವರು ಪ್ರೊಟೆಸ್ಟ್ ಮಾಡ್ತಾರಂತೆ, ಅಲ್ಲಿ ಘೋಷಣೆ ಕೂಗೋಕೆ ಅವಕಾಶ ಸಿಗಬಹುದು' ಕಾಲೆಳೆದ ವಿಜಿ.

'ಓಕೆ, ನಮ್ಮಲ್ಲಂತೂ ಮೊದಲಿದ್ದ ಎಮ್ಮೆಲ್ಲೆ ಕುಟುಂಬದವರಿಗೆ ಟಿಕೆಟ್ ಕೊಡಬಹುದು. ನೀನಾದರೂ ನಿನ್ ಪಾರ್ಟಿಯಿಂದ ನಿಂತ್ಕೊಬಹುದಿತ್ತಲ್ಲ?'

'ಬಾಗಲಕೋಟೆ ಉಪ ಚುನಾವಣೆಯಲ್ಲಿ ನಿಲ್ಲೋದಕ್ಕೆ ನಾನೂ ನಮ್ ಹೈಕಮಾಂಡ್‌ನವರಿಗೆ ಟಿಕೆಟ್ ಕೇಳ್ದೆ'.

'ಏನಂದ್ರು?'

'ಸಿಂಪಥಿ ಮೇಲೆ ಜನ ವೋಟ್ ಹಾಕ್ತಾರೆ. ಹಾಗಾಗಿ ಅವರೇ ಗೆಲ್ಲಬಹುದು, ನೀವು ಸೋತರೂ ಪರವಾಗಿಲ್ಲ, ದುಡ್ಡು ಖರ್ಚು ಮಾಡೋ ಹಾಗಿದ್ರೆ ನಿಮಗೆ ಟಿಕೆಟ್ ಕೊಡೋ ಬಗ್ಗೆ ಯೋಚನೆ ಮಾಡ್ತೀವಿ ಅಂದ್ರು'.

'ಅಂದ್ರೆ, ಮೊದಲೇ ಎಲ್ಲ ಡಿಸೈಡ್ ಆಗಿಬಿಟ್ಟಿದೆ ಹಾಗಾದ್ರೆ, ಇದೆಲ್ಲ ಬದಲಾಗೋದು ಯಾವಾಗ?'

'ಮತದಾರರು ಬದಲಾದಾಗ' ಎಂದ ವಿಜಿ.

ಸಂಗತ

ಕೆನೆಪದರ: ಗೊಂದಲ ಪರಿಹರಿಸಲಿ ಸರ್ಕಾರ

ಕೆನೆಪದರ ನೀತಿ ಕುರಿತ ಸುಪ್ರೀಂ ಕೋರ್ಟ್ ತೀರ್ಪು ಸಾಮಾಜಿಕ ನ್ಯಾಯದ ಹಾದಿಯಲ್ಲಿನ ಮೈಲಿಗಲ್ಲು. ಅದು, ಸದ್ಯದ ಗೊಂದಲಗಳ ಪರಿಹಾರಕ್ಕೆ ಉತ್ತರ.


• ಹೆಚ್. ಕಾಂತರಾಜ

'ಸಮಾನತೆಯ ಹಕ್ಕು' ಸಂವಿಧಾನ ನೀಡಿರುವ ಮೂಲಭೂತ ಹಾಗೂ ಅಳಿಸಲಾಗದ ಹಕ್ಕು. ಮೀಸಲಾತಿಯು ಸಮಾನತೆ ಸಾಧನೆಯ ಒಂದು ವಿಧಾನ. ಸಮಾನತೆ ಗಳಿಸುವುದರಲ್ಲಿ ಸಾಮಾಜಿಕ ನ್ಯಾಯದ ಸಿದ್ಧಿ ಇದೆ. ಸಮಾನತೆ ಸಾಧಿಸುವ ಪ್ರಯತ್ನದಲ್ಲಿ ಮೀಸಲಾತಿ ನೀತಿಯಾಗಲಿ ಅಥವಾ ಇನ್ನಾವುದೇ ವಿಶೇಷ ಸೌಲಭ್ಯಗಳಾಗಲಿ ದುರುಪಯೋಗ ಆಗದಿರಬೇಕಾದರೆ, ಹಿಂದುಳಿದ ವರ್ಗಗಳಿಗೆ ನೀಡಲಾಗುವ ಮೀಸಲಾತಿ ಸೌಲಭ್ಯವನ್ನು ಅದೇ ಸಮುದಾಯದ ಸಾಮಾಜಿಕವಾಗಿ ಮೇಲುಸ್ತರದಲ್ಲಿ ಇರುವವರು ಬಳಸಿಕೊಳ್ಳಬಾರದು. ಈ ಉದ್ದೇಶದಿಂದ 1992ರಲ್ಲಿ 'ಕೆನೆಪದರ ನೀತಿ'ಯನ್ನು ರೂಪಿಸಿ, ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ನಂತರ, ಕೇಂದ್ರ ಸರ್ಕಾರ 1993ರ ಸೆ. 8ರಂದು ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯದ ಮೂಲಕ ಕೆನೆಪದರ ನೀತಿಗೆ ಸಂಬಂಧಿಸಿದ ಕಚೇರಿ ಟಿಪ್ಪಣಿ ಹೊರಡಿಸಿದೆ. ಆ ಟಿಪ್ಪಣಿಯನ್ನು ಆಧರಿಸಿ, ಅಭ್ಯರ್ಥಿಯ ಪೋಷಕರ ಸಂಬಳದ ಆದಾಯವನ್ನಷ್ಟೇ ಪರಿಗಣಿಸಿ, ಮೀಸಲಾತಿಯಿಂದ ಹೊರಗಿಡುವ ಪ್ರಯತ್ನ ಮಾಡಲಾಯಿತು. ಆದರೆ, ಆದಾಯ ಬೇರೆ, ಹುದ್ದೆಯ ಸ್ಥಾನಮಾನವೇ ಬೇರೆ. ಸಾಮಾಜಿಕವಾಗಿ ಕೆಳಜಾತಿಗೆ, ಸಣ್ಣ ಹುದ್ದೆಗೆ ಸಂಬಳದ ಆದಾಯ ಸಮಾನತೆಯನ್ನು ನೀಡುವುದಿಲ್ಲ. ಹಾಗಾಗಿ, ಕಚೇರಿ ಟಿಪ್ಪಣಿ ಬಂದರೂ ಕೆನೆಪದರ ತೀರ್ಮಾನಿಸುವಲ್ಲಿ ಗೊಂದಲಗಳು ಮುಂದುವರಿಯುತ್ತಿವೆ.

ಕಚೇರಿ ಟಿಪ್ಪಣಿ ಕೇಂದ್ರ ಸರ್ಕಾರದ ನೌಕರಿಗಳಿಗಷ್ಟೇ ಅನ್ವಯಿಸುತ್ತದೆ ಎಂದು ಹೇಳಲಾಗುತ್ತಿದೆ. 2004ರ ಅ. 14ರ ಕೇಂದ್ರ ಸರ್ಕಾರದ ಸ್ಪಷ್ಟೀಕರಣ ಪತ್ರವೂ ಕೆನೆಪದರ ನೀತಿಯ ಗೊಂದಲಕ್ಕೆ ಅಂತ್ಯ ಹಾಡಲಿಲ್ಲ. ಹಾಗಾಗಿ ಅನೇಕ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಅನ್ಯಾಯವಾಯಿತು. ಪೋಷಕರು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ನೌಕರಿಯಲ್ಲಿದ್ದಾರೆ, ಬ್ಯಾಂಕ್‌ಗಳು ಅಥವಾ ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿದ್ದಾರೆ ಎನ್ನುವ ಕಾರಣಗಳಿಗೆ ಹಿಂದುಳಿದ ವರ್ಗಗಳಿಗೆ ಸೇರಿದ ಕೆಲವು ಯುಪಿಎಸ್‌ಸಿ ಆಕಾಂಕ್ಷಿಗಳನ್ನು ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯವು ಕೆನೆಪದರಕ್ಕೆ ಸೇರಿಸಿ ನೇಮಕಾತಿಯಲ್ಲಿ ಮೀಸಲಾತಿ ನಿರಾಕರಿಸಿತ್ತು. ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಮೀಸಲಾತಿ ಪಡೆಯುವ ದೃಷ್ಟಿಯಿಂದ ನ್ಯಾಯಾಲಯದ ಮೊರೆ ಹೋಗಬೇಕಾಯಿತು.

ಮದ್ರಾಸ್, ಕೇರಳ ಮತ್ತು ದೆಹಲಿ ಹೈಕೋರ್ಟ್‌ಗಳ ತೀರ್ಪುಗಳನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್, ಸಂಬಳದಿಂದ ಬರುವ ಆದಾಯವನ್ನು ಮಾತ್ರವೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಯೊಬ್ಬರನ್ನು ಕೆನೆಪದರದಲ್ಲಿರಿಸುವುದು ಅಥವಾ ಹೊರಗಿಡುವುದನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂದು ಕಳೆದ ಮಾರ್ಚ್ 11ರಂದು ಸ್ಪಷ್ಟಪಡಿಸಿದೆ. ಕೆನೆಪದರವನ್ನು ಆದಾಯದ ಆಧಾರದಲ್ಲಿ ಅಲ್ಲ, ಹುದ್ದೆಯ ಸ್ಥಾನಮಾನದ ಆಧಾರದಲ್ಲಿ ನಿರ್ಧರಿಸಬೇಕಾಗುತ್ತದೆ; ಇದು ಸರ್ಕಾರದ ಟಿಪ್ಪಣಿ ಹಾಗೂ ಸ್ಪಷ್ಟೀಕರಣ ಪತ್ರಗಳಿಂದ ಸ್ಪಷ್ಟ ಎಂದು ವಿಭಾಗೀಯ ಪೀಠ ಒತ್ತಿ ಹೇಳಿದೆ. ಈ ತೀರ್ಪು, ನಿಜ ಅರ್ಥದಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯಗಳು ಸಿಗಬೇಕಾದುದು ಸಾಂವಿಧಾನಿಕ ಅಗತ್ಯ ಎಂದು ಹೇಳಿದೆ.



ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮುಂತಾದ ರಾಜ್ಯಗಳು ಕೆನೆಪದರ ನೀತಿಯನ್ನು ಅಳವಡಿಸಿಕೊಂಡಿವೆ. ಕರ್ನಾಟಕದಲ್ಲಿ ಕೆನೆಪದರ ನೀತಿಯು ('ಪ್ರವರ್ಗ–2ಎ'ಯಿಂದ '3ಬಿ'ವರೆಗೆ) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯುಡಿ 225 ಬಿಸಿಎ 2000, ದಿ. 30.03.2002 ತಿದ್ದುಪಡಿ ಪ್ರಕಾರ ಜಾರಿಯಲ್ಲಿದೆ. ಈ ನೀತಿಯು 'ಸಿ' ಗ್ರೂಪ್ ಹುದ್ದೆಯ ನೌಕರರು ಕೆನೆಪದರಕ್ಕೆ ಸೇರುವುದಿಲ್ಲ ಎಂದು ಅರ್ಥೈಸುತ್ತದೆ. ಆದರೆ, ಅವರ ವೇತನದ ಆದಾಯ ಮಿತಿ ₹8 ಲಕ್ಷ ಮೀರಿದರೆ ಕೆನೆಪದರದೊಳಗೆ ಸೇರುತ್ತಾರೆ, ಅಂತಹವರ ಮಕ್ಕಳು ಮೀಸಲಾತಿಗೆ ಅರ್ಹರಲ್ಲ ಎಂಬುದಾಗಿ ತೀರ್ಮಾನಿಸಲಾಗುತ್ತಿದೆ. ಇಲ್ಲಿ ಯಾವ ಹುದ್ದೆ ಎನ್ನುವುದು ಅಧಿಕಾರಿಗಳ ದೃಷ್ಟಿಯಲ್ಲಿ ಮುಖ್ಯವಾಗುತ್ತಿಲ್ಲ. ಪ್ರಸ್ತುತ, ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ಇಂತಹ ಸಂದರ್ಭಗಳಿಗೆ ತಿದ್ದುಪಡಿ ಅಥವಾ ಸ್ಪಷ್ಟೀಕರಣ ಅವಶ್ಯ. ಕೋರ್ಟ್ ತೀರ್ಪು, ಸಾಮಾಜಿಕ ನ್ಯಾಯದತ್ತ ಮತ್ತೊಂದು ದೊಡ್ಡ ಹೆಜ್ಜೆ.

ಜಾತಿ ಹಾಗೂ ಆದಾಯ ಪ್ರಮಾಣಪತ್ರವನ್ನು ದೃಢೀಕರಿಸಲು 'ಸಿಂಧುತ್ವ' ಕೇಳುವ ಅರ್ಜಿಯಲ್ಲಿ 'ಕುಟುಂಬದ ವಾರ್ಷಿಕ ಆದಾಯ' ಎಂಬ ಕಾಲಂ ಇದೆ. ಸಾಮಾನ್ಯವಾಗಿ ವಿವಾಹಿತ ಮಹಿಳೆಗೆ ಕುಟುಂಬ ಎಂದರೆ ಅವಳ ಗಂಡನ ಜೊತೆಗಿನ ಕುಟುಂಬ ಎಂದು ಅರ್ಥೈಸಲಾಗುತ್ತದೆ. ಆದರೆ, ಮದುವೆಯಾದ ಮಹಿಳೆಯೂ ಅವಳ ತಂದೆ–ತಾಯಿಯ ಆದಾಯವನ್ನು ನೀಡಬೇಕು ಎಂದು ಕೇಳಲಾಗುತ್ತಿದೆ. ಇದು ಸರಿಯೆ? ಅರ್ಜಿಯಲ್ಲಿ ತಂದೆ/ತಾಯಿ/ಪೋಷಕರು ಎಂದು ನಮೂದಿಸಿದೆ. ಮದುವೆಯಾದ ಮಹಿಳೆಗೆ ಅವಳ ಗಂಡ ಪೋಷಕನಾಗುವುದಿಲ್ಲವೆ? ಗಂಡನಿಗಿಂತಲೂ ತಂದೆ–ತಾಯಿ ಶ್ರೀಮಂತರಿದ್ದಾಗ ಯಾವುದು ಮುಖ್ಯ ಎನ್ನುವ ಪ್ರಶ್ನೆಯೂ ಎದುರಾಗುತ್ತದೆ. ಗಂಡ–ಹೆಂಡತಿ ಒಂದೇ ಜಾತಿಯವರಾದಾಗ ಹೇಗೆ?

ಅಧಿಕಾರಿಗಳು ಸುಪ್ರೀಂ ಕೋರ್ಟ್‌ನ ಸುರೀಂದರ್ ಸಿಂಗ್ ಮೊಕದ್ದಮೆಯ (2015) ತೀರ್ಪು ಮತ್ತು ಅದನ್ನು ಆಧರಿಸಿದ ಹೈಕೋರ್ಟ್‌ಗಳ ತೀರ್ಪುಗಳನ್ನು ಪರಿಗಣಿಸುತ್ತಿದ್ದಾರೆ. ರಾಜ್ಯದ ಜಿಲ್ಲೆಗಳಲ್ಲಿ ಬೇರೆ ಬೇರೆ ನೀತಿ ಅನುಸರಿಸಲಾಗುತ್ತಿದೆ ಎಂದೂ ಹೇಳಲಾಗುತ್ತಿದೆ. ಈ ಎಲ್ಲ ಅನುಮಾನ ಹಾಗೂ ಪ್ರಶ್ನೆಗಳು ಸಾರ್ವಜನಿಕರ ಗೊಂದಲಕ್ಕೆ ಕಾರಣವಾಗಿವೆ. ಈ ಗೊಂದಲಗಳಿಗೆ ನಿಖರ ಮಾಹಿತಿ ಮತ್ತು ಸ್ಪಷ್ಟೀಕರಣವನ್ನು ಸರ್ಕಾರ ಅಥವಾ ಸಂಬಂಧಪಟ್ಟ ಅಧಿಕಾರಿಗಳು ನೀಡಿ, ಅನಿಶ್ಚಿತತೆ ಕೊನೆಗೊಳಿಸಲಿ.

ಲೇಖಕ: ಮಾಜಿ ಅಧ್ಯಕ್ಷ, ರಾಜ್ಯ ಹಿಂದುಳಿದ ವರ್ಗಗಳ ಆಯೋಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪರಾಭವ ಸಂವತ್ಸರದ ರಾಶಿಫಲ

ಯುಗಾದಿ ಎಂದರೆ ಯುಗದ ಆರಂಭಕಾಲ. ಬ್ರಹ್ಮ ತನ್ನ ಸೃಷ್ಟಿಯನ್ನು ಆರಂಭಿಸಿದ ದಿನ. ಹಿಂದೂ ಪಂಚಾಂಗದ ಪ್ರಕಾರ ಇದು ವರ್ಷದ ಆರಂಭದ ದಿನ. ಶಾಲಿವಾಹನ ಮಹಾರಾಜರು ತಮ್ಮ ಶಕ ವರ್ಷವನ್ನು ಆರಂಭಿಸಿದ ದಿನ. ಈ ಸಂದರ್ಭದಲ್ಲಿ ಪ್ರಕೃತಿ ಹಸಿರಿನಿಂದ ಕಂಗೊಳಿಸುತ್ತಿರುತ್ತದೆ. ಚೈತ್ರಮಾಸದ ಈ ಭಾಗ್ಯವನ್ನು 'ಯುಗಾದಿ' ಎನ್ನುತ್ತೇವೆ.



ಎಂ.ಎನ್. ಲಕ್ಷ್ಮೀನಾರಾಯಣಸ್ವಾಮಿ
ಸಂಪರ್ಕ: 8197304680

ಸಂವತ್ಸರ ಫಲ

ಉತ್ತಮ ಮಳೆಯಾಗುತ್ತದೆ. ಭೂಮಿಯು ಪೈರುಗಳಿಂದ ಕಂಗೊಳಿಸುತ್ತದೆ. ಕಳ್ಳಕಾಕರ ಪೀಡೆ, ಯುದ್ಧ ಪೀಡೆ ಹೆಚ್ಚಾಗಬಹುದು. ಆಡಳಿತಗಾರರು ಪರಸ್ಪರ ಅಪನಂಬಿಕೆಯಿಂದ ಯುದ್ಧ ಮಾಡುವರು. ಪ್ರವಾಹ ಇನ್ನಿತರ ಪ್ರಕೃತಿ ವಿಕೋಪಗಳು, ಭಯಗಳು ಕೆಲವು ಕಡೆ ಇರುತ್ತವೆ. ಅಗ್ನಿಬಾಧೆ, ಗಾಳಿಯಿಂದ ಹಾನಿ ಸಂಭವಿಸಬಹುದು. ಪದಾರ್ಥಗಳ ಬೆಲೆಗಳಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು.

ಕೃಷಿ

ಹೈನು ಬೆಳೆ ಚೆನ್ನಾಗಿ ಆಗುತ್ತದೆ. ಬೇಳೆ ಫಸಲು ಮಧ್ಯಮವಾಗಿರುತ್ತದೆ. ಪಶುಗಳಿಗೆ ಮೇವಿನ ಕೊರತೆ ಕಾಣಿಸಬಹುದು. ಹೂವು–ಹಣ್ಣು ಮಾರುವವರಿಗೆ ಅಭಿವೃದ್ಧಿ ಇದೆ. ಜವಳಿ ವ್ಯಾಪಾರಿಗಳಿಗೆ, ಹತ್ತಿ ಬೆಳಗಾರರಿಗೆ ಲಾಭವಿದೆ.

ರಾಷ್ಟ್ರ

ರಾಷ್ಟ್ರದಲ್ಲಿ ರಾಜಕೀಯ ಸ್ಥಿರತೆ ಇದ್ದು, ದೇಶದ ಗೌರವ ಹೆಚ್ಚುತ್ತದೆ. ದೃಢವಾದ ಆಡಳಿತವಿರುತ್ತದೆ. ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಸೇನಾ ಶಕ್ತಿ ಉತ್ತಮಗೊಳ್ಳುತ್ತದೆ. ದೇಶದಲ್ಲಿ ವಾಯುಮಾಲಿನ್ಯ, ಅನಿಲ ಸೋರಿಕೆ, ಬೆಂಕಿಯ ಅವಘಡಗಳು, ವಿದ್ಯುತ್ ಅಪಘಾತ ಸಂಭವಿಸಬಹುದು. ವೈಮಾನಿಕ ಅವಘಡಗಳು ಅಥವಾ ವ್ಯತ್ಯಾಸಗಳನ್ನು ಕಾಣಬಹುದು. ಸಿನಿಮಾರಂಗ ಉನ್ನತ ಸ್ಥಿತಿಗೆ ಹೋಗುತ್ತದೆ. ಒಬ್ಬ ದೊಡ್ಡ ನಟ ಅಥವಾ ನಟಿಗೆ ಕೆಟ್ಟ ಹೆಸರು ಬರುವ ಸಾಧ್ಯತೆ ಇದೆ. ದೇಶದಲ್ಲಿ ಅತ್ಯಂತ ಕಟ್ಟುನಿಟ್ಟಿನ ಕಾನೂನುಗಳು ಜಾರಿಯಾಗಬಹುದು. ಪ್ರಪಂಚದಲ್ಲಿ ಯುದ್ಧಭೀತಿ ಮುಂದುವರಿಯಲಿದೆ.

ಈ ವರ್ಷದ ನಾಯಕರು

ರಾಜ- ಗುರು	ಅರ್ಘಾಧಿಪ - ಚಂದ್ರ
ಮಂತ್ರಿ- ಕುಜ	ಮೇಘಾಧಿಪ- ಚಂದ್ರ
ಸೇನಾಧಿಪ- ಚಂದ್ರ	ರಸಾಧಿಪ- ರವಿ
ಸಸ್ಯಾಧಿಪ- ಶುಕ್ರ	ನೀರಸಾಧಿಪ - ಗುರು
ಧಾನ್ಯಾಧಿಪ- ಬುಧ	ಪಶುನಾಯಕ - ಕೃಷ್ಣ

ಮೇಷ

ಆದಾಯ 11, ವ್ಯಯ 5; ಆರೋಗ್ಯ 0, ಅನಾರೋಗ್ಯ 4; ರಾಜಪೂಜ 4, ರಾಜಕೋಪ 2; ಸುಖ 6, ದುಃಖ 3

ಈ ವರ್ಷದಲ್ಲಿ ಗುರು 3, 4 ಮತ್ತು 5ನೇ ಮನೆಯಲ್ಲಿ ಸಂಚಾರ ಮಾಡುತ್ತಾನೆ. ಶನಿಯು ವ್ಯಯದಲ್ಲಿರುತ್ತಾನೆ. ಬುಧ ಕುಜ ರಾಹುಗಳು ಲಾಭದಲ್ಲಿರುತ್ತವೆ. ಆದಾಯ ಚೆನ್ನಾಗಿರುತ್ತದೆ. ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಬಂಧುಗಳ ಪ್ರೀತಿ ಹೆಚ್ಚಾಗುತ್ತದೆ. ಕೌಟುಂಬಿಕ ಸುಖ ಇರುತ್ತದೆ. ಉದ್ಯೋಗದಲ್ಲಿ ಧನಲಾಭ. ಕೆಲಸಗಳು ಸುಗಮವಾಗುತ್ತವೆ. ರೈತರ ಬೆಳೆಗಳಿಗೆ ಉತ್ತಮ ಬೆಲೆ ಸಿಗುತ್ತದೆ. ವಿದ್ಯಾರ್ಥಿಗಳು ಹೆಚ್ಚು ಪರಿಶ್ರಮ ಪಡಬೇಕು. ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ಹೋಗುವವರಿಗೆ ಅನುಕೂಲ. ಉದ್ಯೋಗದಲ್ಲಿ ಉನ್ನತ ಸ್ಥಾನ ದೊರೆಯಬಹುದು. ವ್ಯಾಪಾರ, ವ್ಯವಹಾರಗಳಲ್ಲಿ ಅನುಕೂಲ. ವಿವಾಹ ಸಂಬಂಧಗಳು ಒದಗಬಹುದು. ಸಂತಾನಕ್ಕೆ ಶುಭಸೂಚನೆಗಳಿವೆ. ಹೊಸ ಆಸ್ತಿಯನ್ನು ಖರೀದಿಸಬಹುದು. ಕೋರ್ಟು–ಕಚೇರಿಗಳ ವಿಷಯಗಳಲ್ಲಿ ನಿಮ್ಮ ಕಡೆಗೆ ಜಯವಿರುತ್ತದೆ. ಒಳಿತಿಗಾಗಿ ಪೂರ್ವಾಭಿಮುಖವಾಗಿ ಕುಳಿತು ಕುಜಮಂತ್ರವನ್ನು ಜಪಿಸಿ. ದೇವತೆಗಳಿಗೆ ಕುಂಕುಮ ಅರ್ಚನೆ ಮಾಡಿಸಿ.

ವೃಷಭ

ಆದಾಯ 5, ವ್ಯಯ 14; ಆರೋಗ್ಯ 4, ಅನಾರೋಗ್ಯ 5; ರಾಜಪೂಜ 3, ರಾಜಕೋಪ 5; ಸುಖ 6, ದುಃಖ 3

ಶನಿಯು ಮೀನದಲ್ಲಿರುತ್ತಾನೆ. ಗುರು, ಮಿಥುನ ಕರ್ಕಾಟಕ ಮತ್ತು ಸಿಂಹದಲ್ಲಿ ಸಂಚಾರದಲ್ಲಿರುತ್ತಾನೆ. ಗುರುವಿನ ದೃಷ್ಟಿಯಿಂದ ಶನಿಯ ಅವಕೃಪೆ ಕಡಿಮೆಯಾಗುತ್ತದೆ. ಆರೋಗ್ಯದ ಕಡೆಗೆ ಗಮನ ಕೊಡಿ. ಕಾಯಿಲೆಗಳಿಂದ ನರಳುತ್ತಿರುವವರಿಗೆ ಆರೋಗ್ಯ ಸುಧಾರಣೆಯಾಗುತ್ತದೆ. ಮೂಳೆ ದೋಷಗಳ ನಿವಾರಣೆಯಾಗುತ್ತದೆ. ಸಮಾಜದಿಂದ ಸ್ವಲ್ಪ ಅನುಕೂಲಗಳು ದೊರೆಯುತ್ತವೆ. ಬಂಧು–ಮಿತ್ರರಿಂದ ನೆರವು ಸಿಗುತ್ತದೆ. ಹೊಸ ಆಸ್ತಿಯ ಖರೀದಿ ಮಾಡುವ ಯೋಗವಿದೆ. ಸಂಸಾರದಲ್ಲಿ ಹೆಚ್ಚು ಸುಖವಿರುತ್ತದೆ. ಮನಸ್ಸಿನಲ್ಲಿ ಕೆಟ್ಟ ಯೋಚನೆಗಳು ಬರಬಹುದು; ಹತೋಟಿಯಲ್ಲಿಡಿ. ಧನಶೇಖರಣೆಯಾದರೂ ಖರ್ಚು ಹೆಚ್ಚು. ಉದ್ಯೋಗಿಗಳಿಗೆ ಅಭಿವೃದ್ಧಿಯ ಯೋಗವಿದೆ. ನಿರುದ್ಯೋಗಿಗಳಿಗೆ ಉದ್ಯೋಗ; ಇಚ್ಛಿಸಿದ ಜಾಗಕ್ಕೆ ವರ್ಗಾವಣೆ ಮತ್ತು ಬಡ್ತಿ ಸಿಗಬಹುದು. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಬಹುದು. ಹೊಸ ಆದಾಯಗಳ ಮೂಲ ಗೋಚರಿಸುತ್ತದೆ. ಕೃಷಿಭೂಮಿಯನ್ನು ಖರೀದಿಸುವ ಯೋಗವಿದೆ. ವಾಣಿಜ್ಯ ಬೆಳೆಗಳಿಂದ ಹೆಚ್ಚು ಆದಾಯ. ಒಳಿತಿಗಾಗಿ ಶುಕ್ರಮಂತ್ರವನ್ನು ಜಪಿಸಿ. ದುರ್ಗಾ ಪಾರಾಯಣ ಮಾಡಿರಿ. ಶಿವನ ಧ್ಯಾನ ಮತ್ತು ರುದ್ರಾಭಿಷೇಕ ಮಾಡುವುದು ಒಳಿತು.

ಮಿಥುನ

ಆದಾಯ 8, ವ್ಯಯ 11; ಆರೋಗ್ಯ 6, ಅನಾರೋಗ್ಯ 6; ರಾಜಪೂಜ 0, ರಾಜಕೋಪ 5; ಸುಖ 6, ದುಃಖ 3

ರಾಶಿಯಲ್ಲಿಯೇ ಗುರು ತೃತೀಯದಲ್ಲಿ, ಕೇತು ಅಷ್ಟಮದಲ್ಲಿ, ಮಾಂದಿಭಾಗ್ಯದಲ್ಲಿ ಕುಜ, ಬುಧ, ರಾಹು ಮತ್ತು ದಶಮದಲ್ಲಿ ರವಿಚಂದ್ರ ಶನಿ ಹಾಗೂ ಲಾಭದಲ್ಲಿ ಶುಕ್ರರಿರುತ್ತಾರೆ. ರಾಶಿಯಲ್ಲಿರುವವರಿಗೆ ಪ್ರಗತಿ ಸ್ವಲ್ಪ ಕಡಿಮೆ. ಗುರು ಕರ್ಕಾಟಕ ರಾಶಿಯನ್ನು ಪ್ರವೇಶ ಮಾಡಿದಾಗ ಧನಲಾಭವಿರುತ್ತದೆ. ವೈಭವದ ಜೀವನ ನಡೆಸುವ ಯೋಗವಿದೆ. ಕೆಲಸಗಳಲ್ಲಿ ಯಶಸ್ಸು ಸಿಗಲಿದೆ. ಆರೋಗ್ಯದಲ್ಲಿ ವೃದ್ಧಿ. ಕೌಟುಂಬಿಕ ಜೀವನದಲ್ಲಿ ನೆಮ್ಮದಿ. ಅವಿವಾಹಿತರಿಗೆ ಸಂಬಂಧಗಳು ಒದಗಿ ಬರುತ್ತವೆ. ಸ್ಥಿರಾಸ್ತಿಯನ್ನು ಕೊಳ್ಳುವ ಯೋಗವಿದೆ. ವಾಹನ ಖರೀದಿ ಸಾಧ್ಯ. ದೂರ ಪ್ರಯಾಣದ ಯೋಗ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿ. ಕೋರ್ಟ್ ವ್ಯಾಜ್ಯಗಳಲ್ಲಿ ಅನುಕೂಲ. ಕೃಷಿಕರಿಗೆ ಲಾಭ. ವಿಜ್ಞಾನಿಗಳಿಗೆ, ವೈದ್ಯರಿಗೆ, ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಅನುಕೂಲ. ಸರ್ಕಾರಿ ಅಧಿಕಾರಿಗಳಿಗೆ ಕೀರ್ತಿ ಗೌರವಗಳು ಪ್ರಾಪ್ತಿಯಾಗುತ್ತವೆ. ಒಳಿತಿಗಾಗಿ ಬುಧ ಮಂತ್ರವನ್ನು ಜಪಿಸಿ. ಲಲಿತಾ ಅಷ್ಟೋತ್ತರ ಪಠಿಸಿ. ಗಣಪತಿ ಆರಾಧನೆ ಮಾಡಿ.

ಕರ್ಕಾಟಕ

ಆದಾಯ 8, ವ್ಯಯ 2; ಆರೋಗ್ಯ 3, ಅನಾರೋಗ್ಯ 2; ರಾಜಪೂಜ 1, ರಾಜಕೋಪ 2; ಸುಖ 6, ದುಃಖ 3

ಉಚ್ಚ ಗುರು ನಿಮ್ಮ ರಾಶಿಗೆ ಬಂದು ಸೇರುತ್ತಾನೆ. ಭಾಗ್ಯದಲ್ಲಿ ಶನಿ ಚಂದ್ರ ರವಿ ಇರುತ್ತಾರೆ. ಸಪ್ತಮದಲ್ಲಿ ಕುಜ, ಬುಧ ಇರುವರು. ಸದ್ಯದಲ್ಲಿ ಗುರು ವ್ಯಯಭಾವದಲ್ಲಿರುತ್ತಾನೆ. ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಲಾಭ. ಸಾಮಾಜಿಕ ಕೆಲಸಗಳನ್ನು ಮಾಡುವಿರಿ. ಬಂಧುಗಳ ನಡುವಿನ ವ್ಯತ್ಯಾಸಗಳು ಸರಿಯಾಗುತ್ತವೆ. ಮಕ್ಕಳಿಲ್ಲದವರಿಗೆ ಸಂತಾನ ಲಾಭವಾಗುವುದು. ಮಕ್ಕಳ ಅಭಿವೃದ್ಧಿಯು ಉತ್ತಮವಾಗಿರುತ್ತದೆ. ಗುರು ಕರ್ಕಾಟಕಕ್ಕೆ ಬಂದ ನಂತರ ಉತ್ತಮ ಗೌರವ ದೊರೆಯುತ್ತದೆ. ಆರ್ಥಿಕ ಬೆಂಬಲ ಸಿಗುತ್ತದೆ. ಹಣ ಹೂಡಿಕೆ ಮಾಡುವ ಮುನ್ನ ಅದರ ಬಗ್ಗೆ ಸರಿಯಾಗಿ ತಿಳಿಯಿರಿ. ಪ್ರೇಮಿಗಳ ಪ್ರೀತಿ ಫಲಿಸುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಅವಕಾಶ ದೊರೆಯುತ್ತದೆ. ವಿದೇಶಿ ವ್ಯವಹಾರಗಳಿಂದ ಲಾಭ ಹೆಚ್ಚುತ್ತದೆ. ಹೋಟೆಲ್ ಉದ್ಯಮದವರಿಗೆ ಲಾಭ. ಕುಟುಂಬದ ಕಡೆಗೆ ಸರಿಯಾದ ಗಮನವಿರಲಿ. ಒಳಿತಿಗಾಗಿ ಗಣೇಶ, ಸುಬ್ರಹ್ಮಣ್ಯ, ಈಶ್ವರನ ಧ್ಯಾನ ಮಾಡಿ.

ಸಿಂಹ

ಆದಾಯ 5, ವ್ಯಯ 5; ಆರೋಗ್ಯ 1, ಅನಾರೋಗ್ಯ 1; ರಾಜಪೂಜ 4, ರಾಜಕೋಪ 2; ಸುಖ 6, ದುಃಖ 3

ಸೋಂಕು ಸಂಬಂಧಿತ ಕಾಯಿಲೆಗಳ ಬಗ್ಗೆ ಎಚ್ಚರ. ಗುರು ಕರ್ಕಾಟಕದಲ್ಲಿ ಇರುವವರೆಗೆ ಮತ್ತು ಸಿಂಹಕ್ಕೆ ಬಂದಾಗ ಆದಾಯ ಉತ್ತಮಗೊಳ್ಳುತ್ತದೆ. ಶುಕ್ರನಿಂದ ಧನಲಾಭ. ಹಿರಿಯರಿಂದ ಧನಸಹಾಯ. ಉಳಿತಾಯ ಮಾಡಿದ್ದ ಹಣ ಗಂಟಾಗಿ ಬರುತ್ತದೆ. ಮಕ್ಕಳ ಪ್ರಗತಿಯಲ್ಲಿ ಉತ್ತಮ ವಾರ್ತೆಗಳನ್ನು ಕೇಳಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶದ ಯೋಗ. ಸಂತಾನ ಅಪೇಕ್ಷಿಸುತ್ತಿರುವವರಿಗೆ ಶುಭ ವಾರ್ತೆ. ಮೂಳೆ ದೋಷಗಳು ಕೆಲವರನ್ನು ಕಾಡುತ್ತವೆ. ವಿವಾಹ ಸಂಬಂಧದ ಬಗ್ಗೆ ಎಚ್ಚರವಾಗಿರಿ. ಸರ್ಕಾರಿ ಉನ್ನತ ಅಧಿಕಾರಿಗಳಿಗೆ ಕೆಲಸದ ಒತ್ತಡಗಳು ಹೆಚ್ಚಾಗಬಹುದು. ವೃತ್ತಿಯಲ್ಲಿ ಅನುಕೂಲ ಹೆಚ್ಚಾಗುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ. ರಿಯಲ್ ಎಸ್ಟೇಟ್ ಉದ್ದಿಮೆಗಳಿಗೆ ಹೆಚ್ಚು ಲಾಭ ದೊರೆಯುತ್ತದೆ. ಸ್ನೇಹಿತರ ನಡುವಿನ ಸಂಬಂಧದಲ್ಲಿ ವ್ಯತ್ಯಾಸಗಳಾಗಬಹುದು. ಒಳಿತಿಗಾಗಿ ವಿಷ್ಣು ಆರಾಧನೆ, ದುರ್ಗಾರಾಧನೆ, ಶಿವಾರಾಧನೆ ಮುಖ್ಯ.

ಕನ್ಯಾ

ಆದಾಯ 8, ವ್ಯಯ 11; ಆರೋಗ್ಯ 6, ಅನಾರೋಗ್ಯ 6; ರಾಜಪೂಜ 0, ರಾಜಕೋಪ 5; ಸುಖ 6, ದುಃಖ 3

ಗುರುವಿನ ಸಂಚಾರ 10 ಮತ್ತು 11ನೇ ಮನೆಯಲ್ಲಿ ನಡೆಯುತ್ತದೆ. ರಾಹು ಆರನೆಯ ಮನೆಯಲ್ಲೂ ಕೇತು 12ನೆಯ ಮನೆಯಲ್ಲಿಯೂ ಇರುತ್ತಾರೆ. ಶನಿ 7ನೇ ಮನೆಯಲ್ಲಿದ್ದು ವಕ್ರಗತಿಯನ್ನು ಹೊಂದುತ್ತಾನೆ. ನಿಮಗೆ ಲಕ್ಷ್ಮೀನಾರಾಯಣ ಯೋಗ ಒದಗಿ ಬರುತ್ತದೆ. ಅಧಿಕ ಧನಪ್ರಾಪ್ತಿಯಾಗಿ ಆರ್ಥಿಕ ಸಂಕಷ್ಟಗಳಿಂದ ಹೊರಬರುವಿರಿ. ಕೃಷಿ ಜಮೀನು ಮನೆ ಮುಂತಾದ ಸ್ಥಿರಾಸ್ತಿಯನ್ನು ಮಾಡಿಕೊಳ್ಳುವ ಯೋಗವಿದೆ. ಹೊಸ ಕಾರ್ಯಗಳಲ್ಲಿ ಜಯ ಪ್ರಾಪ್ತಿ. ಕುಟುಂಬ ಸೌಖ್ಯವಿದ್ದು, ಸಂತೋಷವಿರುತ್ತದೆ. ಪಿತ್ರಾರ್ಜಿತ ಆಸ್ತಿ ಸಿಗುವ ಯೋಗ. ಬಂಧುಗಳ ನಡುವಿನ ಭಿನ್ನಾಭಿಪ್ರಾಯ ಸರಿಮಾಡಿಕೊಳ್ಳಬಹುದು. ದುಷ್ಟರ ಸಹವಾಸ ಬೇಡ. ಹಣಕಾಸಿನ ವ್ಯವಹಾರದಲ್ಲಿರುವವರಿಗೆ ನಷ್ಟವಾಗದು. ಉದ್ಯೋಗದಲ್ಲಿ ಪ್ರಗತಿ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಸ್ವಲ್ಪ ಹಿನ್ನಡೆ. ಸಿನಿಮಾ ರಂಗದವರಿಗೆ, ಬಟ್ಟೆ ವ್ಯಾಪಾರಿಗಳಿಗೆ ಲಾಭ. ವಿದ್ಯಾರ್ಥಿಗಳಿಗೆ ಸ್ವಲ್ಪ ಅನುಕೂಲ. ರಾಜಕೀಯ ವ್ಯಕ್ತಿಗಳಿಗೆ ನಿಧಾನಗತಿಯ ಪ್ರಗತಿ ಇರುತ್ತದೆ. ಒಳಿತಿಗಾಗಿ ಲಕ್ಷ್ಮೀನಾರಾಯಣ ಧ್ಯಾನ, ವಿಷ್ಣುಸಹಸ್ರನಾಮದ ಪಠಣ ಮಾಡಿ.

ತುಲಾ

ಆದಾಯ 5, ವ್ಯಯ 14; ಆರೋಗ್ಯ 4, ಅನಾರೋಗ್ಯ 5; ರಾಜಪೂಜ 3, ರಾಜಕೋಪ 5; ಸುಖ 6, ದುಃಖ 3

ಗುರುವು 9 ಮತ್ತು 10ನೇ ಮನೆಯಲ್ಲಿ ಸಂಚರಿಸುವನು. ಶನಿಯು ಆರನೇ ಮನೆಯಲ್ಲಿಯೂ, ರಾಹು ಬುಧ ಐದನೆಯ ಮನೆಯಲ್ಲಿಯೂ, ಕೇತು 11ನೇ ಮನೆಯಲ್ಲಿಯೂ ಇರುತ್ತಾರೆ. ಆರ್ಥಿಕ ಸಲಹೆಗಾರರು ಮತ್ತು ವ್ಯಾವಹಾರಿಕ ಸಲಹೆಗಾರರಿಗೆ ಅಭಿವೃದ್ಧಿ ಇರುತ್ತದೆ. ಸುಗಂಧದ್ರವ್ಯಗಳನ್ನು ಮಾರುವವರಿಗೆ, ಅಲಂಕಾರಿಕ ಬಟ್ಟೆಗಳನ್ನು ತಯಾರು ಮಾಡಿ ಮಾರುವವರಿಗೆ ಹೆಚ್ಚು ಲಾಭವಿದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುವವರಿಗೆ ಹೆಚ್ಚು ಅನುಕೂಲವಿರುತ್ತದೆ. ಆಭರಣ ವ್ಯಾಪಾರಿಗಳಿಗೆ ವಸ್ತ್ರಾಲಂಕಾರ ಮತ್ತು ಕೇಶಾಲಂಕಾರ ಮಾಡುವವರಿಗೆ ಹೆಚ್ಚು ಆದಾಯ ಪ್ರಾಪ್ತಿ. ಕುಟುಂಬದಲ್ಲಿ ನೆಮ್ಮದಿ ಇರುತ್ತದೆ. ಅವಿವಾಹಿತರಿಗೆ ಸಂಬಂಧಗಳು ಒದಗುವ ಸಾಧ್ಯತೆ. ರಾಜಕಾರಣಿಗಳು ಮಾತನಾಡುವಾಗ ಎಚ್ಚರ ಅಗತ್ಯ. ಕಲಾವಿದರಿಗೆ ಆದಾಯ ಹೆಚ್ಚುತ್ತದೆ. ಮಕ್ಕಳ ಅಭಿವೃದ್ಧಿ ಉತ್ತಮಗೊಳ್ಳುತ್ತದೆ. ಹಿರಿಯ ಅಧಿಕಾರಿಗಳ ತೊಂದರೆ ತಪ್ಪುತ್ತವೆ. ಬಂಧುಮಿತ್ರರಿಂದ ಸಹಕಾರ. ಕೃಷಿಕರಿಗೆ ಲಾಭ ಹೆಚ್ಚು. ನಿರುದ್ಯೋಗಿಗಳಿಗೆ ಉದ್ಯೋಗದ ಸಾಧ್ಯತೆ. ಮೂತ್ರಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಪುಣ್ಯಕ್ಷೇತ್ರದ ದರ್ಶನಗಳ ಯೋಗ. ಪ್ರಮುಖ ವ್ಯಕ್ತಿಗಳ ಭೇಟಿಯಾಗಿ ನಿಮ್ಮ ಕೆಲಸ ಕಾರ್ಯಗಳ ಸುಲಭವಾಗಿ ಆಗುತ್ತವೆ. ಒಳಿತಿಗಾಗಿ ಲಕ್ಷ್ಮೀ, ಈಶ್ವರ, ಸುಬ್ರಹ್ಮಣ್ಯರ ಧ್ಯಾನ–ಆರಾಧನೆಗಳನ್ನು ಮಾಡಿ.

ವೃಶ್ಚಿಕ

ಆದಾಯ 11, ವ್ಯಯ 5; ಆರೋಗ್ಯ 0, ಅನಾರೋಗ್ಯ 4; ರಾಜಪೂಜ 4, ರಾಜಕೋಪ 2; ಸುಖ 6, ದುಃಖ 3

ರಾಜ್ಯಾಧಿಪತಿ ಕುಜ ನಾಲ್ಕನೇ ಮನೆಯಲ್ಲಿಯೂ, ಅಲ್ಲಿಯೇ ಬುಧ ಮತ್ತು ರಾಹು ಇರುತ್ತಾರೆ. ಶುಕ್ರನು ಆರನೇ ಮನೆಯಲ್ಲಿಯೂ, ಗುರು 8 ಮತ್ತು 9ನೇ ಮನೆಯಲ್ಲಿ ಸಂಚಾರ ಮಾಡುವರು. ಐದನೇ ಮನೆಯಲ್ಲಿ ಶನಿ ಮತ್ತು ರವಿ ಇರುವರು. ಸೇನೆ ಮತ್ತು ಆರಕ್ಷಕರು ಮತ್ತು ಖಾಸಗಿ ಡಿಟೆಕ್ಟಿವ್ ಏಜೆನ್ಸಿಗಳಲ್ಲಿ ಕೆಲಸ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಆರೋಗ್ಯದಲ್ಲಿ ಸುಧಾರಣೆ. ಕಷ್ಟಗಳು ಸ್ವಲ್ಪ ಪರಿಹಾರವಾಗುತ್ತವೆ. ಗುರು ಕರ್ಕಾಟಕ ರಾಶಿಗೆ ಬಂದ ನಂತರ ಸ್ಥಿರಾಸ್ತಿಯನ್ನು ಕೊಳ್ಳಲು ಮುಂದುವರಿಯಬಹುದು. ಪಾಲುದಾರಿಕೆ ವ್ಯವಹಾರಗಳಲ್ಲಿ ಹೆಚ್ಚು ಅನುಕೂಲ. ಆಭರಣಗಳನ್ನು ಕೊಳ್ಳುವ ಯೋಗ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮಗೆ ಅನುಕೂಲ ಹೆಚ್ಚು. ರೈತರಿಗೆ ಹೆಚ್ಚು ಆದಾಯ. ಸಾಂಪ್ರದಾಯಕ ಕೃಷಿ ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ನವೋದ್ಯಮಿಗಳಿಗೆ ಉತ್ತಮ ಕಾಲ. ಉದ್ಯೋಗವನ್ನು ಅರಸುತ್ತಿರುವವರಿಗೂ ಉತ್ತಮ ಕಾಲ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿ. ಒಳಿತಿಗಾಗಿ ಸುಬ್ರಹ್ಮಣ್ಯ, ದುರ್ಗಾ, ಶನೀಶ್ವರನ ಧ್ಯಾನ ಮಾಡಿ.

ಧನುಸ್ಸು

ಆದಾಯ 14, ವ್ಯಯ 11; ಆರೋಗ್ಯ 5, ಅನಾರೋಗ್ಯ 2; ರಾಜಪೂಜ 3, ರಾಜಕೋಪ 5; ಸುಖ 6, ದುಃಖ 3

ಸದ್ಯ ಗುರು ಮಿಥುನ ರಾಶಿಯಲ್ಲಿದ್ದು ನಂತರ ಕರ್ಕಾಟಕ ರಾಶಿಯನ್ನು ಪ್ರವೇಶ ಮಾಡುವನು. ಶನಿ ಮೀನದಲ್ಲಿದ್ದು ನಂತರ ವಕ್ರೀಯಾಗುವನು. ತೃತೀಯದಲ್ಲಿ ರಾಹು ಇರುವನು. ಚತುರ್ಥದಲ್ಲಿ ಶುಕ್ರ, ರವಿ ಇರುವರು. ಗುರುವಿನಿಂದ ಅದೃಷ್ಟಗಳು ದೊರೆಯುತ್ತವೆ. ಆರೋಗ್ಯದಲ್ಲಿ ಸ್ವಲ್ಪ ಏರುಪೇರು ಆಗಬಹುದು. ನಂಬಿಕೆದ್ರೋಹ ಆಗಬಹುದು. ಆದರೆ ಪ್ರಾಮಾಣಿಕ ಪ್ರಯತ್ನಕ್ಕೆ ಫಲ ಸಿಗುತ್ತದೆ. ಜಮೀನಿನ ಮೇಲೆ ಹಣ ಹೂಡಿಕೆ ಮಾಡಬಹುದು. ಆಭರಣಗಳನ್ನು ಕೊಳ್ಳಬಹುದು. ಹೋಟೆಲ್ ಉದ್ಯಮದವರಿಗೆ, ಕಿರಾಣಿ ಅಂಗಡಿಯವರಿಗೆ ಅನುಕೂಲ. ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿ ಇರುತ್ತದೆ. ಸರ್ಕಾರಿ ಅಧಿಕಾರಿಗಳು ತಮ್ಮ ಎಲ್ಲೆ ಮೀರಿ ನಡೆಯಬಾರದು. ಕುಟುಂಬದಲ್ಲಿ ಸ್ವಲ್ಪ ಕಿರಿಕಿರಿ ಬರಬಹುದು. ಯಾರಿಗೂ ಯಾವುದೇ ರೀತಿಯ ಭರವಸೆಗಳನ್ನು ನೀಡಬೇಡಿ. ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯಾಗಬಹುದು. ಸಮಾಜದಿಂದ ಗೌರವ ದೊರೆಯುತ್ತದೆ. ಅಪೇಕ್ಷಿಸಿದ ಜಾಗಕ್ಕೆ ವರ್ಗಾವಣೆ ಆಗುತ್ತದೆ. ಉನ್ನತ ಹುದ್ದೆ ದೊರೆತರೂ ಒತ್ತಡಗಳಿರುತ್ತವೆ. ಹೆಚ್ಚು ಬಂಡವಾಳ ಹಾಕಿ ಯಾವುದೇ ವ್ಯವಹಾರವನ್ನು ಆರಂಭಿಸಬೇಡಿ. ವಿದ್ಯಾರ್ಥಿಗಳು ಸ್ವಲ್ಪ ಹೆಚ್ಚು ಶ್ರಮ ಹಾಕಬೇಕು. ಮನೆಯಲ್ಲಿ ಶುಭಕಾರ್ಯಗಳಾಗುತ್ತವೆ. ಒಳಿತಿಗಾಗಿ ದತ್ತಾತ್ರೇಯರ ಆರಾಧನೆ, ಗುರುಗಳ ಆರಾಧನೆಯನ್ನು ಮಾಡಿ.

ಮಕರ

ಆದಾಯ 2, ವ್ಯಯ 8; ಆರೋಗ್ಯ 6, ಅನಾರೋಗ್ಯ 4; ರಾಜಪೂಜ 4, ರಾಜಕೋಪ 2; ಸುಖ 6, ದುಃಖ 3

ಸದ್ಯಕ್ಕೆ ಗುರುವು ಮಿಥುನ ರಾಶಿಯಲ್ಲಿದ್ದು ಕರ್ಕಾಟಕ ರಾಶಿಗೆ ಮುಂದುವರಿಯುವನು. ರಾಹು ಮತ್ತು ಬುಧರು ಕುಂಭದಲ್ಲಿದ್ದು ಕೇತು ಸಿಂಹದಲ್ಲಿರುವನು. ಗುರು ಕರ್ಕಾಟಕ ರಾಶಿಯನ್ನು ಪ್ರವೇಶಿಸಿದಾಗ ಬಹಳ ಒಳ್ಳೆಯದಾಗುತ್ತದೆ; ಪಡುತ್ತಿದ್ದ ಹಿಂಸೆಗಳು ಮರೆಯಾಗುತ್ತವೆ. ಧನಕ್ಕಾಗಿ ಕಷ್ಟಪಡುತ್ತಿದ್ದವರಿಗೆ ಒಳಿತಾಗಿ ಧನಸಂಪಾದನೆ ಹೆಚ್ಚುತ್ತದೆ. ಅವಿವಾಹಿತರಿಗೆ ವಿವಾಹಸಂಬಂಧಗಳು ಒದಗಿಬರುತ್ತವೆ. ವಕ್ರೀಶನಿಯಿಂದ ಸ್ವಲ್ಪ ತೊಂದರೆಗಳು ಬಂದರೂ ಹಾನಿಯೇನಿಲ್ಲ. ಸ್ವಲ್ಪ ಅಪವಾದಗಳು ಬರಬಹುದು. ಹಿತಶತ್ರುಗಳಿಂದ ತೊಂದರೆ. ಉದ್ಯೋಗದಲ್ಲಿ ದೊಡ್ಡಮಟ್ಟದ ಬದಲಾವಣೆಗಳಾಗಿ ಸ್ಥಾನ ದೊರೆಯುತ್ತದೆ. ಆರ್ಥಿಕ ಸ್ಥಿತಿಯು ಉತ್ತಮಗೊಂಡು ಹಳೆಯ ಸಾಲಗಳನ್ನು ತೀರಿಸಿಬಿಡಬಹುದು. ವೃತ್ತಿಯ ಸ್ಥಳದಲ್ಲಿ ಹಿರಿಯ ಅಧಿಕಾರಿಗಳ ಕೃಪೆಯಿಂದ ಬಡ್ತಿ. ನಿರುದ್ಯೋಗಿಗಳಿಗೆ ಕೆಲಸ ದೊರೆಯುತ್ತದೆ. ಅನವಶ್ಯಕ ವಿಚಾರಗಳಲ್ಲಿ ತಲೆ ಹಾಕದಿರಿ. ಶತ್ರುಗಳ ವಿರುದ್ಧ ಜಯ. ಶುಭಕಾರ್ಯಗಳಿಗಾಗಿ ಹೆಚ್ಚು ಹಣ ಖರ್ಚು. ರೈತರು ಕೃಷಿಗಳಿಗೆ ಹೆಚ್ಚು ಹಣ ಖರ್ಚು ಮಾಡಿದರೂ ವಾಪಸ್ ಬರುತ್ತದೆ. ಯಾವುದೇ ಕೆಲಸಕ್ಕಾಗಲಿ ಪರಾವಲಂಬನೆ ಖಂಡಿತ ಬೇಡ. ಪಾಲುದಾರಿಕೆ ವ್ಯವಹಾರಗಳಲ್ಲಿ ಎಚ್ಚರವಾಗಿರಿ. ಹೊಸ ಹೂಡಿಕೆ ಬಗ್ಗೆ ತಿಳಿದು ಮುನ್ನಡೆಯಿರಿ. ಒಳಿತಿಗಾಗಿ ಗೋವಿಂದ, ಶನೈಶ್ವರ, ಈಶ್ವರನ ಧ್ಯಾನ ಮಾಡಿ.

ಕುಂಭ

ಆದಾಯ 2, ವ್ಯಯ 8; ಆರೋಗ್ಯ 6, ಅನಾರೋಗ್ಯ 4; ರಾಜಪೂಜ 4, ರಾಜಕೋಪ 2; ಸುಖ 6, ದುಃಖ 3

ಗುರು ಮಿಥುನ ಮತ್ತು ಕರ್ಕಾಟಕ ರಾಶಿಗಳಲ್ಲಿ ಸಂಚಾರವಿರುತ್ತದೆ. ಬುಧ ರಾಹುಗಳು ಕುಂಭ ರಾಶಿಯಲ್ಲಿ ಇರುತ್ತವೆ. ಮೀನದಲ್ಲಿ ಶನಿ ಇದ್ದು ಸಿಂಹದಲ್ಲಿ ಕೇತು ಇರುತ್ತಾನೆ. ಜೂನ್ ಒಂದನೇ ತಾರೀಖಿನವರೆಗೆ ಗುರುವಿನಿಂದ ವಿಶೇಷ ಅನುಗ್ರಹ ಇರುತ್ತದೆ. ಸಾಡೇ ಸಾತಿ ಇದ್ದರೂ ತೀವ್ರ ತೊಂದರೆ ಇರುವುದಿಲ್ಲ. ಕುಟುಂಬದಲ್ಲಿನ ನೆಮ್ಮದಿ ಗುರು ಕರ್ಕಾಟಕಕ್ಕೆ ಬಂದಾಗ ಸ್ವಲ್ಪ ಕಡಿಮೆಯಾಗುತ್ತದೆ. ಕುಟುಂಬ ಸದಸ್ಯರ ಜೊತೆ ಕಿರಿಕಿರಿಯಾಗಬಹುದು. ಹೂಡಿಕೆ ಬಗ್ಗೆ ಹೆಚ್ಚು ಜಾಗ್ರತರಾಗಿರಿ. ಬಾಂಧವರಿಂದ ಕಿರಿಕಿರಿಗಳಾಗಬಹುದು. ಕೆಲಸಗಳು ನಡೆದರೂ ಮನಸ್ಸಿಗೆ ತೃಪ್ತಿ ಇರುವುದಿಲ್ಲ. ಖರ್ಚು ಹೆಚ್ಚಾಗುವ ಸಂಭವ. ಕೋರ್ಟು ವ್ಯವಹಾರಗಳು ನಿಧಾನಗತಿಯಲ್ಲಿರುತ್ತವೆ. ವ್ಯವಹಾರಗಳಲ್ಲಿ ಅಲ್ಪ ಲಾಭವಿರುತ್ತದೆ. ಉದ್ಯೋಗಿಗಳಿಗೆ ಹೊಸ ಸ್ಥಾನ ದೊರೆತರೂ ಅದು ಮುಳ್ಳಿನ ಹಾಸಿಗೆ ಆಗಿರುತ್ತದೆ. ಸ್ನೇಹಿತರು ಮೋಸ ಮಾಡಬಹುದು ಎಚ್ಚರವಾಗಿರಿ. ಕೃಷಿಕರಿಗೆ ಹೆಚ್ಚು ಲಾಭ. ಧೈರ್ಯದಿಂದ ಎದುರಿಸಿ ಮುನ್ನಡೆದಲ್ಲಿ ಜಯ ನಿಮ್ಮದಾಗಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಸ್ತ್ರೀಯರಿಗೆ ಆಭರಣಗಳನ್ನು ಕೊಳ್ಳುವ ಯೋಗವಿದೆ. ದ್ರವರೂಪಿ ವಸ್ತುಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಮುನ್ನಡೆ. ಒಳಿತಿಗಾಗಿ ನರಸಿಂಹ ಧ್ಯಾನ, ಆಂಜನೇಯನ ಆರಾಧನೆ ಮಾಡಿ.

ಮೀನ

ಆದಾಯ 14, ವ್ಯಯ 11; ಆರೋಗ್ಯ 5, ಅನಾರೋಗ್ಯ 2; ರಾಜಪೂಜ 3, ರಾಜಕೋಪ 5; ಸುಖ 6, ದುಃಖ 3

ನಿಂತುಹೋಗಿರುವ ಕೆಲಸಗಳು ಆರಂಭವಾಗುತ್ತವೆ. ಯಾವುದೇ ವಿಚಾರದಲ್ಲೂ ನಿಮ್ಮ ಬುದ್ಧಿ ನಿಮ್ಮ ಕೈಯಲ್ಲಿರಲಿ. ಕುಟುಂಬದಲ್ಲಿ ನೆಮ್ಮದಿ ಇರುತ್ತದೆ. ಹೆಚ್ಚು ಉತ್ಸಾಹದಿಂದ ಕೆಲಸ ಮಾಡಬಹುದು. ಸಜ್ಜನರ ಸಹವಾಸ ಪ್ರಾಪ್ತಿಯಾಗುವುದು. ಪೂಜ್ಯರ ದರ್ಶನ ಪುಣ್ಯಕ್ಷೇತ್ರಗಳ ದರ್ಶನ ಆಗುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಬಹುದು. ನೂತನ ವಾಹನ ಮತ್ತು ವಸ್ತ್ರಾಭರಣಗಳನ್ನು ಕೊಳ್ಳುವ ಯೋಗವಿದೆ. ದಾನ–ಧರ್ಮಗಳನ್ನು ಮಾಡುವ ಸಾಧ್ಯತೆಗಳಿವೆ. ಹೊಸ ಸ್ಥಿರಾಸ್ತಿಯನ್ನು ಮಾಡಬಹುದು. ವ್ಯಾಪಾರದಲ್ಲಿ ಲಾಭವಿರುತ್ತದೆ. ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ. ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ಫಲವಿರುತ್ತದೆ. ನೌಕರರಿಗೆ ಉದ್ಯೋಗದಲ್ಲಿ ಅಭಿವೃದ್ಧಿ ಮತ್ತು ನಿರುದ್ಯೋಗಿಗಳಿಗೆ ನೌಕರಿ ದೊರೆಯುತ್ತದೆ. ಮಾನಸಿಕ ಶಾಂತಿ ಮತ್ತು ಕುಟುಂಬ ನೆಮ್ಮದಿಯನ್ನು ಕಾಣಬಹುದು. ಸೇವಕ ವರ್ಗದವರಿಂದ ಇದ್ದ ಕಿರಿ ಕಿರಿಗಳು ತಪ್ಪುತ್ತವೆ. ಅವಿವಾಹಿತರಿಗೆ ವಿವಾಹಸಂಬಂಧಗಳು ಬರುತ್ತವೆ. ಒಳಿತಿಗಾಗಿ ಶಿವ, ಸುಬ್ರಮಣ್ಯ, ದುರ್ಗಾ ಆರಾಧನೆ ಮಾಡಿ.

ಸೂಚನೆ: ಈ ಫಲಗಳು ರಾಶಿಗಳನ್ನು ಆಧರಿಸಿಕೊಂಡಿವೆ. ಹೀಗಿದ್ದರೂ ನಿಮ್ಮ ಜನ್ಮಜಾತಕಗಳನ್ನು ಪರಿಶೀಲಿಸಿ, ಅದರ ಪ್ರಕಾರ ಫಲಾಫಲಗಳನ್ನು ತಿಳಿದುಕೊಳ್ಳುವುದು ಒಳ್ಳೆಯದು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇದೇ 16ರಂದು ದುಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ತೈಲ ಟ್ಯಾಂಕ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದು ಮಾಧ್ಯಮಗಳಲ್ಲಿ ವರದಿಯಾಯಿತು. ಫೆ.28ರ ನಂತರ ದುಬೈ ವಿಮಾನ ನಿಲ್ದಾಣದ ಮೇಲೆ ನಡೆಯುತ್ತಿರುವ ಮೂರನೇ ದಾಳಿ ಇದು. ದಾಳಿಯಿಂದಾಗಿ ಭಾರಿ ಪ್ರಮಾಣದ ಬೆಂಕಿ ಕಂಡು ಬಂತಲ್ಲದೇ, ವಿಮಾನಗಳ ಹಾರಾಟವೂ ರದ್ದಾದವು. ಆದರೆ, ದಾಳಿಯಿಂದಾಗಿ ದುಬೈ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣವು ಬೆಂಕಿಗೆ ಆಹುತಿಯಾಗಿದೆ ಎಂದು ಪ್ರತಿಪಾದಿಸುತ್ತಾ ಒಂದು ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಳ್ಳಲಾಗಿದೆ. ಆದರೆ, ಇದು ನಿಜವಲ್ಲ.



ವಿಡಿಯೊದ ತುಣುಕಿನ ಕೀ ಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಜ್ಮಾನ್‌ನ ಕೈಗಾರಿಕಾ ಪ್ರದೇಶದ ಮಾರುಕಟ್ಟೆಯಲ್ಲಿ ಸಂಭವಿಸಿದ ಬೆಂಕಿ ಅನಾಹುತದ ವಿಡಿಯೊ ಎಂಬುದು ಗೊತ್ತಾಯಿತು. ಆ ದುರಂತವು 2020ರ ಆಗಸ್ಟ್‌ನ ಮೊದಲ ವಾರ ಸಂಭವಿಸಿತ್ತು. 2020ರ ಆಗಸ್ಟ್ 5ರಂದು ಅಜ್ಮಾನ್ ಮಾರುಕಟ್ಟೆಯ ಒಳಗಡೆ ಭಾರಿ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ಬಿಬಿಸಿ ವರದಿ ಮಾಡಿತ್ತು. ಈ ಪ್ರದೇಶವು ದುಬೈನಿಂದ 50 ಕಿ.ಮೀ. ದೂರದಲ್ಲಿದೆ. ಹಳೆ ವಿಡಿಯೊವನ್ನು ಈಗ ದುಬೈ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಯ ವಿಡಿಯೊ ಎಂದು ತಪ್ಪಾಗಿ ಬಿಂಬಿಸಿ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಹಿಲರಿಯ ಹುಚ್ಚು



ಪಿ.ಚಂದ್ರಿಕಾ

ಎವರೆಸ್ಟನ್ನು ಹತ್ತಿ ಸಾಧನೆ ಮಾಡಿ ಬಂದ ಎಡ್ಮಂಡ್ ಹಿಲರಿಯನ್ನು ಸನ್ಮಾನ ಸಭೆಯಲ್ಲಿ ವ್ಯಕ್ತಿಯೊಬ್ಬ ಕೇಳಿದ, 'ನೀವು ಯಾಕೆ ಇಂಥಾ ಆಪತ್ತನ್ನು ಮೈಮೇಲೆ ಎಳೆದುಕೊಂಡಿರಿ?' ಹಿಲರಿಗೆ ಇದನ್ನೊಂದು ಸಾಧನೆ ಎಂದು ಅರಿಯದವರೂ ಇರುತ್ತಾರಾ ಎನ್ನಿಸಿ, 'ನಿಮಗೆ ಏನನ್ನಿಸುತ್ತದೆ' ಎಂದ. ಆ ವ್ಯಕ್ತಿ, 'ನೀವು ಒಂದು ಪಕ್ಷ ಯಶಸ್ವಿಯಾಗದೇ ಹೋಗಿದ್ದಲ್ಲಿ ಹಿಮಾಲಯ ನಿಂತೇ ಇರುತ್ತಿತ್ತು. ಜೀವಕ್ಕಿಂತ ದೊಡ್ಡದು ಯಾವುದಿದೆ? ಇದು ಹುಚ್ಚುತನ ಅಂತ ನಿಮಗೆ ಯಾಕೆ ಅನ್ನಿಸಲಿಲ್ಲ' ಎಂದು ಪ್ರಶ್ನಿಸಿದ.

ಹಿಲರಿ ನಕ್ಕ, 'ಜಗತ್ತಿನ ಪ್ರತಿಯೊಬ್ಬರೂ ಹುಚ್ಚರೇ- ಒಬ್ಬೊಬ್ಬರಿಗೆ ಒಂದೊಂದು ಹುಚ್ಚು, ಕೆಲವರಿಗೆ ಹಣ ಮಾಡುವ ಹುಚ್ಚು, ಕೆಲವರಿಗೆ ಸಾಮ್ರಾಜ್ಯ ಗೆಲ್ಲುವ ಹುಚ್ಚು. ನನ್ನ ಹುಚ್ಚುತನಕ್ಕೂ ಈ ಜಗತ್ತಿನಲ್ಲಿ ಸಣ್ಣ ಜಾಗ ಇದ್ದೇ ಇರುತ್ತದೆ' ಎಂದ. 'ನಾವೇ ಇಲ್ಲವಾದರೆ ಮಾಡುವ ಕೆಲಸವಾದರೂ ಎಲ್ಲಿಯದು? ನಾವು ಉಳಿದು ಕೆಲಸ ಮಾಡಬೇಕಲ್ಲವೇ?' ಎಂದ ಆ ವ್ಯಕ್ತಿಗೆ ಹಿಲರಿ ಅವನ ತಂದೆ, ತಾತ, ಮುತ್ತಾತರ ಬಗ್ಗೆ ಕೇಳುತ್ತಾ ಹೋದ. ಆದರೆ, ತಂದೆ ತಾತನ ಹೊರತಾಗಿ ಎಷ್ಟೋ ಹೆಸರುಗಳೇ ಆ ವ್ಯಕ್ತಿಗೆ ಗೊತ್ತಿರಲಿಲ್ಲ. ಹಿಲರಿ ನಕ್ಕ, 'ಸಾಧನೆ ಎನ್ನುವುದು ದೊಡ್ಡದು. ನಿನ್ನ ಮುತ್ತಜ್ಜ ಅವರಜ್ಜನ ಬಗ್ಗೆ ನಿನಗೆ ಗೊತ್ತಿಲ್ಲ. ಎಂದೋ ಮಹತ್ವದ ವಿಚಾರವನ್ನು ಮಾತಾಡಿದ ಅರಿಸ್ಟಾಟಲ್ ಬಗ್ಗೆ ಅಲೆಗ್ಸಾಂಡರ್ ಥರದ ಮಹನೀಯರನ್ನು ಈಗಲೂ ನೆನೆಯುತ್ತೇವಲ್ಲವೇ?' ಎಂದ. ವ್ಯಕ್ತಿಗೆ ಕಷ್ಟವಾದರೂ ಹೇಳಿದ, 'ಅವರಂತೆ ಕೆಲಸ ಮಾಡಿದ ತುಂಬಾ ಜನರ ಬಗ್ಗೆಯೂ ಯಾರೂ ಮಾತಾಡಲ್ಲ' ಎಂದ.

'ಕೆಲಸ ಮಾಡುವಾಗ ನಾನು ಇದರಿಂದ ದೊಡ್ಡ ಹೆಸರು ಪಡೆಯುತ್ತೇನೆ. ಇದು ದೊಡ್ಡದಾದ ಸಾಧನೆ ಎನ್ನುವುದು ತಲೆಯಲ್ಲೂ ಇರಬಾರದು. ಆಲೋಚನಾ ಪಥವನ್ನು ಬದಲಿಸುವಂತೆ ಕೆಲಸ ಮಾಡಬೇಕು. ಅದು ಮುಂದಿನ ಜನಾಂಗಕ್ಕೂ ಮಾದರಿ. ನಿನ್ನ ಹಾಗೆ ಎಲ್ಲವೂ ಇದ್ದ ಹಾಗೆ ಇರಲಿ ಎಂದು ಯೋಚಿಸಿದ್ದರೆ ಮನುಷ್ಯ ಶಿಲಾಯುಗದಲ್ಲಿದ್ದಂತೆ ಇರುತ್ತಿದ್ದ. ಪ್ರಕೃತಿ ನಮಗೆ ಬುದ್ಧಿ ಕೊಟ್ಟಿದೆ, ಧೈರ್ಯಮಯ ಮನೋಭಾವವನ್ನು ಕೊಟ್ಟಿದೆ. ಹೊಸ ಅನುಭವದ ತುಡಿತವನ್ನು ಇಟ್ಟಿದೆ. ಎವರೆಸ್ಟ್ ಏರುವಾಗ ನಾನು ಮೊದಲನೆಯವನೋ ಕಡೆಯವನೋ ಎನ್ನುವುದು ಮುಖ್ಯವಾಗಿರಲಿಲ್ಲ. ನನಗಿದ್ದ ಕುತೂಹಲ ಎಲ್ಲ ಶಿಖರವನ್ನು ಏರಿದ ನಂತರ ಅದಕ್ಕೂ ಮೇಲೆ ಎತ್ತರದ ಶಿಖರಗಳು ಕಾಣುತ್ತಿದ್ದವು. ಎವರೆಸ್ಟ್ ಏರಿದ ಮೇಲೂ ಇನ್ಯಾವ ಶಿಖರ ಇದಕ್ಕಿಂತ ಎತ್ತರದ್ದು ಕಾಣುತ್ತದೆಂಬ ಕುತೂಹಲವಿತ್ತು. ನೀನಿದನ್ನು ಹುಚ್ಚು ಎಂದರೆ ನಾನೇನು ಮಾಡಲಿ' ಎಂದ ಹಿಲರಿ.


ನಿಜ. ಹಿಮಾಲಯ ಪರ್ವತ ಶ್ರೇಣಿಗಳು ಅಲ್ಲೇ ಇದ್ದವು, ಪ್ರಕೃತಿಯ ನಿಗೂಢತೆಯ ಸಂಕೇತವಾಗಿ. ಅದನ್ನು ಹತ್ತಲಿಲ್ಲ ಅಂದರೆ ಅದಕ್ಕೆ ಯಾವ ನಷ್ಟವೂ ಇಲ್ಲ. ಮನುಷ್ಯ ಅದರಲ್ಲಿ ಕುತೂಹಲಿಯಾದಾಗ ಅದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಹಿಲರಿಗೆ ಆಗಿದ್ದೂ ಅದೇ. ಸಕ್ರಿಯವಾಗಿರುವ ವ್ಯಕ್ತಿ ಸದಾ ಕೆಲಸಗಳ ಹುಡುಕಾಟದಲ್ಲಿ ತೊಡಗಿರುತ್ತಾನೆ. ಅವನ್ನು ಸಾಧಿಸದೆ ಹೋದರೆ ಅವನ ಬದುಕು ಅಸಹನೀಯವಾಗುತ್ತದೆ. ಜೀವನದ ಭಾಗವೇ ಆದ ಅದನ್ನು ಪಡೆಯುವುದು ಸಮಸ್ಯೆ ಎಂದು ಕರೆಯಲಾಗದು. ಕೆಲಸದಲ್ಲಿ ತಲ್ಲೀನನಾಗುವುದು ಎಂದರೆ ತನ್ನನ್ನು ತಾನು ಮರೆಯುವುದು ಎಂದು. ಅದು ಹುಚ್ಚಲ್ಲ. ಅಂಥಾ ಕೆಲಸವನ್ನು ನೆನೆಪಿಟ್ಟುಕೊಂಡರೆ ಅದು ನಾವು ಕೆಲಸಕ್ಕೆ ತೋರಿದ ಶ್ರದ್ಧೆಗೆ ಜಗತ್ತು ನೀಡುವ ಗೌರವ ಎಂದೇ ಭಾವಿಸಬೇಕು. ❖

ಪದಬಂಧ 6348

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕತ್ತಲು ಇಲ್ಲಿ ಕವಿದಿದೆ (4)
3. ಹೊಡೆಯುವುದಕ್ಕೆ ಬಳಸುವ ಸಾಧನ (3)
4.ಗಲ್ಲಿಯೊಳಗೆ ಆಗಿರುವ ಗೊಂದಲ (4)
6.ಆ ದಿವಸ ತಂದಿರುವ ಕಾಳುಕಡಿ (3)
8.ಧಾನ್ಯಗಳನ್ನು ತುಂಬಿಡುವ ಕಣಜ (3)
9.ಕುಟಿಲನು ನುಗ್ಗಿರುವ ಗುಡಿಸಲು (3)
10.ಮೆಲ್ಲಗೆ ಕಿತ್ತು ಮುಡಿದಿರುವ ಸುವಾಸಿತ ಹೂವು (3)
13.ಹಾಲು ಮೊಸರು ಮಾರುವವನು (4)
14.ನೆರವನ್ನು ಹೀಗೆನ್ನಿ (3)
12.ಜತಿಯಲ್ಲಿರುವ ವೇದಿಕೆ (3)
15.ಶ್ರೀ ವೆಂಕಟೇಶ್ವರನ ನೆಲೆನಾಡು (4)

ಮೇಲಿಂದ ಕೆಳಕ್ಕೆ
1.ಅನುಬಂಧ ಬೆಸೆದಿರುವ ಕುರುಡ (2)
2.ಉತ್ತರದವರ ವಿಪುಲತೆ (3)
3.ಆ ಮೋದಕ ತಿಂದಾಗಿನ ಸಂತೋಷ (3)
5.ಹರಾಜಿಗೊಂದು ಪರ್ಯಾಯ ಪದ (3)
7.ಸರ ತಂದದ್ದಕ್ಕೇ ಈ ಆದರ! (3)
8.ಈತ ಕೃತಘ್ನ (3)
9.ಅಪಹಾಸ್ಯವನ್ನು ಹೀಗೂ ಹೇಳುವರು (3)
11.ಗೆಳತಿಯೊಡನೆ ಬಂದಿರುವ ಸ್ನೇಹಿತ (3)
14.ಸವತಿಯ ಬಳಿಯಿರುವ ಹೆಂಡತಿ (2)



6347ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉತ್ತೇಜನ 2.ಮಕರಂದ
5.ಲುಬ್ಧಕ 7.ಇಜ್ಜೊತೆ
8.ಗುಲಾಮಗಿರಿ 11.ಶರಣ
12.ರಿವಾಜು 14.ಪಗಾರ
15.ನೆರೆಮನೆ

ಮೇಲಿಂದ ಕೆಳಕ್ಕೆ:
1.ಉರುಲು 3.ಕವಿತೆ
4.ದಶಮಾಂಶ 6.ಕರಗು
7.ಇಚ್ಛಾಮರಣ 9.ರಿಪೇರಿ
10.ಅನುಕಂಪ 11.ಶಬರ
13.ಜುಲ್ಮಾನೆ

ಸುಡೊಕು 6732

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6		4	9		7			8
					6			
	7	8	2			4		6
7					8		6	
	8		4			7		5
		5		7				
4	9		3	8		6		1
	6						8	
8		7			4			3

6731 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಅಮಾವಾಸ್ಯೆ ಗಂ 6-53 ನಂತರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಪ್ರತಿಪದ್ ಗಂ 28-53 ನಕ್ಷತ್ರ: ಉತ್ತರಾಭಾದ್ರ ಗಂ 28-05 ಯೋಗ: ಶುಕ್ಲ (ಶುಕ್ರ) ಗಂ. 25-17 ಕರಣ: ನಾಗ ಗಂ 6-53 ಮೀನ ಮಾಸದ 5 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 1 ನೇ ಪಾದ. ರಾಹುಕಾಲ: ಮಧ್ಯಾಹ್ನ 1-30 - 3-00 ಸೂರ್ಯೋದಯ: 6-39 ಸೂರ್ಯಾಸ್ತ: 6-38 ಮುಸ್ಲಿಂ ದಿನಾಂಕ: 29 ರಂಜಾನ್, ದಿನ ವಿಶೇಷ: ಯುಗಾದಿ, ವಸಂತ ನವರಾತ್ರಾರಂಭ

ಮೇಷ: ಆರನೇ ಇಂದ್ರಿಯದ ಮಾತಿಗೆ ಬೆಲೆ ಕೊಡುವುದು ಸೂಕ್ತವೆಂದು ನಿಮಗೆ ಅನಿಸುತ್ತದೆ. ದೀರ್ಘ ಪ್ರಯಾಣದಿಂದ ದೇಹಾಯಾಸ ಆಗುವುದು. ಗೃಹಸ್ಥರಿಗೆ ಮಕ್ಕಳ ವಿಷಯವಾಗಿ ಹೆಚ್ಚಿನ ತಲೆನೋವಾಗಬಹುದು.

ವೃಷಭ: ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಲಭಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ಹೆಚ್ಚು ಅವಕಾಶಗಳು ಸಿಗಲಿವೆ. ಸೇವಾ ವಲಯದವರಿಗೆ ಆದಾಯದ ಜೊತೆ ಕೆಲಸದ ವಿಸ್ತೀರ್ಣವೂ ಹೆಚ್ಚುವುದು.

ಮಿಥುನ: ಶ್ರಮದ ಜೀವನದಿಂದ ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗಲಿದೆ. ಕುಟುಂಬದವರು ಹಾಗೂ ಸ್ನೇಹಿತರೊಂದಿಗೆ ಪ್ರವಾಸದ ಯೋಜನೆ ಮಾಡುವಿರಿ. ಉದರ ವ್ಯಾಧಿಯಂತಹ ಸಮಸ್ಯೆ ಎದುರಾಗಬಹುದು.

ಕರ್ಕಾಟಕ: ಖರ್ಚು ಅಧಿಕವಾಗಿರುವುದರಿಂದ ಉಳಿತಾಯ ಅಸಾಧ್ಯವಾಗುತ್ತದೆ. ಮನೆಯನ್ನು ಅಲಂಕರಿಸಿ ಸೂಕ್ತ ಬದಲಾವಣೆ ತರಲು ಒಳ್ಳೆಯ ದಿನ. ಮಾತಿನಿಂದ ಕಾರ್ಯ ಸಾಧಿಸುವ ಗುಣದಿಂದ ಲಾಭ ಕಾಣಲಿದ್ದೀರಿ.

ಸಿಂಹ: ಹಿರಿಯರು ಮತ್ತು ಹಿತೈಷಿಗಳಿಂದ ಆಶೀರ್ವಾದ ಶುಭ ಸಮಾರಂಭಗಳಿಗೆ ನಾಂದಿಯಾಗುತ್ತದೆ. ವ್ಯಾಪಾರದಲ್ಲಿ ಸ್ವಂತ ತೀರ್ಮಾನದಿಂದ ಮುಂದುವರಿದರೆ ಆದಾಯ ಹೆಚ್ಚಲಿದೆ. ರೈತಾಪಿ ವರ್ಗದವರಿಗೆ ಶುಭವಾಗುವುದು.

ಕನ್ಯಾ: ಹೂವು-ಹಣ್ಣು ಮತ್ತು ಜವಳಿ ವ್ಯಾಪಾರಗಳು ಸರಾಗವಾಗಿ ನಡೆಯಲಿದೆ. ಜಮೀನು ಖರೀದಿ ಅಥವಾ ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳಬಹುದು. ದೇವರ ಬಗ್ಗೆ ಶ್ರದ್ಧೆಯು ಹೆಚ್ಚುವುದು.

ತುಲಾ: ಅನಿವಾರ್ಯತೆ ಹೆಚ್ಚಿರುವುದರಿಂದ ನೂತನ ವಾಹನ ಖರೀದಿಸುವ ಬಗ್ಗೆ ಗಮನಹರಿಸಿ. ತಂದೆ ತಾಯಿಯವರ ಮಾತಿನಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಸಲುವಾಗಿ ಯೋಜನೆಯನ್ನು ಕೈಗೊಳ್ಳುವಿರಿ.

ವೃಶ್ಚಿಕ: ಗ್ರಹಗಳ ಚಲನೆಯು ತಿರುಗಾಟವನ್ನು ಮಾಡಿಸುವುದರಿಂದ ಆರೋಗ್ಯದ ಬಗ್ಗೆ ಗಮನಹರಿಸುವುದು ಅನಿವಾರ್ಯವಾಗುತ್ತದೆ. ಸೂಕ್ಷ್ಮವಾಗಿ ಯೋಚಿಸಿ ಅಥವಾ ಮಾರ್ಗದರ್ಶನ ಪಡೆದು ಮುನ್ನುಗ್ಗಿ.


ಧನು: ಗುರಿ ತಲುಪುವ ವೇಳೆಯಲ್ಲಿ ಎದುರಾಗುವಂಥ ವಿಘ್ನಗಳನ್ನು ಸಮರ್ಥವಾಗಿ ನಿಭಾಯಿಸುವಿರಿ. ಕುಟುಂಬ ಕಲಹದಿಂದ ಆದಷ್ಟು ದೂರ ಇರುವುದು ಒಳ್ಳೆಯದು. ಸ್ಥಿರ ಆಸ್ತಿಯನ್ನು ಖರೀದಿಸುವ ಬಗ್ಗೆ ಯೋಚನೆ ಮಾಡಿ.

ಮಕರ: ಕಲಾವಿದರಿಗೆ ಹಾಗೂ ದಿನಗೂಲಿ ನೌಕರರಿಗೆ ಅನುಕೂಲಕರ ವಾತಾವರಣ ಇರಲಿದೆ. ಸ್ಪರ್ಧಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಪ್ರೇರೇಪಿಸುತ್ತದೆ. ದೇಹಕ್ಕೆ ಹೊಂದಿಕೊಳ್ಳದ ಆಹಾರದಿಂದ ದೂರವಿರಿ.

ಕುಂಭ: ಯಾರೊಂದಿಗಾದರೂ ಹೊಸದಾಗಿ ಪರಿಚಯ ಮಾಡಿಕೊಳ್ಳಲು ಇಂದು ಸ್ವಲ್ಪ ಸಮಯ ಬೇಕಾಗುತ್ತದೆ. ವಿವಾದಗಳು ಇತ್ಯರ್ಥಗೊಂಡು ಮನಸ್ಸಿಗೆ ಹಿತವೆನಿಸುವುದು.

ಮೀನ: ಕಾಲಕ್ಕೆ ತಕ್ಕಂತೆ ಕೆಲವು ಬದಲಾವಣೆ ಮಾಡಿಕೊಳ್ಳಲು ಸಿದ್ಧರಾಗಬೇಕಾಗುತ್ತದೆ. ಚರ್ಮ ವ್ಯಾಧಿಯಂತಹ ಅನಾರೋಗ್ಯವು ಎದುರಾಗಬಹುದು. ಸಂಜೆಯೊಳಗೆ ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ.

ಗುಂಡಣ್ಣ



ನಾಲ್ಕು ದಿನ ವಿವಿಧೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರದಿಂದ ನಾಲ್ಕು ದಿನ ಸಾಧಾರಣ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಉತ್ತರ ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉತ್ತರ ಒಳನಾಡಿನ ಕಲಬುರಗಿ, ಹಾವೇರಿ, ಬಾಗಲಕೋಟೆ, ವಿಜಯಪುರ, ಕೊಪ್ಪಳ, ಗದಗ ಮತ್ತು ಧಾರವಾಡ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಚಾಮರಾಜನಗರ, ಮೈಸೂರು, ಹಾಸನ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಮತ್ತು ಮಂಡ್ಯ ಜಿಲ್ಲೆಯ ಒಂದೆರಡು ಕಡೆ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಮಳೆಯಾಗುವ ಸಂಭವವಿದೆ.

ಕರಾವಳಿಯ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ 21ರಿಂದ 22ರವರೆಗೆ ಒಂದೆರಡು ಕಡೆ ಮಳೆಯಾಗುವ ಸಂಭವವಿದೆ.

ಬೆಳೆಗೆ ಹಾನಿ, ವಿದ್ಯುತ್ ವ್ಯತ್ಯಯ

ಕಲಬುರಗಿ/ಯಾದಗಿರಿ: ಯಾದಗಿರಿ ಸೇರಿದಂತೆ ಸುತ್ತಲಿನ ಹಳ್ಳಿಗಳಲ್ಲಿ ಬುಧವಾರ ಸಂಜೆ ಗುಡುಗು, ಸಿಡಿಲು, ಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ.

ಗಾಳಿ, ಮಳೆಯ ರಭಸಕ್ಕೆ ತೆನೆಕಟ್ಟಿ ಕಟಾವಿಗೆ ಬಂದಿದ್ದ ಜೋಳ, ಸಜ್ಜೆ, ಭತ್ತ ಸೇರಿದಂತೆ ವಿವಿಧ ಬೆಳೆಗಳು ನೆಲಕಚ್ಚಿವೆ. ಕೆಲವೆಡೆ ವಿದ್ಯುತ್ ಕಂಬಗಳು ಮುರಿದು ಬಿದ್ದು, ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಗುರುಮಠಕಲ್ ತಾಲ್ಲೂಕಿನ ಗಾಜರಕೋಟ ಗ್ರಾಮದಲ್ಲಿ ಸಿಡಿಲು ಬಡಿದು ಎತ್ತು ಮೃತಪಟ್ಟಿದೆ. ವಡಗೇರಾ ತಾಲ್ಲೂಕಿನ ಚೆನ್ನೂರ, ಅನಕಸುಗೂರು, ಗೊಂದೇನೂರ, ಕೊಂಕಲ್, ಐಕೂರ ಗ್ರಾಮಗಳಲ್ಲೂ ಮಳೆಯಾಗಿದೆ.

ಕಲಬುರಗಿಯ ವಿವಿಧೆಡೆ ಮಂಗಳವಾರ ತಡರಾತ್ರಿವರೆಗೂ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿದಿದ್ದು, ಅಲ್ಲಲ್ಲಿ ಹಾನಿ ಸಂಭವಿಸಿದೆ. ಚಿತ್ತಾಪುರ ತಾಲ್ಲೂಕಿನ ಇಟಗಾ ಗ್ರಾಮದ ಸಮೀಪದ ಅದಾನಿ ಸಿಮೆಂಟ್ ಕಂಪನಿಯಲ್ಲಿ ಸಿಡಿಲು ಅಪ್ಪಳಿಸಿ ಕಂಪನಿಯ ಕಲ್ಲುಪುಡಿ ಸಾಗಿಸುವ ಬೆಲ್ಟ್‌ಗೆ ಬೆಂಕಿ ಹತ್ತಿ ಉರಿದಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ಬಿರುಸಿನ ಮಳೆಯಿಂದ ಚಿಯಾ, ಜೋಳ, ಈರುಳ್ಳಿ ಬೀಜ ಬೆಳೆಗಳಿಗೆ ಹಾನಿಯಾಗಿದೆ. ಅಲ್ಲಲ್ಲಿ ಬಿರುಗಾಳಿಗೆ ಮಾವಿನ ಕಾಯಿಗಳೂ ಉದುರಿ ಬೆಳೆಗಾರರ ಆತಂಕ ಹೆಚ್ಚಿಸಿದೆ.

ಆಲಿಕಲ್ಲು ಮಳೆ: ವ್ಯಾಪಕ ಹಾನಿ

ಕುರುಗೋಡಿನಲ್ಲಿ 24 ಹೆಕ್ಟೇರ್ ಭತ್ತ ನಾಶ
• ಸಿರುಗುಪ್ಪ: 9 ಕುರಿಗಳ ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಟ್ಟಡ, ಮನೆಗಳಿಗೂ ಹಾನಿ: ಅಪಾರ ನಷ್ಟ
- ಭತ್ತ, ತರಕಾರಿ, ಹಣ್ಣಿನ ಬೆಳೆಗಳಿಗೆ ಹಾನಿ
- ಕಂದಾಯ ಸೇರಿ ವಿವಿಧ ಇಲಾಖೆಗಳಿಂದ ಸರ್ವೆ

ಹುಬ್ಬಳ್ಳಿ: ಧಾರವಾಡ, ಬೆಳಗಾವಿ, ಬಳ್ಳಾರಿ–ವಿಜಯನಗರ ಜಿಲ್ಲೆಗಳಲ್ಲಿ ಮಂಗಳವಾರ ಸುರಿದ ಆಲಿಕಲ್ಲು ಮಳೆಯಿಂದ ಬಹುತೇಕ ಕಡೆ ಬೆಳೆ ಹಾನಿಯಾಗಿದೆ. ಜಾನುವಾರುಗಳು ಪ್ರಾಣ ಕಳೆದುಕೊಂಡಿವೆ. ಕೆಲ ಗ್ರಾಮಗಳಲ್ಲಿ ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಮಾಚಾಪುರದಲ್ಲಿ ಕಬ್ಬು, ಮೆಕ್ಕೆಜೋಳ, ಸೊಯಾಬೀನ್ ಮೊದಲಾದ ಬೆಳೆಗಳಿಗೆ ಹಾನಿ ಆಗಿದೆ. ಹಲವು ಮನೆಗಳ ಹಂಚುಗಳು ಹಾಳಾಗಿವೆ. ಮನೆಯೊಳಗೆ ರಾಶಿಯಾಗಿ ಬಿದ್ದಿರುವ ಆಲಿಕಲ್ಲುಗಳನ್ನು ಹೊರ ಹಾಕುವುದರಲ್ಲೇ ಗ್ರಾಮಸ್ಥರು ಇಡೀ ರಾತ್ರಿ ಕಳೆದರು.

'ಟೊಮೆಟೊ, ಹಾಗಲಕಾಯಿ ಬೆಳೆ ಫಸಲಿಗೆ ಬಂದಿದ್ದವು. ಆಲಿಕಲ್ಲು ಮಳೆಯಿಂದ ಬೆಳೆ ಪೂರ್ತಿ ನಾಶವಾಗಿದೆ. ಜಮೀನು ತುಂಬಾ ಆಲಿಕಲ್ಲು ತುಂಬಿದ್ದವು. ಈಗ ಮಣ್ಣು ಮಾತ್ರ ಕಾಣುತ್ತಿದೆ ಬೆಳೆ ಇಲ್ಲವಾಗಿದೆ. ಒಂದು ಕರು ಮೃತಪಟ್ಟಿದೆ. ತುಂಬಾ ನಷ್ಟವಾಗಿದೆ' ಎಂದು ಮಾಚಾಪುರದ ರೈತ ಕಲ್ಲಪ್ಪ ಬಸವಂತಪ್ಪ ಹುರಕಡ್ಲಿ ಸಂಕಷ್ಟ ತೋಡಿಕೊಂಡರು.

'ಬಳ್ಳಾರಿ ಜಿಲ್ಲೆಯ ವಿವಿಧೆಡೆ ಭತ್ತದ ಬೆಳೆ ಹಾನಿಯಾಗಿದೆ. ಕುರುಗೋಡಿನಲ್ಲಿ 24 ಹೆಕ್ಟೇರ್ ಭತ್ತದ ಬೆಳೆ ಹಾನಿಯಾಗಿದೆ. ಸಿರುಗುಪ್ಪ ತಾಲ್ಲೂಕಿನಲ್ಲಿ 9 ಕುರಿಗಳು ಸತ್ತಿವೆ. ನಿಖರ ಮಾಹಿತಿಗಾಗಿ ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಗಳು ಜಂಟಿ ಸಮೀಕ್ಷೆ ಕೈಗೊಂಡಿವೆ' ಎಂದು ಜಿಲ್ಲಾಡಳಿತದ ಅಧಿಕಾರಿಯೊಬ್ಬರು ತಿಳಿಸಿದರು.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ಎರಡು ಎಕರೆ ಬಾಳೆ ತೋಟ ನೆಲಕಚ್ಚಿದೆ. ಬಾಳೆಗಿಡಗಳು ಗೊನೆಬಿಟ್ಟು ಕಟಾವಿನ ಹಂತಕ್ಕೆ ಬಂದಿದ್ದವು. ಯುಗಾದಿ ಬಳಿಕ ಕಟಾವು ಮಾಡಲು ಉದ್ದೇಶಿಸಲಾಗಿತ್ತು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದಲ್ಲಿ ಆಲಿಕಲ್ಲು ಮಳೆಯ ರಭಸಕ್ಕೆ 39 ಕುರಿಗಳು ಮೃತಪಟ್ಟಿವೆ. ಹೊಲದಲ್ಲಿ ನಿರ್ಮಿಸಿದ್ದ ದಡ್ಡಿಯಲ್ಲಿ ಕುರಿಗಳನ್ನು ಇಡಲಾಗಿತ್ತು. ತಡರಾತ್ರಿ ಧಾರಾಕಾರ ಮಳೆ, ಬಿರುಗಾಳಿ ಸಹಿತ ದೊಡ್ಡ ಗಾತ್ರದ ಆಲಿಕಲ್ಲುಗಳು ಬಿದ್ದವು. ಅವುಗಳ ಹೊಡೆತಕ್ಕೆ ಕುರಿಗಳು ಸತ್ತಿವೆ ಎಂದು ಗ್ರಾಮಸ್ಥರು ತಿಳಿಸಿದರು.


ಧಾರವಾಡ ಜಿಲ್ಲೆಯ ಕಲಘಟಗಿಯ ಹೊರವಲಯದ ಮಾಚಾಪುರದಲ್ಲಿ ಮನೆ ಮೇಲೆ ಆಲಿಕಲ್ಲು ಬಿದ್ದು, ಹೆಂಚುಗಳು ಒಡೆದು ಹಾನಿ ಆಗಿದೆ
ಪ್ರಜಾವಾಣಿ ಚಿತ್ರ ಬಿ.ಎಂ.ಕೇದಾರನಾಥ

> ಮಳೆ, ಆಲಿಕಲ್ಲು ಹೊಡೆತಕ್ಕೆ ಮನೆಯ ಹಂಚುಗಳು ಒಡೆದು ಮನೆಯೊಳಕ್ಕೆ ನೀರು ನುಗ್ಗಿ ಗೋಡೆ ಕುಸಿದು ಹಾನಿಯಾಗಿದೆ. ನಷ್ಟಕ್ಕೆ ಸರ್ಕಾರ ಪರಿಹಾರ ನೀಡಬೇಕು.
> **ನಾಗರತ್ನಾ ಹುರಕಡ್ಲಿ,** ಮಾಚಾಪುರ,ಧಾರವಾಡ ಜಿಲ್ಲೆ

> ಬೆಳೆ ಹಾನಿಯಾಗಿರುವ ಕ್ಷೇತ್ರವನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ನೀಡುತ್ತೇವೆ. ಮಾವು ಬೆಳೆಗೆ ವಿಮೆ ಕಂತು ಪಾವತಿಸಿದ್ದ ಬೆಳೆಗಾರರಿಗೆ ವಿಮಾ ಮೊತ್ತ ಪಾವತಿಯಾಗುತ್ತದೆ.
> **ಕೃಷಿ, ತೋಟಗಾರಿಕೆ ಇಲಾಖೆ,** ಧಾರವಾಡ

ಚಿಕ್ಕಮಗಳೂರಿನಲ್ಲಿ ಆಲಿಕಲ್ಲು ಮಳೆ

ಚಿಕ್ಕಮಗಳೂರು: ಜಿಲ್ಲೆಯ ಹಲವೆಡೆ ಗುಡುಗು, ಸಿಡಿಲಿನ ಜತೆಗೆ ಆಲಿಕಲ್ಲು ಸಹಿತ ಮಳೆಯಾಗಿದೆ.

ನರಸಿಂಹರಾಜಪುರ, ತರೀಕೆರೆ, ಮೂಡಿಗೆರೆ, ಚಿಕ್ಕಮಗಳೂರು ತಾಲ್ಲೂಕಿನ ಹಲವೆಡೆ ಮಳೆಯಾಗಿದೆ. ಚಿಕ್ಕಮಗಳೂರು ತಾಲ್ಲೂಕಿನ ಕೂದುವಳ್ಳಿ, ಕಡಬಗೆರೆ, ಹ್ಯಾರಂಬಿ, ಬೈರಮಕ್ಕಿ, ಸಂಗಮೇಶ್ವರ ಪೇಟೆ, ಖಾಂಡ್ಯ, ತರೀಕೆರೆ ಪಟ್ಟಣ, ಲಿಂಗದಹಳ್ಳಿ, ಲಕ್ಕವಳ್ಳಿ ಸುತ್ತಮುತ್ತ ಆಲಿಕಲ್ಲು ಮಳೆಯಾಗಿದೆ.

ಮಲೆನಾಡಿನಲ್ಲಿ ಮಳೆ ಯಾಗುತ್ತಿರುವುದು ಕಾಫಿಗೆ ಅನುಕೂಲವಾಗಿದೆ. ಆದರೆ, ಆಲಿಕಲ್ಲು ಸಹಿತ ಮಳೆ ಸುರಿದರೆ ಕಾಫಿ ಹೂವು ಮತ್ತು ಮಿಡಿ ಉದುರಿ ತೊಂದರೆಯಾಗಲಿದೆ ಎಂದು ಬೆಳೆಗಾರರು ಹೇಳುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯದಲ್ಲಿ ಬುಧವಾರ ರಾತ್ರಿ ಸಾಧಾರಣ ಮಳೆಯಾಯಿತು.

ನೆಲಕಚ್ಚಿದ ಬಾಳೆ, ದಾಳಿಂಬೆ

ಚಿತ್ರದುರ್ಗ: ಜಿಲ್ಲೆಯ ಧರ್ಮಪುರ ಹಾಗೂ ಮೊಳಕಾಲ್ಮುರು ಸುತ್ತಮುತ್ತ ಮಂಗಳವಾರ ರಾತ್ರಿ ಆಲಿಕಲ್ಲು ಸಮೇತ ಸುರಿದ ಮಳೆ ಹಾಗೂ ಬಿರುಗಾಳಿಯಿಂದ ವಿವಿಧ ಬೆಳೆಗಳು ನೆಲಕಚ್ಚಿವೆ.

ಮೊಳಕಾಲ್ಮುರು ಸಮೀಪದ ಎನ್.ಆರ್. ಕೊಂಡಾಪುರದಲ್ಲಿ 3 ಎಕರೆಯಷ್ಟು ಏಲಕ್ಕಿ ಬಾಳೆ ಗಿಡಗಳು ನೆಲಕ್ಕುರುಳಿವೆ. ಹಿರಿಯೂರು ತಾಲ್ಲೂಕು ಧರ್ಮಪುರ ಹೋಬಳಿಯ ಸುತ್ತಮುತ್ತ ಆಲಿಕಲ್ಲು ಮಳೆಯ ಆರ್ಭಟಕ್ಕೆ ದಾಳಿಂಬೆ, ಪಪ್ಪಾಯ, ಅಡಿಕೆ, ಮಾವು ಹಾಗೂ ಮೆಕ್ಕೆಜೋಳಕ್ಕೆ ಹಾನಿಯಾಗಿದೆ. ಸಕ್ಕರ ಗ್ರಾಮದಲ್ಲೇ 20 ಎಕರೆ ಪಪ್ಪಾಯ, ದಾಳಿಂಬೆ, ಬಾಳೆ ಹಾಗೂ ಸೇವಂತಿಗೆ ತೋಟ ಹಾನಿಗೊಳಗಾಗಿದೆ. ಈಶ್ವರ ಗೆರೆಯಲ್ಲಿ ಅಂದಾಜು 140 ಅಡಿಕೆ ಮರಗಳು ನೆಲಕ್ಕುರುಳಿವೆ. ಎರಡು ಮನೆಗಳು ಹಾನಿಗೀಡಾಗಿವೆ.

ಶಿವಮೊಗ್ಗ ವರದಿ: ನಗರವೂ ಸೇರಿ ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ಸಿಡಿಲು–ಗುಡುಗಿನ ಆರ್ಭಟದೊಂದಿಗೆ ಒಂದು ಗಂಟೆಗೂ ಹೆಚ್ಚು ಅವಧಿ ಮಳೆ ಸುರಿದಿದೆ. ಇದಕ್ಕೂ ಮುನ್ನ ಕೆಲಕಾಲ ಆಲಿಕಲ್ಲು ಸಹಿತ ಮಳೆಯಾಯಿತು. ಶರಾವತಿ ನಗರ ಮುಖ್ಯ ರಸ್ತೆ ಹಾಗೂ ವಿನೋಬ ನಗರದಲ್ಲಿ ರಸ್ತೆ ಮೇಲೆ ಮರ ಬಿದ್ದು, ಸಂಚಾರಕ್ಕೆ ಅಡಚಣೆ ಉಂಟಾಯಿತು. ಇದರಿಂದಾಗಿ ವಿದ್ಯುತ್ ವ್ಯತ್ಯಯ ಉಂಟಾಯಿತು.

ಮೈಸೂರು: ಶಾಲೆ ಚಾವಣಿಗೆ ಹಾನಿ

ಮೈಸೂರು: ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಸಬಾ, ಹನಗೋಡು ಹೋಬಳಿಯಲ್ಲಿ ಗುಡುಗು–ಸಿಡಿಲಿನ ಕೂಡಿದ ಭಾರಿ ಮಳೆಯಾಗಿದೆ. ದಾಸನಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಚಾವಣಿ ಹಾರಿ ಹೋಗಿದ್ದು, ಶಿಕ್ಷಕಿಯ ಸಮಯ ಪ್ರಜ್ಞೆಯಿಂದಾಗಿ ಮಕ್ಕಳು ಅಪಾಯದಿಂದ ಪಾರಾದರು. ಆಲಿಕಲ್ಲು ಮಳೆಯಿಂದ ತಂಬಾಕು ಸಸಿಗಳು ಮಡಿಗೆ ಹಾನಿಯಾಗಿದೆ.

ಚಾಮರಾಜನಗರ ಜಿಲ್ಲೆಯ ಹಲವೆಡೆ ಒಂದು ತಾಸು ಬಿರುಗಾಳಿ ಸಹಿತ ಜೋರು ಮಳೆಯಾಯಿತು. ಬಿರುಗಾಳಿಯಿಂದಾಗಿ ಅಲ್ಲಲ್ಲಿ ಹಲವು ಮರಗಳು ಧರೆಗುರುಳಿವೆ. ನಗರದಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿತು.

ಮಂಗಳವಾರ ಸುರಿದ ಆಲಿಕಲ್ಲು ಮಳೆಯಿಂದಾಗಿ ಚಾಮರಾಜನಗರ, ಯಳಂದೂರು ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಬಾಳೆ, ಮಾವು, ತರಕಾರಿ ಬೆಳೆಗಳಿಗೆ ಹಾನಿಯಾಗಿದೆ. ಇದರಿಂದ ರೈತರು ಕಂಗಾಲಾಗಿದ್ದಾರೆ. '300 ಹೆಕ್ಟೇರ್ ನಷ್ಟು ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ' ಎಂದು ಕೃಷಿ ಮತ್ತು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಹಾಸನದ ಅರಕಲಗೂಡು, ಜಾವಗಲ್‌ನಲ್ಲಿ ಆಲಿಕಲ್ಲು ಮಳೆಯಾಗಿದೆ. ಹಳೇಬೀಡಿನಲ್ಲಿ ಅರ್ಧಗಂಟೆ ಜೋರು ಮಳೆ ಬಿದ್ದಿತು. ಕೊಡಗು ಜಿಲ್ಲೆಯ ಮಡಿಕೇರಿ ,ಆಲೂರು, ಸಿದ್ದಾಪುರ, ಮಾಲಂಬಿ, ಗಣಗೂರು, ದೊಡ್ಡ ಮಳ್ತೆ ಹಿರಿಕರ, ಉಂಚಿಗನಹಳ್ಳಿ, ನೀಡ್ತ ಶನಿವಾರಸಂತೆ ವ್ಯಾಪ್ತಿಯಲ್ಲಿ ಉತ್ತಮ ಮಳೆ ಬಿದ್ದಿದೆ.

ಮಂಡ್ಯ ಜಿಲ್ಲೆಯ ಹಲವೆಡೆ ಬುಧವಾರ ಸಾಧಾರಣ ಮಳೆಯಾಗಿದೆ.



ಮಳಿಗೆಗಳು: 9.30AM - 11PM
ತೆರೆದಿರುತ್ತದೆ
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ALTERNATE TO LPG - GO ELECTRIC
LIMITED Stock!
V-GUARD KAFF Prestige Tefal Butterfly Preethi
UGADI
SALE
FREE GIFTS
UPTO 20%
ಕ್ಯಾಶ್ ಬ್ಯಾಕ್
ಕ್ರೆಡಿಟ್ ಕಾರ್ಡ್ ಮೇಲೆ
1 EMI FREE
BAJAJ FINANCE IDFC FIRST Bank
UPTO ₹25,000
ಕಡಿತ ಎಕ್ಸ್‌ಚೇಂಜ್ ಮೇಲೆ*
Godrej
1.0 TON 3 STAR INVERTER SPLIT AIR CONDITIONER
ಇ.ಎಮ್.ಐ ₹2,058
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Haier
1.0 TON 4 STAR INVERTER SPLIT AIR CONDITIONER
ಇ.ಎಮ್.ಐ ₹2,654
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
VOLTAS
1.0 TON 5 STAR INVERTER SPLIT AIR CONDITIONER
ಇ.ಎಮ್.ಐ ₹2,679
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
SAMSUNG
1.5TON 5STAR INVERTER SPLIT AIR CONDITIONER
ಇ.ಎಮ್.ಐ ₹3,404
LG
1.5TON 3 STAR INVERTER SPLIT AIR CONDITIONER
ಇ.ಎಮ್.ಐ ₹2,918
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
DAIKIN AIR CONDITIONERS
1.5TON 5STAR INVERTER SPLIT AIR CONDITIONER
ಇ.ಎಮ್.ಐ ₹3,508
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
ಫೈನಾನ್ಸ್ ಬೊನಾಂಜಾ
Upto 15,000
CASH BACK*
FREE HOLIDAY PACKAGE WITH FAMILY
2 NIGHTS 3 DAYS
HOLIDAY PACKAGE ₹5000
STORE LOCATOR
LLOYD
2.0 TON 3STAR INVERTER SPLIT AIR CONDITIONER
ಇ.ಎಮ್.ಐ ₹3,567
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
WIDEST RANGE OF AIRCOOLERS & FANS
Crompton orient USHA V-GUARD KENSTAR Symphony VOLTAS BAJAJ HAVELLS
LG ASSURED GIFTS ON ALL PRODUCTS*
BT SPEAKER INDUCTION COOKER STEAM IRON KETTLE DRY IRON
ನಮ್ಮ ಮಳಿಗೆಗಳು 9.30AM - 11.00PM ತೆರೆದಿರುತ್ತದೆ
ಕೆಟಲ್ ಕುದಿಯಲು
ರೈಸ್ ಕುಕ್ಕರ್ ಅಡುಗೆಗಾಗಿ
ಮೈಕ್ರೋವೇವ್ ಮತ್ತು ಒಟಿಜಿ ಬೇಕಿಂಗ್‌ಗಾಗಿ
ಏರ್ ಫ್ರೈಯರ್ ಆರೋಗ್ಯಕರ ಅಡುಗೆಗಾಗಿ
ಗೀಸರ್ ಗ್ಯಾಸ್ ಗೀಸರ್ ಬದಲಿಗೆ
LIMITED Stock!
Panasonic
27ಲೀ ಕನ್ವೆಕ್ಷನ್ ಮೈಕ್ರೋವೇವ್ ಓವೆನ್
ಇ.ಎಮ್.ಐ ₹1,441
LG 650ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ GL-B257DBM3
ಇ.ಎಮ್.ಐ ₹4,999
ಉಚಿತ: ₹3,315 ಮೌಲ್ಯದ BUTTERFLY PRESSURE COOKER
SAMSUNG 653 ಲೀ CONVERTIBLE 5IN1 SIDE BY SIDE REFRIGERATOR RS76CG8103S9HL
ಇ.ಎಮ್.ಐ ₹4,990
Godrej 600 ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್
ಇ.ಎಮ್.ಐ ₹5,653
ಉಚಿತ: ₹4,245 ಮೌಲ್ಯದ PREETHI MIXER GRINDER
BOSCH 334 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್
ಇ.ಎಮ್.ಐ ₹3,791
ಉಚಿತ: ₹3,315 ಮೌಲ್ಯದ BUTTERFLY PRESSURE COOKER
Whirlpool 308 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್
ಇ.ಎಮ್.ಐ ₹2,854
ಉಚಿತ: ₹4,470 ಮೌಲ್ಯದ PREETHI INDUCTION COOKTOP*
Haier 190 ಲೀ ಡೈರೆಕ್ಟ್ ಕೂಲ್ ಸಿಂಗಲ್ ಡೋರ್ ರೆಫ್ರಿಜರೇಟರ್
ಇ.ಎಮ್.ಐ ₹1,908
iPhone 17e
EFFECTIVE PRICE ₹61,900* (AFTER CASH BACK)
EMI STARTS FROM ₹3,605
SAMSUNG S26/S26+/ S26 ULTRA
EFFECTIVE PRICE ₹83,999* (AFTER CASH BACK)
EMI STARTS FROM ₹3,667
oppo F31 / OPPO F31/ OPPO F31+
STARTS FROM ₹25,800*
EMI STARTS FROM ₹2,150
Redmi NOTE 15/15 PRO/ 15 PRO
₹2,000* CASH BACK
EMI STARTS FROM ₹1,999
Lenovo SLIM 3i
10% CASH BACK
i7 13620H
16GB RAM
512GB SSD
15.6" FHD
WIN 11 MSO 24
ಇ.ಎಮ್.ಐ ₹6,333
OFFER PRICE ₹75,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
hp 15
10% CASH BACK
CORE 5
16GB, 512 GB SSD
15.6 FHD
WIN 11 MSO 24
ಇ.ಎಮ್.ಐ ₹5,916
OFFER PRICE ₹64,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
LG 75 INCH ULTRA HD (4K) SMART ಎಲ್ಇಡಿ 75NANO83A6A
ಇ.ಎಮ್.ಐ ₹6,999
SAMSUNG 65 4K QLED SMART ಎಲ್ಇಡಿ QN65Q7FAAFXZA
ಇ.ಎಮ್.ಐ ₹6,990
SONY 55 4K ULTRA HD SMART ಎಲ್ಇಡಿ K-55S25M2
ಇ.ಎಮ್.ಐ ₹5,500
IFB 8 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,249
ಉಚಿತ: ₹4,470 ಮೌಲ್ಯದ PREETHI INDUCTION COOKTOP*
LG 9 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್
ಇ.ಎಮ್.ಐ ₹1,897
ಉಚಿತ: ₹1,895 ಮೌಲ್ಯದ PHILIPS TOASTER*
JBL SOUNDBAR SB180 2.1 CH, 220W. WIRELESS SUBWOOFER.
OFFER PRICE ₹13,690
EMI ₹1,141 MRP ₹21,990
LG SAMSUNG SONY Haier Panasonic ONIDA IFB Godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN O GENERAL Prestige VOLTAS HITACHI VOLTAS beko Butterfly Preethi ULTRA EUREKA FORBES pureit Livpure FABER KENSTAR BAJAJ Crompton MAHARAJA V-GUARD ZEBRONICS KAFF ZONE
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. EMI offers the above products based on 12,18,24 & fixed emi schemes .*Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
181 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
facebook
WE SUPPORT ROUND TABLE INDIA LADIES CIRCLE INDIA













Microwave Ovens
Air Conditioners
LED TVs
Panasonic Electric Cookers
Air Fryers
Panasonic Mixier Grinders
Smartwatches
Redmi Smartphones



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,581
ಇಂದಿನ ಅಂತ್ಯ:	23,777
ದಿನದ ಗರಿಷ್ಠ:	23,862
	196

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹485
12 ಕ್ಕೆ	₹72
ಮೈಸೂರು: 100 ಕ್ಕೆ	₹490

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹213
ಆರ್‌ಎಸ್‌ಎಸ್-5	₹207
ಗುಡ್ ಲಾಟ್	₹189

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹303-720
ದ್ವಿತಳಿ (ಬಿ.ವಿ)	₹225-826

ಮುದ್ರೆಮನೆ ಕಾಫಿ	
ಎಪಿ	₹23000
ಎಸಿ	₹13300
ಆರ್‌ಪಿ	₹18500
ಆರ್‌ಸಿ	₹9880

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1760 (1760)
ಸೋಯಾ (ರಿಫೈನ್ಡ್)	₹1440 (1440)
ಸೂರ್ಯಕಾಂತಿ (ರಿಫೈನ್ಡ್)	₹1700 (1710)
ಪಾಮೋಲಿನ್	₹1425 (1425)

‘ಭವ್ಯ’ ಯೋಜನೆಗೆ ಕೇಂದ್ರ ಅಸ್ತು

ಕೈಗಾರಿಕಾ ಪಾರ್ಕ್‌ಗಳ ನಿರ್ಮಾಣಕ್ಕೆ ₹33,660 ಕೋಟಿಗೆ ಅನುಮೋದನೆ • 15 ಲಕ್ಷ ನೇರ ಉದ್ಯೋಗ ಸೃಷ್ಟಿ ನಿರೀಕ್ಷೆ

ನವದೆಹಲಿ (ಪಿಟಿಐ): ದೇಶದಲ್ಲಿ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲು ‘ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆ’ಗೆ (ಭವ್ಯ) ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟವು ಬುಧವಾರ ಅನುಮೋದನೆ ನೀಡಿದೆ.

ಈ ಯೋಜನೆಯ ಅಡಿ ಬಳಕೆಗೆ ಸಿದ್ಧವಾಗಿರುವ 100 ಕೈಗಾರಿಕಾ ಪಾರ್ಕ್‌ಗಳನ್ನು ದೇಶದ ವಿವಿಧೆಡೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ₹33,660 ಕೋಟಿ ವ್ಯಯಿಸಲು ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಈ ಯೋಜನೆಯಿಂದ 15 ಲಕ್ಷ ನೇರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.



> 100 ಎಕರೆಯಿಂದ 1 ಸಾವಿರ ಎಕರೆಯವರೆಗಿನ ವಿಸ್ತೀರ್ಣದ ಕೈಗಾರಿಕಾ ಪಾರ್ಕ್‌ಗಳ ಅಭಿವೃದ್ಧಿಗೆ ಪ್ರತಿ ಎಕರೆಗೆ ₹1 ಕೋಟಿ ಹಣಕಾಸಿನ ನೆರವನ್ನು ಈ ಯೋಜನೆಯ ಅಡಿಯಲ್ಲಿ ನೀಡಲಾಗುತ್ತದೆ
>
> **ಅಶ್ವಿನಿ ವೈಷ್ಣವ್,** ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ

‘ವಿಶ್ವದರ್ಜೆಯ ಕೈಗಾರಿಕಾ ಮೂಲಸೌಕರ್ಯವನ್ನು ಈ ಯೋಜನೆಯ ಅಡಿ ಅಭಿವೃದ್ಧಿ ಮಾಡಲಾಗುವುದು. ತಯಾರಿಕಾ ಘಟಕಗಳಲ್ಲಿ ಗರಿಷ್ಠ ಮಟ್ಟದ ಉತ್ಪಾದನೆ, ದಕ್ಷತೆ ಮತ್ತು ನಾವೀನ್ಯತೆ ಇರಲಿದೆ’ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಈ ಪಾರ್ಕ್‌ಗಳು ರಸ್ತೆಗಳು, ನೀರು, ವಿದ್ಯುತ್, ಚರಂಡಿಗಳು, ಐಸಿಟಿ ಸೇರಿದಂತೆ ಪ್ರಮುಖ ಮೂಲಸೌಕರ್ಯಗಳನ್ನು ಹೊಂದಿರಲಿವೆ. ಇದರ ಜೊತೆಗೆ ಪರೀಕ್ಷಾ ಪ್ರಯೋಗಾಲಯಗಳು, ಗೋದಾಮು, ಕಾರ್ಮಿಕರಿಗೆ ವಸತಿ ಸೌಕರ್ಯ ಮತ್ತು ಇತರೆ ಸೌಲಭ್ಯಗಳು ಇರಲಿವೆ.

ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮದ (ಎನ್‌ಐಸಿಡಿಪಿ) ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ಕೈಗಾರಿಕಾ ಸ್ಮಾರ್ಟ್ ಸಿಟಿಗಳ ಯಶಸ್ಸಿನ ಆಧಾರದ ಮೇಲೆ, ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಖಾಸಗಿ ವಲಯದ ಪಾಲುದಾರರ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ವೈಷ್ಣವ್ ಹೇಳಿದ್ದಾರೆ.

ನಿಯಮಗಳ ಸಡಿಲಗೊಳಿಸುವಿಕೆ, ತ್ವರಿತವಾಗಿ ಯೋಜನೆಗಳಿಗೆ ಅನುಮೋದನೆ ನೀಡುವುದು, ಏಕಗವಾಕ್ಷಿ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಮತ್ತು ರಾಜ್ಯಗಳಿಂದ ಹೂಡಿಕೆದಾರಸ್ನೇಹಿ ಸುಧಾರಣೆಗಳ ಜಾರಿ ಮೂಲಕ ಸುಲಲಿತ ವಹಿವಾಟು ಸಾಧ್ಯವಾಗುವಂತೆ ಮಾಡುವ ಉದ್ದೇಶವನ್ನು ‘ಭವ್ಯ’ ಯೋಜನೆಯು ಹೊಂದಿದೆ ಎಂದು ತಿಳಿಸಿದ್ದಾರೆ.

ಹೊಸ ಯೋಜನೆಯು ಬಳಕೆಗೆ ಸಿದ್ಧವಾಗಿರುವ ಕೈಗಾರಿಕಾ ಮೂಲಸೌಕರ್ಯವನ್ನು ಬಯಸುವ ತಯಾರಿಕಾ ಘಟಕಗಳಿಗೆ, ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ, ನವೋದ್ಯಮಗಳಿಗೆ, ಜಾಗತಿಕ ಹೂಡಿಕೆದಾರರಿಗೆ ನೇರವಾಗಿ ಅನುಕೂಲ ಮಾಡಿಕೊಡಲಿದೆ.

₹2,585 ಕೋಟಿ ವೆಚ್ಚದ ಕಿರು ಜಲ ವಿದ್ಯುತ್ ಅಭಿವೃದ್ಧಿ ಯೋಜನೆ: ಕೇಂದ್ರದ ಒಪ್ಪಿಗೆ

₹2,585 ಕೋಟಿ ವೆಚ್ಚದ ಕಿರು ಜಲ ವಿದ್ಯುತ್ ಅಭಿವೃದ್ಧಿ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. 1,500 ಮೆಗಾ ವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಅಭಿವೃದ್ಧಿಯ ಉದ್ದೇಶ ಇದಾಗಿದೆ.

‘ನದಿ ಹರಿಯುವ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಿಸದೆ, ಜನರನ್ನು ಸ್ಥಳಾಂತರ ಮಾಡದೇ ವಿದ್ಯುತ್ ಉತ್ಪಾದಿಸುವ ಯೋಜನೆ ಇದು. ದೇಶದ 7,133 ಸ್ಥಳಗಳಲ್ಲಿ 21,000 ಮೆ.ವಾ ವಿದ್ಯುತ್ ಉತ್ಪಾದಿಸುವ ಸಣ್ಣ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ಅವಕಾಶ ಇದೆ. ಒಂದು ಘಟಕದಿಂದ 1 ಮೆಗಾ ವಾಟ್‌ನಿಂದ 25 ಮೆಗಾ ವಾಟ್‌ವರೆಗೂ ವಿದ್ಯುತ್ ಉತ್ಪಾದಿಸಬಹುದಾಗಿದೆ’ ಎಂದು ಸಚಿವ ಅಶ್ವಿನಿ ವೈಷ್ಣವ್ ಅವರು ಬುಧವಾರ ತಿಳಿಸಿದರು.

‘ಮುಂದಿನ ಐದು ವರ್ಷಗಳಲ್ಲಿ (2030-31) ಯೋಜನೆಗಳನ್ನು ಅನುಷ್ಠಾನಗೊಳಿಸಲಿದ್ದು, ₹ 15,000 ಹೂಡಿಕೆ ಆಕರ್ಷಿಸುವ ಸಾಧ್ಯತೆ ಇದೆ. ಗರಿಷ್ಠ ₹ 30 ಕೋಟಿ ವೆಚ್ಚದ ಒಂದು ಯೋಜನೆಗೆ ಕೇಂದ್ರ ಸರ್ಕಾರ ಯೋಜನಾ ವೆಚ್ಚದ ಶೇ.30ರಷ್ಟು ಆರ್ಥಿಕ ನೆರವು ನೀಡಲಿದೆ’ ಎಂದರು. ಸದ್ಯ ದೇಶದಲ್ಲಿ ಸಣ್ಣ ಜಲ ವಿದ್ಯುತ್ ಯೋಜನೆಗಳಿಂದ 5,100 ಮೆ.ವಾ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ರವಿ ಪೂಜಾರಿ ಸೆರೆ

ಪ್ರಜಾವಾಣಿ ವಾರ್ತೆ

ಮುಂಬೈ: ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭೂಗತ ಲೋಕದ ಪಾತಕಿ ರವಿ ಪೂಜಾರಿಯನ್ನು ಮಹಾರಾಷ್ಟ್ರದ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ರವಿಪ್ರಕಾಶ್ ಸುಳ್ಯ ಪೂಜಾರಿಯನ್ನು (57) ತಮ್ಮ ಕಸ್ಟಡಿಗೆ ಪಡೆದ ಠಾಣೆ ಪೊಲೀಸರು ಮುಂಬೈಗೆ ಕರೆದೊಯ್ದರು.

ಧಾರ್ಮಿಕ ಕಾರ್ಯಕ್ರಮಗಳಲ್ಲಿ ಡಿಜೆ ನಿಷೇಧಿಸಲು ಸರ್ಕಾರ ಚಿಂತನೆ ನಡೆಸುತ್ತಿರುವುದು ಸ್ವಾಗತಾರ್ಹವೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ



ಪಿಎನ್‌ಜಿಗೆ ಆದ್ಯತೆ ನೀಡಿದರೆ ಹೆಚ್ಚು ಎಲ್‌ಪಿಜಿ



ನವದೆಹಲಿ (ಪಿಟಿಐ): ಕೊಳವೆ ಮೂಲಕ ಅನಿಲ ಪೂರೈಕೆ ಮಾಡುವ ಜಾಲದ ನಿರ್ಮಾಣ ಕಾರ್ಯಕ್ಕೆ ವೇಗ ನೀಡುವ ರಾಜ್ಯಗಳಿಗೆ ವಾಣಿಜ್ಯ ಬಳಕೆ ಎಲ್‌ಪಿಜಿ ವಿತರಣೆಯನ್ನು ಹೆಚ್ಚು ಮಾಡಲಾಗುತ್ತದೆ ಎಂಬ ಭರವಸೆಯನ್ನು ಕೇಂದ್ರ ಸರ್ಕಾರ ಬುಧವಾರ ನೀಡಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ದೇಶಕ್ಕೆ ಎಲ್‌ಪಿಜಿ ಪೂರೈಕೆಯಲ್ಲಿ ಸಮಸ್ಯೆ ಸೃಷ್ಟಿಯಾಗಿದೆ. ಕೇಂದ್ರ ಸರ್ಕಾರವು ಮನೆಗಳಿಗೆ ಅಡುಗೆ ಮಾಡಲು ಎಲ್‌ಪಿಜಿ ಪೂರೈಕೆಗೆ ಆದ್ಯತೆ ನೀಡಿದೆ. ಹೋಟೆಲ್‌ನಂತಹ ವಾಣಿಜ್ಯ ಘಟಕಗಳಿಗೆ ಎಲ್‌ಪಿಜಿ ಪೂರೈಕೆಯನ್ನು ಆರಂಭದಲ್ಲಿ ಸ್ಥಗಿತಗೊಳಿಸಲಾಗಿತ್ತು. ಈಗ ವಾಣಿಜ್ಯ ಘಟಕಗಳ ಬೇಡಿಕೆಯ ಶೇ 20ರಷ್ಟನ್ನು ಪೂರೈಕೆ ಮಾಡಲಾಗುತ್ತಿದೆ.

ಕೊಳವೆ ಮೂಲಕ ನೈಸರ್ಗಿಕ ಅನಿಲ ಪೂರೈಸುವ ಮೂಲಸೌಕರ್ಯ ಕಲ್ಪಿಸುವ ಕೆಲಸಕ್ಕೆ ಚುರುಕು ನೀಡುವ ರಾಜ್ಯಗಳಿಗೆ ವಾಣಿಜ್ಯ ಬಳಕೆ ಎಲ್‌ಪಿಜಿ ಪೂರೈಕೆಯನ್ನು ಶೇ 30ಕ್ಕೆ ಹೆಚ್ಚು ಮಾಡುವುದಾಗಿ ಕೇಂದ್ರ ಹೇಳಿದೆ. ಕೊಳವೆ ಮೂಲಕ ನೈಸರ್ಗಿಕ ಅನಿಲವನ್ನು ಮನೆಗಳಿಗೂ ವಾಣಿಜ್ಯ ಬಳಕೆಗೂ ಪೂರೈಕೆ ಮಾಡಲಾಗುತ್ತದೆ.

ಎಲ್‌ಪಿಜಿ ಪೂರೈಕೆಗೆ ಸಮಸ್ಯೆ ಆಗಿದೆ. ಆದರೆ ಮನೆಗಳಿಗೆ ಹಾಗೂ ಕೈಗಾರಿಕೆಗಳಿಗೆ ಪಿಎನ್‌ಜಿ ಪೂರೈಕೆಯು ಅಬಾಧಿತವಾಗಿ ಮುಂದುವರಿದಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ನಗರ ಅನಿಲ ವಿತರಣಾ (ಸಿಜಿಡಿ) ಜಾಲ ಇರುವಲ್ಲೆಲ್ಲ ಎಲ್‌ಪಿಜಿ ಬಳಕೆದಾರರು ಪಿಎನ್‌ಜಿ ಬಳಕೆ ಆರಂಭಿಸಬೇಕು’ ಎಂದು ಅವರು ಹೇಳಿದರು. ಪಿಎನ್‌ಜಿ ಜಾಲ ಅಳವಡಿಕೆಗೆ ಅನುಮತಿ ಕೋರಿ ಸಲ್ಲಿಕೆಯಾಗಿರುವ ಹಳೆಯ ಅರ್ಜಿಗಳಿಗೆ ಪರಿಭಾವಿತ ಅನುಮತಿ ನೀಡಿದರೆ, ಹೊಸ ಅರ್ಜಿಗಳಿಗೆ 24 ಗಂಟೆಗಳಲ್ಲಿ ಒಪ್ಪಿಗೆ ನೀಡಿದರೆ, ವಾರ್ಷಿಕ ಬಾಡಿಗೆ/ಲೀಸ್ ಶುಲ್ಕ ತಗ್ಗಿಸಿದರೆ ಅಂತಹ ರಾಜ್ಯಗಳಿಗೆ ಶೇ 10ರಷ್ಟು ಹೆಚ್ಚು ವಾಣಿಜ್ಯ ಎಲ್‌ಪಿಜಿ ಪೂರೈಸಲಾಗುತ್ತದೆ ಎಂದು ಸುಜಾತಾ ಅವರು ತಿಳಿಸಿದರು.

ಎಲ್‌ಪಿಜಿ ಪೂರೈಕೆ ಕುರಿತ ಪ್ರಶ್ನೆ ಅವರು, ‘ದೇಶದಲ್ಲಿ ಎಲ್ಲಿಯೂ ಎಲ್‌ಪಿಜಿ ಖಾಲಿಯಾದ ವರದಿ ಇಲ್ಲ. ಆದರೆ ಪೂರೈಕೆ ಮಟ್ಟ ಕಳವಳಕಾರಿ ಆಗಿಯೇ ಇದೆ. ಆಮದು ಮಾಡಿಕೊಳ್ಳುವುದಕ್ಕೆ ಅಡಚಣೆ ಉಂಟಾಗಿದೆ’ ಎಂದರು.

ಮುಂಬೈ ಧಾರಣೆ (ಶೇಂಗಾ) 18-03-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1770 (1770)
ಒಂದು ವಾರದ ಡೆಲಿವರಿ	1765 (1765)
ಪಾಮ್ ವಾರದ ಡೆಲಿವರಿ	1423 (1423)
ಸೂರ್ಯಕಾಂತಿ ಎಣ್ಣೆ ಕಚ್ಚಾ	1575 (1585)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,53,000 (1,56,000)
ಬೆಳ್ಳಿ ಕೆ.ಜಿಗೆ	2,48,000 (2,53,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ	(ಕ್ವಿಂಟಲ್‌ಗೆ)
ಅರಸೀಕೆರೆ	₹30000-30500
ದಾವಣಗೆರೆ	₹11900-11900
ಪುತ್ತೂರು	₹5000-19500

ಜೋಯಾಲುಕ್ಕಾಸ್: ರಿಯಾಯಿತಿ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಯಾಲುಕ್ಕಾಸ್ ಮಳಿಗೆಗಳಲ್ಲಿ ಚಿನ್ನಾಭರಣ ಖರೀದಿಸುವವರಿಗೆ ಮೇಕಿಂಗ್ ಶುಲ್ಕದ ಮೇಲೆ ಶೇ 40ರಷ್ಟು ರಿಯಾಯಿತಿ ಇರಲಿದೆ. ಈ ಕೊಡುಗೆಯು ಮಾರ್ಚ್ 22ರವರೆಗೆ ಲಭ್ಯ.

ಅಲ್ಲದೆ, ಏಪ್ರಿಲ್ 18ರ ಒಳಗೆ ಚಿನ್ನಾಭರಣದ ಶೇ 10ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ ಬುಕಿಂಗ್ ಮಾಡುವ ಗ್ರಾಹಕರು ಬುಕಿಂಗ್ ಮಾಡಿದ ದಿನದ ಬೆಲೆಗೆ ಚಿನ್ನಾಭರಣ ಪಡೆದುಕೊಳ್ಳಬಹುದು.

‘ಅಸಾಮಾನ್ಯವಾದ ಆಭರಣಗಳನ್ನು ಮಾತ್ರವಲ್ಲದೆ, ಸಾಟಿಯಿಲ್ಲದ ಇತರ ಕೊಡುಗೆಗಳನ್ನೂ ಕೊಡಬೇಕು ಎಂಬುದು ನಮ್ಮ ಬದ್ಧತೆ’ ಎಂದು ಕಂಪನಿಯ ಅಧ್ಯಕ್ಷ ಹಾಗೂ ಎಂ.ಡಿ. ಜೋಯ್ ಅಲುಕ್ಕಾಸ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

‘ಸರ್ಕಾರಿ ಬ್ಯಾಂಕ್ ನೌಕರಿಗೆ ಒಳ್ಳೆಯ ಕ್ರೆಡಿಟ್ ಅಂಕ ಬೇಕು’

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ನೌಕರಿ ಬಯಸುವವರು ಉತ್ತಮ ಕ್ರೆಡಿಟ್ ಅಂಕ ಹೊಂದಿರಬೇಕು ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಮಾಹಿತಿ ನೀಡಿದೆ.

ಜನರ ಹಣ ಇರಿಸಿಕೊಳ್ಳುವ ಹೊಣೆ ಹೊತ್ತವರ ಹಣಕಾಸಿನ ವ್ಯವಹಾರಗಳು ಕೂಡ ಜವಾಬ್ದಾರಿಯುತವಾಗಿ ಇರಬೇಕು ಎಂಬ ಉದ್ದೇಶದೊಂದಿಗೆ ಈ ರೀತಿ ಮಾಡಲಾಗಿದೆ ಎಂದು ಸರ್ಕಾರ ವಿವರಿಸಿದೆ.

ಐಬಿಪಿಎಸ್ ನಡೆಸುವ ಸಾಮಾನ್ಯ ನೇಮಕಾತಿ ಪ್ರಕ್ರಿಯೆಯ ಮೂಲಕ ಅರ್ಜಿ ಸಲ್ಲಿಸುವವರು ಬ್ಯಾಂಕ್‌ಗೆ ಸೇರುವ ಸಂದರ್ಭದಲ್ಲಿ ಆರೋಗ್ಯಕರ ಕ್ರೆಡಿಟ್ ಅಂಕವನ್ನು ಕಾಯ್ದುಕೊಳ್ಳಬೇಕು. ಅವರು ಕಾಯ್ದುಕೊಳ್ಳಬೇಕಿರುವ ಕನಿಷ್ಠ ಅಂಕ ಎಷ್ಟು ಎಂಬುದನ್ನು ಆಯಾ ಬ್ಯಾಂಕ್‌ಗಳು ತೀರ್ಮಾನಿಸುತ್ತವೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಆದರೆ ಇದು ಅರ್ಜಿ ಸಲ್ಲಿಸಲು ಇರುವ ಅರ್ಹತೆ ಅಲ್ಲ, ಬ್ಯಾಂಕ್ ಖಾತೆ ಅಥವಾ ಸಾಲವನ್ನೇ ಪಡೆಯದವರಿಗೆ ಇದು ಅನ್ವಯವಾಗುವುದಿಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ.



ಕ್ರೆಡಿಟ್ ಅಂಕಕ್ಕೆ ಸಂಬಂಧಿಸಿದ ವಿಷಯಗಳ ಕಾರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ 20 ಮಂದಿಯ ನೇಮಕಾತಿಯನ್ನು ರದ್ದುಪಡಿಸಲಾಗಿದೆ ಅಥವಾ ನೇಮಕಾತಿಪತ್ರ ಹಿಂಪಡೆಯಲಾಗಿದೆ ಎಂದು ಅವರು ಹೇಳಿದ್ದಾರೆ.

ಸೆನ್ಸೆಕ್ಸ್ 633 ಅಂಶ ಏರಿಕೆ

ಮುಂಬೈ (ಪಿಟಿಐ): ಷೇರು ಖರೀದಿ ಹೆಚ್ಚಳದಿಂದಾಗಿ ಸತತ ಮೂರನೇ ದಿನವೂ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 633 ಅಂಶ ಏರಿಕೆಯಾಗಿ, 76,704ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 196 ಅಂಶ ಹೆಚ್ಚಳವಾಗಿ, 23,777ಕ್ಕೆ ಅಂತ್ಯಗೊಂಡಿದೆ. ಸೋಮವಾರದಿಂದ ಬುಧವಾರದವರೆಗೆ ಸೆನ್ಸೆಕ್ಸ್ 2,140 ಅಂಶ ಏರಿಕೆ ಕಂಡಿದೆ. ಈ ಏರಿಕೆಯಿಂದ ಹೂಡಿಕೆದಾರರ ಸಂಪತ್ತು ₹9.18 ಲಕ್ಷ ಕೋಟಿಯಷ್ಟು ವೃದ್ಧಿಸಿದೆ.

‘ಐ.ಟಿ, ರಿಯಾಲ್ಟಿ ಮತ್ತು ವಾಹನ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆಯಾಗಿವೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿರುವುದು ಕೂಡ ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ನೆರವಾಯಿತು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು, ರೂಪಾಯಿ ಮೌಲ್ಯದಲ್ಲಿನ ಇಳಿಕೆ, ಕಚ್ಚಾ ತೈಲ ಬೆಲೆಯಲ್ಲಿನ ಏರಿಳಿತವು ಹೂಡಿಕೆದಾರರನ್ನು ಎಚ್ಚರಿಕೆಯಿಂದ ಇರುವಂತೆ ಮಾಡಿದೆ ಎಂದು ತಿಳಿಸಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 49 ಪೈಸೆ ಇಳಿಕೆಯಾಗಿದೆ. ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹92.89 ಆಗಿದೆ. ಇದು ರೂಪಾಯಿಯ ಈವರೆಗಿನ ಕನಿಷ್ಠ ಮಟ್ಟ.



ರಿಲಯನ್ಸ್ ಪ್ರತಿಷ್ಠಾನದ ಅಧ್ಯಕ್ಷೆ ನೀತಾ ಅಂಬಾನಿ ಅವರು ಶಿಕ್ಷಣ, ಕ್ರೀಡೆ, ಆರೋಗ್ಯ, ಗ್ರಾಮೀಣ ಪರಿವರ್ತನೆ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ಗುರುತಿಸಿ ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ

ಅಡಿಕೆ ಧಾರಣೆ

ಕುಮಟಾ		ಸಾಗರ			
ಬೆಟ್ಟೆ	38109-46299	ಸಿಪ್ಪೆಗೋಟು	21615-21615	ಕೋಕ	23899-32869
ಚಾಲಿ	46899-49299	**ಶಿವಮೊಗ್ಗ**		ಕೆಂಪುಗೋಟು	31099-34699
ಚಿಪ್ಪು	28969-36699	ಸರಕು	59009-86340	ರಾಶಿ	46319-52889
ಕೋಕ	15869-33329	ಬೆಟ್ಟೆ	58610-58610	ತಟ್ಟಿಬೆಟ್ಟೆ	38689-46089
ಫ್ಯಾಕ್ಟರಿ	10569-28629	ರಾಶಿ	45199-54009	**ಶಿರಸಿ**	
ಹೊಸಚಾಲಿ	40999-47119	ಗೊರಬಲು	19000-36399	ಬೆಟ್ಟೆ	40011-50861
ಪುತ್ತೂರು		**ಸಿದ್ದಾಪುರ**		ಬಿಳಿಗೋಟು	28930-40712
ಕೋಕ	20000-35000	ಬಿಳಿಗೋಟು	27599-38819	ಚಾಲಿ	43708-48099
ಹೊಸತು	26000-46000	ಚಾಲಿ	41899-48700	ಕೆಂಪುಗೋಟು	18099-39101
ಹಳತು	50000-53000			ರಾಶಿ	48018-53218

ಕೆಪಿಎಸ್‌ಸಿ ಚಿಕಿತ್ಸೆಗೆ ಸಮಿತಿ

ಒಂದನೇ ಪುಟದಿಂದ...

‘ಕೆಪಿಎಸ್‌ಸಿಯಲ್ಲಿ ಏನೇ ಆದರೂ ಜನರ ಆಕ್ರೋಶ ಸರ್ಕಾರದ ಕಡೆ ತಿರುಗುತ್ತದೆ. ಸಾಂವಿಧಾನಿಕ ಸಂಸ್ಥೆಯ ಒಳಗೆ ಏನೇ ನಡೆದರೂ ಸರ್ಕಾರದ ನಿಯಂತ್ರಣ ಇರುವುದಿಲ್ಲ. ಆದರೆ, ಸರ್ಕಾರದ ದೂಷಣೆ ಮಾತ್ರ ತಪ್ಪಿದ್ದಲ್ಲ. ಏನೇ ಆಗಲಿ ಸುಧಾರಣೆ ಮಾಡಲು ಸರ್ಕಾರ ಬದ್ಧವಿದೆ’ ಎಂದು ಹೇಳಿದರು.

‘ಕೆಪಿಎಸ್‌ಸಿ ಸುಧಾರಣೆಗಾಗಿ ಈ ಹಿಂದೆ ರಚಿಸಲಾಗಿದ್ದ ಹೋಟಾ ಸಮಿತಿಯ ಶಿಫಾರಸುಗಳಲ್ಲಿ ಶೇ 99ರಷ್ಟು ಜಾರಿ ಮಾಡಲಾಗಿದೆ. ಶಿಫಾರಸಿನ ಪ್ರಕಾರ, ಸದಸ್ಯರನ್ನು ಆಯ್ಕೆ ಮಾಡಲು ಸ್ವತಂತ್ರ ಸಮಿತಿ ರಚಿಸಿದ್ದೇವೆ. ‘ಸಿ’ ಗ್ರೂಪ್ ಹುದ್ದೆಗಳಿಗೆ ಸಂದರ್ಶನ ಇರಬಾರದು ಎಂಬುದನ್ನೂ ಜಾರಿ ಮಾಡಿದ್ದೇವೆ. ಪ್ರತಿ ವರ್ಷ ನೇಮಕಾತಿ ಪಟ್ಟಿ ಘೋಷಿಸಬೇಕು, ನಿರ್ದಿಷ್ಟ ದಿನಾಂಕದಂದೇ ಪರೀಕ್ಷೆ ನಡೆಯಬೇಕು ಎಂಬುದನ್ನು ಜಾರಿ ಮಾಡಲಿದ್ದೇವೆ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಇದ್ದ 200 ಅಂಕಗಳನ್ನು ಹಿಂದಿನ ಸರ್ಕಾರ 50ಕ್ಕೆ ಇಳಿಸಿತ್ತು, ನಮ್ಮ ಸರ್ಕಾರ 25ಕ್ಕೆ ಇಳಿಸಿದೆ. ಒಂದು ವರ್ಷದೊಳಗೆ ನೇಮಕಾತಿ ಪೂರ್ಣ ಮಾಡಬೇಕು ಎಂಬ ಶಿಫಾರಸು ಜಾರಿ ಮಾಡಲು ಆದೇಶ ಹೊರಡಿಸಲಾಗಿದೆ’ ಎಂದರು.

> ಆಯೋಗದ ಸದಸ್ಯರನ್ನು ಕರೆಯಿಸಿ ವಾಗ್ದಂಡನೆ ವಿಧಿಸಬೇಕು. ಅಂತಹ ಒಂದು ಖಡಕ್ ಸಂದೇಶ ಕಳಿಸಬೇಕು. ಇಲ್ಲವಾದರೆ ಸರ್ಕಾರ ನಿಸ್ತೇಜ ಅಥವಾ ಟೊಳ್ಳು ಎನಿಸಿ ಬಿಡುತ್ತದೆ
>
> **ಎಸ್. ಸುರೇಶ್‌ಕುಮಾರ್,** ಬಿಜೆಪಿ

‘ಉತ್ತರ ಪ್ರದೇಶದಂತಹ ದೊಡ್ಡ ರಾಜ್ಯಗಳ ಲೋಕಸೇವಾ ಆಯೋಗದಲ್ಲಿ 8-9 ಸದಸ್ಯರು ಇದ್ದಾರೆ. ಇಲ್ಲಿ 16 ಸದಸ್ಯರು ಏಕೆ? ಇವರು ಹೆಗ್ಗಣಗಳಂತೆ ಇದ್ದಾರೆ’ ಎಂದು ಆರ್. ಅಶೋಕ ಅವರು ಹೇಳಿರುವುದರಲ್ಲಿ ಅತಿಶಯೋಕ್ತಿ ಇಲ್ಲ. ಸದಸ್ಯರ ಸಂಖ್ಯೆಯನ್ನು 8ಕ್ಕೆ ಇಳಿಸಲು ತೀರ್ಮಾನಿಸಲಾಗಿದ್ದು, 2027ರ ಮೇ ವೇಳೆಗೆ ಇದು ಜಾರಿಯಾಗಲಿದೆ’ ಎಂದು ಕೃಷ್ಣಬೈರೇಗೌಡ ತಿಳಿಸಿದರು.

‘ಪುರಾವೆ ಒದಗಿಸಿದರೆ ತನಿಖೆಗೆ ಸಿದ್ಧ’

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ನಿರ್ದಿಷ್ಟ ಪುರಾವೆ ನೀಡಿದರೆ ತನಿಖೆಗೆ ಸಿದ್ಧ ಎಂದು ಕೃಷ್ಣ ಬೈರೇಗೌಡ ಹೇಳಿದರು.

ಮತ್ತೊಮ್ಮೆ ಮುಖ್ಯ ಪರೀಕ್ಷೆ ನಡೆಸುವ ಜತೆಗೆ ಎಸ್‌ಐಟಿ ತನಿಖೆಗೆ ಆದೇಶಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ, ಉಪನಾಯಕ ಅರವಿಂದ ಬೆಲ್ಲದ ಮತ್ತು ಸಿ.ಎನ್.ಅಶ್ವತ್ಥನಾರಾಯಣ ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕೃಷ್ಣ ಬೈರೇಗೌಡ, ‘ಅನುಮಾನದ ಆಧಾರದ ಮೇಲೆ ಮರುಪರೀಕ್ಷೆ ಮಾಡಿ ಎನ್ನುವುದು ಸರಿಯಲ್ಲ. ಅಕ್ರಮ ನಡೆದಿದ್ದರೆ ಮರುಪರೀಕ್ಷೆ ಮಾಡಬಹುದು. ಇಲ್ಲವಾದರೆ ಸಾವಿರಾರು ವಿದ್ಯಾರ್ಥಿಗಳು ಮತ್ತೊಮ್ಮೆ ಪರೀಕ್ಷೆ ಬರೆಯಬೇಕಾಗುತ್ತದೆ. ತಪ್ಪಾಗಿದ್ದರೆ ಮುಚ್ಚಿ ಹಾಕುವ ಪ್ರಶ್ನೆಯೇ ಇಲ್ಲ. ನಾವು ಇದನ್ನು ಸವಾಲಾಗಿ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ನಾವು ತೆರೆದ ಮನಸ್ಸಿನವರಾಗಿದ್ದೇವೆ’ ಎಂದು ಹೇಳಿದರು.

‘ಮುಖ್ಯ ಪರೀಕ್ಷೆಯ ವೇಳೆ ಒಂದೇ ಕೊಠಡಿಯಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳಲ್ಲಿ 11 ಮಂದಿ ಸಂದರ್ಶನಕ್ಕೆ ಆಯ್ಕೆಯಾಗಿರುವುದು ನಿಜ. ಒಂದೇ ಕೊಠಡಿಯಲ್ಲಿ ಕುಳಿತಿದ್ದ ಒಂದೇ ಕುಟುಂಬದ ಸದಸ್ಯರು ಆಯ್ಕೆಯಾಗಿದ್ದಾರೆ ಎಂಬ ಆರೋಪವೂ ಇದೆ. ಆದರೆ, ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ, ಯಾವುದೇ ತಪ್ಪು ಅಥವಾ ಲೋಪ ಕಂಡುಬಂದಿಲ್ಲ ಎಂದರು.

‘ಏನೆಂದು ಉತ್ತರ ಕೊಡಲಿ’

‘ಮುಖ್ಯಮಂತ್ರಿಯವರು ನನ್ನನ್ನು ಕರೆಯಿಸಿಕೊಂಡು, ಇಷ್ಟೆಲ್ಲಾ ಆಗಿದೆ ಇದಕ್ಕೆ ನಾನು ಏನೆಂದು ಉತ್ತರ ಕೊಡಲಿ? ನಮ್ಮ ಬಳಿ ಹೇಳಲು ಏನಿದೆ ಎಂದು ಬೇಸರಿಸಿಕೊಂಡರು’ ಎಂದು ಕೃಷ್ಣ ಬೈರೇಗೌಡ ಹೇಳಿದರು.

‘ನೀನೇ ಹೋಗಿ ಉತ್ತರ ಕೊಡು ಎಂದು ಅವರು ನನಗೆ ಸೂಚಿಸಿದರು. ಆದ್ದರಿಂದ, ಮುಖ್ಯಮಂತ್ರಿ ಪರವಾಗಿ ಬಂದಿದ್ದೇನೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ’ ಎಂದರು.

ನಿಯಂತ್ರಕ ಗಂಗ್ವಾರ್ ಎತ್ತಂಗಡಿ

ಒಂದನೇ ಪುಟದಿಂದ...

ಈ ಹುದ್ದೆಗೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬೆಂಗಳೂರು ಪಶ್ಚಿಮ ನಗರಪಾಲಿಕೆಯ ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ದಿಗ್ವಿಜಯ್ ಬೊಡ್ಕೆ ಅವರನ್ನು ವರ್ಗಾವಣೆ ಮಾಡಲಾಗಿದೆ.

ಇದಕ್ಕೆ ಮೊದಲು, ಕಲಾಪದಲ್ಲಿ ಮಾತನಾಡಿದ ಬಿಜೆಪಿ ಎಸ್. ಸುರೇಶ್‌ಕುಮಾರ್ ಅವರು, ‘ಕೆಪಿಎಸ್‌ಸಿ ಅಕ್ರಮಗಳ ಕೇಂದ್ರ ಬಿಂದು ಪರೀಕ್ಷಾ ಕಂಟ್ರೋಲರ್ (ಪರೀಕ್ಷೆ) ಜ್ಞಾನೇಂದ್ರ ಕುಮಾರ್ ಗಂಗ್ವಾರ್. ಈ ವ್ಯಕ್ತಿಯನ್ನು ಮೊದಲು ಕಿತ್ತು ಹಾಕಬೇಕು. ಅಕ್ರಮಗಳಿಗೆ ಈ ವ್ಯಕ್ತಿಯೇ ಮೂಲ ಕಾರಣ ಎಂದು ಆಯೋಗ ಒಳಗಿನ ಮೂಲಗಳು ತಿಳಿಸಿವೆ’ ಎಂದರು.

39 ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್

ಒಂದನೇ ಪುಟದಿಂದ...

ಅಶ್ಲೀಲ ವಿಡಿಯೊ ಹಂಚಿಕೆಗಾಗಿ ಆರೋಪಿಗಳು 70 ಪೆನ್‌ಡ್ರೈವ್‌ಗಳನ್ನು ಖರೀದಿಸಿದ್ದರು ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ. ಈ ಪೆನ್‌ಡ್ರೈವ್‌ಗಳನ್ನು ಹಾಸನದಲ್ಲೇ ಖರೀದಿಸಿರುವುದು ಕೂಡ ಪತ್ತೆಯಾಗಿದೆ. ವಿಚಾರಣೆ ವೇಳೆ 277 ಜನ ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿರುವುದಾಗಿ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ.

ನವೀನ್ ಪ್ರಮುಖ ಆರೋಪಿ: ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿಯ ನಲ್ಕೆ ಗ್ರಾಮದ ಎನ್.ಆರ್. ಅಲಿಯಾಸ್ ನವೀನ್‌ಗೌಡ (34) ಪ್ರಮುಖ ಆರೋಪಿ (ಎ1). ಪ್ರಜ್ವಲ್ ರೇವಣ್ಣ ಕಾರು ಚಾಲಕ, ಹೊಳೆನರಸೀಪುರ ತಾಲ್ಲೂಕು ಕಡುವಿನಕೋಟೆಯ ಕಾರ್ತಿಕ್ ಎನ್. (33) 2ನೇ ಆರೋಪಿ.

ಮುಖ್ಯಾಂಶಗಳು

- 13,712 ಪುಟಗಳ ದೋಷಾರೋಪಪಟ್ಟಿ
- ಪಟ್ಟಿಯಲ್ಲಿ ಬಿಜೆಪಿ ಮುಖಂಡ ದೇವರಾಜೇಗೌಡ ಹೆಸರು
- ಪ್ರಜ್ವಲ್ ಕಾರು ಚಾಲಕ ಕಾರ್ತಿಕ್ ಎ2, ನವೀನ್ ಎ1 ಆರೋಪಿ

ಈ ಪ್ರಕರಣದಲ್ಲಿ ಬಿಜೆಪಿ ಮುಖಂಡ ದೇವರಾಜೇಗೌಡ ಜಿ. ಅವರನ್ನು 8ನೇ ಆರೋಪಿಯನ್ನಾಗಿ ಮಾಡಲಾಗಿದೆ. ಆರೋಪಿಗಳಲ್ಲಿ ಹಲವರು ಬಿಜೆಪಿ, ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದಾರೆ.

ಬೈರೂತ್‌ನಲ್ಲಿ 12 ಮಂದಿ ಸಾವು • 2 ಸಾವಿರ ಕೆ.ಜಿ ತೂಕದ ಹಲವು ಬಾಂಬ್ ಹಾಕಿದ ಅಮೆರಿಕ

ಇರಾನ್, ಲೆಬನಾನ್ ಮೇಲೆ ಇಸ್ರೇಲ್ ದಾಳಿ

ಬೈರೂತ್ (ಎಎಫ್‌ಪಿ): ಇರಾನ್, ಲೆಬನಾನ್ ಮೇಲಿನ ದಾಳಿಯನ್ನು ಇಸ್ರೇಲ್ ಬುಧವಾರವೂ ಮುಂದುವರಿಸಿದೆ.

ಲೆಬನಾನ್ ರಾಜಧಾನಿ ಬೈರೂತ್‌ನ ಕೇಂದ್ರ ಭಾಗದ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ 12 ಮಂದಿ ಮೃತಪಟ್ಟಿದ್ದಾರೆ. ಇಸ್ರೇಲ್ ಎಚ್ಚರಿಕೆಯ ಬೆನ್ನಲ್ಲೇ ಬಂದರು ನಗರಿ ಟೈರ್‌ನಲ್ಲಿನ ಜನರು ತಮ್ಮ ಮನೆಗಳನ್ನು ತೊರೆದಿದ್ದಾರೆ. ಬೈರೂತ್‌ನಲ್ಲಿನ ಅಧಿಕ ಜನಸಂಖ್ಯೆಯಿರುವ ಮೂರು ಪ್ರದೇಶಗಳನ್ನು ಇಸ್ರೇಲ್ ಧ್ವಂಸಗೊಳಿಸಿದೆ.

ಇರಾನ್ ಪರಮೋಚ್ಚ ನಾಯಕರಾಗಿದ್ದ ಆಯತೊಲ್ಲಾ ಖಮೇನಿ ಅವರ ಹತ್ಯೆಗೆ ಪ್ರತೀಕಾರವಾಗಿ ಬಂಡುಕೋರ ಸಂಘಟನೆ ಹಿಜ್ಬುಲ್ಲಾ ಮಾರ್ಚ್ 2ರಂದು ಇಸ್ರೇಲ್ ಮೇಲೆ ರಾಕೆಟ್ ದಾಳಿ ಆರಂಭಿಸಿತ್ತು. ಈ ಮೂಲಕ ನೇರವಾಗಿ ಯುದ್ಧದಲ್ಲಿ ಭಾಗಿಯಾಗಿತ್ತು. ಇದಕ್ಕೆ ಪ್ರತಿಯಾಗಿ ಇಸ್ರೇಲ್, ಲೆಬನಾನ್ ಮೇಲೆ ಪದೇ ಪದೇ ದಾಳಿ ಮಾಡುತ್ತಿದೆ.

ಮಾರ್ಚ್ 2ರಿಂದ ಇಸ್ರೇಲ್ ನಡೆಸಿದ ದಾಳಿಯಲ್ಲಿ 912 ಜನ ಮೃತಪಟ್ಟಿದ್ದಾರೆ. ಲಕ್ಷಾಂತರ ಜನ ಸ್ಥಳಾಂತರಗೊಂಡಿದ್ದಾರೆ ಎಂದು ಲೆಬನಾನ್‌ನ ಅಧಿಕಾರಿಗಳು ಮಂಗಳವಾರ ತಿಳಿಸಿದ್ದರು..

ಇರಾನ್ ನಡೆಸಿದ ದಾಳಿಯಿಂದ ಟೆಲ್‌ಅವೀವ್‌ನಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಇಸ್ರೇಲ್‌ನ ವೈದ್ಯರು ತಿಳಿಸಿದ್ದಾರೆ. ಕ್ಷಿಪಣಿ ದಾಳಿಯಿಂದ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ.



ಇಸ್ರೇಲ್ ನಡೆಸಿದ ದಾಳಿಯಿಂದಾಗಿ ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಕಟ್ಟಡವೊಂದಕ್ಕೆ ಬೆಂಕಿ ಹೊತ್ತಿಕೊಂಡಿತ್ತು —ಎಪಿ ಚಿತ್ರ

ಅಮೆರಿಕದಿಂದ ದಾಳಿ

ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಇರಾನ್‌ನ ಕ್ಷಿಪಣಿ, ಶಸ್ತ್ರಾಸ್ತ್ರ ಕೇಂದ್ರಗಳನ್ನು ನಾಶಗೊಳಿಸಲು ಅಮೆರಿಕವು ಭಾರೀ ಪ್ರಮಾಣದ ಬಾಂಬ್‌ಗಳ ಮೂಲಕ ದಾಳಿ ನಡೆಸಿದೆ.

‘ಇರಾನ್‌ನ ಕ್ಷಿಪಣಿ ಕೇಂದ್ರಗಳನ್ನು ಗುರಿಯಾಗಿರಿಸಿಕೊಂಡು 2.88 ಲಕ್ಷ ಡಾಲರ್ (₹2.66 ಕೋಟಿ) ಮೌಲ್ಯದ 5 ಸಾವಿರ ಪೌಂಡ್ (2 ಸಾವಿರ ಕೆ.ಜಿ) ತೂಕದ ಹಲವಾರು ಬಾಂಬ್‌ಗಳನ್ನು ಹಾಕಲಾಗಿದೆ’ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ.

ದಾಳಿ: ಇರಾನ್‌ನ ಸಮುದ್ರತೀರದ ಬಳಿ ಇರುವ ನೈಸರ್ಗಿಕ ಅನಿಲ ಸ್ಥಾವರದ ಮೇಲೆ ಬುಧವಾರ ದಾಳಿ ನಡೆದಿದೆ ಎಂದು ಇರಾನ್ ಸರ್ಕಾರಿ ಸ್ವಾಮ್ಯದ ಮಾಧ್ಯಮ ವರದಿ ಮಾಡಿದೆ.

ದಾಳಿಗೊಳಗಾದ ಸ್ಥಾವರವಿರುವ ಪ್ರದೇಶವು ಪರ್ಷಿಯನ್ ಕೊಲ್ಲಿಯಲ್ಲಿದ್ದು, ಈ ಪ್ರದೇಶವನ್ನು ಇರಾನ್ ಕತಾರ್‌ನೊಂದಿಗೆ ಹಂಚಿಕೊಂಡಿದೆ. ಕೊಲ್ಲಿ ರಾಷ್ಟ್ರಗಳ ಜೊತೆಗೆ ಈ ಪ್ರದೇಶದ ಮೇಲೂ ಪದೇ ಪದೇ ದಾಳಿ ನಡೆಯುತ್ತಿದೆ. ಇಸ್ರೇಲ್ ಅಥವಾ ಅಮೆರಿಕ ದಾಳಿ ನಡೆಸಿದೆಯೇ ಎಂಬುವುದು ಸ್ಪಷ್ಟವಾಗಿಲ್ಲ.

ಪ್ರಮುಖ ಬೆಳವಣಿಗೆಗಳು

- ಇರಾಕ್‌ನ ನಾಲ್ಕು ಸ್ಥಳಗಳಲ್ಲಿ ಬಾಂಬ್ ಸ್ಫೋಟ
- ಇಸ್ರೇಲ್ ಪರ ಬೇಹುಗಾರಿಕೆ ನಡೆಸಿದ ವ್ಯಕ್ತಿಯೊಬ್ಬನಿಗೆ ಇರಾನ್ ಗಲ್ಲು ಶಿಕ್ಷೆ ವಿಧಿಸಿದೆ
- ಯುಎಇಯಲ್ಲಿರುವ ಆಸ್ಟ್ರೇಲಿಯಾದ ಸೇನಾ ಕಚೇರಿಯ ಬಳಿ ಇರಾನ್‌ನ ವೈಮಾನಿಕ ವಾಹನವೊಂದು ಅಪ್ಪಳಿಸಿದೆ
- ಅಮೆರಿಕದ ಸೇನಾ ಸಿಬ್ಬಂದಿಯಿದ್ದ ವಾಯನೆಲೆ ಬಳಿ ಖಂಡಾಂತರ ಕ್ಷಿಪಣಿಯೊಂದನ್ನು ಹೊಡೆದುರುಳಿಸಲಾಗಿದೆ ಎಂದು ಸೌದಿಯ ರಕ್ಷಣಾ ಸಚಿವರು ತಿಳಿಸಿದ್ದಾರೆ. ತನ್ನ ರಾಜತಾಂತ್ರಿಕ ಕಚೇರಿಯನ್ನು ಗುರಿಯಾಗಿಸಿದ್ದ ಎರಡು ಡ್ರೋನ್‌ಗಳನ್ನೂ ಹೊಡೆದುರುಳಿಸಲಾಗಿದೆ ಎಂದು ಸೌದಿ ಹೇಳಿದೆ
- ಕ್ಷಿಪಣಿ ಮತ್ತು ಡ್ರೋನ್ ದಾಳಿಯನ್ನು ವಿಫಲಗೊಳಿಸಲಾಗಿದೆ ಎಂದು ಕುವೈತ್ ಮತ್ತು ಕತಾರ್ ತಿಳಿಸಿವೆ.

‘ಹೊರ್ಮುಜ್ ರಕ್ಷಣೆ ಅವರಿಗೆ ಬಿಟ್ಟದ್ದು’

ವಾಷಿಂಗ್ಟನ್, ಅಮೆರಿಕ (ಎಎಫ್‌ಪಿ): ‘ಹೊರ್ಮುಜ್ ಜಲಸಂಧಿ ಹಾದುಹೋಗುವ ಹಡಗುಗಳ ರಕ್ಷಣೆಯು ಆಯಾಯ ರಾಷ್ಟ್ರಕ್ಕೆ ಬಿಡಲಾಗಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

‘ಅಮೆರಿಕಕ್ಕೆ ಈ ಜಲಸಂಧಿ ಅಗತ್ಯವಿಲ್ಲ. ಈ ಮಾರ್ಗವನ್ನು ಬಳಸುವವರೇ, ಇದಕ್ಕೆ ಪರಿಹಾರ ಕಂಡುಕೊಳ್ಳಲಿ’ ಎಂದು ಸಾಮಾಜಿಕ ಮಾಧ್ಯಮ ‘ಟ್ರೂತ್ ಸೋಷಿಯಲ್’ನಲ್ಲಿ ಬರೆದುಕೊಂಡಿದ್ದಾರೆ.

ಈ ಜಲಸಂಧಿ ಮೂಲಕ ಸಾಗುವ ಹಡಗುಗಳ ರಕ್ಷಣೆಗೆ ಯುದ್ಧನೌಕೆಗಳನ್ನು ಕಳುಹಿಸುವಂತೆ ಟ್ರಂಪ್ ಮಾಡಿದ್ದ ಮನವಿಯನ್ನು ಮಿತ್ರ ರಾಷ್ಟ್ರಗಳು ತಿರಸ್ಕರಿಸಿದ್ದವು. ಈ ಕಾರಣಕ್ಕೆ ಟ್ರಂಪ್ ಈ ರೀತಿ ಪ್ರತಿಕ್ರಿಯಿಸಿದ್ದಾರೆ.

ಇಂದೋರ್, ದೆಹಲಿಯಲ್ಲಿ ಅಗ್ನಿ ಅವಘಡ: 17 ಸಾವು

ಇಂದೋರ್/ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಇಂದೋರ್ ಮತ್ತು ದೆಹಲಿಯಲ್ಲಿ ಬುಧವಾರ ನಡೆದ ಪ್ರತ್ಯೇಕ ಅಗ್ನಿ ಅವಘಡಗಳಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ ಒಟ್ಟು 17 ಮಂದಿ ಮೃತಪಟ್ಟಿದ್ದಾರೆ.

ಇಂದೋರ್‌ನಲ್ಲಿನ ಮೂರು ಮಹಡಿಯ ಮನೆಯೊಂದರ ಬ್ಯಾಟರಿ ಚಾಲಿತ ವಾಹನಗಳ(ಇ.ವಿ) ಚಾರ್ಜಿಂಗ್ ಪಾಯಿಂಟ್‌ನಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಪೂರ್ತಿ ಕಟ್ಟಡಕ್ಕೆ ಬೆಂಕಿ ವ್ಯಾಪಿಸಿದ ಪರಿಣಾಮ 8 ಮಂದಿ ಮೃತಪಟ್ಟಿದ್ದಾರೆ. ಇಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಮನೆಯ ಒಳಗಿದ್ದ ಗ್ಯಾಸ್ ಸಿಲಿಂಡರ್‌ಗಳು ಕೂಡ ಸ್ಫೋಟಗೊಂಡ ಪರಿಣಾಮ ಬೆಂಕಿಯ ತೀವ್ರತೆ ಮತ್ತಷ್ಟು ಹೆಚ್ಚಾಗಿತ್ತು.

ಒಂದೇ ಕುಟುಂಬದ 9 ಮಂದಿ ಸಾವು: ನೈರುತ್ಯ ದೆಹಲಿಯ ಪಾಲಂ ಪ್ರದೇಶದಲ್ಲಿ ಬಹುಮಹಡಿ ಕಟ್ಟಡವೊಂದರಲ್ಲಿ ಅಗ್ನಿ ಅವಘಡ ಸಂಭವಿಸಿದ ಪರಿಣಾಮ ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಮೂವರು ಗಾಯಗೊಂಡಿದ್ದಾರೆ.

ಕಟ್ಟಡದ ಮಾಲೀಕ ರಾಜೇಂದರ್ ಕಶ್ಯಪ್ ಮತ್ತು ಅವರ ಕುಟುಂಬ ಎರಡನೇ ಮತ್ತು ಮೂರನೇ ಮಹಡಿಯಲ್ಲಿ ನೆಲಸಿದ್ದರು. ಕಟ್ಟಡದ ನೆಲಮಹಡಿ ಮತ್ತು ಮೊದಲ ಮಹಡಿಯಲ್ಲಿ ಬಟ್ಟೆ ಮತ್ತು ಆಲಂಕಾರಿಕ ವಸ್ತುಗಳ ಮಳಿಗೆಯಿದ್ದ ಕಾರಣ ಬೆಂಕಿಯ ತೀವ್ರತೆ ಅಧಿಕವಾಗಿತ್ತು.

ಇ.ಡಿ ದಾಳಿಯಲ್ಲಿ ಮಮತಾ ಹಸ್ತಕ್ಷೇಪ: 'ಸುಪ್ರೀಂ' ಅತೃಪ್ತಿ

ನವದೆಹಲಿ (ಪಿಟಿಐ): 'ಐ–ಪ್ಯಾಕ್' ಕಚೇರಿಯಲ್ಲಿ ಜನವರಿ 8ರಂದು ಜಾರಿ ನಿರ್ದೇಶನಾಲಯ ಶೋಧ ನಡೆಸುವ ವೇಳೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಡ್ಡಿಪಡಿಸಿದ್ದು ತೃಪ್ತಿಕರ ವಲ್ಲ ಎಂದಿರುವ ಸುಪ್ರೀಂ ಕೋರ್ಟ್, ಕೇಂದ್ರ ತನಿಖಾ ಸಂಸ್ಥೆಯ ಕಾರ್ಯ ಚಟುವಟಿಕೆಗೆ ಅಡ್ಡಿಯಾದಾಗ ಅದನ್ನು ಸರಿಪಡಿಸದೆ ಬಿಡಲಾಗುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದೆ.



ಬ್ಯಾನರ್ಜಿ ಮತ್ತು ಇತರೆ ಉನ್ನತ ಅಧಿಕಾರಿಗಳು ಸಾರ್ವಜನಿಕ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂಬ ಆರೋಪದ ಬಗ್ಗೆ ಸಿಬಿಐ ತನಿಖೆಗೆ ಆಗ್ರಹಿಸಿ ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ, ಎನ್.ವಿ.ಅಂಜಾರಿಯಾ ಅವರ ಪೀಠವು ಬುಧವಾರ ವಿಚಾರಣೆಗೊಳಪಡಿಸಿತು.

'ಇ.ಡಿ ಸಲ್ಲಿಸಿರುವ ಪ್ರತ್ಯಾರೋಪ ಪ್ರಮಾಣಪತ್ರವನ್ನು ನಿರ್ಲಕ್ಷಿಸಿದರೆ ಆಕ್ಷೇಪ ಇಲ್ಲ. ಆದರೆ, ಇದಕ್ಕೆ ಪ್ರತಿಕ್ರಿಯೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ವಕೀಲ ಶ್ಯಾಮ್ ದಿವಾನ್ ನ್ಯಾಯಪೀಠಕ್ಕೆ ಮನವಿ ಮಾಡಿಕೊಂಡರು. ಇದಕ್ಕೆ ಸಿಡಿಮಿಡಿಗೊಂಡ ನ್ಯಾಯಪೀಠ, 'ಈ ಪ್ರಕರಣದಲ್ಲಿ ಹೇಗೆ ಮುಂದುವರಿಯಬೇಕು ಎನ್ನುವುದನ್ನು ನೀವು ನಿರ್ಧರಿಸುವ ಅಥವಾ ನಿರ್ದೇಶಿಸುವ ಅಗತ್ಯವಿಲ್ಲ' ಎಂದು ತರಾಟೆಗೆ ತೆಗೆದುಕೊಂಡು, ಮನವಿಯನ್ನು ವಜಾಗೊಳಿಸಿತು.

'ನಮ್ಮನ್ನು ಪ್ರೀತಿಸಿ, ಮೋದಿ ಜತೆ ಮದುವೆ'

ಎಚ್.ಡಿ.ದೇವೇಗೌಡ ಅವರ ಕಾಲೆಳೆದ ಮಲ್ಲಿಕಾರ್ಜುನ ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅವರು ನಮ್ಮನ್ನು ಪ್ರೀತಿಸಿದರು. ನಂತರ ಏನಾಯಿತೋ ಗೊತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಮದುವೆ ಯಾದರು...' ಹೀಗೆಂದು ರಾಜ್ಯಸಭೆಯ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರ ಕಾಲೆಳೆದರು.



ಮಲ್ಲಿಕಾರ್ಜುನ ಖರ್ಗೆ

ರಾಜ್ಯಸಭೆಯಿಂದ ನಿವೃತ್ತರಾಗುತ್ತಿರುವ ಸದಸ್ಯರಿಗೆ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಖರ್ಗೆ ಅವರ ಈ ಮಾತು ಸದನವನ್ನು ನಗೆಗಡಲಲ್ಲಿ ತೇಲಿಸಿತು. ಸದನದಲ್ಲಿ ಹಾಜರಿದ್ದ ಮೋದಿ ಅವರೂ ನಕ್ಕರು.

'ದೇವೇಗೌಡ ಅವರನ್ನು ನಾನು 54 ವರ್ಷಗಳಿಂದ ಬಲ್ಲೆ. ಅವರೊಂದಿಗೆ ಬಹಳಷ್ಟು ಕೆಲಸ ಮಾಡಿದ್ದೇನೆ. ಆದರೆ, ನಂತರ ಏನಾಯಿತು ಎಂಬುದು ಗೊತ್ತಿಲ್ಲ' ಎಂದು ಖರ್ಗೆ ಹೇಳಿದರು.

ಪ್ರಧಾನಿ ಮೋದಿ ಮಾತನಾಡಿ, 'ದೇವೇಗೌಡ, ಮಲ್ಲಿಕಾರ್ಜುನ ಖರ್ಗೆ, ಶರದ್ ಪವಾರ್ ತಮ್ಮ ಬದುಕಿನ ಅರ್ಧಕ್ಕಿಂತ ಹೆಚ್ಚು ಸಮಯವನ್ನು ಸಂಸದೀಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಹೊಸದಾಗಿ ಆಯ್ಕೆಯಾದ ಸಂಸದರು ಅವರಿಂದ ಕಲಿತುಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ಹಿಂಸೆ, ಕಿರುಕುಳದಿಂದ ವಿಚ್ಛೇದನ: ದೇವೇಗೌಡ



ಎಚ್.ಡಿ.ದೇವೇಗೌಡ

ನವದೆಹಲಿ: ಖರ್ಗೆ ಹೇಳಿಕೆಗೆ ಎಚ್.ಡಿ.ದೇವೇಗೌಡ ಪ್ರತಿಕ್ರಿಯೆ ನೀಡಿದ್ದು, 'ಕಾಂಗ್ರೆಸ್ ಜತೆಗೆ ಬಲವಂತದ ಮದುವೆಯಾಗಿತ್ತು. ಹಿಂಸೆ ಹಾಗೂ ಕಿರುಕುಳವಿತ್ತು. ಆ ಕಾರಣಕ್ಕೆ ವಿಚ್ಛೇದನ ನೀಡಬೇಕಾಯಿತು' ಎಂದು ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಖರ್ಗೆ ಭಾಷಣ ಮಾಡಿದ ಕೆಲವೇ ಗಂಟೆಗಳ ಬಳಿಕ ಗೌಡರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. 'ನಮಗೆ ಅನ್ಯ ದಾರಿ ಇಲ್ಲದೆ ಸುಸ್ಥಿರ ಮೈತ್ರಿಗಾಗಿ ವಿಚ್ಛೇದನ ನೀಡಿ ಹೊರಬರಬೇಕಾಯಿತು' ಎಂದು ಹೇಳಿದ್ದಾರೆ. ಈ ಮೂಲಕ ಖರ್ಗೆ ಹೇಳಿಕೆಗೆ ತಿರುಗೇಟು ನೀಡಿದ್ದಾರೆ.

'ಅವರು ಮಾತನಾಡುವಾಗ ನಾನು ಸದನದಲ್ಲಿ ಇರಲಿಲ್ಲ. 2018ರ ವಿಧಾನಸಭಾ ಚುನಾವಣೆ ಬಳಿಕ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಒಪ್ಪಂದವನ್ನು ಉಲ್ಲೇಖಿಸಿದ ಅವರು, 'ಖರ್ಗೆ ಅವರಿಗೆ ಒಂದು ವಿಷಯ ನೆನಪಿರಬೇಕು. 2018ರಲ್ಲಿ ಕಾಂಗ್ರೆಸ್ ಪಕ್ಷವು ಗುಲಾಮ್ ನಬಿ ಅಜಾದ್ ಅವರನ್ನು ನಮ್ಮ ಮನೆಗೆ ಕಳುಹಿಸಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದಾಗಿ ಹೇಳಿತು. ಆಗ ನಾನು ಅದಕ್ಕೆ ಸಮ್ಮತಿ ಸೂಚಿಸಲಿಲ್ಲ. ಖರ್ಗೆ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಎಲ್ಲರ ಸಮ್ಮುಖದಲ್ಲೇ ಹೇಳಿದೆ. ಆಗ ಸಿದ್ದರಾಮಯ್ಯ ಕೂಡ ಇದ್ದರು. ಆದರೆ, ಅಜಾದ್ ಅವರು ಕುಮಾರಸ್ವಾಮಿ ಅವರೇ ಮೈತ್ರಿ ನಾಯಕತ್ವ ವಹಿಸಬೇಕು ಎಂದು ಒತ್ತಡ ಹೇರಿದರು' ಎಂದರು.

'ಆದಾಗ್ಯೂ, ಈ ಹಾಡು, ನೃತ್ಯ ಹಾಗೂ ಮದುವೆಯ ಬಳಿಕ 2019ರಲ್ಲಿ ಅವರು (ಕಾಂಗ್ರೆಸ್) ಮಾಡಿದ್ದು ಏನು? ಅವರು ನಮ್ಮ ಕೈಬಿಟ್ಟರು. ಬಿಜೆಪಿಗೆ ಎಷ್ಟೊಂದು ಕಾಂಗ್ರೆಸ್ ಸದಸ್ಯರು ಪಕ್ಷಾಂತರ ಆದರು ಹಾಗೂ ಅವರನ್ನು ಯಾರು ಕಳುಹಿಸಿದರು ಎಂಬುದು ಈಗ ಎಲ್ಲರಿಗೂ ಗೊತ್ತಿರುವಂತಹುದೇ. ಆಗ ಪಕ್ಷಾಂತರಕ್ಕೆ ಪ್ರಚೋದನೆ ನೀಡಿದ ನಾಯಕನ ವಿರುದ್ಧ ಕಾಂಗ್ರೆಸ್ ಕ್ರಮ ಕೈಗೊಂಡಿದ್ದರೆ ಚಿತ್ರಣವೇ ಬದಲಾಗುತ್ತಿತ್ತು. ನನ್ನ ಮಿತ್ರ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿ ಇನ್ನೂ ಉತ್ತಮ ಸ್ಥಾನದಲ್ಲಿ ಇರುತ್ತಿದ್ದರು' ಎಂದಿದ್ದಾರೆ.

ಮಮತಾ ವಿರುದ್ಧ ಮುಸ್ಲಿಂ ಮಹಿಳೆ ಸ್ಪರ್ಧೆ

ಕೋಲ್ಕತ್ತ (ಪಿಟಿಐ): ತೀವ್ರ ಪೈಪೋಟಿಯಿರುವ ಭವಾನಿಪುರ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಬಂಗಾಳಿಗರಲ್ಲದ ಮುಸ್ಲಿಂ ಮಹಿಳೆ ಪೂನಂ ಬೇಗಂ ಕಣಕ್ಕಿಳಿದಿದ್ದಾರೆ.

ಟಿಎಂಸಿಯಿಂದ ಉಚ್ಚಾಟಿತರಾಗಿದ್ದ ಹೂಮಾಯೂನ್ ಕಬೀರ್ ಅವರ ನೂತನ ಪಕ್ಷ ಅಮ್ ಜನತಾ ಉನಯನ್‌ನಿಂದ ಪೂನಂ ಸ್ಪರ್ಧಿಸಲಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ 15 ಅಭ್ಯರ್ಥಿಗಳ ಹೆಸರಿರುವ ಮೊದಲ ಪಟ್ಟಿಯನ್ನು ಕಬೀರ್ ಬುಧವಾರ ಬಿಡುಗಡೆಗೊಳಿಸಿದ್ದಾರೆ.

'ಪಶ್ಚಿಮ ಬಂಗಾಳದ 182 ಸ್ಥಾನಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದು, ಪೂರ್ಣ ಪಟ್ಟಿಯನ್ನು ಭಾನುವಾರ ಬಿಡುಗಡೆಗೊಳಿಸುತ್ತೇನೆ' ಎಂದು ಕಬೀರ್ ತಿಳಿಸಿದ್ದಾರೆ.

'ಸಿ.ಎಂ ಪಟ್ಟ: ಆಮಿಷಕ್ಕೆ ಬಗ್ಗದ ವಿಜಯ್'

ಚೆನ್ನೈ, ತಮಿಳುನಾಡು (ಪಿಟಿಐ): 'ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರಿಗೆ ಮುಖ್ಯಮಂತ್ರಿ ಸ್ಥಾನ, ಪಕ್ಷಕ್ಕೆ ಶೇ 50ರಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆಹ್ವಾನ ಬಂದಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನ ಹೇಳಿಕೆ ನೀಡಿದ್ದಾರೆ.

'ವಿಜಯ್ ಅವರಿಗೆ ಎರಡೂವರೆ ವರ್ಷ ಮುಖ್ಯಮಂತ್ರಿ ಸ್ಥಾನದ ಜೊತೆಗೆ ಪಕ್ಷಕ್ಕೆ ಒಟ್ಟು ಅರ್ಧದಷ್ಟು ಸ್ಥಾನದಲ್ಲಿ ಸ್ಪರ್ಧಿಸಲು ಆಹ್ವಾನ ಬಂದಿತ್ತು. ಆದರೆ, ಇದನ್ನು ವಿಜಯ್ ನಿರಾಕರಿಸಿದರು' ಎಂದು ಹೇಳಿದ್ದಾರೆ. ಚುನಾವಣೆ ಹೊಸ್ತಿಲಲ್ಲಿ ಯಾವ ಪಕ್ಷವು ಈ ರೀತಿ ಆಫರ್ ನೀಡಿತ್ತು ಎಂಬುದರ ಕುರಿತು ಅವರು ಮಾಹಿತಿ ನೀಡಲಿಲ್ಲ.

ಅಸ್ಸಾಂ: ಬಿಜೆಪಿ ಸೇರಿದ ಕಾಂಗ್ರೆಸ್ ಸಂಸದ

ನವದೆಹಲಿ/ಗುವಾಹತಿ (ಪಿಟಿಐ): ಕಾಂಗ್ರೆಸ್ ಪಕ್ಷ ತೊರೆದ ಮರುದಿನವೇ ಅಸ್ಸಾಂ ಸಂಸದ ಪ್ರದ್ಯುತ್ ಬೋರ್ದೋಲೋಯಿ ಅವರು ಬುಧವಾರ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು.

'ಪಕ್ಷದಲ್ಲಿ ಅಪಮಾನ ಅನುಭವಿಸಿದ್ದೆ. ಮುಖ್ಯಮಂತ್ರಿಯ ಕಾರ್ಯವೈಖರಿ ಮೆಚ್ಚಿ ಬಿಜೆಪಿ ಸೇರಲು ನಿರ್ಧರಿಸಿದೆ' ಎಂದು ಬೋರ್ದೋಲೋಯಿ ತಿಳಿಸಿದ್ದಾರೆ.

‘ಸರ್ಸೆ’ ಹಾಡು ನಿಷೇಧಿಸಿದ ಕೇಂದ್ರ

‘ಕೆಡಿ–ದಿ ಡೆವಿಲ್’ ಸಿನಿಮಾದ ವಿವಾದಿತ ಹಾಡನ್ನು ನಿಷೇಧ ಮಾಡಲಾಗಿದೆ ಎಂದು ಲೋಕಸಭೆಯಲ್ಲಿ ಕೇಂದ್ರ ಸರ್ಕಾರ ತಿಳಿಸಿದೆ.

ಸಮಾಜವಾದಿ ಪಕ್ಷದ ಸಂಸದ ಆನಂದ್ ಭದೌರಿಯಾ ಅವರು ಪ್ರಶ್ನೋತ್ತರ ಅವಧಿಯಲ್ಲಿ ವಿವಾದಿತ ಹಾಡಿನ ಬಗ್ಗೆ ಕೇಳಿದರು. ‘ಒಟಿಟಿ ವೇದಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿನ ಪರಿಶೀಲನೆ ಮಾಡದ ವಿಷಯವಸ್ತುಗಳು ಕೆಟ್ಟ ಪ್ರಭಾವ ಬೀರುತ್ತಿವೆ’ ಎಂದು ಗಮನಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ವಿವಾದಿತ ಹಾಡನ್ನು ಈಗಾಗಲೇ ನಿಷೇಧಿಸಲಾಗಿದೆ ಎಂದು ತಿಳಿಸಿದರು.

‘ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ಸಾಂವಿಧಾನಿಕ ಮಿತಿಗಳಿಗೆ ಒಳಪಟ್ಟಿರುತ್ತದೆ. ಯಾವುದೇ ಅಭಿವ್ಯಕ್ತಿಯು ಸಂವಿಧಾನವು ನಿಗದಿಪಡಿಸಿದ ನಿರ್ಬಂಧಗಳ ಚೌಕಟ್ಟಿನೊಳಗೆ ವ್ಯಕ್ತವಾಗಬೇಕು’ ಎಂದು ಅವರು ಒತ್ತಿ ಹೇಳಿದರು.

‘ಡಿಜಿಟಲ್ ಮಾಧ್ಯಮದ ಮೂಲಕ ಇಂಥ ವಿಷಯಗಳು ಕ್ಷಿಪ್ರಗತಿಯಲ್ಲಿ ಹರಿದಾಡುತ್ತವೆ. ಸಮಾಜ ಅದರಲ್ಲಿಯೂ ಮಕ್ಕಳು, ಮಹಿಳೆಯರ ರಕ್ಷಣೆಗೆ ಅಗತ್ಯವಿರುವ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು. ಇಂಥ ಕ್ರಮ ಕೈಗೊಳ್ಳಲು ಸರ್ಕಾರ ಸಿದ್ಧವಿದೆ’ ಎನ್ನುವುದು ಅವರ ಕಳಕಳಿ.

ಸಂಜಯ್ ದತ್ ಮತ್ತು ನೋರಾ ಫತೇಹಿ ಅಭಿನಯದ ಹಾಡು ಯೂಟ್ಯೂಬ್‌ನಲ್ಲಿ ಎರಡು ದಿನಗಳ ಹಿಂದೆ ಬಿಡುಗಡೆಯಾಗಿದ್ದು, ಹಾಡಿನ ಸಾಹಿತ್ಯಕ್ಕೆ ಎಲ್ಲ ಭಾಷೆಗಳ ಪ್ರೇಕ್ಷಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಈಗಾಗಲೇ ಹಾಡಿನ ಹಿಂದಿ ಆವೃತ್ತಿಯನ್ನು ಯೂಟ್ಯೂಬ್‌ನಿಂದ ತೆಗೆದುಹಾಕಿರುವುದಾಗಿ ಚಿತ್ರತಂಡ ಹೇಳಿದೆ.



ಸಾಹಿತ್ಯ ಕೇಳಿ ನನಗೂ ಆಘಾತವಾಗಿದೆ: ನೋರಾ

ಕನ್ನಡದ ‘ಕೆಡಿ–ದಿ ಡೆವಿಲ್’ ಸಿನಿಮಾದ ‘ಸರ್ಸೆ’ ಹಾಡಿನ ವಿವಾದದಿಂದ ನಟಿ ನೋರಾ ಫತೇಹಿ ಅಂತರ ಕಾಯ್ದುಕೊಂಡಿದ್ದಾರೆ.

ವಿವಾದ ಭುಗಿಲೆದ್ದ ನಂತರ ಅವರು ವಿಡಿಯೊ ಒಂದನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ್ದಾರೆ.

‘ಮೂರು ವರ್ಷಗಳ ಹಿಂದೆಯೇ ಕನ್ನಡ ಹಾಡಿನ ಚಿತ್ರೀಕರಣ ನಡೆದಿತ್ತು. ಹಾಡಿನ ಹಿಂದಿ ಆವೃತ್ತಿಯ ಸಾಹಿತ್ಯವನ್ನು ಕೇಳಿ ಎಲ್ಲರಂತೆ ನನಗೂ ಆಘಾತವಾಗಿದೆ’ ಎನ್ನುವುದು ಅವರ ಪ್ರತಿಕ್ರಿಯೆ.

‘ಹಾಡಿಗೆ ತೀವ್ರ ವಿರೋಧ ವ್ಯಕ್ತಪಡಿಸಿರುವುದಕ್ಕೆ ಧನ್ಯವಾದ. ಇದರಿಂದಾಗಿ ಹಾಡನ್ನು ಸಾಮಾಜಿಕ ಮಾಧ್ಯಮದಿಂದ ತೆಗೆದುಹಾಕಲಾಗಿದೆ’ ಎಂದು ಪೋಸ್ಟ್ ಮಾಡಿದ್ದಾರೆ.

‘ಕೆಲವರು ಇದೇ ಅವಕಾಶ ಬಳಸಿಕೊಂಡು ನನ್ನ ವ್ಯಕ್ತಿತ್ವದ ಮೇಲೆ ದಾಳಿ ನಡೆಸಲು ಯತ್ನಿಸುತ್ತಿರುವುದು ದುರದೃಷ್ಟಕರ. ಭವಿಷ್ಯದಲ್ಲಿ ನಾನು ಮತ್ತು ನನ್ನ ತಂಡದವರು ಇನ್ನಷ್ಟು ಜಾಗರೂಕರಾಗಿ ಇರುತ್ತೇವೆ’ ಎಂದು ಅವರು ಭಾವುಕರಾಗಿ ಹೇಳಿದ್ದಾರೆ.


‘ಹಿಂದಿ ಹಾಡಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ಅದಕ್ಕೆ ನಾನು ನೃತ್ಯವನ್ನೂ ಮಾಡಿಲ್ಲ. ನನ್ನ ಚಿತ್ರದೊಂದಿಗೆ ಈ ಹಾಡನ್ನು ಬಳಸಲು ಅನುಮತಿಯನ್ನೂ ಪಡೆದಿಲ್ಲ. ಸಂಜಯ್ ದತ್ ಅವರ ಕಾಲಿನ ಮೇಲೆ ಕುಳಿತ ಚಿತ್ರದ ಪೋಸ್ಟರ್ ಕೃತಕ ಬುದ್ಧಿಮತ್ತೆ ಆಧಾರಿತ ಚಿತ್ರವಾಗಿದೆ’ ಎಂದು ಸ್ಪಷ್ಟನೆಯನ್ನೂ ನೀಡಿದ್ದಾರೆ. ‘ಕನ್ನಡ ಭಾಷೆ ಅರ್ಥವಾಗದ ಕಾರಣ ನಿರ್ದೇಶಕರ ಬಳಿ ಹಾಡನ್ನು ಭಾಷಾಂತರಿಸುವಂತೆ ಕೇಳಿದ್ದೆ. ಅವರು ಭಾಷಾಂತರಿಸಿದಾಗ ಅದರಲ್ಲಿ ಅಶ್ಲೀಲತೆ ಇದೆ ಎಂದು ಅನಿಸಿರಲಿಲ್ಲ. ಅನಂತರವೇ ಚಿತ್ರೀಕರಣಕ್ಕೆ ಒಪ್ಪಿಕೊಂಡಿದ್ದೆ’ ಎಂದೂ ಹೇಳಿದ್ದಾರೆ.

ಈ ಪ್ರತಿಕ್ರಿಯೆಯ ನಂತರ ಹಾಡಿನ ಸಾಹಿತ್ಯ ಬದಲಿಸುವುದಾಗಿ ಪ್ರೇಮ್ ತಿಳಿಸಿದ್ದಾರೆ.

ಎನ್‌ಎಚ್‌ಆರ್‌ಸಿಯಿಂದ ನೋಟಿಸ್

‘ಸರ್ಸೆ’ ಹಾಡಿನ ಸಾಹಿತ್ಯದ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿರುವಾಗಲೇ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವಾಲಯ ಮತ್ತು ಸೆನ್ಸಾರ್ ಮಂಡಳಿಗೆ ನೋಟಿಸ್ ಕಳುಹಿಸಿದೆ. ‘ಹಾಡಿನ ಸಾಹಿತ್ಯವು ಅಶ್ಲೀಲತೆಯಿಂದ ಕೂಡಿದ್ದು, ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂಬ ದೂರುಗಳು ಬಂದಿವೆ. ಆಯೋಗವು ಮಧ್ಯಪ್ರವೇಶಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಮನವಿ ಮಾಡಲಾಗಿದೆ’ ಎಂದು ಅದು ತಿಳಿಸಿದೆ.

ನೋರಾ ಫತೇಹಿ



ರಶ್ಮಿಕಾ

ಚಿತ್ರೀಕರಣಕ್ಕೆ ಮರಳಿದ ರಶ್ಮಿಕಾ

ಕಳೆದೊಂದು ತಿಂಗಳಿನಿಂದ ಮದುವೆ ಸಂಭ್ರಮದಲ್ಲಿದ್ದ ನಟಿ ರಶ್ಮಿಕಾ ಮಂದಣ್ಣ ಚಿತ್ರೀಕರಣಕ್ಕೆ ಮರಳಿದ್ದಾರೆ. ‘ಮೈಸಾ’ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದು, ಅದರ ಫೋಟೊಗಳನ್ನು ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ.

ರವೀಂದ್ರ ಪುಲ್ಲೆ ನಿರ್ದೇಶನದ ‘ಮೈಸಾ’ ಚಿತ್ರ ತೆಲುಗು ಭಾಷೆಯಲ್ಲಿ ಸಿದ್ಧಗೊಳ್ಳುತ್ತಿದ್ದು, ತಮಿಳು, ಹಿಂದಿ ಭಾಷೆಗಳಲ್ಲಿಯೂ ತೆರೆ ಕಾಣಲಿದೆ. ಚಿತ್ರದಲ್ಲಿ ರಶ್ಮಿಕಾ ಮಹಾರಾಷ್ಟ್ರ ಹಾಗೂ ಉತ್ತರ ಭಾರತದಲ್ಲಿ ಹೆಚ್ಚಾಗಿ ಕಂಡುಬರುವ ಗೋಂಡ ಸಮುದಾಯದ ಮಹಿಳೆ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೆಲ ದಿನಗಳ ಹಿಂದೆ ಚಿತ್ರದ ಫಸ್ಟ್‌ಲುಕ್ ಬಿಡುಗಡೆಗೊಂಡಿತ್ತು.

ಆ್ಯಕ್ಷನ್, ಮಾಸ್ ಕಥೆ ಹೊಂದಿರುವ ಚಿತ್ರದಲ್ಲಿ ರಶ್ಮಿಕಾ ಆದಿವಾಸಿ ಹೋರಾಟಗಾರ್ತಿಯಾಗಿ ಬಂದೂಕು ಹಿಡಿದಿದ್ದಾರೆ. ಹೋರಾಟದ ಜತೆಗೆ ಭಾವನಾತ್ಮಕ ಕಥೆ ಚಿತ್ರದಲ್ಲಿದೆ ಎನ್ನಲಾಗಿದೆ. ಫೆ.26ರಂದು ರಶ್ಮಿಕಾ–ವಿಜಯ್ ದೇವರಕೊಂಡ ವಿವಾಹವಾಗಿತ್ತು. ಆ ಬಳಿಕ ಇಬ್ಬರು ರೀಲ್‌ನಲ್ಲಿಯೂ ಜೋಡಿಯಾಗಿ ನಟಿಸುತ್ತಿರುವ ‘ರಣಬಾಲಿ’ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗಲಿದ್ದಾರೆ ಎಂಬ ಸುದ್ದಿಯಿತ್ತು. ಅದಕ್ಕೂ ಮೊದಲೇ ರಶ್ಮಿಕಾ ‘ಮೈಸಾ’ ಸೆಟ್‌ಗೆ ತೆರಳಿದ್ದಾರೆ.

‘ಧುರಂಧರ್–2’: 10 ಲಕ್ಷಕ್ಕೂ ಅಧಿಕ ಟಿಕೆಟ್ ಮಾರಾಟ

ರಣ್‌ವೀರ್ ಸಿಂಗ್ ನಟನೆಯ, ಆದಿತ್ಯ ಧರ್ ನಿರ್ದೇಶನದ ‘ಧುರಂಧರ್–ದಿ ರಿವೇಂಜ್’ ಸಿನಿಮಾ ನಾಳೆ(ಮಾರ್ಚ್ 19) ಬಿಡುಗಡೆಯಾಗುತ್ತಿದ್ದು, ಮಾರ್ಚ್ 18ರ ಸಂಜೆ 5ರಿಂದಲೇ ಸಿನಿಮಾದ ಪೇಯ್ಡ್ ಪ್ರಿವ್ಯೂವ್ ಪ್ರದರ್ಶನ ಆರಂಭವಾಗಿತ್ತು.

ಬೆಂಗಳೂರು, ಮುಂಬೈ ಸೇರಿದಂತೆ ಪ್ರಮುಖ ನಗರಗಳಲ್ಲಿ ಪೇಯ್ಡ್ ಪ್ರಿವ್ಯೂವ್ ಪ್ರದರ್ಶನಗಳು ಹೌಸ್‌ಫುಲ್ ಆಗಿದ್ದವು. ಮೊದಲ ದಿನವೇ ನಾಲ್ಕು ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಬಿಕರಿಯಾಗಿವೆ. ಮೊದಲ ಭಾಗವು ನಿರ್ಮಾಣ ಮಾಡಿದ್ದ ಹಲವು ದಾಖಲೆಗಳನ್ನು ಸೀಕ್ವೆಲ್ ಪುಡಿ ಮಾಡಲಿದೆ ಎಂಬ ಮಾತು ಬಾಲಿವುಡ್ ಚಿತ್ರರಂಗದಲ್ಲಿ ಕೇಳಿಬರುತ್ತಿದೆ. ಬುಧವಾರದಂದು-(ಮಾರ್ಚ್ 18) ಬುಕ್ ಮೈ ಶೋ ಆ್ಯಪ್‌ನಲ್ಲಿ ಪ್ರತಿ ಗಂಟೆಗೆ 35 ಸಾವಿರ ಟಿಕೆಟ್‌ಗಳು ಮಾರಾಟವಾಗಿವೆ.


‘ವಾರದ ಮಧ್ಯದಲ್ಲಿ ಸಿನಿಮಾ ಬಂದಿದೆ. ಬುಧವಾರದ ಪೇಯ್ಡ್ ಪ್ರಿವ್ಯೂವ್‌ನಿಂದಲೇ ₹45–50 ಕೋಟಿ ಗಳಿಕೆಯ ನಿರೀಕ್ಷೆಯಿದೆ. ನಮ್ಮ ವೇದಿಕೆಯ ಮೂಲಕವೇ ಮುಂಗಡ ಬುಕ್ಕಿಂಗ್‌ನಲ್ಲಿ ಈಗಾಗಲೇ ಹತ್ತು ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಿದೆ. ಹಿಂದೆಂದೂ ಇಷ್ಟು ಟಿಕೆಟ್ ಮಾರಾಟವನ್ನು ನಾವು ನೋಡಿರಲಿಲ್ಲ. ಸಿನಿಮಾ ದೊಡ್ಡ ಮಟ್ಟದಲ್ಲಿ ಆರಂಭವಾಗಲಿದೆ’ ಎಂದಿದ್ದಾರೆ ಪಿವಿಆರ್ ಐನಾಕ್ಸ್‌ನ ವಹಿವಾಟು ಯೋಜನೆಯ ಮುಖ್ಯಸ್ಥ ಕಮಲ್ ಗ್ಯಾನ್‌ಚಂದಾನಿ.

ಮುಂಬೈ, ಪುಣೆ ಮತ್ತು ಅಹಮದಾಬಾದ್‌ನಲ್ಲಿ ತಡರಾತ್ರಿಯ ಪ್ರದರ್ಶನಗಳನ್ನು ಆಯೋಜಿಸಲಾಗಿತ್ತು. ಮುಂಬೈನ ಚಿತ್ರಮಂದಿರವೊಂದರಲ್ಲಿ ಬುಧವಾರ ತಡರಾತ್ರಿ 2ಗಂಟೆ 15 ನಿಮಿಷಕ್ಕೆ ಮೊದಲ ಪ್ರದರ್ಶನವಿತ್ತು. ‘ಸಿನಿಮಾದ ಹಿಂದಿ ಭಾಗವು ಮೊದಲ ದಿನ ₹35–40 ಕೋಟಿ ಗಳಿಸಬಹುದು. ಅಂತರರಾಷ್ಟ್ರೀಯ ಮಟ್ಟದಲ್ಲೂ ಸಿನಿಮಾ ಹೊಸ ಬಾಕ್ಸ್ ಆಫೀಸ್ ದಾಖಲೆ ಬರೆಯಲಿದೆ’ ಎಂದು ಬುಕ್ ಮೈ ಶೋ ಸಿಒಒ ಆಶಿಶ್ ಸಕ್ಸೇನಾ ಅಂದಾಜಿಸಿದ್ದಾರೆ.

ಆರಂಭದಲ್ಲಿ ಸಿನಿಮಾದ ಅವಧಿ 3 ಗಂಟೆ 55 ನಿಮಿಷ ಎಂದು ಬುಕ್ ಮೈ ಶೋನಲ್ಲಿ ತೋರಿಸಲಾಗುತ್ತಿತ್ತು. ಇದೀಗ ಇದು 3 ಗಂಟೆ 49 ನಿಮಿಷಕ್ಕೆ ಇಳಿಕೆಯಾಗಿದೆ. ಸಿನಿಮಾದಲ್ಲಿ ‘ಜಸ್ಕಿರತ್ ಸಿಂಗ್ ರಂಗಿ’ ಹಾಗೂ ‘ಹಮ್ಜ ಅಲಿ ಮಜಾರಿ’ ಎಂಬ ಪಾತ್ರದಲ್ಲಿ ರಣ್‌ವೀರ್ ಕಾಣಿಸಿಕೊಳ್ಳುತ್ತಿದ್ದು, ಲಿಯಾರಿ ಎನ್ನುವ ನಗರದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸುವಲ್ಲಿಂದ ಕಥೆ ಆರಂಭವಾಗಲಿದೆ.

2025ರಲ್ಲಿ ತೆರೆಕಂಡ ‘ಧುರಂಧರ್’ನ ಮುಂದುವರಿದ ಕಥೆ ಇದಾಗಿದೆ. ಮೊದಲನೇ ಭಾಗ ಬಾಕ್ಸ್ ಆಫೀಸ್‌ನಲ್ಲಿ ₹1000 ಕೋಟಿಗೂ ಅಧಿಕ ಗಳಿಸಿತ್ತು. ಚಿತ್ರದಲ್ಲಿ ಆರ್. ಮಾಧವನ್, ಅರ್ಜುನ್ ರಾಮ್‌ಪಾಲ್, ಸಂಜಯ್ ದತ್ ನಟಿಸಿದ್ದಾರೆ. ಸಿನಿಮಾವನ್ನು ಬಿ62 ಸ್ಟುಡಿಯೊಸ್ ನಿರ್ಮಾಣ ಮಾಡಿದ್ದು, ಹಿಂದಿ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಾಣುತ್ತಿದೆ.

ರಣವೀರ್ ಸಿಂಗ್



‘ರಾಜಕೀಯಕ್ಕೆ ಪೂರ್ಣ ವಿರಾಮ ಇಲ್ಲ’

ನವದೆಹಲಿ (ಪಿಟಿಐ): ಏಪ್ರಿಲ್ ಮತ್ತು ಜುಲೈ ನಡುವೆ ರಾಜ್ಯಸಭೆಯಿಂದ ನಿವೃತ್ತರಾಗುವ 59 ಸದಸ್ಯರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ನಮನ ಸಲ್ಲಿಸಿದರು.

ಮೇಲ್ಮನೆಯಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ‘ಇಂತಹ ಕ್ಷಣಗಳು ಪಕ್ಷಗಳ ಎಲ್ಲೆಯನ್ನೂ ಮೀರಿ ಭಾವನಾತ್ಮಕವಾಗಿಸುತ್ತವೆ’ ಎಂದರು.

ಸಂಸತ್ತನ್ನು ‘ಮುಕ್ತ ವಿಶ್ವ ವಿದ್ಯಾಲಯ’ ಎಂದ ಅವರು, ದೇಶ ಸೇವೆಯನ್ನು ಮುಂದುವರಿಸುವಂತೆ ನಿವೃತ್ತಿಯಾಗುತ್ತಿರುವ ಸದಸ್ಯರಲ್ಲಿ ಮನವಿ ಮಾಡಿದರು.

‘ರಾಜಕೀಯದಲ್ಲಿ ಪೂರ್ಣ ವಿರಾಮ ಎಂಬುದೇ ಇಲ್ಲ. ನಿಮ್ಮ (ನಿವೃತ್ತ ಸದಸ್ಯರು) ಅನುಭವ ದೇಶಕ್ಕೆ ದಾರಿದೀಪ’ ಎಂದರು.

ಇದೇ ಸಂದರ್ಭದಲ್ಲಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರನ್ನು ಶ್ಲಾಘಿಸಿದರು.

ಅನುದಾನ ಬಿಡುಗಡೆಗೆ ಒಪ್ಪಿಗೆ

ಹಲವು ಸಚಿವಾಲಯಗಳ 2026–27ನೇ ಸಾಲಿನ ಅನುದಾನ ಬಿಡುಗಡೆಗೆ ಲೋಕಸಭೆಯು ಬುಧವಾರ ಒಪ್ಪಿಗೆ ನೀಡಿದೆ. ಸುಮಾರು ₹53 ಲಕ್ಷ ಕೋಟಿ ಬಳಕೆಗೆ ಅನುಮೋದನೆ ನೀಡಿದೆ.

‘ದಿವ್ಯಾಂಗ ಶಕ್ತಿ’ ಯೋಜನೆಗೆ ಚಾಲನೆ

ಅಮರಾವತಿ (ಪಿಟಿಐ): ಅಂಗವಿಕಲರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸುವ ‘ದಿವ್ಯಾಂಗ ಶಕ್ತಿ’ ಯೋಜನೆಗೆ ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಬುಧವಾರ ಇಲ್ಲಿ ಚಾಲನೆ ನೀಡಿದರು. ಯುಗಾದಿ ಹಬ್ಬದ ವಿಶೇಷ ಉಡುಗೊರೆಯಾಗಿ ಘೋಷಿಸಲಾದ ಈ ಯೋಜನೆಯು ಸಾಮಾಜಿಕ ಸಮಾನತೆ, ಸಂಚಾರ ಸೌಲಭ್ಯ ಮತ್ತು ಕಟ್ಟಕಡೆಯ ವ್ಯಕ್ತಿಗೂ ಘನತೆಯ ಬದುಕು ನೀಡುವ ಗುರಿ ಹೊಂದಿದೆ.

ಯೋಜನೆಯು 21 ಅಂಗವೈಕಲ್ಯ ಇರುವವರನ್ನು ಒಳಗೊಳ್ಳಲಿದ್ದು, ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದ (ಎಪಿಎಸ್‌ಆರ್‌ಟಿಸಿ) ಐದು ವಿಧದ ಬಸ್‌ಗಳಲ್ಲಿ ಉಚಿತ ಪ್ರಯಾಣದ ಜೊತೆಗೆ, ಅವರ ಸಹಾಯಕರಿಗೆ ಶೇ 50ರಷ್ಟು ರಿಯಾಯಿತಿ ನೀಡುತ್ತದೆ.

ಶಾಂತಿ, ಸಮಾನತೆಯ ಸಂದೇಶ ಸಾರುವ ಈದುಲ್ ಫಿತ್ರ್

• ಮಹಮ್ಮದ್ ನೂಮಾನ್

ಇಸ್ಲಾಮಿಕ್ ಕ್ಯಾಲೆಂಡರ್‌ನ ರಂಜಾನ್ ಮಾಸದ ಚಂದ್ರದರ್ಶನದೊಂದಿಗೆ ಆರಂಭವಾಗುವ ಉಪವಾಸವು ಶವ್ವಾಲ್ ತಿಂಗಳ ಚಂದ್ರದರ್ಶನದೊಂದಿಗೆ ಕೊನೆಗೊಳ್ಳುತ್ತದೆ. ಶವ್ವಾಲ್ ತಿಂಗಳ ಮೊದಲ ದಿನ ಈದುಲ್ ಫಿತ್ರ್ ಹಬ್ಬದ ಸಂಭ್ರಮ.

ರಂಜಾನ್ ತಿಂಗಳ 30 ದಿನಗಳನ್ನು ಉಪವಾಸ, ಅಧ್ಯಾತ್ಮದಲ್ಲೇ ಕಳೆದು ಕೊನೆಯಲ್ಲಿ ಮುಸ್ಲಿಮರು ಹಬ್ಬ ಆಚರಿಸುವರು. ಹಬ್ಬದ ದಿನ ಬೆಳಿಗ್ಗೆ ಮಸೀದಿ ಅಥವಾ ಈದ್ಗಾಗಳಲ್ಲಿ ವಿಶೇಷ ಪ್ರಾರ್ಥನೆ ನಡೆಯುತ್ತದೆ. ಹಬ್ಬದ ದಿನ ಕೇಳಿಬರುವ ‘ಅಲ್ಲಾಹು ಅಕ್ಬರ್’ (ಅಲ್ಲಾಹನು ಶ್ರೇಷ್ಠನು) ಎಂಬ ಅಲ್ಲಾಹನ ನಾಮಸ್ಮರಣೆಯು ದೇವನ ಶ್ರೇಷ್ಠತೆಯನ್ನು, ಮಾನವಕುಲದ ಸಮಾನತೆ ಮತ್ತು ಏಕತೆಯನ್ನು ಪ್ರತಿಪಾದಿಸುತ್ತದೆ.



ಈದ್ ನಮಾಜ್ ಹಬ್ಬದ ಪ್ರಮುಖ ಆಕರ್ಷಣೆ. ಬಡವ, ಶ್ರೀಮಂತ ಎಂಬ ಭೇದವಿಲ್ಲದೆ, ಮೇಲು-ಕೀಳೆಂಬ ತಾರತಮ್ಯವಿಲ್ಲದೆ ಎಲ್ಲರೂ ಸಾಲಾಗಿ ನಿಂತು ಪ್ರಾರ್ಥಿಸುವ ಸನ್ನಿವೇಶ ದೇವನ ಮುಂದೆ ಎಲ್ಲರೂ ಸಮಾನರೆಂಬ ಸಂದೇಶವನ್ನು ಸಾರುತ್ತದೆ. ದೈನಂದಿನ ಸಾಮೂಹಿಕ ನಮಾಜ್‌ನ ಆಶಯ ಕೂಡ ಇದೇ ಆಗಿದೆ. ಈದ್ ನಮಾಜ್ ಬಳಿಕ ‘ಖುತ್ಬಾ’ ಪ್ರವಚನ ಇರುತ್ತದೆ.

ಪ್ರಾರ್ಥನೆಯ ಬಳಿಕ ಎಲ್ಲರೂ ಪರಸ್ಪರ ಹಸ್ತಲಾಘವ ಮಾಡಿಕೊಂಡು, ಆಲಿಂಗಿಸಿ ಈದ್ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾರೆ. ಈದ್ ಹಬ್ಬ ಪರಸ್ಪರ ಸಂಬಂಧ, ಬಾಂಧವ್ಯವನ್ನು ಬಲಪಡಿಸುವ ದಿನವಾಗಿದೆ. ಆದ್ದರಿಂದ ಪ್ರಾರ್ಥನೆಯ ಬಳಿಕ ಸಂಬಂಧಿಕರು, ಸ್ನೇಹಿತರ ಮನೆಗಳಿಗೆ ಭೇಟಿ ನೀಡುತ್ತಾರೆ. ನೆರೆಯವರು, ಬಂಧುಮಿತ್ರರನ್ನು ತಮ್ಮ ಮನೆಗಳಲ್ಲಿ ಸತ್ಕರಿಸುತ್ತಾರೆ. ಮನೆಗಳಲ್ಲಿ ವಿಶೇಷ ಖಾದ್ಯಗಳನ್ನು ಸಿದ್ಧಪಡಿಸುತ್ತಾರೆ.

ಇಸ್ಲಾಮಿನ ಹಬ್ಬಗಳಲ್ಲಿ ಕಂಡು ಬರುವ ಪ್ರಮುಖ ಅಂಶಗಳೆಂದರೆ ಪ್ರೀತಿ, ಸೌಹಾರ್ದ, ಸಂಬಂಧಗಳ ಸುಧಾರಣೆ ಮತ್ತು ದೇವನೊಂದಿಗೆ ಪ್ರಕಟಿಸಬೇಕಾದ ಕೃತಜ್ಞತೆಯ ಮನೋಭಾವ. ಸಮಾಜದಲ್ಲಿ ಪ್ರೀತಿ, ಸಮಾನತೆಯ ಸಂದೇಶ ಹರಡುವುದಕ್ಕೆ ಹಬ್ಬಗಳಲ್ಲಿ ಒತ್ತು ಕೊಡಲಾಗಿದೆ. ಮನುಷ್ಯನು ಕೇವಲ ತನ್ನ ವೈಯಕ್ತಿಕ ಏಳಿಗೆಯಲ್ಲಿ ಸಂತಸಪಡದೆ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಹಿತವನ್ನೂ ಬಯಸಬೇಕು ಎಂಬ ಸಂದೇಶವನ್ನೂ ಹಬ್ಬವು ಸಾರುತ್ತದೆ.

ಫಿತ್ರ್ ಝಕಾತ್ (ಕಡ್ಡಾಯ ದಾನ): ಹಬ್ಬದ ದಿನ ಬಡವರಿಗೆ ದಾನ ಕೊಡಬೇಕು ಎಂದು ಇಸ್ಲಾಂ ಆದೇಶಿಸಿದೆ. ಈದ್ ದಿನ ವಿಶೇಷ ಪ್ರಾರ್ಥನೆಗಾಗಿ ಮಸೀದಿಗೆ ಹೋಗುವ ಮುನ್ನ ಕಡ್ಡಾಯ ದಾನ ಮಾಡಲೇಬೇಕು.

ಅದನ್ನು ‘ಫಿತ್ರ್ ಝಕಾತ್’ ಎನ್ನುವರು. ಆರ್ಥಿಕ ಮುಗ್ಗಟ್ಟು ಇಲ್ಲದಿರುವ ಪ್ರತಿಯೊಬ್ಬನೂ ತನ್ನ ಅಧೀನದಲ್ಲಿರುವ ಪ್ರತಿಯೊಬ್ಬ ಮನೆಯ ಸದಸ್ಯನ ಪರವಾಗಿ ಸುಮಾರು ಎರಡೂವರೆ ಕೆ.ಜಿ. ಧಾನ್ಯ ಅಥವಾ ಅದಕ್ಕೆ ಸಮನಾದ ಹಣವನ್ನು ದಾನವಾಗಿ ನೀಡಬೇಕು.

ಧಾನ್ಯ ನೀಡುವುದಾದರೆ ಆಯಾ ಪ್ರದೇಶದ ಜನರು ಸಾಮಾನ್ಯವಾಗಿ ತಿನ್ನುವ ಆಹಾರವನ್ನು (ಅಕ್ಕಿ, ಗೋಧಿ, ಜೋಳ, ಬೇಳೆ) ನೀಡಬೇಕು. ಝಕಾತ್ ಪಡೆಯುವವರ ಆಹಾರ ಪದ್ಧತಿಯನ್ನರಿತು, ಅವರ ಊರಿನ ಆಹಾರಪದ್ಧತಿಯಂತೆಯೇ ಝಕಾತ್ ನೀಡಬೇಕು.

ತನ್ನ ಹಾಗೂ ಕುಟುಂಬ ಸದಸ್ಯರ ಆಹಾರ, ಬಟ್ಟೆ ಮತ್ತು ಮೂಲ ಅಗತ್ಯಗಳಿಗಿಂತ ಹೆಚ್ಚು ಸಂಪತ್ತು ಇರುವ ಪ್ರತಿಯೊಬ್ಬನಿಗೆ ‘ಫಿತ್ರ್ ಝಕಾತ್’ ಕಡ್ಡಾಯ. ಬಡವರಿಗೂ ಹಬ್ಬದ ಸಂಭ್ರಮ ಆಚರಿಸಲು ಸಾಧ್ಯವಾಗಬೇಕು ಎಂಬುದು ಇದರ ಉದ್ದೇಶ. ಝಕಾತ್ ಅನ್ನು (ದಾನ) ಹಬ್ಬದೊಂದಿಗೆ ಜೋಡಿಸಿರುವ ಕ್ರಮದಿಂದಾಗಿ ಇದು ಬಡವರ ಪಾಲಿನ ಹಬ್ಬ ಎನಿಸಿಕೊಂಡಿದೆ.

ಯುಗಾದಿ: ಜೀವನವನ್ನು ಸೋಲಿಸದೆ ಗೆಲ್ಲಿಸುವ ಹರ್ಷದ ಹಬ್ಬ

• ಎಸ್. ಸೂರ್ಯಪ್ರಕಾಶ ಪಂಡಿತ್

ಸೃಷ್ಟಿಯಲ್ಲಿ ಹುಟ್ಟು–ಸಾವು – ಎರಡೂ ಜೊತೆಜೊತೆಯಲ್ಲಿಯೇ ನಡೆಯುವ ವಿದ್ಯಮಾನ. ವಾಸ್ತವವಾಗಿ ನಿಸರ್ಗ ಎರಡನ್ನೂ ಹಬ್ಬದಂತೆ ಸಂಭ್ರಮಿಸುತ್ತಿರುತ್ತದೆ. ಆದರೆ ನಮ್ಮ ಬರಿಯ ಕಣ್ಣಿಗೆ ಈ ವಿದ್ಯಮಾನ ಕಾಣದು. ನಮ್ಮ ದೇಹದಲ್ಲಿಯೇ ಪ್ರತಿ ಕ್ಷಣವೂ ಜೀವಕೋಶಗಳು ಹುಟ್ಟುತ್ತಿರುತ್ತವೆ, ಸಾಯುತ್ತಿರುತ್ತವೆ. ಈ ವಿದ್ಯಮಾನದಲ್ಲಿಯೇ ನಮ್ಮ ಶರೀರ–ಶಾರೀರಗಳ ಚೈತನ್ಯದ ಮೂಲ ಅಡಗಿದೆ. ಆದರೆ ಇದೂ ಸುಲಭಕ್ಕೆ ನಮ್ಮ ಅನುಭವಕ್ಕೆ ಎಟುಕದು. ಹೀಗೆ ನಮ್ಮ ಒಳಗೆ ಮತ್ತು ಹೊರಗೆ – ಎರಡೂ ನೆಲೆಗಳಲ್ಲಿ ಪ್ರತಿ ಕ್ಷಣ ನಡೆಯುವ ಹೊಸತನದ ಆಟವೇ ದಿಟವಾದ ‘ಯುಗಾದಿ’. ಇದನ್ನು ಸಂಕೇತಿಸುವ, ಇಂಥದೊಂದು ಸೃಷ್ಟಿವಿಸ್ಮಯದ ಮೌಲ್ಯವನ್ನು ಸಾರುವ ಹಬ್ಬವೇ ಇಂದು ನಾವು ಆಚರಿಸುತ್ತಿರುವ ‘ಯುಗಾದಿ.’



‘ಯುಗಾದಿ’ ಎಂದರೆ ಯುಗದ ಆದಿ. ‘ಯುಗ’ ಎಂದರೆ ಒಂದು ವರ್ಷವೂ ಆಗಬಹುದು; ಒಂದು ಯುಗವೇ ಆಗಬಹುದು; ಒಂದು ದಿನವೂ ಆಗಬಹುದು; ಕೊನೆಗೆ ಒಂದು ಕ್ಷಣವೂ ಆಗಬಹುದು. ಏಕೆಂದರೆ ಒಂದೊಂದು ಕ್ಷಣದಲ್ಲಿಯೂ ಯುಗದ ಗುಟ್ಟು ಅಡಗಿರುತ್ತದೆ. ಕಾಲದ ಮೂಲಕ ಕಾಲವನ್ನು ಗೆಲ್ಲಬೇಕೆಂಬ ಹಂಬಲವೇ ಯುಗಾದಿಯ ಸಂದೇಶ. ಈ ತತ್ತ್ವದ ಸಾಕ್ಷಾತ್ಕಾರಕ್ಕೆ ಭಿತ್ತಿಯಾಗಿ ಒದಗುವುದು ‘ಪ್ರಕೃತಿ’. ಅದು ನಮ್ಮ ಒಳಗಿನ ಪ್ರಕೃತಿಯೂ ಹೌದು, ಒಳಗಿನ ಪ್ರಕೃತಿಯೂ ಹೌದು. ಹೀಗಾಗಿಯೇ ಯುಗಾದಿಗೂ ಪ್ರಕೃತಿಗೂ ನೇರ ನಂಟಿದೆ; ಕಾಲದ ಅಳತೆಯೊಂದಿಗೂ ಅದು ನಂಟನ್ನು ಹೊಂದಿದೆ. ‘ಯುಗ’ ಎಂದರೆ ವಿಸ್ತಾರವಾದ ಕಾಲದ ಎಣಿಕೆ ಅಲ್ಲವೆ? ನಾಲ್ಕು ಯುಗಗಳ ಚಕ್ರ, ಸೃಷ್ಟಿ–ಪ್ರಳಯ – ಇವು ಅದರೊಂದಿಗೆ ಸೇರಿಕೊಳ್ಳುತ್ತವೆ. ‘ಯುಗ’ ಎಂದರೆ ಜೋಡಿ ಎಂಬ ಅರ್ಥವೂ ಇದೆ; ಸುಖ–ದುಃಖ, ಒಳಿತು–ಕೆಡಕು ಎಂಬ ಭಾವಗಳೂ ಕತ್ತಲೆ–ಬೆಳಕು, ಹುಟ್ಟು–ಸಾವು ಎಂಬ ಜೋಡಿಗಳೂ ಸೃಷ್ಟಿನಿಯಮದ ಅನಿವಾರ್ಯ ತಥ್ಯಗಳು ಎಂಬುದನ್ನು ಈ ‘ಯುಗ’ದ ಕಲ್ಪನೆಯಲ್ಲಿ ಕಾಣಬಹುದು. ನೇಗಿಲಿನ ಮತ್ತು ಬಂಡಿಯ ನೊಗಕ್ಕೂ ‘ಯುಗ’ ಎಂದು ಹೆಸರು; ಇದು ಜೀವನಪಯಣವನ್ನೂ ಸಂಕೇತಿಸುತ್ತದೆ; ಜೀವನಾಧಾರವಾದ ಕೃಷಿಯನ್ನೂ ಸಂಕೇತಿಸುತ್ತದೆ. ಯುಗಗಳ ಕಲ್ಪನೆ, ಸೃಷ್ಟಿಚಕ್ರ, ಪ್ರಕೃತಿಯ ವಿನ್ಯಾಸ, ಕೃಷಿ – ಇವಾವುದೂ ಏಕಮುಖ ಸಂಚಾರವಲ್ಲ; ಇವೆಲ್ಲವೂ ಸುಖ–ದುಃಖ, ಹುಟ್ಟು–ಸಾವು, ರಾತ್ರಿ–ಹಗಲು – ಇಂಥ ಜೋಡಿಯ ಸಾಮರಸ್ಯದ ಕುಣಿತಗಳೇ ಹೌದು ಎಂಬುದು ಎದ್ದುಕಾಣುವ ವಿವರ. ಜೀವನಚಕ್ರದ ಓಟ ನಿರಂತರವಾಗಿರಬೇಕು; ಕತ್ತಲೆ–ಬೆಳಕುಗಳು ಈ ಓಟಕ್ಕೆ ಅಡ್ಡಿಗಳನ್ನಾಗಿಸಿ ಕೊಳ್ಳಬಾರದು ಎಂಬ ಪ್ರಕೃತಿಯ ಪಾಠವೇ ಯುಗಾದಿಯ ಸಂದೇಶವೂ ಆಗಿದೆ.

ಇಂದು ಆರಂಭವಾಗಲಿರುವ ನೂತನ ಸಂವತ್ಸರದ ಹೆಸರು ‘ಪರಾಭವ’. ಸೋಲು, ಅಪಮಾನ, ತಿರಸ್ಕಾರ – ಎಂದೆಲ್ಲ ಇದಕ್ಕೆ ಅರ್ಥಗಳುಂಟು. ನಾವು ಯಾರೂ ಬಯಸದ ಸಂಗತಿಗಳು ಇವು. ಆದರೆ ಜೀವನದಲ್ಲಿ ಯಾವ ಕ್ಷಣವೂ ಎದುರಾಗಬಹುದಾದ ವಿವರಗಳು ಇವು. ನಮಗೆ ಬೇಡವಾದ ವಿದ್ಯಮಾನದ ಹೆಸರನ್ನೇ ಹೊತ್ತ ವರ್ಷವೊಂದನ್ನು ನಮ್ಮ ಪೂರ್ವಜರು ಕಾಣಿಸಿರುವುದು ಮಾರ್ಮಿಕವಾಗಿದೆ. ಸೋಲನ್ನು ಗೆಲ್ಲಬೇಕೆಂಬ ಸಂಕಲ್ಪ ಇಲ್ಲದಿದ್ದರೆ, ಅದಕ್ಕೆ ತಕ್ಕ ಸಿದ್ಧತೆ ಇಲ್ಲದಿದ್ದರೆ ಆಗ ಜೀವನದಲ್ಲಿ ಪ್ರತಿ ಕ್ಷಣವೂ ಸೋಲುತ್ತಲೇ ಇರಬೇಕಾಗುತ್ತದೆ. ಸೋಲನ್ನು ಸ್ಮರಿಸದೆ, ಆಹ್ವಾನಿಸದೆ, ಆದರಿಸದೆ ಗೆಲುವಿನ ಸೋಪಾನ ಸಿದ್ಧವಾಗದು. ಇಂಥ ಪ್ರಬುದ್ಧತೆಗೆ ನಮ್ಮನ್ನು ನಾವು ಸಿದ್ಧಮಾಡಿಕೊಳ್ಳಲು ತೊಡಗುವ ಮೊದಲ ಕ್ಷಣ, ಅದು ನಮ್ಮ ಪಾಲಿಗೆ ಹಬ್ಬವಲ್ಲದೆ ಮತ್ತೇನು? ಜೀವನಹರ್ಷದ ಈ ಮೊದಲ ಹೆಜ್ಜೆಯೇ ಹೊಸ ವರ್ಷ ಎಂಬ ಯುಗಾದಿ.



ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಯುಗಾದಿ: ಕಚೇರಿಗೆ ಹಾಜರಿ ಕಡ್ಡಾಯ

ಒಂದನೇ ಪುಟದಿಂದ...

‘ವಿಧಾನಸಭೆ ಅಧಿವೇಶನದಲ್ಲಿ 23ರಂದು ಕಂದಾಯ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ನೀಡಲು ಬಾಕಿ ಇದೆ. ಹೀಗಾಗಿ, ಮುಜರಾಯಿ, ಭೂ ಮಂಜೂರಾತಿ 1, 2 ಮತ್ತು 3, ಸೇವೆಗಳು–3, ಭೂ ಕಂದಾಯ, ಭೂ ಮಾಪನ, ಭೂಮಿ, ಭೂ ಸುಧಾರಣಾ ಕೋಶ ಈ ಎಲ್ಲ ಶಾಖೆಗಳ ಅಧಿಕಾರಿ, ಸಿಬ್ಬಂದಿ 19ರಂದು ಕಡ್ಡಾಯವಾಗಿ ಕಚೇರಿಗೆ ಹಾಜರಾಗಿ ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಿಸಲು ಕ್ರಮ ವಹಿಸಬೇಕು’ ಎಂದು ಈ ಶಾಖೆಗಳ ಹೆಚ್ಚುವರಿಕಾರ್ಯದರ್ಶಿ ಮತ್ತು ಉಪ ಕಾರ್ಯದರ್ಶಿಗಳಿಗೆ ಕಟಾರಿಯಾ ಟಿಪ್ಪಣಿ ನೀಡಿದ್ದಾರೆ.

ಶಾಸಕರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ವಿಧಾನಮಂಡಲಕ್ಕೆ ಸಕಾಲದಲ್ಲಿ ಕಳುಹಿಸದ ಇಲಾಖೆಗಳ ಕಾರ್ಯದರ್ಶಿಗಳಿಂದ ವಿವರಣೆ ಪಡೆಯುವಂತೆ ಮುಖ್ಯಮಂತ್ರಿ ಸೂಚಿಸಿದ ಬೆನ್ನಲ್ಲೆ, ರಾಜೇಂದರ್ ಕುಮಾರ್ ಕಟಾರಿಯಾ ಸೇರಿ 6 ಕಾರ್ಯದರ್ಶಿಗಳಿಗೆ ಮುಖ್ಯ ಕಾರ್ಯದರ್ಶಿ ಮಾ. 16ರಂದು ನೋಟಿಸ್ ನೀಡಿದ್ದರು.

ಕಠುವಾ ಅತ್ಯಾಚಾರ: ಶಿಕ್ಷೆ ಅಮಾನತಿಗೆ ಒಪ್ಪದ ಹೈಕೋರ್ಟ್

ಶ್ರೀನಗರ: ಕಾಶ್ಮೀರದ ಕಠುವಾ ಸಮೀಪ 2018ರ ಜನವರಿಯಲ್ಲಿ 8 ವರ್ಷದ ಬಾಲಕಿಯನ್ನು ಅಪಹರಿಸಿ, ಸಾಮೂಹಿಕ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಪ್ರಕರಣದ ಪ್ರಮುಖ ಆರೋಪಿ ಸಂಜಿ ರಾಮ್‌ಗೆ ವಿಧಿಸಿರುವ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಲು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಗುರ್ವಿಂದರ್ ಸಿಂಗ್ ಗಿಲ್ ಮತ್ತು ರಮೇಶ್ ಕುಮಾರಿ ಅವರು ಮಾರ್ಚ್ 6ರಂದು ನೀಡಿದ್ದ ತೀರ್ಪಿನಲ್ಲಿ, ‘ಪ್ರಕರಣದ ಅರ್ಹತೆ ಬಗ್ಗೆ ಪ್ರತಿಕ್ರಿಯಿಸದೆ ಮಧ್ಯಂತರ ಆದೇಶ ನೀಡಲು ಬಯಸುವುದಿಲ್ಲ’ ಎಂದು ಹೇಳಿದ್ದರು. ಆದಾಗ್ಯೂ, ಸಂಜಿ ರಾಮ್ ಈಗಾಗಲೇ ಎಂಟು ವರ್ಷ ಕಸ್ಟಡಿಯಲ್ಲಿ ಕಳೆದಿರುವುದನ್ನು ಗಮನಿಸಿದ ನ್ಯಾಯಾಲಯ, ಶಿಕ್ಷೆಯ ವಿರುದ್ಧದ ಮೇಲ್ಮನವಿಯನ್ನು ಸೆಪ್ಟೆಂಬರ್‌ನಲ್ಲಿ ಅಂತಿಮ ವಿಚಾರಣೆಗೆ ಪಟ್ಟಿ ಮಾಡುವಂತೆ ಸೂಚಿಸಿತು.

‘ಸ್ಪಿನ್ ಜೋಡಿ’ ಮೋಡಿಗೆ ಈಡನ್ ಸಿದ್ಧವಾಗಲಿ

ಸುನಿಲ್– ವರುಣ್‌ಗೆ ಪಿಚ್ ಅನುಕೂಲಕರವಾಗಿರಲಿ: ದಕ್ಷಿಣ ಆಫ್ರಿಕಾ ಮಾಜಿ ನಾಯಕ ಫಾಫ್ ಡುಪ್ಲೆಸಿ ಸಲಹೆ

ನವದೆಹಲಿ (ಪಿಟಿಐ): ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಈಚೆಗಷ್ಟೇ ಮುಗಿದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ತುಸು ‘ದುಬಾರಿ’ಯಾಗಿದ್ದರು. ಬಹಳಷ್ಟು ರನ್ ಕೊಟ್ಟರೂ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದ್ದರು.

ಆದರೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ವರುಣ್ ಅವರು ಪ್ರಮುಖ ಬೌಲಿಂಗ್ ಅಸ್ತ್ರವಾಗಲಿದ್ದಾರೆ. ವರುಣ್ ಮತ್ತು ಸುನಿಲ್ ನಾರಾಯಣ್ ಅವರ ಜೋಡಿಯು ಮೋಡಿ ತೋರಿಸಲು ಈಡನ್ ಗಾರ್ಡನ್‌ನಲ್ಲಿ ಅನುಕೂಲಕರವಾದ ಪಿಚ್ ಸಿದ್ಧಗೊಳಿಸಬೇಕು ಎಂದು ದಕ್ಷಿಣ ಆಫ್ರಿಕಾ ತಂಡದ ಮಾಜಿ ನಾಯಕ ಫಾಫ್ ಡುಪ್ಲೆಸಿ ಅಭಿಪ್ರಾಯಪಟ್ಟಿದ್ದಾರೆ.

‘ನಾನು ಒಂದು ವೇಳೆ ಕೆಕೆಆರ್ ತಂಡದ ವ್ಯವಸ್ಥಾಪನ ಮಂಡಳಿಯಲ್ಲಿ ಇದ್ದಿದ್ದರೆ ಈಡನ್ ಗಾರ್ಡನ್ ಪಿಚ್ ಕ್ಯುರೇಟರ್ ಜೊತೆ ಮಾತನಾಡಿ ಸ್ಪಿನ್ ಸ್ನೇಹಿ ಪಿಚ್ ನಿರ್ಮಿಸಲು ಮನವಿ ಮಾಡಿಕೊಳ್ಳುತ್ತಿದ್ದೆ. ಅದರಿಂದ ವರುಣ್ ಮತ್ತು ಸುನಿಲ್ ಅವರಿಗೆ ಅನುಕೂಲವಾಗುತ್ತಿತ್ತು. ಟಿ20 ಮಾದರಿಯಲ್ಲಿ ಅವರಿಬ್ಬರೂ ಶ್ರೇಷ್ಠ ಸ್ಪಿನ್ನರ್‌ಗಳು. ಅವರು ತಮಗೆ ಹೆಚ್ಚು ನೆರವು ನೀಡುವಂತಹ ಪಿಚ್‌ಗಳು ಸಿಕ್ಕರೆ ಮತ್ತಷ್ಟು ಪರಿಣಾಮಕಾರಿಯಾಗಬಲ್ಲರು’ ಎಂದು ಡುಪ್ಲೆಸಿ ‘ಜಿಯೊಹಾಟ್‌ಸ್ಟಾರ್’ ಸಂವಾದದಲ್ಲಿ ಹೇಳಿದರು.

ಕಳೆದ ಋತುವಿನಲ್ಲಿ ಕೆಕೆಆರ್ ತಂಡವು 14 ಪಂದ್ಯಗಳ ಪೈಕಿ ಐದರಲ್ಲಿ ಜಯಗಳಿಸಿತ್ತು. ಅಜಿಂಕ್ಯ ರಹಾನೆ ನಾಯಕತ್ವದ ತಂಡವು ಈ ಸಲದ ಐಪಿಎಲ್‌ನಲ್ಲಿ ತನ್ನ ಮೊದಲ ಪಂದ್ಯವನ್ನು ಇದೇ 29ರಂದು ಮುಂಬೈ ಇಂಡಿಯನ್ಸ್ ಎದುರು ಆಡಲಿದೆ.

‘ಅಜಿಂಕ್ಯ ಅವರು ಅಗ್ರಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಬೇಕು. ಮೂರನೇ ಕ್ರಮಾಂಕಕ್ಕಿಂತ ಕೆಳಗೆ ಅವರು ಆಡಬಾರದು. ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿದ್ದಾಗ ಅಜಿಂಕ್ಯ ಅವರು ಮೂರನೇ ಕ್ರಮಾಂಕದಲ್ಲಿ ಬಹಳಷ್ಟು ರನ್ ಗಳಿಸಿದ್ದರು. ಅವರು ಮೂರನೇ ಕ್ರಮಾಂಕದಲ್ಲಿ ಆಡುವುದರಿಂದ ಕೆಕೆಆರ್‌ಗೆ ಒಳ್ಳೆಯದು. ನಂತರದ ಕ್ರಮಾಂಕಗಳಲ್ಲಿ ಕ್ಯಾಮರಾನ್ ಗ್ರೀನ್, ಫಿನ್ ಅಲೆನ್ ಮತ್ತು ಟಿಮ್ ಸೀಫರ್ಟ್ ಅವರು ಕ್ರೀಸ್‌ಗೆ ಬಂದರೆ ಹೆಚ್ಚು ರನ್‌ಗಳನ್ನು ಕಲೆಹಾಕಲು ಸಾಧ್ಯವಾಗಬಹುದು’ ಎಂದು ಅಭಿಪ್ರಾಯಪಟ್ಟರು.

ಡುಪ್ಲೆಸಿ ಅವರು ಈ ಹಿಂದೆ ಚೆನ್ನೈ ಸೂಪರ್ ಕಿಂಗ್ಸ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳಲ್ಲಿ ಆಡಿದ್ದರು.

ಸನ್‌ರೈಸರ್ಸ್ ತಂಡಕ್ಕೆ ಇಶಾನ್ ಕಿಶನ್ ಹಂಗಾಮಿ ನಾಯಕ



ಹೈದರಾಬಾದ್ (ಪಿಟಿಐ): ವಿಕೆಟ್‌ಕೀಪರ್–ಬ್ಯಾಟರ್ ಇಶಾನ್ ಕಿಶನ್ ಅವರನ್ನು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಹಂಗಾಮಿ ನಾಯಕರನ್ನಾಗಿ ನೇಮಕ ಮಾಡಲಾಗಿದೆ. ಅಭಿಷೇಕ್ ಶರ್ಮಾ ಉಪನಾಯಕರಾಗಿದ್ದಾರೆ.

ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ಬೆನ್ನು ಗಾಯದಿಂದ ಬಳಲಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ಹೋದ ಆ್ಯಷಸ್ ಟೆಸ್ಟ್ ಸರಣಿಯ ನಂತರ ಅವರು ಯಾವುದೇ ಕ್ರಿಕೆಟ್ ಟೂರ್ನಿಯಲ್ಲಿಯೂ ಆಡಿಲ್ಲ. ಈಚೆಗೆ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿಯೂ ಅವರು ಆಡಿರಲಿಲ್ಲ. ಅದೇ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಪ್ರಶಸ್ತಿ ಜಯಿಸಲು ಮಹತ್ವದ ಕಾಣಿಕೆ ನೀಡಿದ್ದ ಇಶಾನ್ ಅವರು ಈಗ ಹೈದರಾಬಾದ್ ತಂಡವನ್ನು ಮುನ್ನಡೆಸುವರು.

ಈಚೆಗೆ ಇಶಾನ್ ಅವರ ನಾಯಕತ್ವದಲ್ಲಿ ಜಾರ್ಖಂಡ್ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯನ್ನು ಗೆದ್ದಿತ್ತು.



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ಅಜಿಂಕ್ಯ ರಹಾನೆ (ಬಲ) ಅವರು ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಬುಧವಾರ ಅಭ್ಯಾಸ ನಡೆಸಿದರು ಪಿಟಿಐ ಚಿತ್ರ

ತಡವಾಗಿ ಪಂಜಾಬ್ ಕಿಂಗ್ಸ್ ಸೇರಲಿರುವ ಯಾನ್ಸೆನ್

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ತಾರಾ ಆಲ್‌ರೌಂಡರ್ ಮಾರ್ಕೊ ಯಾನ್ಸೆನ್ ಅವರು ಪಂಜಾಬ್ ಕಿಂಗ್ಸ್ ತಂಡಕ್ಕೆ ನಾಲ್ಕು ದಿನ ತಡವಾಗಿ ಸೇರಿಕೊಳ್ಳುವುದಕ್ಕೆ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಸಮ್ಮತಿ ನೀಡಿದ್ದಾರೆ.

ಪಂಜಾಬ್ ಕಿಂಗ್ಸ್‌ನ ಪ್ರಮುಖ ಆಟಗಾರ ಯಾನ್ಸನ್ ಮಾರ್ಚ್ 26ರಂದು ತಂಡ ಸೇರಿಕೊಳ್ಳಲಿದ್ದಾರೆ.

ಬಹುತೇಕ ವಿದೇಶಿ ಆಟಗಾರರು ಇದೇ 21ರಂದು ಸಮಾವೇಶಗೊಳ್ಳಲಿದ್ದಾರೆ. ಅಫ್ಗಾನಿಸ್ತಾನದ ಆಲ್‌ರೌಂಡರ್ ಅಜ್ಮತ್‌ವುಲ್ಲಾ ಒಮರ್‌ಝೈ ಅವರು 23ರಂದು ತಂಡವನ್ನು ಸೇರಿಕೊಳ್ಳುವರು.

ಭಾರತದಲ್ಲಿ ಈಚೆಗೆ ನಡೆದ ಟಿ20 ವಿಶ್ವಕಪ್‌ನಲ್ಲಿ ಆಡಿ ಸೆಮಿಫೈನಲ್‌ನಲ್ಲಿ ಸೋತಿದ್ದ ದಕ್ಷಿಣ ಆಫ್ರಿಕಾ ಮತ್ತು ಸೂಪರ್ ಎಂಟರ ಕೊನೆಯ ಪಂದ್ಯದಲ್ಲಿ ಸೋತಿದ್ದ ವೆಸ್ಟ್ ಇಂಡೀಸ್ ತಂಡಗಳು ವಿಮಾನಪ್ರಯಾಣ ವ್ಯವಸ್ಥೆಯಾಗದೇ ಒಂದು ವಾರ ಕೋಲ್ಕತ್ತದಲ್ಲಿ ಸಿಲುಕಿದ್ದವು.

ಪಶ್ಚಿಮ ಏಷ್ಯಾದಲ್ಲಿ ಯುದ್ಧದ ಕಾರಣ ವಿಮಾನ ಪ್ರಯಾಣ ವ್ಯವಸ್ಥೆ ಸಕಾಲಕ್ಕೆ ಆಗಿರಲಿಲ್ಲ. ದುಬೈ, ಅಬುಧಾಬಿಗಳಲ್ಲಿ ವಾಯುಪ್ರದೇಶ ನಿರ್ಬಂಧದ ಕಾರಣ ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಸ್ಥಗಿತಗೊಂಡಿದ್ದವು.

ಥಾಮಸ್ ಮತ್ತು ಊಬರ್ ಕಪ್ ಬ್ಯಾಡ್ಮಿಂಟನ್ ಏ.24ರಿಂದ


ಭಾರತ ತಂಡಕ್ಕೆ ಚೀನಾ ಎದುರಾಳಿ

ನವದೆಹಲಿ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಏಪ್ರಿಲ್ 24ರಂದು ಡೆನ್ಮಾರ್ಕ್‌ನಲ್ಲಿ ಆರಂಭವಾಗುವ ಥಾಮಸ್ ಮತ್ತು ಊಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಎ ಗುಂಪಿನಲ್ಲಿ ಸ್ಥಾನ ಪಡೆದಿದೆ. ಇದೇ ಗುಂಪಿನಲ್ಲಿ ಹಾಲಿ ಚಾಂಪಿಯನ್ ಚೀನಾ ತಂಡ ಇದೆ.

ಬುಧವಾರ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಎರಡೂ ಟೂರ್ನಿಗಳ ಗುಂಪುಗಳನ್ನು ಪ್ರಕಟಿಸಿದೆ. ಥಾಮಸ್ ಮತ್ತು ಊಬರ್ ಕಪ್ ಎರಡರಲ್ಲಿಯೂ ಭಾರತ ಎ ಗುಂಪಿನಲ್ಲಿದ್ದು ಚೀನಾ ಪ್ರತಿಸ್ಪರ್ಧಿಯಾಗಿದೆ. ಡೆನ್ಮಾರ್ಕಿನ ಹಾರ್ಸೆನ್ಸ್‌ನಲ್ಲಿ ಏ 24ರಿಂದ ಮೇ 3ರವರೆಗೆ ಟೂರ್ನಿ ನಡೆಯಲಿದೆ.

ಈ ಟೂರ್ನಿಯಲ್ಲಿ ಭಾರತದ ಉಭಯ ತಂಡಗಳಿಗೆ ಎಂಟನೇ ಶ್ರೇಯಾಂಕ ನೀಡಲಾಗಿದೆ. 2022ರ ಥಾಮಸ್ ಕಪ್ ಚಾಂಪಿಯನ್ ಭಾರತವು ಈ ಬಾರಿ ಕ್ವಾರ್ಟರ್‌ಫೈನಲ್ ಪ್ರವೇಶಿಸುವ ನೆಚ್ಚಿನ ತಂಡವಾಗಿದೆ. ಪ್ಯಾನ್ ಅಮೆರಿಕ ಚಾಂಪಿಯನ್ ಕೆನಡಾ ಮತ್ತು ಒಷಾನಿಯಾ ಚಾಂಪಿಯನ್ಸ್ ಆಸ್ಟ್ರೇಲಿಯಾ ತಂಡಗಳೂ ಇಲ್ಲಿ ಕಣಕ್ಕಿಳಿಯಲಿವೆ.

ಭಾರತ ಮಹಿಳೆಯರ ತಂಡವು ಯುರೋಪಿಯನ್ ತಂಡ, ರನ್ನರ್ಸ್ ಅಪ್ ಡೆನ್ಮಾರ್ಕ್ ಹಾಗೂ ಉಕ್ರೇನ್ ತಂಡಗಳನ್ನು ಎದುರಿಸಲಿದೆ. 16 ಬಾರಿಯ ಚೀನಾ ಪ್ರಮುಖ ಎದುರಾಳಿಯಾಗಿದೆ. ಭಾರತ ವನಿತೆಯರ ತಂಡವು 2014 ಹಾಗೂ 2016ರಲ್ಲಿ ಕಂಚು ಜಯಿಸಿತ್ತು. 2024ರ ಎಂಟರ ಘಟ್ಟದಲ್ಲಿ ಚೀನಾ ಎದುರು ಭಾರತ ಪುರುಷರ ತಂಡ ಸೋತಿತ್ತು. ಮಹಿಳೆಯರ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ ಜಪಾನ್ ಎದುರು ಮಣಿದಿತ್ತು.



ಭಾರತದ ಸಿಂಗಲ್ಸ್ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಎಎಫ್‌ಪಿ ಚಿತ್ರ

ಚೀನಾ ಪುರುಷರ ತಂಡದಲ್ಲಿ ಶಿ ಯೂಕೀ (ವಿಶ್ವ ರ‍್ಯಾಂಕಿಂಗ್ 2), ಲೀ ಶಿ ಫೆಂಗ್ (ವಿಶ್ವ ರ‍್ಯಾಂಕಿಂಗ್ 7), ವೆಂಗ್ ಹಾಂಗ್ ಯಾಂಗ್ (ವಿಶ್ವ ರ‍್ಯಾಂಕಿಂಗ್ 17) ಮತ್ತು ಲೂ ಗುವಾಂಗ್ ಝೂ (ವಿಶ್ವ ರ‍್ಯಾಂಕಿಂಗ್ 18) ಕಣಕ್ಕಿಳಿಯಲಿದ್ದಾರೆ. ಈಚೆಗೆ ನಡೆದ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಲಕ್ಷ್ಯ ಸೇನ್ ಅವರು ಯೂಕೀ ಹಾಗೂ ಫೆಂಗ್ ಅವರ ವಿರುದ್ಧ ಮಿಂಚಿದ್ದರು. ಅದೇ ಈಗ ಭಾರತ ತಂಡದಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ.

ಟೂರ್ನಿಯಲ್ಲಿ ಒಟ್ಟು 16 ತಂಡಗಳು ಸ್ಪರ್ಧಿಸಲಿವೆ. ನಾಲ್ಕು ಗುಂಪುಗಳಲ್ಲಿ ತಲಾ ನಾಲ್ಕು ತಂಡಗಳು ಇರಲಿವೆ. ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ (3 ಸಿಂಗಲ್ಸ್ ಹಾಗೂ 2 ಡಬಲ್ಸ್) ಪಂದ್ಯಗಳು ನಡೆಯಲಿವೆ. ಪ್ರತಿ ಗುಂಪಿನಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸಲಿವೆ.

ಥಾಮಸ್ ಕಪ್ ಗುಂಪುಗಳು:
ಎ ಗುಂಪು: ಚೀನಾ, ಭಾರತ, ಕೆನಡಾ, ಆಸ್ಟ್ರೇಲಿಯಾ
ಬಿ ಗುಂಪು: ಜಪಾನ್, ಮಲೇಷ್ಯಾ, ಇಂಗ್ಲೆಂಡ್, ಫಿನ್ಲೆಂಡ್
ಸಿ ಗುಂಪು: ತೈವಾನ್, ಡೆನ್ಮಾರ್ಕ್, ಕೊರಿಯಾ, ಸ್ವೀಡನ್
ಡಿ ಗುಂಪು: ಇಡೋನೇಷ್ಯಾ, ಫ್ರಾನ್ಸ್, ಥಾಯ್ಲೆಂಡ್, ಅಲ್ಜೀರಿಯಾ

ಊಬರ್ ಕಪ್ ಗುಂಪುಗಳು:
ಎ ಗುಂಪು: ಚೀನಾ, ಭಾರತ, ಡೆನ್ಮಾರ್ಕ್, ಉಕ್ರೇನ್
ಬಿ ಗುಂಪು: ಜಪಾನ್, ಮಲೇಷ್ಯಾ, ಟರ್ಕಿ, ದಕ್ಷಿಣ ಆಫ್ರಿಕಾ
ಸಿ ಗುಂಪು: ತೈವಾನ್, ಇಂಡೊನೇಷ್ಯಾ, ಕೆನಡಾ, ಆಸ್ಟ್ರೇಲಿಯಾ
ಡಿ ಗುಂಪು: ಕೊರಿಯಾ, ಥಾಯ್ಲೆಂಡ್, ಬಲ್ಗೇರಿಯಾ, ಸ್ಪೇನ್.

ಶ್ರೀಕಾಂತ್ ನಿರ್ಗಮನ; ತನ್ವಿ, ಅನ್ಮೋಲ್ ಮುನ್ನಡೆ


ಆರ್ಲೀನ್ಸ್ (ಫ್ರಾನ್ಸ್), (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಆರ್ಲೀನ್ಸ್ ಮಾಸ್ಟರ್ಸ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಮಹಿಳೆಯರ ವಿಭಾಗದಲ್ಲಿ ಅನ್ಮೋಲ್ ಖಾರ್ಬ್ ಮತ್ತು ತನ್ವಿ ಶರ್ಮಾ 16ರ ಸುತ್ತಿಗೆ ಕಾಲಿಟ್ಟರು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ ಬುಧವಾರ ನಡೆದ ಪಂದ್ಯದಲ್ಲಿ 12–21, 10–21 ರಲ್ಲಿ ಡೆನ್ಮಾರ್ಕ್‌ನ ಮ್ಯಾಗ್ನಸ್ ಜೊಹಾನ್ಸೆನ್ ಅವರಿಗೆ ನೇರ ಆಟಗಳಲ್ಲಿ ಮಣಿದರು.

19 ವರ್ಷ ವಯಸ್ಸಿನ ಖಾರ್ಬ್ 21–12, 21–16 ರಿಂದ ಟರ್ಕಿಯ ನೆಸ್ಲಿಹಾನ್ ಅರಿನ್ ಅವರನ್ನು ಮಣಿಸಿದರೆ, 17 ವರ್ಷ ವಯಸ್ಸಿನ ತನ್ವಿ 21–18, 14–12 ರಲ್ಲಿ ಮುನ್ನಡೆಯಲ್ಲಿದ್ದಾಗ ಥಾಯ್ಲೆಂಡ್‌ನ ಎದುರಾಳಿ ಸುಪನಿದಾ ಕಟೆತಾಂಗ್ ಕಾಲುನೋವಿನಿಂದ ಪಂದ್ಯ ಬಿಟ್ಟುಕೊಟ್ಟರು.

ಆದರೆ, ರಕ್ಷಿತಾ ರಾಮರಾಜ್ ಮೊದಲ ಸುತ್ತಿನಲ್ಲಿ 9–21, 15–21ರಲ್ಲಿ ಜಪಾನ್‌ನ ಮನಾಮಿ ಸುಯಿಝು ಅವರಿಗೆ ಸೋತರು.

ಹಾಕಿ ವಿಶ್ವಕಪ್: ಆಗಸ್ಟ್ 19ಕ್ಕೆ ಭಾರತ– ಪಾಕಿಸ್ತಾನ ಪಂದ್ಯ



ಲುಸಾನ್ (ಸ್ವಿಟ್ಜರ್ಲೆಂಡ್) (ಪಿಟಿಐ): ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್ ಟೂರ್ನಿಯ ಗುಂಪು ಹಂತದಲ್ಲಿ ಆಗಸ್ಟ್ 19ರಂದು ಮುಖಾಮುಖಿಯಾಗಲಿವೆ. ನೆದರ್ಲೆಂಡ್ಸ್‌ನ ಆ್ಯಮ್‌ಸ್ಟಲ್ವೀನ್‌ನ ವಾಗನರ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಭಾರತ ಮತ್ತು ಪಾಕ್ ತಂಡಗಳು ಡಿ ಗುಂಪಿನಲ್ಲಿ ಸ್ಥಾನ ಪಡೆದಿವೆ. ಭಾರತ ತಂಡವು ಆಗಸ್ಟ್ 15ರಂದು ವೇಲ್ಸ್ ತಂಡದ ವಿರುದ್ಧ ಅಭಿಯಾನ ಆರಂಭಿಸಲಿದೆ. 17ರಂದು ಇಂಗ್ಲೆಂಡ್ ವಿರುದ್ಧ ಸೆಣಸಲಿದೆ.

ಭಾರತ ಮಹಿಳೆಯರ ತಂಡವು ಗುಂಪು ಹಂತದ ಪಂದ್ಯಗಳಲ್ಲಿ ಆಗಸ್ಟ್ 16ರಂದು ಚೀನಾ ವಿರುದ್ಧ; 18ರಂದು ದಕ್ಷಿಣ ಆಫ್ರಿಕಾ ವಿರುದ್ಧ ಹಾಗೂ 20ರಂದು ಇಂಗ್ಲೆಂಡ್ ವಿರುದ್ಧ ಕಣಕ್ಕಿಳಿಯಲಿದೆ.

ಸೆನೆಗಲ್‌ನಿಂದ ಪ್ರಶಸ್ತಿ ಹಿಂಪಡೆದ ಒಕ್ಕೂಟ



ಪ್ಯಾರಿಸ್ (ಎಎಫ್‌ಪಿ): ಆಫ್ರಿಕಾ ಫುಟ್‌ಬಾಲ್ ಒಕ್ಕೂಟವು ಮಂಗಳವಾರ ರಾತ್ರಿ ಸೆನೆಗಲ್ ತಂಡದಿಂದ ಆಫ್ರಿಕಾ ಕಪ್ ಆಫ್ ನೇಷನ್ಸ್ ಟೂರ್ನಿಯ ಪ್ರಶಸ್ತಿಯನ್ನು ಮರಳಿ ಪಡೆದಿದೆ. ಗೊಂದಲ, ಗಲಾಟೆಗೆ ಸಾಕ್ಷಿಯಾಗಿದ್ದ ಟೂರ್ನಿಯ ಫೈನಲ್‌ನಲ್ಲಿ ಏಕೈಕ ಗೋಲಿನಿಂದ ಸೋತಿದ್ದ ಮೊರೊಕ್ಕೊ ತಂಡವನ್ನು ಚಾಂಪಿಯನ್ ಎಂದು ಘೋಷಿಸಿದೆ.

ಜನವರಿ 18ರಂದು ಮೊರೊಕ್ಕೊದ ರಾಜಧಾನಿ ರಬಾತ್‌ನಲ್ಲಿ ಈ ಟೂರ್ನಿಯ ಫೈನಲ್ ನಡೆದಿತ್ತು. ಹೆಚ್ಚುವರಿ ಅವಧಿಯ ಆರಂಭದಲ್ಲಿ ಮೊರೊಕ್ಕೊ ತಂಡಕ್ಕೆ ನೀಡಿದ ಪೆನಾಲ್ಟಿ ವಿವಾದಕ್ಕೆ ಕಾರಣವಾಗಿತ್ತು. ವಿಎಆರ್ ಪರಿಶೀಲನೆಯ ನಂತರ ಮೊರೊಕ್ಕೊಗೆ ಪೆನಾಲ್ಟಿ ಅವಕಾಶ ನೀಡಲಾಯಿತು. ರೆಫ್ರಿ ನಿರ್ಧಾರ ಪ್ರತಿಭಟಿಸಿ ಸೆನೆಗಲ್ ಆಟಗಾರರು ಮೈದಾನದಿಂದ ಹೊರನಡೆದಿದ್ದರು.

ಅನಂತಶಯನಂ ಸ್ಮಾರಕ ಬಿಲಿಯರ್ಡ್ಸ್ ಟೂರ್ನಿ 29ರಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯು (ಕೆಎಸ್‌ಬಿಎ) ಇದೇ 29ರಿಂದ ಏ.11ರ ವರೆಗೆ ಬಿ.ಸಿ. ಅನಂತಶಯನಂ ಸ್ಮಾರಕ ವಿಕಲಚೇತನರ ಅಂತರ ಕ್ಲಬ್ ಬಿಲಿಯರ್ಡ್ಸ್ ಹಾಗೂ ಸ್ನೂಕರ್ ಟೂರ್ನಿಯನ್ನು ಆಯೋಜಿಸಿದೆ.

ಕೆಎಸ್‌ಬಿಎಯಿಂದ ಮಾನ್ಯತೆ ಪಡೆದಿರುವ ಕ್ಲಬ್‌ಗಳು ಟೂರ್ನಿಯಲ್ಲಿ ಪಾಲ್ಗೊಳ್ಳಬಹುದು. ಪ್ರವೇಶಕ್ಕೆ ಮಾ.26 ಕೊನೆಯ ದಿನವಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ ಐ.ಎಚ್. ಮನುದೇವ್ (ಮೊ. 9535396000) ಅಥವಾ ಕಾರ್ತಿಕ್ ಬಿ.ಸಿ. (ಮೊ. 9538033372) ಅವರನ್ನು ಸಂಪರ್ಕಿಸಬಹುದು.

ಪ್ರಶಸ್ತಿ ಸುತ್ತಿಗೆ ಜಪಾನ್

ಎಎಫ್‌ಪಿ ಚಿತ್ರ



ಗೋಲು ಹೊಡೆದ ಜಪಾನ್ ತಂಡದ ರೆಮಿನಾ ಚಿಬಾ (ಮಧ್ಯ) ಅವರು ಸಹ ಆಟಗಾರ್ತಿಯರೊಂದಿಗೆ ಸಂಭ್ರಮಿಸಿದರು. 4–1ರಿಂದ ಕೊರಿಯಾ ತಂಡವನ್ನು ಮಣಿಸಿದ ಜಪಾನ್, ಎಎಫ್‌ಸಿ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬುಧವಾರ ಫೈನಲ್ ಪ್ರವೇಶಿಸಿತು

ಕ್ಯಾಂಡಿಡೇಟ್ಸ್ ಚೆಸ್: ಖಚಿತವಾಗದ ಕೋನೇರು ಹಂಪಿ ಪಾಲ್ಗೊಳ್ಳುವಿಕೆ



ನವದೆಹಲಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಸೈಪ್ರಸ್‌ನಲ್ಲಿ ಈ ತಿಂಗಳ ಕೊನೆಯಲ್ಲಿ ಆರಂಭವಾಗುವ ಪ್ರತಿಷ್ಠಿತ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವುದಕ್ಕೆ ಸಂಬಂಧಿಸಿ ಅಂತಿಮ ನಿರ್ಧಾರ ಇನ್ನೂ ಕೈಗೊಂಡಿಲ್ಲ.

ಪಶ್ಚಿಮ ಏಷ್ಯಾದ ಸಂಘರ್ಷದ ಪರಿಣಾಮ, ಸೈಪ್ರಸ್‌ನಲ್ಲಿನ ಸುರಕ್ಷತಾ ಸ್ಥಿತಿಯ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಓಪನ್ ವಿಭಾಗದಲ್ಲಿ ವಿಜೇತನಾಗುವ ಆಟಗಾರ, ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಸವಾಲು ಹಾಕುವ ಅರ್ಹತೆ ಪಡೆಯುತ್ತಾರೆ. ಮಹಿಳಾ ವಿಭಾಗದಲ್ಲಿ ಕಿರೀಟ ಧರಿಸುವ ಆಟಗಾರ್ತಿ, ಹಾಲಿ ವಿಶ್ವ ಚಾಂಪಿಯನ್ ಜು ವೆಂಜುನ್ ಅವರಿಗೆ ಚಾಲೆಂಜರ್ ಆಗಲಿದ್ದಾರೆ.

‘ನನ್ನೊಬ್ಬಳಿಂದ ಯಾವ ಬದಲಾವಣೆಯೂ ಸಾಧ್ಯವಾಗಲಿಕ್ಕಿಲ್ಲ ಎಂಬ ಅರಿವು ಇದೆ. ನಾನು ಆಡುತ್ತೇನೆಯೇ ಇಲ್ಲವೇ ಎಂಬುದಕ್ಕಿಂತ ಮುಖ್ಯವಾಗಿ, ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸುವುದು ಮುಖ್ಯ’ ಎಂದು ಅವರು ‘ಎಕ್ಸ್’ನಲ್ಲಿ ಬುಧವಾರ ಪೋಸ್ಟ್ ಹಾಕಿದ್ದಾರೆ.


MARUTI SUZUKI
NEXA
EXPERIENCE A NEW DAWN OF ELECTRIC MOBILITY.
Redefine your boundaries with Maruti Suzuki's First Electric SUV, the e VITARA.
Turn long drives into epic journeys, backed by India's Largest Fast Charging Network.
Designed to offer everything you expect from an SUV, and everything you didn't expect from an EV.
e VITARA
India goes electric
Introductory BaaS price
₹10.99 LAKH* + Battery EMI @ ₹3.99/km
e VITARA
543km RANGE
INDIA'S LARGEST* FAST-CHARGING NETWORK
543 km RANGE*
BHARAT NCAP
5 STAR SAFETY RATING BNCAP*
NEXA edge
60% ASSURED BUYBACK AFTER 3 YEARS
COMPLIMENTARY HOME CHARGER & INSTALLATION WORTH ₹50 000
8 YEARS WARRANTY • BATTERY: 8 YEARS • VEHICLE: 3+5(PAID) YEARS
COMPLIMENTARY CHARGING FOR 1 YEAR
SCAN TO CONNECT TO A SHOWROOM NEAR YOU
E-BOOK TODAY @ WWW.NEXAEXPERIENCE.COM
*₹ 10.99 lakh for e VITARA Delta. Battery EMI: ₹ 3.99/km (subject to financier terms). Taxes and statutory charges are extra. Visit dealership for full T&Cs. | *As certified by Kantar IMRB for an OEM platform for end-to-end usage as on November 28, 2025. | *543 km range: Certified range; actual results may vary by driving conditions and usage. | *ADAS features are for driver assistance only. Driver is responsible for safe and attentive driving. | *Always wear your seatbelt. | *Mentioned ownership plan is for e VITARA Delta variant. Calculation is done assuming vehicle is running 60 km per day, excluding charging cost. Valid on retail sales for the e VITARA till 31st March '26, capped at 1 000 units of electricity (kWh) per customer or 1 Year from the purchase of the vehicle, whichever is earlier. Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an Insurance company. e VITARA comes with standard warranty of 3 years/1 00 000 km with an option of extending the same on payment basis to 5 years/1 40 000 km and service activated coverage for 6th to 8th year for EV related components.